ಗೋರ್ಮಾಟಿ

ಡಾ.ಶಾಂತನಾಯ್ಕ ಶಿರಗಾನಹಳ್ಳಿ



ಗೆಳೆಯರಾದ ಚಂದ್ರಶೇಖರ್
ಅವರಿಗೆ
ಪ್ರೀತಿಯಿಂದ.

ಡಾ. ಶಿರಗಾನಹಳ್ಳಿ ಶಾಂತನಾಯ್ಕ

ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲೂಕು ಶಿರಗಾನಹಳ್ಳಿ ತಾಂಡದಲ್ಲಿ 1965 ಜನವರಿ 1ರಂದು (ಇಸ್ವಿ ದಿನಾಂಕ ಸರಿಯಾಗಿಲ್ಲ) ನಾಗ್ಯಾನಾಯ್ಕ - ಕೇಳಿಬಾಯಿ ದಂಪತಿಗಳಿಗೆ 8ನೇ ಮಗನಾಗಿ ಜನನ. ಶಿರಗಾನಹಳ್ಳಿ, ದುಗ್ಗಾವತ್ತಿ, ಹರಿಹರ, ದಾವಣಗೆರೆಯಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ಮುಗಿಸಿ, ಪಿ.ಯು.ಸಿ. ಯನ್ನು ಹರಪನಹಳ್ಳಿಯಲ್ಲೂ, ಬಿ.ಎ. ಪದವಿಯನ್ನು ಧಾರವಾಡದ ಕರ್ನಾಟಕ ಕಾಲೇಜಿನಲ್ಲೂ ಹಾಗೂ ಎಂ.ಎ. ಪದವಿಯನ್ನು ಕರ್ನಾಟಕ ವಿಶ್ವವಿದ್ಯಾನಿಲಯ ದಲ್ಲೂ ಪಡೆದುಕೊಂಡಿದ್ದಾರೆ. ಡಾ. ವೀಣಾ ಶಾಂತೇಶ್ವರ ಅವರ ಮಾರ್ಗದರ್ಶನದಲ್ಲಿ 'A comparative study of the novels of Shashi Deshpande and M.K.Indira' ವಿಷಯದಲ್ಲಿ ಮಹಾಪ್ರಬಂಧವನ್ನು ಮಂಡಿಸಿ ಪಿಎಚ್.ಡಿ ಪದವಿಯನ್ನು ಪಡೆದುಕೊಂಡಿದ್ದಾರೆ. ಇಂಗ್ಲಿಷ್ ಸಾಹಿತ್ಯವನ್ನು ಅರ್ಥೈಸಿಕೊಂಡು ಕನ್ನಡದ ನೆಲದೊಳಗೆ ಅರಳುತ್ತಿರುವ ಶಾಂತನಾಯ್ಕ, ಹುಟ್ಟಿನಿಂದಲೆ ಜೀವನದೊಡನೆ ಸಂಘರ್ಷಕ್ಕಿಳಿದು ಹೋರಾಡುತ್ತಲೆ ಬಂದವರು.

ಪ್ರಕಟಿತ ಕೃತಿಗಳು

ಮನು ಹಿಟ್ಲರ್ ಅಂಬೇಡ್ಕರ್ (ವೈಚಾರಿಕ). ಗುಡ್ಡಜ್ಜ , ಕೊಂಯ್ಯ ಮತ್ತು ಧೋತ್ರ (ಕಥಾ ಸಂಕಲನಗಳು). ಮೀನು ಮತ್ತು ಹುಡುಗಿ, ಹಳೇ ಭಾವನೆಯ ಹೊಸ ಮನುಷ್ಯ (ಕವನ ಸಂಕಲನಗಳು). ನಮ್ಮೊಳಗಿನ ಮನುಷ್ಯ, ಪಾತ್ರಗಳು (ನಾಟಕಗಳು). ಕತ್ತಲು ಕರಗುವ ಮುನ್ನ (ಕಾದಂಬರಿ). English as a Language of Empowerment (ಲೇಖನಗಳ ಸಂಗ್ರಹ).

ಮೈಸೂರು ಜಿಲ್ಲೆಯ ಯುವ ಬರಹಗಾರರ, ಕಲಾವಿದರ ಬಳಗದ ಸಂಚಾಲಕ ರಾಗಿ, ಬಂಡಾಯ ಸಂಘಟನೆಯ ಕಾರ್ಯದರ್ಶಿಗಳಾಗಿ, 'ಇಪ್ಟಾ'ದ ಗೌರವಾಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದಾರೆ. ಇವರ *ಪಾತ್ರಗಳು* ನಾಟಕಕ್ಕೆ ಬಿ.ವಿ.ಕಾರಂತ ಪ್ರಶಸ್ತಿ, *ಮನೆ ಎಂಬ ಮಾಯೆ* ಕತೆಗೆ ಪಾ.ಪು. ಪ್ರಶಸ್ತಿ ಬಂದಿದೆ. ಪ್ರಸ್ತುತ ಮೈಸೂರು ವಿಶ್ವವಿದ್ಯಾನಿಲಯದ ಪ್ರತಿಷ್ಠಿತ ಮಹಾರಾಜ ಕಾಲೇಜಿನಲ್ಲಿ ಇಂಗ್ಲಿಷ್ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

[illegible]

[illegible] A comparative study of the novels of Shashi Deshpande and [illegible]

[illegible]

[illegible] English as a Language of Empower-ment [illegible]

[illegible]

ಗೋರ್‌ಮಾಟಿ

ಕಾದಂಬರಿ

ಡಾ. ಶಿರಗಾನಹಳ್ಳಿ ಶಾಂತನಾಯ್ಕ

ಜ್ಯೋತಿ ಪ್ರಕಾಶನ

ಮೈಸೂರು

GORMAATI :A Novel written by **Dr. Shiraganahalli Shantha naika**, L-52, 7th Cross, Lecturers Quarters, Mansagangotri, Mysore -570 006. Published by **Jyothi Prakashana,** M-45, Karnataka Bank Road, Near Vivekananda Circle, Mysore -570 023. Mobile: 98442 12231. First impression : 2007. Cover Page: 220 GSM Art Card, Inner Pages: Book Printing NS 70 GSM . Size 1/8 th Demy. Pages: 160. Price Rs. 80/-

ಗೋರ್‌ಮಾಟಿ

ಲೇಖಕರು : ಡಾ. ಶಿರಗಾನಹಳ್ಳಿ ಶಾಂತನಾಯ್ಕ

ಪುಟಗಳು : ೧೬೦

ಬೆಲೆ :ರೂ. ೮೦

ಪ್ರಥಮ ಮುದ್ರಣ : ೨೦೦೭

ಮುಖಪುಟ ವಿನ್ಯಾಸ: ಮಂಜುನಾಥ್ ಲತಾ

ಪ್ರಕಾಶನ : ಜ್ಯೋತಿ ಪ್ರಕಾಶನ, ಎಂ. ೪೫, ಕರ್ನಾಟಕ ಬ್ಯಾಂಕ್ ರಸ್ತೆ
ವಿವೇಕಾನಂದ ಸರ್ಕಲ್ ಹತ್ತಿರ, ಮೈಸೂರು - ೫೭೦ ೦೨೩

ಮುದ್ರಣ : ಪದ್ಮಾಶೇಖರ್ ಪ್ರಿಂಟರ್ಸ್, ಮೈಸೂರು

ಅರ್ಪಣೆ

ಹಕ್ಕಿಯಂತೆ ಹಾಡುತ್ತ
ಯಕ್ಷನಂತೆ ಕತೆ ಹೇಳುತ್ತ
ಬದುಕ ಕಟ್ಟಿ ಕೈ ಹಿಡಿದು ನನ್ನ ಕರೆದು
ಬದುಕಿನಲ್ಲಿ ಬಿಟ್ಟು ಮರೆಯಾದ
ಅವ್ವ,
ಅಪ್ಪನಿಗೆ

ಗೋರ್‌ಮಾಟಿ - ಒಂದು ಸಾಂಸ್ಕೃತಿಕ ಸಂಕಥನ

ರಾಜ-ಮಹಾರಾಜ್ರು ಒಬ್ರು ಮೇಲೆ ಒಬ್ರು ಆಕ್ರಮಣ ಮಾಡಿ, ತಮ್ಮ ತಮ್ಮ ಸಾಮ್ರಾಜ್ಯ ವಿಸ್ತರಿಸಿದ್ರು. ಅರಮನೆ ಕೋಟೆ-ಕೊತ್ತಲೆಗಳನ್ನು ಕಟ್ಟಿಸಿದ್ರು. ಆ ಅರಮನೆಯೊಳಗೆ ಅಂತಃಪುರ ಮಾಡಿ ನೂರಾರು ಹೆಣ್ಣುಮಕ್ಕಳನ್ನು ಆಳಿದ್ರು. ತಮ್ಮ ಜೀವರಕ್ಷಣೆಯ ಭಯದಿಂದ ಸೇನೆ ಅಂತ ಕಟ್ಟಿ, ತಳವರ್ಗದ ಜನರನ್ನು ಬಳಸಿ ಬಲಿ ತಗೊಂಡ್ರು. ಸಾಮಾನ್ಯ ಜನರ ಮೇಲೆ ಕಪ್ಪ-ಕಾಣಿಕೆ ವಿಧಿಸಿ ಜೀವನಪೂರ್ತಿ ಮಜಾಮಾಡಿದ್ರು. ಈ ದೇಶದ ಚಕ್ರವರ್ತಿಗಳು,ರಾಜರು, ತುಂಡರಸರು, ಪಾಳೇಗಾರರು, ಜನಸಾಮಾನ್ಯರು ಇವರನ್ನೆಲ್ಲ ಹೊಗಳುವ ಕಾಂಜಿಪಿಂಜಿಗಳೆಲ್ಲ ತಮ್ಮ ತಮ್ಮ ಮನಸೋ ಇಚ್ಛೆ ಈ ನೆಲದ ಮ್ಯಾಲೆ ಇನ್ನಿಲ್ಲದ ಕ್ರೌರ್ಯವೆಸಗಿ ಬದಿಕಿದ್ರು. ಕಡೆಗೆ ಒಂದು ದಿನ ನೆಗ್ದುಬಿದ್ರು ... ಅವರ ಈ ಎಲ್ಲ ಕ್ರೌರ್ಯ, ಹಿಂಸೆ, ದೌರ್ಜನ್ಯ, ಆಕ್ರಮಣ, ಅತ್ಯಾಚಾರ ಇವನ್ನೆಲ್ಲವನ್ನೂ ವೈಭವೀಕರಿಸಿ, ಪರಮಕಾರ್ಯದ ಬದುಕು ಅಂತ ನಮ್ಮ ಚರಿತ್ರೆಕಾರರು ಇತಿಹಾಸದೊಳಗ ದಾಖಲು ಮಾಡಿ ಶ್ರೇಷ್ಠ! ಇತಿಹಾಸಕಾರರಾದ್ರು. ಇಂತಹ ವಿದ್ರೋಹದ ಕಥೆಗಳನ್ನೇ ನಾವು ಚರಿತ್ರೆ ಅಂತ ನಂಬಿ ಪುಳಕಗೊಂಡ್ವಿ!

ಭಾರತ ಒಂದಲ್ಲ. ನಾವು ತಿಳಿದಿರುವ ಭಾರತದೊಳಗೆ ನೂರಾರು ಭಾರತಗಳಿವೆ. ಈ ಭಾರತಕ್ಕೆ ಸಾವಿರಾರು ಗತದ ನೆನಪುಗಳಿವೆ. ಈ ಸತ್ಯ ಪರಂಪರ ಪ್ರಿಯರಿಗೆ ಪಥ್ಯವಾಗುವುದಿಲ್ಲ. ರಾಜರ ಎಲ್ಲ ತಿಕ್ಕಲುತನಗಳನ್ನು ಕಥೆ ಕಾವ್ಯ, ಪುರಾಣ, ಮಹಾಕಾವ್ಯ, ಮಹಾಪುರಾಣಗಳೆಂದು ವೈಭವೀಕರಿಸುವ ಪ್ರವೀಣರಿಗೆ, ಇದಕ್ಕೆ ವಿರುದ್ಧವಾದ ಮತ್ತು ಬದುಕಿನ ಸಂದರ್ಭದಲ್ಲಿ ಅದಕ್ಕಿಂತಲೂ ಮಹತ್ವವಾದ ಒಂದು ಸಾಂಸ್ಕೃತಿಕ ಪರಂಪರೆಯ ವಿವೇಕದ ಅಂತಃಸತ್ವ ಜೀವಂತವಾಗಿರುತ್ತದೆ ಅನ್ನುವ ಕನಿಷ್ಠ ಜ್ಞಾನವೂ ಇರಲಿಲ್ಲ. ಆದ್ರೆ ಭಾರತವೆಂಬ ಕಾಕಾಪುರದೊಳಗೆ ಒಂದು ಜೀವ ತನ್ನ ಶ್ರಮ ಮತ್ತು ಬದುಕಿನ ಕೌಶಲ್ಯದಿಂದ ಸಿದ್ಧಿಸಿಕೊಂಡು ಬಾಳುವೆ ಮಾಡಿದ ನೆಲಮೂಲ

ಸಂಸ್ಕೃತಿಯ ಗೊತ್ತಾನಾಯ್ಕನ ಸಾಧನೆ ಯಾವ ಇತಿಹಾಸಕಾರನಿಗೂ ಅಧಿಕೃತ ಚರಿತ್ರೆ ಮತ್ತು ಒಂದು ನಿಜವಾದ ಸಂಸ್ಕೃತಿ ಅನ್ನಿಸಲಿಲ್ಲ. ಅಂತಹ ಒಂದು ಚರಿತ್ರೆಯನ್ನು, ಸಂಸ್ಕೃತಿಯನ್ನು ಅದರ ವಾಸ್ತವ ದಾಖಲೆಗಳನ್ನು ಡಾ. ಶಾಂತಾನಾಯ್ಕ ಅವರು ಸಂಕಥನದ ರೂಪದಲ್ಲಿ ಕಟ್ಟಿಕೊಟ್ಟಿರುವುದು ನಮ್ಮ ಕಾಲದ ಮಹತ್ವದ ವಿಚಾರವಾಗಿದೆ.

ಕಾಕಾಪುರವೆಂಬ ಭಾರತವು ಮೂರು ತಲೆಮಾರಿನಲ್ಲಿ ಕಂಡ ಬದುಕಿನ ತಲ್ಲಣಗಳು, ಉಂಡನೋವಿನ ಸ್ಥಿತ್ಯಂತರಗಳು ಈ ಕಾದಂಬರಿಯ ಕೇಂದ್ರ ವಸ್ತು. ಅದರಲ್ಲೂ ಸ್ವಾತಂತ್ರಪೂರ್ವದ ಭಾರತ ಮತ್ತು ಸ್ವಾತಂತ್ರೋತ್ತರ ಭಾರತದೊಳಗೆ ಒಂದು ತಳ ಸಂಸ್ಕೃತಿಯ ಸಮುದಾಯ ಹೇಗೆ ರೂಪಾಂತರ ಪಡೆದು ಜಾಗತೀಕರಣವೆಂಬ ಆಧುನಿಕ ಮಾಹೆಯೊಳಗೆ ಕರಗಿ ಹೋಗುತ್ತದೆಂಬುದನ್ನು ಅತ್ಯಂತ ವಾಸ್ತವವಾದಿ ನೆಲೆಯಲ್ಲಿ ಕಾದಂಬರಿಕಾರರು ಚಿತ್ರಿಸಿದ್ದಾರೆ. ಲಂಬಾಣಿ ತಾಂಡದೊಳಗಿನ ಜೀವಂತಿಕೆ, ಚೈತನ್ಯ, ಕನಸು, ಹಸಿವು, ಅಪಮಾನ, ಬಡತನ, ಛಲ, ದುಡಿಯಬೇಕೆಂಬ ಶ್ರದ್ಧೆ, ಒಳಪಿತೂರಿ, ಈರ್ಷೆ, ದ್ವೇಷ, ಸಣ್ಣತನಗಳು, ಅಸಹಾಯಕತೆ, ಮುಂತಾದವು ಆ ಸಮುದಾಯದ ಬದುಕಿನ ಕ್ರಮಗಳಾಗಿ ಚಿತ್ರಿತವಾಗಿದ್ದರೂ, ಈ ನೆಲದ ಸ್ವಾತ್ತಿಕ ಗುಣಗಳಾಗಿ ಅನಾವರಣಗೊಂಡು ಕಾದಂಬರಿಗೆ ಹೊಸ ಆಯಾಮವನ್ನು ನೀಡಿವೆ. ಯಾಕೆಂದರೆ ಗೊತ್ತಾನಾಯ್ಕ ಈ ನೆಲದ ಭೂತ-ವರ್ತಮಾನ ಮತ್ತು ಭವಿಷ್ಯತ್ತಿನ ಇತಿಹಾಸಕ್ಕೂ ಗೊತ್ತು ಮಾಡಿದ ಪ್ರತೀಕದ ಹಾಗೆ ಕಾದಂಬರಿಯಲ್ಲಿ ಚಿತ್ರಿತನಾಗಿದ್ದಾನೆ. ಅಲ್ಲದೆ ಕಾದಂಬರಿಯ ಮುಕ್ತಾಯ ಕೂಡ ವರ್ತಮಾನದ ವಾಸ್ತವ ಭಾರತಕ್ಕೆ ಕನ್ನಡಿ ಹಿಡಿದಿದೆ.

ಬುದ್ಧನಾಯ್ಕ, ಅಂದಭಟ್ರು, ಗೊತ್ತನಾಯ್ಕ, ಬಾಣವ್ವ ಪೀಣು, ಕುಮಾರಿಯರ ಪಾತ್ರಗಳು ತಮ್ಮ ವಿಶಿಷ್ಟ ನಡವಳಿಕೆಗಳಿಂದ ಮತ್ತು ಭಿನ್ನ ಆಲೋಚನಾ ಕ್ರಮದಿಂದ ಮನಸೆಳೆಯುವ ಜೊತೆಗೆ ಜೀವಂತಿಕೆಯಿಂದ ಕೂಡಿವೆ. ಬಳಸಿರುವ ಆಡುಭಾಷೆ ಅನನ್ಯವಾಗಿದ್ದು ಒಂದು ಸಮುದಾಯದ ಒಳತೋಟಿಯನ್ನು ಅಭಿವ್ಯಕ್ತಿಸಲು ಸಶಕ್ತವಾಗಿದೆ. ಈ ಕಾರಣದಿಂದಾಗಿ ಕಾದಂಬರಿಯ ತುಯ್ತ ಪರಿಣಾಮಕಾರಿಯಾಗಿದೆ. ವಸ್ತುವಿಗೆ ಪೂರಕವಾಗಿ ಕಾದಂಬರಿಯ ವಿನ್ಯಾಸ ಕ್ರಮಬದ್ಧವಾಗಿ ನಿರೂಪಣೆಗೊಂಡಿದೆ. ಡಾ. ಶಾಂತಾನಾಯ್ಕ ಅವರಿಂದ ಇಂತಹ ಚೈತನ್ಯದ ಜೀವಂತಿಕೆಯ ಕೃತಿಗಳು ಇನ್ನಷ್ಟು ಬರಲೆಂದು ಹಾರೈಸಿ **'ಗೋರ್‌ಮಾಟಿ'** ಈ ನೆಲದ ಶ್ರಮ ಸಂಸ್ಕೃತಿಯ ಸಂಕಥನವಾಗಿ ಪ್ರಕಟವಾಗುತ್ತಿರುವುದಕ್ಕೆ ಅಭಿನಂದನೆಗಳು.


-ಡಾ. ಎಸ್.ಚಂದ್ರಕಿರಣ್

ಪುಟ ತೆರೆಯುವ ಮುನ್ನ

ನನ್ನ ಮೊದಲ ಕಾದಂಬರಿ 'ಕತ್ತಲು ಕರಗುವ ಮುನ್ನ' ಪ್ರಕಟವಾದ ನಂತರ ಎರಡನೆಯದಾಗಿ 'ಗೋರ್‌ಮಾಟಿ' ಪ್ರಕಟವಾಗ್ತಾಯಿದೆ. 'ಗೋರ್‌ಮಾಟಿ' ಪದವನ್ನು 'ನನ್ನ ಜನರು' ಎನ್ನುವ ಅರ್ಥದಲ್ಲಿ ಇಲ್ಲಿ ಬಳಸಿಕೊಂಡಿದ್ದೇನೆ. ಒಬ್ಬ ಬಂಜಾರ ಮತ್ತೊಬ್ಬ ಅಪರಿಚಿತ ಬಂಜಾರನಿಗೆ ಸಿಕ್ಕಾಗ ಅನುಮಾನದಿಂದಲೇ ಕೇಳುವ ಮಾತು, "ಕಾಂಯಿ, ಬಾ ಅಪಣಬಿ ಗೋರಮಾಟಿ ಹಾವಕ" ಅಂದ್ರೆ "ನೀನು ನನ್ನ ಜನಾನ" ಎಂದು. ನಿರ್ದಿಷ್ಟವಾದ ಬದುಕಿನ ಹಿನ್ನೆಲೆ ಇಲ್ಲದೆ ಶತಶತಮಾನಗಳಿಂದಲೂ ಅಲೆಮಾರಿಗಳಾಗಿ ಊರಿಂದೂರಿಗೆ, ಸೀಮೆಯಿಂದ ಸೀಮೆಗೆ ಅಲೆಯುತ್ತಿದ್ದ ಜನಾಂಗ ಲಂಬಾಣಿಗಳು. ಈ ನನ್ನ ಜನಾಂಗ ಚರಿತ್ರೆಯ ಒಂದು ಘಟ್ಟದಲ್ಲಿ ಸಾಂಘಿಕ ಬದುಕಿನ ಕನಸನ್ನು ಹೊತ್ತು ನೆಲೆ ನಿಲ್ಲಲು ಪ್ರಯತ್ನಿದ ಸಂದರ್ಭದಲ್ಲಿ ಎದುರಿಸಿದ ಬಿಕ್ಕಟ್ಟುಗಳು ಮತ್ತು ನೋವು ಸಂಕಷ್ಟಗಳೇ ಕಾದಂಬರಿಯ ವಸ್ತು. ಇಲ್ಲಿ ಬರುವ ಪಾತ್ರಗಳು, ಸ್ಥಳ, ಘಟನೆ, ಸನ್ನಿವೇಶ ಎಲ್ಲವೂ ಕಾಲ್ಪನಿಕ. ಯಾವುದಾದರೂ ವ್ಯಕ್ತಿಯ ಹೆಸರು, ಪ್ರದೇಶದ ಹೆಸರು ಅಥವಾ ಘಟನೆಯೊಂದು ಯಾರದಾದರೂ ಜೀವನದ ನಿಜ ಘಟನೆಯೊಂದಿಗೆ ಹೋಲಿಕೆಯಾಗುವುದಾದಲ್ಲಿ ಅದೊಂದು ಕಾಕತಾಳಿಯೇ ವಿನಃ ಉದ್ದೇಶ ಪೂರ್ವಕವಾಗಿ ಬರೆದಿರುವುದಲ್ಲ.

ಈ ಕೃತಿಯನ್ನು ಪ್ರಕಟಿಸುತ್ತಿರುವ ಜ್ಯೋತಿ ಪ್ರಕಾಶನದವರಿಗೆ, ಇಡೀ ಕಾದಂಬರಿ ಓದಿ ಚಿಕಿತ್ಸೆ ಮಾಡಿದ ಡಾ. ಬಿಸ್ಲೇಹಳ್ಳಿ ಪ್ರಭು, ಕಾದಂಬರಿಯನ್ನು ಹಸ್ತ ಪ್ರತಿಯ ಹಂತದಲ್ಲೇ ಓದಿದಾಗ ತಾಳ್ಮೆಯಿಂದ ಕೇಳಿದ ಗೆಳೆಯ ಯು.ಎಸ್.ಮಹೇಶ್, ಮಂಜುನಾಥ್ ಲತಾ, ಚಿಕ್ಕಮಗಳೂರು ಗಣೇಶ್, ನರೇಂದ್ರ ಕುಮಾರ್ ಮುಂತಾದ ಗೆಳೆಯರಿಗೆ, ಕೊನೆಯಲ್ಲಿ ನನ್ನ ಜೊತೆಗೆ ತಪ್ಪುಗಳನ್ನು ತಿದ್ದಲು ಸಹಕರಿಸಿದ ಸುಧೀಂದ್ರ ಕುಮಾರ್, ಕಾದಂಬರಿಯನ್ನು ಓದಿ ತಮ್ಮ ಅಭಿಪ್ರಾಯಗಳನ್ನು ಸಮರ್ಥವಾಗಿ ದಾಖಲಿಸಿರುವ ಗೆಳೆಯರಾದ ಡಾ.ಬಂಜಗೆರೆ ಜಯಪ್ರಕಾಶ್, ಡಾ.ಎಸ್.ಚಂದ್ರಕಿರಣ್ ಇವೆರೆಲ್ಲರಿಗೆ, ಹಾಗೆಯೇ ನನ್ನೆಲ್ಲಾ ಒತ್ತಾಸೆಗಳಿಗೆ ಭರವಸೆಯಾಗಿರುವ ಪತ್ನಿ ದಾಕ್ಷಾಯಿಣಿ ಶಿರಗಾನಹಳ್ಳಿ, ಅನಿಕೇತನ್ ಶಿರಗಾನಹಳ್ಳಿ, ಅಕಂಪನ್ ಶಿರಗಾನಹಳ್ಳಿ ಅವರಿಗೆ ನನ್ನ ಯಶಸ್ಸು ಕಂಡು ಸದಾ ಹರುಷಪಡುವ ಪ್ರೊ.ಕಾಳೇಗೌಡ ನಾಗವಾರ, ಡಾ. ಅಗ್ರಹಾರ ಕೃಷ್ಣಮೂರ್ತಿ, ಸಹೋದರ ಬಾಲಗುರುಮೂರ್ತಿ, ಸುಬ್ಬು ಹೊಲೆಯಾರ್, ಮೊಗಳ್ಳಿ ಗಣೇಶ್, ಪ್ರೊ.ಸಿ.ನಾಗಣ್ಣ, ಗೋವಿಂದಸ್ವಾಮಿ, ಶ್ರೀಮತಿ ಬಿ.ಟಿ.ಲಲಿತಾನಾಯ್ಕ, ವಕೀಲರಾದ ದಾವಣಗೆರೆಯ ರಾಘವೇಂದ್ರ ನಾಯ್ಕ, ಡಾ. ಬರಗೂರು ರಾಮಚಂದ್ರಪ್ಪ, ಪ್ರೊ. ಮುರಿಗೆಪ್ಪ, ಹಿರಿಯಣ್ಣ ಮಾಸ್ಕೇರಿ, ಎಂ.ಕೆ.ನಾಯಕ ಹಾಗೂ ಅಸಂಖ್ಯಾತ ಗೆಳೆತನದ ಮನಸುಗಳಿಗೆ ಚಿರಋಣಿಯಾಗಿದ್ದೇನೆ.

-ಡಾ. ಶಿರಗಾನಹಳ್ಳಿ ಶಾಂತನಾಯ್ಕ



ಆರಂಭ

ಕೆರಿ ಪೂರಾಒಣಗಿ ಕರಿನೆಲ ಬಿರಕಬಿಟ್ಟು, ಇರೊತ್ಯಾವದಾಗಿನ ಸಣ್ಣೇಡಿಗಳು ಬಿರಕಿನೊಳಗೆ ನುಸಳೋದನ್ನ ಹಿಡಿಯಾಕಂತ ಕಾಗಿಹಿಂಡು ಕುತ್ಕೊಂಡಿತ್ತು. ಏರಿಮ್ಯಾಲಿನ ಪೊಟರೆ ಹುಣಸಿಮರ, ಕೇರಮಾನಮರ, ದೊಡ್ಡನೆರಳೆಮರ, ಅಗಸಿಪೆಳಿ, ಚಪ್ಪಲ ಚಂಡಿನಹಣ್ಣು, ಉದ್ದನೆ ಉಗಣಿ ಬಳ್ಳಿತುದಿಚಿವುಟಿ ತಿನ್ನಾಕ ಹೊಂಟ ಹುಡ್ರುದಂಡು ತಮ್ಮ ತಮ್ಮ ಕ್ರಿಯೆಯನ್ನು ಕರಾರುವಕ್ಕಾಗೆ ಮಾಡತೊಡಗಿದರು. ಕಾಗಿಯಿಂದಿಡಿದು ಹುಡ್ರುದಂಡಿನವರಿಗ ಎಲ್ಲರ ಉದ್ದೇಶ ತಡಿಯಾಕಾಗದ ಹಸಿವನ್ನೋ ದಾಹವನ್ನ ಇಂಗಿಸಿ ಕೊಳ್ಳೋದಾಗಿತ್ತು. ಹೌದು ಕಾಕಾಪುರದ ಅರ್ಪತ್ತಮನಿಯಾನ ಮುದುಕರಿಗ, ಹರೆಯದ ಹುಡುಗರಿಗ ಹುಟ್ಟಿದ ಕೂಸುಗಳಿಗೂ ಸಹ ಹೊಟ್ಟೆ ಒಂದು ಸವಾಲಾಗಿತ್ತು. ಮಾಸೂರು, ತಿಂಗಳಾಪುರ, ಕಾಕಾಪುರ, ಕಾಟಿಹಟ್ಟಿ-ಹಿಂಗ ಐದುಹಳ್ಳಿ ನಡುವಿಂದೆ ಈ ಕಾಕಾಪುರ. ಲಮಾಣಿಗರು-ಹೆಚ್ಚಿರೋ ಈ ಕಾಕಾಪುರದಾಗ, ಕನ್ನಡ

ಮಂದಿವೂ ಒಂದ್ಯೆದಾರಮನಿ, ಸಾಬರೋವು ಎಂಟಹತ್ತಮನಿಗಳು, ಒಂದೆಲ್ಲ ಕಾಯಕದೊರೋವು ಇದ್ದಾಗ್ಯೂ, ಮಂದಿ ತಮ್ಮೊಳಗ ಗುದ್ದಾಡಿದ್ದೆ ಇಲ್ಲಾ. ಮದ್ವಿ,ಇಳೆಹೊಡೆಯೋದು, ಹನ್ಮಪ್ಪನ ಓಕಳಿಉಚ್ಚಾಯ, ಗಡಿದುರಗವ್ವನ ಹಬ್ಬ, ಅಜ್ಜಿಹಬ್ಬ ಕೂಡ್ಯಾಡೆ ಮಾಡ್ತಿದ್ರು. ಎಲ್ಲರ ಮನದಾಗ ಒಂದು ಏಕತಾನತೆ ಬೆಸದಕೊಂಡಿತ್ತು. ಒಂದೇ ಸಮನೆ ಜೀ ಅಂತ ಹಿಡ್ಕೊಳೊ ಮಳಿ ಉಸಕಿನ ನೆಲದಾಗ ಓಸಿನಹುಲ್ಲುಬೆಳೆದು ಬಿತ್ತಿದ್ದ ಜ್ವಾಳ, ರಾಗಿ ಪಿಂ..... ಅಂತ ಹಳದಿ ಬಣ್ಣಕ್ಕೆ ತಿರುಗಿಬಿಡ್ತಿದ್ವು. ದೊಡ್ಡಜ್ವಾಳ ಬೆಳದ್ರುಬೆಳಿತು ಇಲ್ಲಕ್ರ ನೆಲಬಿಟ್ಟಏಳ್ತಾನೇ ಇರ್ಲಿಲ್ಲಾ. ಮಳಿಗಾಲ ಕಳಿಯೋದು ದುಸ್ತರ ಆಗಾನ, ನಾಣೂರು-ಬುಳ್ಳಾಗೂರು ಸುತ್ತಿ ಮಂದಿ ಕೂಲಿಮಾಡಿ ಕಾಳತಂದು ಬಿಸೊಕಲ್ಲಿನ್ಯಾಗ ಬೀಸ್ಕೊಂಡ್ ಅಡಗಿಮಾಡಬೇಕು. ಒಳ್ಳೆ ಗಟ್ಟಿನೆಲ ಇರೋಮಂದಿ ಹೊಲ್ದಾಗ ದೊಡ್ಡಜ್ವಾಳ ಕಬ್ಬುಬೆಳದಂಗೆ ಬೆಳಿತಿತ್ತು ಖದೀಮರಾದ ಕೋಡಿಭೀಮ, ಕುಣಬಿಲಕ್ಕ, ಹಡಬಿಲಸಣ್ಣ, ಜೀನಗ ಹಗಲ ಹೊತ್ನ್ಯಾಗ ಮನಿಯಾಗ ಮಕ್ಕೊಂಡು ರಾತ್ರಿ ಕಳ್ಳತನ ಮಾಡಾಕ ಹೊರಗ ಬಿಳ್ತಿದ್ರು. ಕುರಿಮಂದ್ಯಾಗಿನಿಂದ ಕುರಿಹೊತ್ಕೊಂಡ ಬಂದು ಕಡದು ರಾತ್ರೋರಾತ್ರಿ ಹಸಿ ಬಿಸಿ ಮಾಂಸನ ತಿಂದು ಎಲಬನ್ನ ತಿಪ್ಯಾಗ ಹುಗಿತಿದ್ರು. ಮರ್ಯಾದಿಗ ಅಂಜೊ ಮಂದಿ ಮಾತ್ರ ಅಂಡಹರಿಯೋ ಹಂಗ ಮುಂಜಾನಿಂದ ಸಂಜಿಮಟಾನು ದುಡಿತಿದ್ರು.

ಕಾಕಾಪುರದಾಗ ಬದುಕು ಆರಂಭಾಗೋದೆ ಬೆಳ್ಳಿಚುಕ್ಕಿ ಪೂರ್ವದಾಗ ಪ್ರಖರವಾಗಿ ಮಿನುಗಿದಾಗ, ರಾಗಿಬೀಸ್ಕೊಂಡು, ರೊಟ್ಟಿಹಿಡ್ಕೊಂಡು ಹೊಟ್ಟಿತುಂಬಸಾಕ ಹೊಂಟರಂದ್ರ ಮನಿ ಸೇರೋದು ಕೌಳಾದಾಗ. ನಲ್ವತ್ತಮನಿ ಲಮಾಣಿಗಳು ಕಾಕಾಪುರದ ಸುತ್ತಿದ್ದ ಅಡವಿಯಿಂದ ಕಟಗಿಕಡದು ಹತ್ತಮ್ಯೆಲಿದೂರದ ಹಂಪೂರಪಟ್ಟಣಕ್ಕ ಹೊತ್ಕೊಂಡೋಗಿ ಮಾರಿ ಬರ್ತಿದ್ರು. ಕಾಡ ಕಡಮಿ ಆದಿಂದ ಅವರು ಸಾವುಕಾರ್ರ ಹೊಲಗಳಿಗ ದುಡಿಯಾಕ ಹೊಂಟ್ರು. ಕೆಂಪಕಾಜಿನ ಲಂಗ ಕಸೂತಿ ಮಾಡಿರೊ ಕುಬಸ ತಲಿಮ್ಯಾಲ ಕೆಂಪದೊಂದು ದಾವಣಿ ಹಾಕ್ಕೊಂಡು ಹೋಗ್ತಿದ್ದ ಲಮಾಣಿ ಹೆಂಗಸರು, ಹುಡುಗಿಯರನ್ನ ಕಂಡು ಬಾಯಿಂದ ಜೊಲ್ಲುಸುರಿಸ್ತಾ, ಅವರ ಹಿಂದಿಂದ ತಿರುಗಿ ಅವರ ಗಂಡಂದಿರಿಗ ಹೆಂಡಕುಡಿಸಿ ಗುಡಸಲ ಹೊಕ್ಕೊಳೊ ಜನರ ಹೆಂಡಂದಿರು ಅವರ ಮನಿಯಾಗ ಕೆಲಸ ಮಾಡೊಲಮಾಣಿ ಹುಡುಗರ ಜೊತಿಗ ಚಕ್ಕಂದ ಆಡ್ತಿದ್ರು. ಕಾಕಾಪುರದ ಪಕ್ಕದಾಗಿದ್ದ ದೊಡ್ಡಕೆರಿ ತುಂಬತಂದ್ರ ಎಲ್ಡ ಮೂರವರ್ಷ ಭತ್ತ, ಕಬ್ಬು ಹೆಂಗಾನ ಬೆಳ್ಕೊಬಹುದಾಗಿತ್ತು. ಒಂದು ದೊಡ್ಡಮಳಿ ಬಂದು ಹೊಸಪುರ, ಪಾತರಕಿ, ಪಾಂಡಳ್ಳಿ ಹಿಂಗ ಏಳೂರ ಕೆರಿ ಏರಿಹೊಡ್ದು

ನೀರ ಹರ್‍ಕೊಂಡಬರಾಕ ಹತ್ತಿದ್ದು ಸಾಗರದಂಗೆ ಕಾಣಾಕ ಹತಿತ್ತು. ಮದ್ವಿದಿಬ್ಬಣ ದಮಂದಿ ಏರಿಮ್ಯಾಲ ಸುತ್ತ ಅಕೈತಿ ಅಂತ ಮಾಳಿಪಕ್ಕದಾಗಹಾಸಿ ಕಿರಬನಕಟ್ಟೆಯೊಳಗಿಂದ ಹೊದ್ರಾತಂತ ಬಂಡಿ ಹೊಡ್ಕೊಂಡ ಹೊಂಟಿದ್ರು. ಇನ್ನೇನು ಕೂಳಿಹಳ್ಳ ದಾಟಿ ದೊಡ್ಡಾಪಿನ ಹುದ್ಲಹಳ್ಳದಾಗ ಗಾಡಿ ಇಳಿಯಾಕು ಮ್ಯಾಲಿಂದ ನೀರು ತೆಪ್ಪದಂಗ ಹರ್‍ಕೊಂಡಬರಾಕು, ಗಾಡಿ ಮತ್ತು ಮಂದಿ ಎಲ್ಲ ಕೊಚ್ಕೊಂಡು ಕೆರಿಯಾಗ ಸತ್ತ ಹೆಣ ಆದ್ರಂತ. ಅಂತ ದೊಡ್ಡ ಕೆರಿ ಕಾಕಾಪುರದ ಹತ್ರ ಇದ್ರು ಪ್ರಯೋಜ್ನ ಏನು ? ಕೆರಿಏರಿ ಕೆಳಗಿನ ಫಲವತ್ತಾದ ಗದ್ದೆಗಳೆಲ್ಲವು ಚೆಲುವಾ ಪುರದ ಬ್ರಾಂಬ್ರಿಗೆ ಸೇರಿದ್ದು. ಎಲ್ಡೊವರೆ ಮೈಲಿದೂರದ ಚೆಲವಾಪುರದ ಬ್ರಾಂಬ್ರಿಗೆ ಕಾಕಾಪುರದ ಕೆರಿಕಟ್ಟೊ ವಿಷಯ ಕೆಂಪಮಂದಿ ತಿಳಿಸಿದ್ದೆ ನಾಮುಂದ ನೀ ಮುಂದ ಅಂತ ತಮ್ಮ ಕೈಯಾಗಿದ್ದ ಕೆಂಬಣ್ಣಭಟ್ಟ ಅನ್ನೊಶಾನಭಾವುಗ ಆಣೆ, ದಮಡಿ, ಕೊಟ್ಟು ಹತ್ತಹತ್ತ ಎಕ್ಕರೆ ಜಮೀನು ಬರಿಸಿಕೊಂಡಿದ್ರು. ಕಾಕಾಪುರ ತಾಂಡದ ಮಂದಿ ಭೂಮಿ ತಗೊಂಡ ಏನತಾನೆಮಾಡ್ಯಾರು.ಇದ್ದ ಊರಾಗ ಇರೋರಲ್ಲಾ ಬಿದ್ದಗ್ವಾಡಿ ಕಟ್ಟೋರಲ್ಲ. ಉಪ್ಪ ಮಾರ್‍ತಾ ಎತ್ತಗಳ ಮ್ಯಾಲ ಸಾಮಾನ ಹೇರ್‍ಕೊಂಡು ಊರೂರು ಅಲಿಯೊ ಅಲೆಮಾರಿಗಳು. ಆದ್ರ ಯಾವನೊ ಒಬ್ಬಮುದಕ ಕಾಕಾಪುರದಾಗ ಶಾಶ್ವತವಾದ ತಾಂಡಕಟ್ಟೋ ಯೋಚನೆ ಮಾಡಿಂದ, ದೂರದೂರದಿಂದ ಬಂದ ಲಮಾಣಿಗರು ಒಂದಾತವ ನೆಲೆನಿಂತು ನೂರೈವತ್ತ ವರ್ಷಗಳೆ ಆಗಿದ್ದು. ಪಾಳೆಗಾರ್‍ರು, ರಾಜರು ಹೋದಿಂದ ಕೆಂಪಮೂತಿ ಮಂದಿ ದರ್ಬಾರು ಕಂಡಿದ್ರು. ಕೆರಿಏರಿ ಕೆಳಗ ಸಿದ್ದನಾಯ್ಕ, ಕೆಂಚೀರಯ್ಯ, ಕಾಣುನಾಯ್ಕ, ಕಾಯಕದ ಕಬ ರಯ್ಯ, ಕಟ್ಟಿಮನಿ ಹುತ್ತಪ್ಪ ಗುಡಸಲ ಹಾಕ್ಕೊಂಡಿದ್ರು. ಕಾಲ ಸರದಂಗ ಹತ್ತಕ ಇಪ್ಪತ್ತು ಇಪ್ಪತಕ್ಕ ನಲ್ವತ್ತ ಮನಿಗಳಾದ್ವು.

ಪಡವಲಸೀಮಿಂದ ಎತ್ತಿನ ಸವಾರಿ ಮಾಡ್ಕೊಂಡು ಬಂದ ಬುದ್ಧನಾಯ್ಕ ಕಾಕಾಪುರ ದಾಗ ಇರೋ ಯೋಚನೆಮಾಡ್ದ. ಹಟ್ಟಿಗ ಹಿರಿಯ ಸಿದ್ದನಾಯ್ಕನ ಪರವಾನಿಗೆ ಪಡಿಯಾಕ ಅವನ ಗುಡಿಸಲತಾವಹ್ವಾದ. "ನಾಯಕ ಭೀಯಾ ಮೈಬಿಗೋರಭಾಯಿ ಹಾವ ಮನಬಿರೇನ ಜಾಗದೋತೊ, ಮಾರಿಬಿ ಬಾಲಬಚ್ಚಾವೂನ ಪಾಳಲಿವೂ" (ನಾಯಕಣ್ಣ ನಾನೂ ಲಮಾಣಿ ಜನಾಂಗಕ್ಕ ಸೇರಿದವನು. ನನಗೂ ತಾಂಡದಾಗ ಇರಾಕ ಜಾಗಕೊಟ್ರೆ ಮಕ್ಕಳನ್ನ ಸಾಕ್ಕೊಂಡು ಇದ್ದೇನು) ಅಂತೇಳಿ ದೈನ್ಯತೆಯಿಂದ ಕೇಳ್ಕೊಂಡ.

ಹಟ್ಟಿಗ ಹಿರೀಕ ಸಿದ್ದನಾಯ್ಕ, ಮುಲಾಜಿಲ್ದೆ, "ಅಯ್ಯೊ ನೀ ನಮ್ಮ ಮನುಷ್ಯ,ತಾಂಡ ದಾಗ ನಿನಗ ಜಾಗಿಲ್ಲಾ ಅನ್ನಾಕ ಆದೀತ. ಆ ಬೇವಿನಕೊನಿ ಪಕ್ಕ ಒಂದ ಗುಡಿಸಲು

ಹಾಕ್ಕೊಹೋಗು ಅಂತ ಖುದ್ದಾಗಿ ಬಂದು ಜಾಗ ತೋರಿಸಿದ. ಬುದ್ದನಾಯ್ಕ ಬಹಳ ಸಿದಾಸಾದ ಸರಳ ಮನುಷ್ಯ. ಒಂದು ತಿಳದ್ರ ಒಂದತಿಳಿತಾ ಇರ್ಲಿಲ್ಲಾ. ಆತನ ಹೆಂಡತಿ ಮೀಟಿ ಬಾಯಿ ಮಾತ್ರ ಬಾಯಿಬಡಕಿ. ಬುದ್ದನಾಯ್ಕನ ಪೂರ್ವಜರು ಬಾಗೂರು ಜಿಲ್ಲಾ ಅಂಕಲೂರತಾಂಡದವರು ಮಳಿ ಇಲ್ಲದೆ ಬರಗಾಲ ಬಿದ್ದಿದ್ದಕ್ಕ ಅಂಕಲೂರಬಿಟ್ಟು ಅಲೆಮಾರಿಗಳಾಗಿ ಊರೂರು ಅಲದು ದಾರಿನಡಕ್ಕ ಸತ್ತಹ್ವಾದ್ರು. ಬುದ್ಧನಾಯ್ಕನ ಅಣ್ಣ ಲಕುಮಾನಾಯ್ಕ ಮತ್ತೆ ವಾಪಾಸು ತಮ್ಮೂರು ಅಂಕಲೂರಿಗೆ ಹೋದ. ಅವನ ತಂಗಿ ಮತ್ತು ಬಾವ ಮಲ್ನಾಡ ಸೀಮಿಗೆ ಹೊಂಟಹೋದ್ರು. ಏನಮಾಡಾಕಂತ ತಿಳಿಯದ ಬುದ್ದ ನಾಯ್ಕ ಆರವರ್ಷದ ಗೊತ್ತಾನಾಯ್ಕ, ಐದುವರುಷದ ಪಾಮಿ, ಕೈಕೂಸು ಕಟುವಾನಾಯ್ಕನ್ನ ಎತ್ಕೊಂಡು ಪೂರ್ವದಿಕ್ಕಿಗ ಹೊಂಟೋರು ಬಂದುನಿಂತಿದ್ದು ಕಾಕಾಪುರ ತಾಂಡದಾಗ. ಸಿದ್ದನಾಯ್ಕ ಅನ್ನೊ, ಹಟ್ಟಿಹಿರಿಯ ಮತ್ತ ತಾಂಡದಲ್ಲಿದ್ದ ಕೆಂಚೀರಯ್ಯ, ಹಸನುಸಾಬಿ ನೆರವು ಪಡ್ಕೋಂಡು. ಊರ ಮುಂದಿನ ದೊಡ್ಡಹಳ್ಳಕ ಹೋಗಿ ಆಪುಕೋಯ್ಕೊಂಡ ಬಂದ. ಕೋಡಿಸರದಾಗ ಬೆಳದಿದ್ದ ಬಳ್ಳಾರಿಜಾಲಿ ಪೆಳಿಯಾಗಿಂದ ದಪ್ಪ ಕಟ್ಟಿಗಿ ತಂದು ಒಂದು ದೊಡ್ಡ ಗುಡಿಸಲು ಹಾಕ್ಕೊಂಡ. ಆತನ ಹತ್ತಿರದ ಎರಡು ಎತ್ತುಗಳ ಸಹಾಯದಿಂದ ಊರ ಮಂದಿಹೊಲಕ ಬಾಡಗಿಗಳೇವು ಹೊಡಿಯೋದು, ಯಾರದಾರು ಬಂಡಿಬಾಡಗೀಗ ಸಿಕ್ಕರ ಶೇಂಗಾ, ಜ್ವಾಳ, ಭತ್ತ ಹೇರ್ಕೊಂಡು ಹಂಪೂರು, ಹವಳಾಪುರ ಚೆನ್ನೂರ ಪ್ಯಾಟಿ ಮಟಾನು ಹೋಗ್ತಿದ್ದ. ಬರೊ ಎರಡು ಅಣೆಯೊಳಗ ಒಂದೆರಡು ದಮಡಿಕೊಟ್ಟು, ಸಂತಿಯೊಳಗಿಂದ ಮೆಣಸಿನಕಾಯಿ, ಉಪ್ಪು, ಉಳ್ಳಾಗಡಿ, ಜ್ವಾಳ ಖರೀದಿ ಮಾಡ್ಕೊಂಡ ಹೊಕ್ಕಿದ್ದ. ಮೀಟಿಬಾಯಿ ದೊಡ್ಡಹುಡುಗ ಗೊತ್ತಾನಾಯ್ಕನ ಕರ್ಕೊಂಡು ಕೆಪ್ಪಅಂದಭಟ್ಟ, ಹನುಮಭಟ್ರ ಗದ್ದಿಗ ದುಡಿಯಾಕ ಹೊಕ್ಕಿದ್ಲು. ಹಿಂಗ ಬುದ್ದನಾಯ್ಕ ಕಾಕಾಪುರದಾಗ ಹೊಸದೊಂದು ಬದುಕ ಕಟ್ಕೋ ಹುರುಪು ತೋರಿದ್ದ.

ಐದುವರ್ಷ ಕಳಿಯೋದ್ರಾಗ ಬುದ್ಧನಾಯ್ಕನ ಹಿರಿಮಗ ಗೊತ್ತಾನಾಯ್ಕ ಅಪ್ಪನ ಕೂಡ ಪ್ಯಾಟೀಗ ಹೋಗತೊಡಗಿದ. ಹಂಗೇ ಕೆಲಸ ಕಲ್ತಮ್ಯಾಲ ಅವನಪ್ಪನನ್ನ ಬಿಡಿಸಿ ತಾನೇ ಹೋಗತೊಡಗಿದ. ಕೆಪ್ಪಭಟ್ಟ ಇಡೀ ಮನಿಮಂದಿ ದುಡಿಯೋದ ನೋಡಿ ಮೀಟಿಬಾಯಿಗ ಸರಿಪಾಲಿಗ ಸಾಕಾಕಂತ ಒಂದುಗಬ್ಬದ ಎಮ್ಮಿ ಮಣಕಕೊಟ್ಟ. ಹಂಗೆ ಬೀಳಬಿದಿದ್ದ ಅಂಟ್ವಾಳ ಮರದ ಗದ್ದಿಯನ್ನ ಕೋರಿಗಂತ ಕೊಟ್ಟ. ಬುದ್ಧನಾಯ್ಕನ ಮಗ ಗೊತ್ತನಾಯ್ಕ ಅಂದಭಟ್ಟನ ಬಲಗೈಬಂಟನಾಗಿ ಹಗಲುರಾತ್ರಿ ಒಂದಮಾಡಿ

ದುಡಿಯತೊಡಗಿದ. ಅವನ ತಮ್ಮ ಕಟುವಾನನ್ನ ಸಾಲಿಗ ಸೇರಿಸಿದ. ಅವನವ್ವ - ಅಪ್ಪ ಗುರಸಾಂತಯ್ಯಮಾಸ್ತರಿಗ ಅಂಗಲಾಚಿ ಸಾಲಿಗೇನೂ ಕಳಿಸಿದ್ರು ಕಟುವಾನಾಯ್ಕ ಸಾಲಿ ಕಲಿಯೋದಬಿಟ್ಟು ಮೇಷ್ಟ್ರಿಗೆ ಪಾಠಹೇಳಿಕೊಡತೊಡಗಿದ ಮೇಷ್ಟ್ರುಬೆತ್ತದ ರುಚಿಕಂಡು ಸಾಲಿಬಿಟ್ಟು ಕೋಡಿಸರದಗುಂಟ ಕಲ್ಲೇಡಿ, ಮೀನುಹಿಡಿದು ಸುಟ್ಕೊಂಡು ತಿಂದು ಸಂಜಿ ಮುಂದ ಸಾಲಿಬಿಡ್ತು ಅಂತೇಳಿ ಮನೀಗ ಬರಾಕಹತ್ತಿದ. ಅದನಕಂಡ ಗೊತ್ತಾನಾಯ್ಕ ಇಂವ ಸಾಲಿಕಲ್ತು ಪಂಡಿತನಾಗೋದು ಆಟ್ರಾಗೈತಂತೇಳಿ, ಸಾಲಿಬಿಡಿಸಿ ದನ ಕಾಯಾಕಹಚ್ಚಿದ. ಭಟ್ಟರ ಎಮ್ಮಿ ಹೆಣ್ಣಗರ ಹಾಕಿತ್ತು. ಮುಂಜಾನಿ ಹಾಲತಗದು ಭಟ್ಟರಿಗ ಕೊಟ್ಟುಬರ್ತಿದ್ದ ಗೊತ್ತಾ. ಸಂಜಿಮುಂದಿನ ಹಾಲ ಹೆಪ್ಪಹಾಕಿ ಭಾನುವಾರ ಹಂಪೂರು ಬೆಣ್ಣಿ ಮಾರ್ಕೆಟಿಗ ಬೆಣ್ಣಿಒಯ್ಯುತ್ತಿದ್ದ. ಕಟುವಾ ಎಮ್ಮಿಕಾಯಕ ಸುರುಹಚ್ಕೊಂಡಿಂದ, ಗೊತ್ತಾನಾಯ್ಕ ಮತ್ತೆರಡ ಎಮ್ಮಿಗಳನ್ನ ತಂದು ಸಾಕತೊಡಗಿದ. ಬುದ್ಧನಾಯ್ಕ ಬೆಳೀತಿರೋದನ ಕಂಡು ಕಾಕಾಪುರದ ಕೆಲಮಂದಿ ಹೊಟ್ಟೆಕಿಚ್ಚು ಪಡ್ತಿದ್ರು. ಅದ್ಯಾವುದಕ್ಕೂ ತಲಿಕೆಡಿಸಿಕೊಳ್ಳದ ಬುದ್ಧನಾಯ್ಕ ವರ್ಷದಿಂದ ವರ್ಷಕ್ಕ ಬೆಳಿಯಾಕ ಹತ್ತಿದ್ದ. ಯಾರಿಗೂ ಗೊತ್ತಾಗದಂಗ ಅಡವ್ಯಾಗ ಹತ್ತು ಎಕರಿಭೂಮಿ ತಗದು ಸಾಗವಳಿ ಮಾಡಕ ಸುರುಮಾಡಿದ. ಕೆಪ್ಪಲಿಂದಭಟ್ಟ ಗೊತ್ತನಾಯ್ಕನ ವರ್ಚಸ್ಸು, ಬುದ್ಧನಾಯ್ಕನ ಒಳ್ಳೆತನಕ ಮೆಚ್ಚಿ ಕಾಕಾಪುರದ ಸಮೀಪದ ಗದ್ದೆಗಳನ್ನೆಲ್ಲಾ ಕೊರಪಾಲಿಗಂತ ಅವರಿಗೆ ಕೊಟ್ಟಬಿಟ್ಟ. ಹಾಲುಹೈನು ಬೆಲ್ಲದಗಾಣ-ಕೈಯಾಗ ಕಾಸ ಆಡಾಕಹತ್ತಿತ್ತು. ಮುಂಜಾನಿ ನಸುಕಿನೊಳಗೆ ಬೆಳ್ಳಿಚುಕ್ಕಿ ಪೂರ್ವಕ್ಕೆ ಬರೋದ್ರಾಗ ಅಂಗಳಗುಡಿಸಿ ದುಂಡಗಮಾಡಿ ಎಮ್ಮಿಗಳಿಗೆ ಹುಲ್ಲುಹಾಕಿ ನುಚ್ಚಿಟ್ಟು ಕೊಟ್ಟಿಗೆ ಸ್ವಚ್ಛಮಾಡಿದವನೆ ಅವನವ್ವ ರಾಗಿಬೀಸಿದ್ರ ಅವನು ಹಾಲಕರ್ಕೊಂಡು ಮೂರುವರಿ ಮೈಲಿದೂರದ ತಾಂಬೂರಿಗ ಹಾಲಕೊಟ್ಟ ಬರಾಕಹೊಂಟಬಿಡ್ತಿದ್ದ. ತನ್ನಗಳೆಕೆಲಸ ಇಲ್ಲದ ದಿನ ಮುಂಜಾನೆ ನಾಕಕ್ಕ ಎತ್ತಮೇಯಿಸಿ ಬಂಡಿಕಟ್ಟಿದ್ರ ಹೊತ್ತಹರಿಯೋದ್ರಾಗ ಚೆನ್ನೂರಪ್ಯಾಟಿಯೊಳಗ ಇರ್ತಿದ್ದ. ಆಗ ಈಗನಂಗೆಲ್ಲಿ ರಸ್ತಿ, ಬಂಡಿಜಾಡು ಎರಡು ಇಕ್ಕೆಲದಾಗ ದೊಡ್ಡಮರಗಳು, ಬಂಡಿಮೊಕಿಗೆ ಲಾಟೀನ ಕಟ್ಕೊಂಡು ಒಂದರಹಿಂದೆ ಒಂದು ಏಳೆಂಟಬಂಡಿಗಳು ಎರಡ ಆಣಿ ಬಾಡಗಿಗ ಶೇಂಗಾಬೀಜಹೇರಾಕ ಹೊಂಟಬಿಡ್ತಿದ್ವು. ಅಲ್ಲಿಂದ ಹೇರ್ಕೊಂಡವರೆ ಎತ್ತುಗಳನ್ನು ಮೇಯಿಸಿಕೊಂಡು ಸಂಜೀ ತಂಪಹೊತ್ನಾಗ ಬಂಡಿಕಟ್ಟಿದ್ರ ಹಂಪೂರ ಬಿಟೇರಜೀನು ಮುಟ್ಟಿದ್ದು ಬೆಳಗಾ ಮುಂಜಾನೆ, ಎರಡಲಿಣಿ ಬಾಡಗಿ ಕೈಗ ಬಂದಿಂದ ಬೋಖುಷಿ ಪಡ್ತಿದ್ರುಮಂದಿ, ಅದ್ರಾಗ ಕೆಲವರು ಹೆಂಡದಂಗಡಿಗ ಹೋಗಿ ಒಂದ ದಮಡಿಕೊಟ್ಟು

ಹೆಂಡ ಕುಡಿದು ನೆಂಚಕೀಗ ಒಣಬಾಂಗಡಿ ಮೀನ ತಗೊಂಡು ಅಮಲಿನಾಗೆ ಊರಸೇರಿದ್ರ, ಗೊತ್ತಾನಾಯ್ಕ ಮಾತ್ರಕುಡಿಯೋರ ಬಾಯಿನೋಡಿ ಕುಡದಂಗ ಉಳಗನುಂಗಿ, ಹೊಟ್ಟೆಹಸ್ಕೊಂಡಾಗ ಮನಿಂದ ತಂದ ರೊಟ್ಟಿನ ನೀರಾಗ ನೆನಸಿ ಮೆಣಸಿನ ಹಿಂಡಿ ನೆಂಚ್ಕೊಂಡು ಉಂಡು ಚರಗಿ ತುಂಬ ನೀರ ಕುಡದು ಎರಡಾಣೆಗಳನ್ನ ಉಗಳ ಹಚ್ಚಿ ಗಂಟ ಹಾಕಿ ಕಟ್ಕೊಂಡ ಬಂದು ಅವನವ್ವನ ಕೈಗ ಕೊಡ್ತಿದ್ದ.

ಮನಿಯಾಗ ಮೂರನಾಕ ಮಂದಿ ದುಡಿಯೋರ ಆದಿಂದ ದುಡ್ಡು ಉಳಿಯಾಕ ಹತ್ತಿತ್ತು. ಊರಿಂದ ಎಲ್ಡಮೈಲಿ ದೂರದ ಅಡವಿಹೊಲ ಬರಿ ಉಸುಕು ಆಗಿದ್ದು ಕೊಲಾಣಿ ಸಪ್ಪು ಒಸಿನ ಹುಲ್ಲು ಬೆಳಿತ್ತಿತ್ತು. ಕೆಳಗಿನ ಹಳ್ಳದಿಂದ ಹಿಡಿದು ಮೇಲಿನ ಅಡ್ಡಹಾದಿ ಮಟಾನು ರಾಗಿ ಬಿತ್ತಿದ್ರ ಅರ್ಧಹೇರ ಹುಲ್ಲಾಗ್ತಿತ್ತು. ಮಳಿಗಾಲಕ್ಕ ಬ್ಯಾಸತ್ತಿದ್ದ ಬುದ್ದನಾಯ್ಕ ಊರಮುಂದಿನ ಕೆಂಪಹಾಸಗಿಯೊಳಗ ಹೊಲ ಖರೀದಿಮಾಡಾಕಂತ ಆಶಿಪಟ್ಟಿದ್ದ. ಆ ನಿಟ್ಟಿನ್ಯಾಗ ಮಗ ಗೊತ್ತನಾಯ್ಕ ದುಡಿಯಾಕ ಹತ್ತಿದ್ದ.



ಬಿರಕು ಬಿಟ್ಟ ಕೆರಿಯ ಏರಿ

ಬುದ್ಧನಾಯ್ಕ ಬೋಳೆಮನುಷ್ಯ. ಬುದುಕಿನ್ಯಾಗ ಯಾವ ತಪ್ಪುಮಾಡದವ, ಯಾರ ಕೂಡ ಒಂದಮಾತ ಅನ್ನಿಸಿಕೊಂಡವನೆ ಅಲ್ಲ. ಯಾರಿಗ ಒಂದಮಾತ ಹೇಳಿದವನೂ ಅಲ್ಲ. ಸರಿಯಾಗಿ ಮಾತಾಡಾಕ ಬರ್ತಿರಲಿಲ್ಲಾ. ಒಂದು ಮಳಿಗಾಲ, ಅಡವಿ ಹೊಲದಾಗ ಶೇಂಗಾಬಿತ್ತಿದ್ರು. ಎಡೆಕುಂಟಿಗಾಗಿ ಊರೆಲ್ಲಾತಿರಗಿದ್ರು ಸಿಗದಕ್ಕ ಎರಡತುಂಡಕಟ್ಟಿಗಿ ತಗೊಂಡ ಕಾಚನಟ್ಟಿಗ ಹೋಗಿ ಈರಭದ್ರಾಚಾರಿತಾವ ಕುಂಟಿಮಾಡ್ಸಾಕ ಮರದ ತುಂಡಗಳನ್ನ ತಗೊಂಡ ಹೋದ. "ಏನ್ ಬುದ್ಧಜ್ಜ ದೂರಬಂದೀಯ ಏನ ಮಾಡಿ ಕೊಡಬೇಕು" ಅಂತಂದ ಕೇಳಿದ ಈ ಭದ್ರಾಚಾರಿ. "ಅದೇ ಆಚಾರಪ್ಪ ಸಾಲಹಿಡ್ಕೊಂಡ ಹೋಗೊದು, ಸಾಲಹಿಡ್ಕೊಂಡ ಬರೋದು ಮಾಡಕೊಡು", ಅಂದ ಬದ್ಧನಾಯ್ಕ, ಈರಭದ್ರಾಚಾರಿ ತಲೀ ಹಾಳಾತು, ತುಂಡಗಳನ್ನ ನೋಡಿ ಅಂದಾಜಮಾಡಿದವನೆ ಎಡೆಹರಗೂ ಕುಂಟೆಗಳನ್ನ ಮಾಡಿಕಳಿಸಿದ. ಹೀಂಗ

ಮುಗ್ಧನಾಗಿದ್ದ ಬುದ್ಧನಾಯ್ಕ. ಅವನಹೆಂತ್ತಿ ಮಕ್ಕಳು ಮಾತ್ರ ಬಹಳ ಬೆರಕೀಇದ್ರು. ಕಾಸಿಗಕಾಸ ಕೊಡಿಸಿ ಒಂದಹೊಸ ಬಾಳೇವು ಸುರುಮಾಡೊತವಕ ಅವರಿಗಾ. ಆದ್ರ ಕಾಕಾಪುರದ ಮಂದಿ ಬದ್ಧನಾಯ್ಕನ ಮನಿಯಲ್ಲಿ ಆಗ್ತಿರೊ ಬದಲಾವಣೆಯನ್ನ ಸಹಿಸಿಕೊಳ್ಳದಾದರು. ಒಳಗೊಳಗೆ ಮಾತಾಡಿಕೊಳ್ಳತೊಡಗಿದ್ರು. ಬಂಡುನಾಯ್ಕ, ಜೀರುನಾಯ್ಕ, ಮೇಗಿನ ಓಣಿಲಸಣು ಸೇರಿಕೊಂಡು, "ಏನ್ರಪ್ಪ ಮನ್ನೆ ಮನ್ನಿನ್ಯಾಗ ತಾಂಡಕ್ಕ ಬಂದಿರೊ ಬುದ್ಧ ನಾಯ್ಕ ಯಾರಿಗೂ ಬಗ್ಗದಂಗೆ ಮುಂದಾದ" ಅಂತಂದು ಮಾತಾಡಿಕೊಳ್ಳ ತೊಡಗಿದ್ರು. ಊರಾಗ ಬುದ್ಧನಾಯ್ಕ ಅಂದ್ರ ಮಂದಿ ಹೊಟ್ಟೆಕಿಚ್ಚಿಂದ ನೋಡತೊಡಗಿದ್ರು.

ಗಾಣದಹೊತ್ತಿನ್ಯಾಗ ಯಾರಾದ್ರುಕೂಡಿದ್ರಾತು ಇಲ್ಲಂದ್ರ ಗೊತ್ತನಾಯ್ಕ ಒಬ್ಬನೆ ಒಂದುವರಿ ತಿಂಗಳಕಾಲ ಆಲೆಮನಿ ಆಡ್ತಿದ್ದ. ಎರಡೆತ್ತ ಸಾಲದಕ್ಕ ಅವನ ತಮ್ಮ ಕೆಲಸಮಾಡೋನ ಆದಮ್ಯಾಕ ಮತ್ತೊಂದು ಜತಿ ಎತ್ತಗಳನ್ನ ಗೆಣಸಿ ಸಂತಿಯಿಂದ ತರಿಸಿದ. ಬಿಳಿ ನಾಕಹಲ್ಲಿನ ಕರಗಳನ್ನ ನೋಡಿದಮಂದಿ ಒಳಗೊಳಗೆ ಸಂಕಟಪಡತೊಡಗಿದ್ರು. ಮೇಲೆಕಾಣದ ಹೊಗಿ ಒಳಗೊಳಗ ಆಡ್ತಿರೊಸೂಚನೆಕಂಡಿತ್ತು. ಬುದ್ಧನಾಯ್ಕನ ಜೊತಿಗ ಪಸಂದಾಗೆ ಮಾತಾಡ್ತಿದ್ದ ಪಕ್ಕದ ಮನಿ ಚನಿಯಾನಾಯ್ಕ ಮಾತಾಡೋದನ್ನ ಬಂದಮಾಡಿದ್ದ. ಸಂಬಂಧಗಳು ಕೊಂಡಿ ಕಳಚಿಕೊಂಡಿದ್ದು, ದುಡದ ಉಣ್ಣೋರಿಗ ದುಡದ ತಿನ್ನಾಕ ಸೇರದ ಮಂದಿನಡಕ ಬದಕೋದಾರು ಹ್ಯಾಂಗ? ಬುದ್ದನಾಯ್ಕನಿಗೆ ಒಂದದೊಡ್ಡ ಸವಾಲಾಗೆ ಕಂಡಿತ್ತು. ತಾವಾತು ತಮ್ಮಮನಿಯಾತು, ಮಂದಿಹಂಗ ಊರೂಸಾಬರಿಗ ಹೋಗದ ಮಕ್ಕಳು. ಹೊಲದ ಕೆಲಸ ಮುಗೀತಂದ್ರ ಮನಿಗಬಂದು ಹಗ್ಗಹೊಸಿಯೋದು, ದನಕರುಗಳಿಗ ನೀರು, ನುಚ್ಚು ಅಂತಂದ ಅಂಗಳದಾಗೆ ಕಾಲಕಳಿಯೋದನ್ನ ಕಂಡ ಕೆಂಚೀರಯ್ಯ "ಎನ ಪುಣ್ಯಮಾಡಿಯೊ ಬುದ್ಧಪ್ಪ, ಬಿತ್ತಿದ್ರ ಹುಟ್ಟಬೇಕು ಅಂತಾ ಮಕ್ಕಳ ಪಡದೀಯಾ, ಯಾವತ್ತಾರ ಯಾರದಾರ ಮನಿಮುಂದ ನಿಂತ ಮಾತಾಡಿದ್ದಾಗಲಿ, ಹಂಗೆ ಖಾಲಿ ಪುಕ್ಕಟ್ಟೆ ಹೊತ್ತಕಳಿಯೋದನ್ನ ನೋಡಲಿಲ್ಲಾಬಿಡು. ನಮ್ಮ ಮನಿಯಾಗು ಅದಾವ ಕೆಲ್ಸಕ ಬರದೋವು" ಅಂತ ತನ್ನ ಮಕ್ಕಳ ಕತಿ ಹೇಳಿದ. "ಏನೋ ಕೆಂಚೀರಯ್ಯ, ದುಡಿತಾವ. ಕಾಲನಿಲ್ಲದೇ ಒಬ್ಬರ ಮನಿಮುಂದ ಹ್ವಾದ್ರ, ಬಾಯಿನಿಲ್ಲದ ಒಂದಮಾತು ಬರೋದು ಖರೆ. ಅದಕ್ಕ ಒಬ್ಬರ ಮನೀಗ ಹೋಗೋದಲ್ದೆ ಒಂದಮಾತ ತರೋದ ಬ್ಯಾಡ ಅಂತ ಐದನಿಮಿಷ ಅಂಡೂರದೆ ದುಡಿತಾವ" ಅಂದ.

ತನ್ನಮಕ್ಕಳ ಬಗ್ಗೆ ಆಡಿಕೊಳ್ತಾರ ಅನ್ನೋದು ಮುದುಕಗ ತಿಳಿದಿತ್ತು. ಊರ ಅಂದಮ್ಯಾಲ ಒಣಉಸಾಬರಿ ಇದಿದ್ದೆ, ಅದ್ಕೊಂಡು ಸುಮ್ಮನಾದ. ಗೊತ್ತನಾಯ್ಕ ಮತ್ತು ಅವನ ತಮ್ಮ ಕಟುವಾ ಸೇರಿ ಊರಾನಮಂದಿ ತಲಿಕೆಡಸಿದ್ರು. ಯಾರಮನಿಗ ಹ್ವಾದ್ರು ಒಂದೇ ಮಾತು: "ಲೇ ಬೆಪ್ಪ ಸೂಳಿಮಕ್ಕಳ್ರಾ, ಹೋಗ್ರಲೇ ನೋಡ್ರಿ ಬುದ್ದನಾಯ್ಕನ ಮಕ್ಕಳನ್ನ ಹ್ಯಾಂಗ ದುಡಿತಾರಂತ". ಗೊತ್ತನಾಯ್ಕನ ಓರಿಗೆ ಹುಡುಗರಿಗ ಒಂದು ತಲಿನೋವಾಗಿತ್ತು. ಗೊತ್ತನಾಯ್ಕ ಮಾತ್ರ ದೊಡ್ಡೋರು ಸಣ್ಣೋರನ್ನೂ ಮರ್ಯಾದಿ ಇಟ್ಕೊಂಡಿದ್ದ. ಹುಡಕಿ ಹುಡಕಿ ಕೆಲ್ಸಮಾಡೋದು ಅವನ ಜಾಯಮಾನ ಆಗಿತ್ತು. ಗೊತ್ತನಾಯ್ಕ ಅದಕ್ಕೆ ಹನ್ನೆಲ್ಡವರುಷದಾಗ ಹುಚ್ಚತಂದೆ ಬುದ್ಧನಾಯ್ಕನಿಂದ ಜವಾಬ್ದಾರಿ ಪಡ್ಕೊಂಡು ಮನಿನಡೆಸೋದನ್ನ ಕಲ್ತಿದ್ದ. ಊರಮಂದಿ ಹೊಟ್ಟೆಉರಿ ಒಂದ ಸೀಮೆಯನ್ನ ದಾಟ್ತಿದ್ದಂಗೆ ಕೆರಿಏರಿ ಬಿರಕ ಬಿಟ್ಟಿತ್ತು.

ಹಿರೇಪುಷ್ಯ, ಚಿಕ್ಕಪುಷ್ಯದಾಟಿ ಅಡ್ಡಮಳಿ ಆರಂಭವಾಗಿದ್ರು. ಹಗಲುರಾತ್ರಿ ಬಿಡದೆ ಮೂರದಿನ ಮಳಿನಿಲ್ಲದಂಗೆ ಸುರಿಯಾಕ ಹತ್ತಿತ್ತು. ಮಂದಿ ಮನಿಬಿಟ್ಟ ಹೊರಗ ಹೋಗಾಕಾಗದೆ ಪರದಾಡಕ ಸುರುಮಾಡಿದ್ರು. ಹೊಸೂರು, ಜಿತ್ತಿಕಟ್ಟಿ, ನಾಗಲೂರ ಕೆರಿಏರಿಗಳು ಹೊಡದು ನೀರು ಸಾಗರೋಪಾದಿಯಾಗಿ ಹರ್‍ಕೊಂಡು ಬಂದಿತ್ತು. ಕಾಕಾಪುರದ ಕೆರಿಏರಿ ತೂಬಿನಪಕ್ಕ ಕೇರಮಾವಿನಮರದ ನಳಕಿನ್ಯಾಗ ಬಿರಕ ಬಿಟ್ಟಿರೋದನ್ನ ಬಯಲಕಡೀಗ ಹೋಗಿದ್ದ ಗೊಪಾನಾಯ್ಕ ನೋಡಿದವನೆ ಕುಂದ್ರೋದ ಬಿಟ್ಟ ಓಡಿಬಂದು ಮುಗಿಲಾಗ ತೂತುಬಿದ್ದು ಸೊರೊಹಂಗೆ ಸುರಿತಿರೊ ಮಳಿಯಾಗ ಮನಿಮನಿಗ ಅಡ್ಡಾಡಿ ಕೂಗಿಹೇಳಿದ. ಸತ್ರೋಬಿದ್ರೊ ಅನ್ನೊಹಂಗ ಜನ ಮನಿ ಬಿಟ್ಟವರೆ ಹಟ್ಟಿಹಿರಿಯನ ಮನಿಮುಂದ ಸೇರಿದ್ರು. ಕೆಂಚೀರಯ್ಯ ಒಂದು ನಿರ್ಣಯಕ್ಕ ಬಂದವನಂತೆ "ನೋಡ್ರಪ್ಪ ಈಗಿಂದಿಗ್ಲೆ ಈ ಊರ ಖಾಲಿಮಾಡ್ಲಿಲ್ಲಾಂದ್ರ ನಾವ್ಯಾರು ಉಳಿಯೋದಿಲ್ಲ" ಮಂದಿ ಗಾಬಾಗಿ ದಿಕ್ಕುದಸೆ ಕಾಣ್ದಂಗೆ ನಿಂತಿದ್ರು. "ಏನ ಯೋಚ್ನೆಮಾಡಕಹತ್ತಿರೋ ನಿಮ್ಮ, ತಾಂಡಾ ಮದ್ದುಲಬಿಡ್ರಿ, ಬದುಕಿದ್ರ ಮುಂದಿಂದಮುಂದ ನೋಡಾನಂತ" ಅವಸರ ಮಾಡ್ದವನೆ ಹೋಗಿ ಮನಿಯಾನ ಸಾಮಾನಗಳನ್ನೆಲ್ಲಾ ಜೋಡಿಸಿ ಎತ್ಕೊಂಡು ತಾಳಿಮರದ ದುರ್ಗವ್ವನ ಗುಡಿಹತ್ರ ಹೊಂಟೇಬಿಟ್ಟ. ಮಂದಿ ದಿಕ್ಕಾಪಾಲಾಗಿ ಸತ್ತೇವೊ ಬದುಕೇವೊ ಅಂತ ಮನಿಯೊಳಗಿಂದ ಕೈಗಸಿಕ್ಕ ಸಾಮಾನು, ಎತ್ತು, ಕುರಿ ಕೋಳಿ, ಎಮ್ಮಿ, ಆಕಳು ಬಿಚ್ಚಿ ಓಡಿಸಿಕೊಂಡು ಹಟ್ಟಿ ಹಿರಿಯ ಹೋದಕಡೀಗ ಹೊಂಟ್ರು. ಬುದ್ಧನಾಯ್ಕ, ಮುಗಲ ಕಳಚಿ ತಲಿಮ್ಯಾಲ ಬಿದ್ದಂಗ ಕುಂತ್ಕೊಂಡ. ಗೊತ್ತನಾಯ್ಕ ಮತ್ತ ಅವನವ್ವ,

2

ಗಡಬಡಿಯಿಂದ ಇದ್ದ ಬದ್ದದನ್ನೆಲ್ಲಾ ಬಾಚಿ ಬಳ್ಕೊಂಡು ಮನಿಮುಂದಿದ್ದ ಚಕ್ಕಡಿ ಕಟ್ಕೊಂಡು ಹೊಂಟೆಬಿಟ್ಟರು. ಮಂದಿ ಎದೆಯಾಗ ದುಃಖದ ಕಾರ್ಮೋಡ ಹೆಪ್ಪುಗಟ್ಟಿತ್ತು. ಹುಟ್ಟಿ ಬದುಕಿಬೆಳದ ಊರು ಕ್ಷಣಾರ್ಧದಾಗ ಇಲ್ಲದಂಗಾಗೋದನ್ನ ದೂರದಿಂದ್ಲೆ ಕುಂತ ನೋಡಾಕಹತ್ತಿದ್ರು. ಮುಳಗ್ತಿರೋ ಊರ ನೋಡಿ ಲಕ್ಕಿಬಾಯಿ, ಕೆಂಪಿಬಾಯಿ, ಹಸನು, ಹುಸೇನಿ, ಕುಮಾರಿ, ಬಿರಡಿಲಿಂಗೇಶಿ ಗೊಳೊ ಅಂತ ಅಳಾಕ ಹತ್ತಿದ್ರು. ಚೆನ್ನಿಬಾಯಿ ಓಡಿ ಬಂದಾಕೀನೆ ಹಟ್ಟಿಹಿರಿಕನ ಕೊಳ್ಳಹಿಡ್ಕೊಂಡು, "ಅಣ್ಣಾ ನಮ್ಮ ಪೂರ್ವಜರ ಊರುಮುಳಗಿದೆ. ನಮ್ಮ ತಾತಂದಿರು ನಕ್ಕಿದ್ದು, ಆಡಿದ್ದ ಅಂಗಳ ಇಲ್ಲದ ಹಾಗಾಗುತ್ತಿದೆ. ನಿನ್ನ ನಾಯಕತ್ವದಾಗ ನಾವು ರಾಜ್ಯಭಾರಮಾಡಿದ್ವಿ" ಅಂತಂದು ಕಣ್ಣೀರು ಬರದಿದ್ರು ಉಹೂಂ ಅನ್ನತೊಡಗಿದ್ಲು. ಹುಸೇನಿ ಮಗಳು ಸೈನಾಜಿ, ಚೆನ್ನಿಬಾಯಿ ಮಾರಿಹಿಡದಾಕೀನ "ಸುಮ್ಕಿರೆ ಚೆನ್ನವ್ವಕ್ಕ ಈ ಮಳಿಯಾಗ ಚಳಿಯಾಗ ನಿಂದೇನಹಚ್ಚಿ" ಗಟ್ಟಿಯಾಗೆ ಅದುಮಿದ್ಲು. ಚೆನ್ನಿಗ ಸಿಟ್ಟುಬಂತು, ಹಟ್ಟಿಹಿರಿಯನ ಕೊಳ್ಳಹಿಡಿಯೋ ಅವಕಾಶ ಸಿಕ್ಕಿದ್ದೆ ಮೊದಲಸಲ ಅಂತಾದ್ರಾಗ ಹಾಳಮನಿ ಸೈನಾಜಿ ಎಂಥ ಎಡವಟಮಾಡಿದ್ಲಲ್ಲಾ ಮನಸಿನ್ಯಾಗ ಅಂದ್ಕೊಂಡಾಕಿನೆ ಸುಮ್ಮನಾಗಿ ಎದ್ದಬಿಟ್ಲು.

ಮಂದಿ ನೋಡನೋಡತಿದ್ದಂಗೆ ಹಳ್ಳ, ಕೊಳ್ಳ ತುಂಬಿ ಮಾಳಿಗಳು, ಡಿಬರಿಗಳು ಮುಳಗಿಹ್ವಾದ್ವು. ನೀರನ್ನೋದು ಕಣ್ಣುಕಾಮಂಡ್ಲ ಆಗಿತ್ತು. ಮೇಲಿಂದ ಏರ್ತಾ ಏರ್ತಾ ಜನರಿದ್ದ ಕಡೀಗ ನೀರ ಹರಿಯಾಕಹತ್ತು, ಮಂದಿ ಮತ್ತಗಾಬಾದ್ರು. ಯಾವಾಗ ಏನಾಗತ್ತೈತೊ ಅನ್ನೊ ಆತಂಕ ಪ್ರತಿಯೊಬ್ಬರ ಎದಿಯಾಗ ತುಂಬಿತ್ತು. "ಯಾರೂ ಹೆದರಬ್ಯಾಡ್ರಿ, ನಮ್ಮ ತಾಯಿ ತಾಳಿಮರದದುರ್ಗವ್ವ ನಮ್ಮ ತಾವ ಕುಂತಾಳ, ಆಯವ್ವಗ ಎಲ್ಲಾ ಗೊತ್ತೈತಿ, ಅಕೀನ ದಾಟಿ ಮ್ಯಾಲೆ ನೀರಬರಾಕ ಸಾಧ್ಯನ ಇಲ್ಲ" ಅಂತ ಕಾರಬಾರಿ ಕುಲುಮು ಹೇಳಿದ್ದೆ ತಡ ಪುಜಾರಿ ಪಾಪಾನಾಯ್ಕ ಒಂದ ಸಲಜೋರಾಗಿ ಕ್ಯಾಕಿಹೊಡ್ದ. "ಮಕ್ಕಳ್ರ್ಯಾ ಹೂಂ.... ನನ್ನ ಹತ್ರ ಬಂದೀರಿ, ನಾನೇನು ಕಣ್ಣಕಾಣದೋಳಲ್ಲ, ಇಡೀ ಜಗತ್ತ ನನಗ ಕಾಣ್ಸುತ್ತೆ ನೀವೇನ ಹೆದರಬ್ಯಾಡ್ರಿ" ಅಂದವನೆ ಜೋರಾಗಿ ಕುಣಿಯತೊಡಗಿದ. ಮಂದಿ ಮಳಿ ಮರ್ತು ಆತನ ಸುತ್ತಲು ಕೈ ಮುಕ್ಕೊಂಡು. "ಹೌದವ್ವ ತಾಯಿ ನೀನೆ ಕಾಪಾಡಬೇಕು" ಬುದ್ಧನಾಯ್ಕ ಅಡ್ಡಬಿದ್ದು ನಮ್ರತೆಯಿಂದ ಬೇಡಿಕೊಂಡ. "ನೀನು ಮನ್ನೆ ಮನ್ನೆ ಬಂದು ಠಿಕಾಣಿ ಹೂಡದೋನು ಅಲ್ಲೇನೊ ಮಗನೆ ಇಷ್ಟಬೇಗನೆ ನಿನಗೆ ಸೊಕ್ಕಬಂದ ಬಿಡ್ತಾ. ಇಬ್ಬರ ಮಕ್ಕಳು ದುಡಿತಾವಂತ ಕೊಂಬಬಂದಾವ ಬಗಲಾಗ" ಎಷ್ಟೊದಿನಗಳಿಂದ ಹೊಟ್ಟೆಯೊಳಗ ಅದಮಿಟ್ಟಿದ್ದ ಮಾತುಗಳನ್ನು ಇದೆ ಸರಿಯಾದ

ಸಮಯ ಅಂತ ಪೂಜಾರಿ ಪಾಪಾನಾಯ್ಕ ತನ್ನ ವೈಯಕ್ತಿಕ ದ್ವೇಷಾನ ದೇವಿ ಹೆಸರಹೇಳಿ ಕಾರಿಕೊಂಡಿದ್ದ. ಗೊತ್ತಾನಾಯ್ಕನಿಗ ಸಿಟ್ಟಬಂದಿತ್ತು. "ಮನುಷ್ಯ ದುಡದ್ರೆ ದೇವಿಗೂ ಸಿಟ್ಟಬರುತ್ತಾ, ಮಹಾತಾಯಿ ಹಂಗಾರೆ ಯಾರು ದುಡಿಲೇಬಾರ್ದು ಬಿಡು" ಗಡಸಾಗೆ ಹೇಳಿದ. ಸೇರಿದ ಮಂದಿಗ ಕಸಿವಿಸಿ ಯಾದಂಗಾತು. "ಸುಮ್ಮನಿರಲೇ ಹುಡುಗ, ಅಳತಿ ಮಾಡಿದ್ರ ಒಂದಮಾರು ಇಲ್ಲ, ದುರ್ಗವ್ವಗ ವಾದಸ್ತಿ, ಏನೊ ಗಾಚಾರ ಬಂದೈತಿ ನಿಮಗ" ಹಟ್ಟಿಹಿರಿಯ ಮುಂದಬಂದು ಹೇಳಿದ. ಉಳಿದ ಮಂದಿ ಗೊತ್ತಾನಾಯ್ಕ ಮಾತಾಡಿದ್ದ ಕೇಳಿ ತಮ್ಮತಮ್ಮೊಳಗ ಮಾತಾಡಕೊಂಡ್ರು. ಸುಮ್ಮನೆ ಕೇಳ್ತಾ ನಿಂತಿದ್ದ ಮೀಟಿಬಾಯಿಗ ಕಾಲಿಂದ ಹಿಡಿದು ನೆತ್ತಿವಟ್ಟ ಉರಿ ಕಿತ್ತಬಂತು. "ಯಾವನವನು ನನಮಗನಿಗೆ ಗದರಿಸಿದವನು. ಅವನೊಬ್ಬನು ನೀತಿಗೆಟ್ಟ ಪೂಜಾರಿ ಇವನೊಬ್ಬ ದೊಡ್ಡ ಮನುಷ್ಯ ಹೇಳಾಕ ಬಂದಬಿಟ್ಟ, ನನಗ ಸಿಟ್ಟ ಬಂದ್ರ ಯಾರನ್ನು ಕೇಳಂಗಿಲ್ಲ ಆಟೇಯ" ಸುರಿತಿರೊ ಮಳಿಸದ್ದಿನೊಳಗೂ ಮಂದಿ ಅಕಿಮಾತ ಕೇಳ್ತಿದ್ರು. ಮೀಟಿಬಾಯಿ ಮಾತಾಡೊರೀತಿಗ ಹೆದರಿ ಮಂದಿ ಬಾಯಿಬಿಟ್ರ ಬಣ್ಣಗೇಡು ಅಂದವರೆ ತಮ್ಮ ಪಾಡಿಗ ತಾವು ಹೊಂಟು ನಿಂತ್ರು.

ಮಂದಿ ಗಡಿಬಿಡಿಯೋಳಗ ಕೇರಮಾಮರದ ಡೊಂಕ, ನೆರಳೆ ಮರದ ಅಗಸಿಪೆಳಿ ಕಟ್ಕೊಂಡು ಹೆಜ್ಜೇನಕಟ್ಟಿದ ಪೊಟರಿಹುಣಸೀ ಮರದ ಪಕ್ಕದಾಗ ದೆವ್ವದಂಗಿದ್ದ ಕೆರಿಏರಿ ಹೋಗೊದಲ್ದೆ, ಕಾಕಾಪುರ ಇಲ್ಲಿತ್ತು ಅನ್ನಾಕ ಏನೂ ಇಲ್ಲದಂಗ ಕೊಚ್ಕೊಂಡು ಹೋಗಿತ್ತು. ನೀರಿನ ಸೆಳುವಿಗ ಕೊಡೀಸರಕ್ಕಿಂತ ದೊಡ್ಡದೊಂದು ಹಳ್ಳದಂತ ಕೊರಕಲು ಬಿದ್ದಿತ್ತು. ಕೆರಿಖಾಲಿಯಾದ್ದನ್ನ ಮಂದಿ ಹೌಹಾರಿ ನೋಡ್ತಾನಿಂತಬಿಟ್ರು. ಗದ್ದೆಯೊಳಗಿನಕಬ್ಬು, ಬತ್ತ, ಸಾಪಾಗಿಹೋಗಿತ್ತು. ಬುದ್ದನಾಯ್ಕ ತಲಿಮ್ಯಾಲ ಕೈ ಇಟ್ಕೊಂಡು ಏನಮಾಡ್ಲಪ್ಪ ಶಿವನೆ ಅನ್ಕೊಂತ ಕುಂತಬಿಟ್ಟ. ಈ ಸಲ ಫಸಲು ಸರೀಗ ಬಂದಿದ್ರ ಒಂದ ಎರಡ ಎಕ್ಕರೆ ಜಮೀನಾರು ತಗೊಬೇಕಂದ್ಕೊಂಡಿದ್ದ ಆಶೆ ನೀರಪಾಲಾಗಿತ್ತು. ಮಳಿಆರ್ಭಟ ಕಮ್ಮಿಯಾಗಿತ್ತು. ದಂಡಿಯೊಳಗ ಮಂದಿ ಕಂಗೆಟ್ಟಿದ್ದು ಮೂರಿದಿನದಿಂದಲೂ ಹೊಟ್ಟಿಗ ಕೂಳಿಲ್ದೆ ಮುದುಕರು, ಸಣ್ಣಹುಡ್ರು ಕಂಗಾಲಾಗಿದ್ರು. "ಯಾವಾಗ ಬಿಟ್ಟಿತಪ್ಪ ಈ ಹಾಳ ಮಳಿ, ಯಾವ ಕೇಡಿಗ ಬೀಳಾಕ ಹತ್ಯತೊ ಯಾರಿಗೊತ್ತ ನಡಿ" ಅಂತ ಎಂಬತ್ತು ವರ್ಷದ ಚೊಕ್ಲನಾಯ್ಕ ಥಂಡಿಯೊಳಗ ನಡಗ್ತಾ ಧೋತ್ರದಾಗ ಸಿಗಸಿದ್ದ ಕೊರಿ ಚುಟ್ಟಗಳ ರಾಶಿ ನೆಂದು ಸೇದಾಕ ಬರದಂಗ ಆಗಿರೋದಕ ಬೇಜಾರಾಗಿ ಯಾರತಾವ ಕೇಳಬೇಕು ಬೀಡಿ ಅಂತ ಯೋಚನೆ ಮಾಡ್ತಿದ್ದ. ಮಂದಿ ಕೆರಿಪಕ್ಕ ಉತ್ತರ

ದಿಕ್ಕಿನಾಗಿದ್ದ ಖಾಲಿಜಾಗದಾಗ ಊರ ಕಟ್ಟ್ಯೊ ಆಲೋಚನೆ ಮಾಡತೊಡಗಿದ್ದರು. ಕೆಂಚೀರಯ್ಯ ತನ್ನ ಹೊಲದ ನಿಸೂರಿಗೆ ಏನಾರು ಬಂದ್ರ ಸುಮ್ಮಗಿರೊಲ್ಲಾ ಅಂತ ತಾಕತ್ತ ಮಾಡಿದ, ಹಟ್ಟಿಹಿರಿಯ ತಾನ್ಯಾಕ ಪುಕ್ಕಟೆ ಜಾಗಕೊಡಬೇಕು ಇದ್ದದ್ರಲ್ಲೆ ಹೆಂಗ ಆಗತೈತಿ ಹಂಗ ಕಟ್ಕೊಳ್ರಿ ಅಂತ ಜಾರಕೊಂಡಿದ್ದ ಈ ಮಂದಿ ಕಾಸ ಬಿಚ್ಚೊಲ್ಲ ಅಂತ ಗೊತ್ತಿತ್ತು. ಹುಸೇನಸಾಬಿ ಎದ್ದವನೆ, "ನೊಡ್ರಪ್ಪ ನಂದು ತುಂಡ ಜಮೀನು ಕೆರಿಪಕ್ಕ ಐತಿ. ಅದೇನು ಪರಾಂಪೂಕ ಜಾಗೇವು ಐದಾರಮನಿ ಆಗೋದಾರ ಕಟ್ಕೊಳ್ರಿ ನಂದೇನು ತಕರಾರಿಲ್ಲ" ಅಂದವನೆ ಜವರಯ್ಯನ ಮಾರಿನೋಡಿದ. "ನೀ ಏನ ಹೇಳ್ತಿ ಜವರಯ್ಯ" ಅಂದ ಹಟ್ಟಿಹಿರಿಯ. "ನಾ ಏನ ಹೇಳಲಪ್ಪ ತಾಂಡದವರದಿರಿ ಹೆಂಗ ಸರಿ ಅನಿಸತೈತೊ ಹಂಗಮಾಡ್ರಿ" ಅಂದ ಜವರಯ್ಯ. ಹೆಂಗಸರು ತಲಿಮ್ಯಾಲಿನ ಗೋಣಿಚೀಲ ಬ್ಯಾಗಡಿಗಳನ್ನ ತಗದು ಓಣಗಿಸಿದ್ರು. ಸಣ್ಣ ಹುಡ್ರು ಹಸಿವಿನಿಂದ ಅಳಾಕಹತ್ತಿದ್ರು, ಮಂದಿನೀರಡಕಿ ತಡಿಯಾಕಾಗದೆ ಹರ್ಕೊಂಡು ಹೊಂಟಿದ್ದ ರಾಡಿಮಳಿನೀರನ್ನೆ ಬಗಸಿಯಿಂದ ತುಂಬ್ಕೊಂಡ ಕುಡಿಯಾಕ ಹತ್ತಿದ್ರು. ಸಾಣಿಬಾಯಿಗ ಅವರು ಚರ್ಚೆ ಮಾಡ್ತಿರೋದು ಸರಿ ಕಾಣಿಸಲಿಲ್ಲಾ, "ಏಳ್ರಪ್ಪ ಮ್ಯಾಲೆ ಹುಡ್ರುಹುಪ್ಪಡಿ ಹಸ್ಕೊಂಡ ಸಾಯಾಕ ಹತ್ಯಾವ, ನಿಮ್ಮದೇನ ಹಚ್ಚೀರಿ ಎಲ್ಲಿ ಜಾಗ ಖಾಲಿ ಐತಿ ಅಲ್ಲಲ್ಲಿ ಗುಡಿಸಲು ಹಾಕ್ಕೊಳ್ರಿ, ಆಮ್ಯಾಲ ವಿಚಾರ ಮಾಡಿದ್ರಾತು" ಕಡ್ಡಿ ತುಂಡ ಮಾಡ್ದಂಗ ಹೇಳಿದ್ಲು. ಯೋಚನೆ ಮಾಡ್ತಿದ್ದೋರಿಗ ಸರಿ ಅನಿಸಿರಬೇಕು ತುಟಿಪಿಟಕ ಅನ್ನದಂಗೆ ಜಾಗ ಖಾಲಿಮಾಡಿದ್ರು.

ಕಾಕಾಪುರ ಹೊಸರೂಪ ಪಡ್ಕೊಂಡಿತ್ತು. ಬುದ್ಧನಾಯ್ಕನ ಹೊಸ ಗುಡಿಸಲು ಊರ ನಡಕಿತ್ತು. ಗುಡಿಸಲ ಪಕ್ಕದಾಗ ದೊಡ್ಡದೊಂದು ಹುಡೇವು, ಮುಂದ ಡೊಂಗ್ರನಾಯ್ಕನ ಮನಿ, ಹಿಂದ ಜಾಂಬುನಾಯ್ಕ, ಎಡಕ್ಕ ರಂಡಮುಂಡಿ ರುಕ್ಕಿಬಾಯಿ, ಬಲಗಡಗೆಬಂದು ಸಾಂಬವರ ಚಟ್ಟನಾಯ್ಕ, ಆಕಡೀಂದ ಅವನ ಒತ್ತೋದು ಈಕಡೀಂದ ಇವನ ಒತ್ತೋದು ನಡದೆ ಇತ್ತು. ಅದೆಲ್ಲದರ ನಡುವೆ ಬುದ್ಧನಾಯ್ಕ ಹೊಸ ಜಾಗದಾಗ ಮತ್ತೆ ಬದಕನ್ನ ಕಟ್ಟಾಕ ಹೊಂಟ. ಅದೇ ಗುಡಿಸಲಿನೊಳಗ ಎರಡ ಎತ್ತ ಕಟ್ಟಾಕ ಒಂದ ಗೊಂದ್ಲಿಮಾಡಿದ, ನೆರಕಿಗ ಆನಿಸಿ ಮೂರ ಕಲ್ಲು ಇಟ್ಟು ಒಲಿ ಮಾಡ್ಕೊಂಡು ಮೀಟಿಬಾಯಿ ಹಸಿಕಟ್ಟಿಗಿ ಒಲಿಯಾಗಿಟ್ಟು ಊದಿಊದಿ ಸಾಕಾಗಿ ಹೊರಾಗ ಬರಾಕಂತ ಎದ್ಲು. ಗೊತ್ತಾನಾಯ್ಕ ಎಮ್ಮಿ ಕಟ್ಟಾಕ ಹೊರಗ ಗೂಟ ಹುಗಿಯಾಕ ಹತ್ತಿದ್ದ. ಬಿಸಿಲು ಅವನ ಮಾರಿಮ್ಯಾಲ ಬಿದ್ದಿತ್ತು. ಅವನ ಮಾರಿ ನೋಡದಾಕಿನ ಒಂದ ಘಳಿಗಿ ನಿಂತ ಬಿಟ್ಲು. ಮಕದ ಮ್ಯಾಲ ಚಿಗರ ಮಿಸಿ ಬರಾಕಹತ್ಯಾವ! ಬೆಕ್ಕಸ ಬೆರಗಾದವಳೆ, "ಕೊಳ್ಳಿಗೊಂದು ಗುದ್ವೀ ಕಟ್ಟಬೇಕ

ಬಿಡು, ದೊಡ್ಡೋನಾದ" ಅಂತ ಮನಸಿನೊಳಗ ಅಂದ್ಕೊಂಡಾಕಿನೆ ಪಾಮಿಗ ಒಲಿ ಊದಾಕ ಹೇಳಿ ಹಿಂದನ ಮನಿ ಜಿಂಗಜ್ಜಿ ಹತ್ರ ಹೋಗಿ "ಜಿಂಗತ್ತಿ ಎರಡ ಒಡ್ಡಿ ಮೆಣಸಿನ ಕಾಯಿ ಕೊಡು, ಮಗ ಸಂತಿಗ ಹೊಗಿಲ್ಲಾ ನಾಳೆ ತರಸಿ ಕೊಡ್ತಿನಿ" ಅಂತ ಮಾತಿಗ ಎಳದ್ಲು. "ಅಯ್ಯೊ ನಮ್ಮವ್ವ ಗಡಿಬಿಡಿಯೊಳಗ ಕೈಯಾಗಸಿಕ್ಕ ಸಾಮಾನಗಳನಷ್ಟೇ ತಂದೆ. ಮೆಣಸಿನಕಾಯಿ ಚೀಲ ಎಲ್ಲಿ ಹೊತೊ" ತನ್ನ ಅಸಾಹಾಯಕತೆ ತೊಡಿಕೊಂಡ್ಲು. "ಹಂಗೆ ಕಣವ್ವ, ಅದ್ರೋಸ ಅಡಗಲಿ, ಎಲ್ಲಿಂದ ಬಂತೊ ಸಮುದ್ರ ಬಂದಂಗ ಎದಿಮ್ಯಾಲ ನಿಂತ ಬಿಡ್ತು. ಗಡಿಬಿಡಿಯೊಳಗ ಏನೇನ ಎತ್ತ ಬೇಕಂತ ತಿಳಿಯದೆ ಕೈಗ ಸಿಕ್ಕೊವನ್ನ ಬಾಚ್ಕೊಂಡು ಬಂದೆ ಉಳದವು ನೀರಾಗ ಕೊಚ್ಕೊಂಡು ಹ್ವಾದ್ವು." ಅಂತ ತಾನ ಕಳ್ಕೊಂಡಿದ್ದನ್ನ ಪಟ್ಟಿಮಾಡಿದ್ಲು. ಮುದುಕಿ ಮಾತ ಮುಗದಿಂದ ಒಂದ ಕೈಯಾಗ ಆಟು ಹಿಂಡಿ ಹಿಡ್ಕೊಂಡು ಬಂದು "ಇಗೋ ಕಣ್ಣಾಗ ಬಿಳೊ ಆಟು ಹಿಂಡಿ ಐತಿ, ಒಯ್ದು ಮಾಡ್ಕೊ" ಕೊಟ್ಲು. "ನನ್ನ ಹಿರಿಮಗನ್ನ ನೋಡಿಯಾ ಅತ್ತಿ". "ಏನಾತು ಮನ್ನೆ ಮನ್ನೆ ಪಾಡಿದ್ನಲ್ಲಾ" "ಹಂಗಲ್ಲಾ ಅತ್ತಿ, ಮಕದ ಮ್ಯಾಲ ಮೀಸಿ ಬರಾಕಹತ್ಯಾವ ಒಂದಮದ್ವಿ ಮಾಡಾನಂದ್ಕೊಂಡೀನಿ" ಅಂದ್ಲು. "ಒಂದ ಕೆಲಸ ಮಾಡು, ಮುಂದಿನ ತಾಡಪೂರ ತಾಂಡದಾಗ ನನ್ನ ತಮ್ಮನ ಮಗಳದಾಳ ಬೇಕಾದ್ರ ನೋಡಿ ಬರ್ರಿ" ಅಂದ್ಲು. "ನೋಡಾನ ಬಿಡು, ಹೋಗೋದಾದ್ರ ಹೋಗಿಬಂದ ಬಿಡಾನು, ಆದ್ರ ಹುಡುಗಿ ನೋಡಾಕ ಹ್ಯಾಂಗದಾಳೊ, ಹುಡುಗನ್ನಂತು ನೀ ನೋಡಿಯಾ, ಒಂದೀಟ ಕೈಯಾಗ ಕಾಲಾಗ ಕೆಲ್ಸಂತ ಮಾಡ್ತಿದ್ರ ಅಷ್ಟೇಸಾಕು" ಅಂದಾಕಿನೆ ಬಹಳ ಹೊತ್ತಾತು ಅನ್ಕೊಂತ ಎದ್ದಬಂದ್ಲು. ತನ್ನ ಮಗ-ಸೊಸಿ, ಮೊಮ್ಮಕ್ಕಳು ಮನಿತನದ ಕನಸುಕಾಣ್ತಾ ಅವಸರದಾಗ ಹೆಂಡದಂಗಡಿ ದೇಮ್ಲನಾಯ್ಕನ ಹೆಣ್ಣನಾಯಿ ತುಳದುಬಿಟ್ಲು ಮೀಟಿಬಾಯಿ. ತುಳತ ತಾಳದ ಹೆಣ್ಣನಾಯಿ ಮೀಟಿಬಾಯಿ ಬಲಗಾಲಿನ ಮೀನ ಕಂಡಕ್ಕ ಗಬಕಂತ ಬಾಯಿ ಹಾಕಾಕ ಹೋತು. ಪುಣ್ಯಕ ಉಟ್ಟಿದ ಲಂಗದ ಕೆಳಗಿನ ದಪ್ಪನ ಭಾಗ ಸಿಕ್ಕೊಂಡಿತ್ತು. "ಹಚ್ಯಾ, ಯಾರದ್ರಲೋ ಈ ನಾಯಿ ಮರ್ಯಾದಿ ಇಲ್ದ ಇಂತ ನಾಯಿಗಳನ್ನ ಯಾಕಾರ ಸಾಕ್ತಿದ್ದಾರು ಇವರ ಹೆಸರಿಲ್ದಂಗಾಗ್ಲಿ" ಅಂತೇಳಿ ನಡೊ ಊರಾಗ ನಿಂತು ಬಾಯಿಗ ಬಂದಂಗ ಬೊಯ್ಕೊಂತ ಮನಿಗ ಓಡಿದ್ಲು.

ತಾಡಪೂರ ತಾಂಡಕ ಬಂಡಿತಲುಪಿದಾಗ ಸಂಜಿಯಾಗಿತ್ತು. ಬುದ್ದನಾಯ್ಕ ಮೀಟಿಬಾಯಿ, ಜಿಂಗಿಬಾಯಿ ಗಾಡಿ ಇಳದು ಜಿಂಗವ್ವನ ತಮ್ಮ ಮೂಕಾನಾಯ್ಕನ ಮನಿಗೆ ಹೋದ್ರು. ಮೂಕನಾಯ್ಕನ ಹನ್ನೆಲ್ಡ ಮಕ್ಕಳಾಗ ದೊಡ್ಡೋನು ಗಣಪುನಾಯ್ಕ


ಎಲ್ಡನೇಯವಳೆ ಬಾಣಿ, ಇನ್ನೂ ಎಳೆ ಹುಡುಗಿ. ಅವಾಗತಾನೆ ಅಡವಿಯಿಂದ ದನಗಳನ್ನ ಮೇಯಿಸಿಕೊಂಡು ಮಧ್ಯಾಹ್ನ ಹಿಡಿದು ಸುಟ್ಟಿದ್ದ ಏಡಿಗಳನ್ನ ತಂದು ಅವಳಪ್ಪಗ ಹೆಂಡದ ನಂಜಕೀಗಂತ ಕೊಡ್ತಾ, "ಅಪ್ಪ ಇವತ್ತು ಸೇಲೂರ ಹಳ್ಳದಾಗ ಎಂತೆಂಥ ಏಡಿಗಳು ಸಿಕ್ಕಾವಂತಿ" ಖುಷಿಯಿಂದ ಜೋರ ಬಾಯಿಮಾಡಿ ಹೇಳಾಕು, ಅವಳತ್ತಿ ಜಿಂಗವ್ವ ಓಡಿಬರೊದಕ್ಕೂ ಸರಿಹೋತು. "ಅಯ್ಯವ್ವ ಅತ್ತೆ ಯಾವಾಗ ಬಂದೆ" ಅಕಿ ಹತ್ರ ಓಡಿ ಬಂದ್ಲು. ಮತ್ತಿನ್ಯಾರೊ ಇರೋದನ್ನ ಗಮನಿಸಿದಾಕೀನ ಅವಳನ್ನ ಬಿಟ್ಟು ಒಳಗ ಓಡಿದ್ಲು. ಇಡಿಮಿಮಂದಿ ಕಾಕಾಪುರದಿಂದ ಬಾಣಿನ ನೋಡಾಕ ಬಂದಾರಂತ ಬಹಳ ಜಾಗ್ರತೆಯಿಂದ ಇದ್ರು. ನಿಬಾಣಿ ಬಂದಾಕಿನ ಗಲಾಟಿ ಮಾಡ್ತಿರೋದನ್ನ ನೋಡಿ ಅವಳ ಅತ್ತಿ ಆಗೋಳ ಏನಂದ್ಕೊಂಡಾಳಂತ ಆತಂಕ ಆತು.

ಜಾತಿರಿವಾಜನಂಗೆ ಮೂಕನಾಯ್ಕ ಬಂದ ಬೀಗರನ್ನ ಹೆಂಡದ ಅಂಗಡಿಗ ಕರ್‍ಕೊಂಡೊಗಿ ಒಂದ ಮಗ್ಗಿ ಹೆಂಡ ಕೊಡ್ಸಿದ. ಸಾಲದಕ್ಕೆ ಮತ್ತೊಂದೆರಡ ಮಗ್ಗಿ ಹೆಂಡ ಹೊತ್ಕೊಂಡು ಮನಿಗೂ ತಂದ. ಊಟಕ ಮದ್ಲು ಹೆಂಗಸರಿಗೂ ಹೆಂಡಕೊಟ್ಟು ಊಟಕ ಕರದ್ರು. ಊಟದ ನಡುವೆ ಕರಕೊಡೋದು, ಮದ್ವಿದಿನ ಕುಂಬಾರನ ಮನಿಗೆ ಹೋಗಿ ಹೊಸ ಮಡಕಿತರೋರಿಗ ಕೊಡೋದೇಟು, ಹೆಣ್ಣಿನ ಕಡೆಯವರಿಗ ಸಂತಿಖರ್ಚಿಗ ಏಟಕೊಡಾಕು, ಊರ ಹಟ್ಟಿನಾಯ್ಕನ ಬಾಬ್ತುಎಷ್ಟು, ಬೆಲ್ಲಾತಿನ್ನಾಕ ಬರೋರಿಗೆ ಕೊಡಬೇಕಾಗಿದ್ದು ಎಷ್ಟು, ಮುಹೂರ್ತ ಆದಮ್ಯಾಲ ಹದಿನೈದ ದಿನದಾಗ ಗೋಟಮಾಡಾಕ (ಬೀಗರೂಟಕ್ಕೆ) ಬ್ಯಾಟಿ ಎಂಥದ್ದ ಬೇಕು - ಎಲ್ಲಾ ವಿಷಯಗಳು ಮಾತಿನ ನೆಡಕ್ಕ ಬಂದು ಹ್ವಾದ್ವು. ಮೂಕನಾಯ್ಕನ ಪರಿಸ್ತಿ ಸರಿಯಾಗಿಲ್ಲದಕ್ಕ ಮದವಿ ದಿನಕ್ಕ ಆಗೋ ಆಟೂ ದಾಸ್ತಾನನ್ನು ಬುದ್ದನಾಯ್ಕನೆ ಚಕ್ಕಡಿ ಯೊಳಗ ಹೇರ್‍ಕೊಂಡ ಬರೋದಾಗಿ ಹೇಳಿದ. ಊಟ ಆದಮ್ಯಾಲ ಬುದ್ಧನಾಯ್ಕನಿಗೆ ಹುಕ್ಕಕೊಟ್ಟು, ಅದ್ಕ ಬೆಂಕಿಕೊಟ್ಟಿಂದ ಮಾತು ಗಟ್ಟಿಯಾದಂಗಾತಂತ ತಿಳ್ಕೊಂಡು ಮುಂಜಾನಿ ನಸುಕಿನೊಳಗೆ ಕಾಕಾಪುರದ ಕಡಿಗ ಹೊಂಟ ನಿಂತ್ರು ಬುದ್ದನಾಯ್ಕ ಮತ್ತ ಅವನ ಕುಟುಂಬ.

ತಾಡಾಪುರತಾಂಡ ದಾಟಿ, ತಾಡಪುರ ಊರಿಗೆ ಬರೋ ಮುಂದ ದೊಡ್ಡದೊಂದ ಹಳ್ಳ ಹರಿತಿತ್ತು. ಬುದ್ದನಾಯ್ಕ ಎತ್ತಗಳಿಗೆ ನೀರ ಕುಡಿಸಿ, ಎತ್ತಗಳನ್ನ ಗದರಿಸಿಯೇ ಹುದ್ದಾಗಿಂದ ಬಂಡಿದಾಟಿಸಿದ. ತಾಡಪುರ ಊರಿಗ ಬಂದಾಗ ಜಿಂಗಿಬಾಯಿ ತಡಿಯಾಕ ಆಗದೆ ಕೇಳಿದ್ಲು. "ಏನ ಮೀಟಿ ಹುಡುಗಿ ಮನಸಿಗ ಬಂದ್ನೋಹ್ಯಾಂಗ, ತಾಯಿ ಇಲ್ಲದ ಕೂಸು, ಕಷ್ಟದಾಗ ಬೆಳಿಯಾಕ ಹತ್ಯಾಳ, ನಿಂತಾವ ಬಂದ್ಲು ಅಂದ್ರ ಸುಧಾರಿಸಿಕೊಳ್ತಾಳ."

ಇದ್ದಿದ್ದ ಪರಿಸ್ಥಿತಿಯನ್ನ ಹೇಳಿದ್ಲು. "ಹುಡುಗಿ ಕಷ್ಟಮಾಡ್ತಾಳ ಪಾಡದಾಳ, ಮುಂದಿನ ಕಾರ್ತಿಕ ಮಾಸದಾಗ ಮದ್ವಿಮಾಡಿ ಬಿಡಾನ, ನಂಗೂ ಪಾಡಾಗತೈತಿ", ತನ್ನ ಒಪ್ಪಿಗೆ ಸೂಚಿಸಿದ್ಲು. ಬುದ್ದನಾಯ್ಕಗ ಖುಶಿಯಾಗಿತ್ತು. ತನ್ನ ಮಗ ಮದ್ವಿಯಾಗಿ ಹೊಸದೊಂದು ಬುದುಕನ್ನ ಕಟ್ಕೊಳ್ಳಾಕ ಹೊಂಟಾನ, ಅವನ ಮಾವನ ಮನಿಕಡಿಯೋರು ಕಷ್ಟಮಾಡೊ ಜನ, ದುಡದು ಉಣ್ಣತಾರ ಪರವಾ ಇಲ್ಲ ಅಂತ ಯೋಚನೆ ಮಾಡತೊಡಗಿದ.

ಕಾಕಾಪುರಕ್ಕೆ ಬರೋದ್ರಾಗ ಸೂರ್ಯಕಾಟಿ ಗುಡ್ಡದ ಹಿಂದ ಮರಿಯಾಗಿದ್ದ ಎತ್ತ ಕೊಳ್ಳಹರದು ನೀರ ಕುಡಿಸಿ ಗೊಂದ್ಲಿಗ ಕಟ್ಟಿದ. ಮಗ ಗೊತ್ತನಾಯ್ಕನ ಕರದು ತಾವ ಹೋಗಿದ್ದ ಎಲ್ಲಿಗ? ಯಾಕನ್ನೋದನ್ನ ಆಗ್ಲೇ ಹೇಳಿ, ಅವನ ಮಾವನ ಮನಿಯೋರು ಕಳಿಸಿದ್ದ ಬುತ್ತಿಗಂಟು ಬಿಚ್ಚಿ ಉಣ್ಣಾಕ ಕೊಟ್ಟಿದ್ಲು ಮೀಟಿಬಾಯಿ.



ಮದುವೆ ಎಂಬ ತಿಂಗಳ ಸಡಗರ

ಕಾಕಾಪುರದ ಹನ್ಮಂತ ದೇವರ ಗುಡಿಯಾಗ ಕಡೇ ಕಾರ್ತೀಕ ಮಾಸಕ್ಕ ದೀಪಗಳನ್ನ ಹಚ್ಚಿ ಭಜನಿ ಮಾಡ್ತಿದ್ರು ಮಂದಿ. ಕೆಂಚೇರಯ್ಯ ಹಟ್ಟಿಹಿರಿಯ, ಭಜನಿಬೋಜನಾಯ್ಕ, ಪಾಪೇಸಿ, ಲಸಣು, ಹನುಮ ರಾತ್ರಿ ಇಡಿ ಭಜನಿ ಸುರುಹಚ್ಕೊಂಡಿದ್ರು. ರಟ್ಟಿಕಾಮುನಾಯ್ಕ ಪುಟಗೋಸಿನಜರೆಸಾಬಿ ಒಂದ ಚೀಲಮಂಡಕ್ಕಿಯನ್ನ ತೋಯಿಸಿ ದೊಡ್ಡದೊಂದು ತಪಾಲಿಯೊಳಗ ಮಾಡಿಟ್ಟಿದ್ದ ಹುಳಿಯಾಗ ಕಲಿಸಿ ಸಾಲಿ ಓದೊ ಹುಡ್ರು ಕೊಟ್ಟಿದ್ದ ಕಾಗದದಾಗ ಒಂದೊಂದು ಹಿಡಿ ಮಂಡಕ್ಕಿ ಹಂಚಿ ಆದಮ್ಯಾಲ ಹಾಲಿಲ್ಲದೆ ಮಾಡಿದ್ದ ಬೆಲ್ಲದ ಡಿಕಾಸನ್ನು ಸೋಸಿ ಕೊಟ್ರು. ಅಲ್ಲಲ್ಲೆ ಹೆಂಡ ಕುಡದು ಅಡ್ಡಾಗಿದ್ದ ಮಂದಿ ಮಂಡಕ್ಕಿ ಹಂಚತಿರೊ ಟೈಮಿಗ ಸರಿಯಾಗಿ ಎಚ್ಚರಾದ್ರು. ಕಾರ್ತೀಕದ ಕಡೇದಿನ ಊರಾಗ ಭರ್ಜರಿಯಾಗೆ ಆಚರಣೆ ಮಾಡಿದ್ರು. ಕಾರ್ತೀಕ ಮುಗದ ಎಂಟದಿನಕ್ಕ ಬುದ್ದನಾಯ್ಕ ಹಟ್ಟಿಹಿರಿಯ, ಕಾರಭಾರಿ, ಡಾವೊ, ಕೆಂಚೇರಯ್ಯ ಹಡಪದಕಬರಯ್ಯ, ಎಲ್ಲರನ್ನೂ ಮಗನ ಇಳೇವು ಸಾಮಾನ

ತರಾಕಂತ ಹಂಪೂರಿಗೆ ಹೋಗಾಕ ಕರದ. ಇಡೀಊರಿಂದೂರಿಗೆ ಸುದ್ಧಿ ಮುಟ್ಟಿಸಿ ಊರಿನೆಲ್ಲಾ ಯಜಮಾನರಿಗೆ ಹೇಳಿದ. ಬಂದಾಟ ಜನ ಬರ್ಲಿ ಅಂತ ಮೂರಬಂಡಿ ಕೊಳ್ಳಕಟ್ಟಿಸಿಯೇ ಬಿಟ್ಟ. "ನಿನ್ನಮಗನ ಇಳೆ ಸಾಮಾನ ತರಾಕ ಬರದಿದ್ರ ಹ್ಯಾಂಗಪ್ಪ" ಅಂತ ಕಾರಭಾರಿ ಊರಿಗ ಮುಂಚೆ ಹೊಂಟನಿಂತ. "ನೀವೆ ತಾಯಿ ತಂದಿ ಇದ್ದಂಗಪ್ಪ, ನನ್ನ ಸಂಬಂಧಿಕರೆಲ್ಲಾ ದೂರದಾಗ ಅದಾರ ಎನ್ಮಾಡೋದು ನಾವೆಲ್ಲಾ ಒಂದೇ, ಹುಸೇನಿ, ಕೆಂಚೀರಯ್ಯ ಅಣ್ಣ ತಮ್ಮದಿರಂಗ, ಆದ್ರೂ ನಮಗ ನಮ್ಮೊರೆ ಆಗಬೇಕು". ತನ್ನ ಮನಸ್ಸಿನೊಳಗಿದ್ದ ಮುಗ್ಧತೆಯನ್ನ ತೋಡಿಕೊಂಡ ಬುದ್ದನಾಯ್ಕ. ಪೂಜಾರಿಪಾಪೇಸಿ ಮಾತ್ರ ಉರದ ಬೀಳಾಕ ಹತ್ತಿದ್ದ. ದಿನದಿನಕ್ಕೂ ಈಮಗ ಬುದ್ಧ ಬೆಳಿಯಾಕ ಹತ್ಯಾನಲ್ಲ. ಎಲ್ಲಿಂದ್ಲೋ ಬಂದ ಪರದೇಶಿ ಈ ಊರಾಗ ಭಾಳ ಆಳಕ್ಕ ಬೇರಬಿಡ್ತಿದ್ದಾನ ಇವನ ಬೇರಗಳನ್ನ ಹೆಂಗಾನಮಾಡಿ ತುಂಡಮಾಡಾಕು. ಭೂಮಿಯೊಳಗ ಚಾಚ್ಕೊಳದಂಗೆ ತಡಿಬೇಕು ಅಂತ ಆಲೋಚಿಸಿದ. ತನಗಿಂತ ವಯಸ್ಸಿನೊಳಗ ದೊಡ್ಡೋನಾದ ಬುದ್ಧನಾಯ್ಕನನ್ನ ಹಿಯಾಳ್ಸೋ ಹಂಗೆ, "ಏನೋ ಬುದ್ಧ ಮುಂದಿನ ತಾಡಪುರ ತಾಂಡದ ಮೂಕನ ಮಗಳ ನೋಡಿ ಬಂದಿರಂತೆ ನಿನ್ನ ಮಗನಿಗೆ, ಮನ್ನೆ ಮನ್ನೆ ಮಾರಾನಾಯ್ಕನಹಟ್ಟಿ ದುರ್ಗ್ಯಾನ ಮಗಗ ನೋಡಿದ್ರಂತೆ, ಹುಡುಗಿ ಪಾಡಿಲ್ಲಂತ ಕಟ್ಟಿದಮಾತ ಮುರ್ಕೊಂಡ ಬಂದ್ರಂತೆ. ಅಕೀನ ಅಲ್ಲಾ ನೀನು ಮಾಡ್ಕೊಂಡ ಬರ್ತಿರೋದು" ಬಹಳ ಹಗುರವಾಗಿ ಮಾತಾಡಿದ. "ಇರ್ಲಿಬಿಡಣ್ಣ ಏನಮಾಡೋದು, ಯಾರ ಹಣೆಬರಹದಾಗ ಏನ್ನೈತೋ ಆತು, ಬಾ ಮತ್ತ ಹೋಗಾನು". ಅವನು ಹೇಳಿದ್ದಕ್ಕೆ ವಿರುದ್ಧವಾಗೆ ಹೇಳಿದ ತನ್ನ ಆಟ ಈ ಬೆರಕಿ ಮುದುಕನ ತಾವ ನಡಿಯೋದಿಲ್ಲಾಂತ ಗೊತ್ತಾಗಿದ್ದೆ "ಇರ್ಲಿ ಹೋಗ್ರಪ್ಪ ಯಾರ ಬಂದ್ರೇನು ಇದ್ದೋರು ಹೋಗಿ ತಗೊಂಡ ಬರ್ರಿ, ತಂದು ಮಾಡ್ರಿ. ಆದ್ರ ಹುಡುಗಿ ಯಾಕೊ ಸರಿಬರೋದಿಲ್ಲಾಂತ ಮರಿಯಮ್ಮ ದೇವಿ ರಾತ್ರಿ ಬಂದ ಹೇಳಿದ್ಲು. ನಿನ್ನ ಮುಂದ ಹೇಳಿನಿ. ಏನ ಮಾಡ್ತಿಯೊ ನೋಡು ನಿನಗ ಬಿಟ್ಟದ್ದು" ಒಂದ ಹುಳ ಬುದ್ಧನಾಯ್ಕನ ತಲಯಾಗ ಬಿಟ್ಟ ಪೂಜಾರಿಪಾಪನಾಯ್ಕ. ಮುದುಕ ಯೋಚ್ನೆ ಮಾಡೋದ ನೋಡಿ ತನ್ನ ಕೆಲ್ಸ ಆದಂಗಾತು ಅಂದವನೆ ಒಳಗೊಳಗೆ ಖುಷಿಪಡ್ತಾ ಮೀಸಿಮ್ಯಾಲ ಒಂದ ಕೈ ಆಡಿಸಿ ಹಿಂದಿನ ಚಂಡಿಕಿ ಸರಿ ಮಾಡ್ಕೊಂತ ಕೆಟ್ಟನೋಟದಿಂದ ಒಮ್ಮೆ ಬುದ್ಧನಾಯ್ಕನನ್ನ ನೋಡಿದವನೆ ಸಿದಾ ನಡದು ಬಿಟ್ಟ. ಮುದುಕ ಸುದ್ದಿ ತಂದು ತನ್ನ ಹೇಣ್ತಿ ಮೀಟಿಬಾಯಿ ಮುಂದ ಹೇಳಿದ. "ಯಾವನ್ರಿ ಅವನು ನಿಮ್ಮ ಮುಂದ ಹೇಳಿದೋನು, ಎಲಿ ಶಾಸ್ತ್ರ ಆಗೈತಿ, ಇವತ್ತ ಮುದ್ವಿ ಸಾಮಾನಿಗ ಹೊಂಟೇವಿ ಈಗೇನಾರ ನಿಲ್ಸಿದ್ವಿ ಅಂದ್ರ ಮಂದಿ ಏನಂದಾರು. ಅದ್ಯಾವನೋ ಪೂಜಾರಿ ಮಾತಿಗ ನೀವ್ಯಾಕ ತಲಿಕೆಡಿಸಿಕೊಳ್ತೀರಿ ನಡೀರಿ ಬಂಡಿಹತ್ರಿ"

ಮುದುಕನ ಮದ್ಲು ಬಂಡಿಹತ್ತಿಸಿ ರೊಕ್ಕದ ಚೀಲಾನ ಸೊಂಟದಾಗ ಸಿಗಸಿಕೊಂಡಾಕೀನ ಬಂಡಿ ಹತ್ತಿ ಕುಂತ್ಲು. ಮೂರು ಬಂಡಿಗಳು ಗುಡ್ಡದ ಮೂಲಿಯಿಂದ ಗುಡ್ಡಜ್ಜಿಲಕಮಾಪುರದ ಮೇಲಿಂದ ಹಂಪೂರಿಗ ತಲುಪಿದ್ವು.

ಜಿಂಗಿಬಾಯಿ ಮುಂದ ನಿಂತು ಹುಡುಗನಿಗೆ ಧೋತ್ರ, ರುಮಾಲು, ಕೆಂಪ ಶಲ್ಯೇವು, ಖಾಸಡಾ*, ಬೆಳ್ಳಿವಂಕಿ, ಉಂಗುರ, ಮದ್ವಿಗ ಮುಂಚೆ ಎಂಟದಿನ ತಿನ್ನಾಕ ಬೇಕಾದ ಒಣಕೊಬ್ಬರಿ, ಖಾರಿಕು, ಬೆಲ್ಲ ಕೊಡಿಸಿದ್ಲು, ತನ್ನಸೊಸಿ ಬಾಣವ್ವಗಂತ ಬಲಿಯಾ,* ಬೆಳ್ಳಿರಟ್ಟಿಬಳಿ, ತೊಂಡ್ಲ, ಖಾಸಡಿ ಖರೀಧಿಮಾಡಿಸಿದ್ಲು. ಮದ್ವಿಸಂತಿ ಮುಗಿಯೊ ಹೊತ್ತಿಗಾಗಲೆ ಸಂಜಿಗವಳ ಆಗಿತ್ತು. ಬುದ್ಧನಾಯ್ಕ ಬಂದಹಿರಿಕರನೆಲ್ಲಾ ಕರ್ಕೊಂಡು ಹೊಂಡದ ಸರ್ಕಲಿನ ಹತ್ರ ದನದ ಆಸ್ಪತ್ರೆ ಹಿಂದಿನ ಮಾಳ್ಳಿ* ಮಾರ್ಕೆಟ್ ಪಕ್ಕದ ಹೆಂಡದಂಗಡಿ ಹೋಗಿ ಆವಾಗತಾನೆ ಬಂದಿದ್ದ ಬಾಟ್ಲಿಹೆಂಡ ಒಂದ ಇಪ್ಪತ್ತೈದು ಕೊಡಿಸಿದ. ನೆಂಚ್ಕೊಳ್ಳಾಕ ಕುರಿ ತಲಿಮಾಂಸ ತಂದು ಎಲ್ಲರ ಮುಂದಿಟ್ಟ. ತಲಾಗರ್ಧ ಬಾಟಲ ಹೆಂಡಾನ ಬೋಕಿಯೊಳಗ ಸುರ್ಕೊಂಡು ಕುರಿ ತಲಿಮಾಂಸದ ರುಚಿನೋಡ್ತಾ ಗಡದ್ದಾಗೆ ಹೀರತೊಡಗಿದ್ರು. ಶಂಕರಿ ಒಳಗಿಳದಿದ್ದೆ ಕಾರಬಾರಿಕುಲುಮನಾಯ್ಕ ಮಾತು ಸುರುಮಾಡ್ದ. ಬುದ್ವನಾಯ್ಕ ತಾನ ತಂದಿದ್ದ ಒಂದ ಕಟ್ಟು ಹುಸೇನಿಬೀಡಿ, ಬೆಂಕಿಪಟ್ಟಣ ಮುಂದಿಟ್ಟ. ಎಲ್ಲರೂ ಒಂದೊಂದು ತಗದು ಬೆಂಕಿ ಹಚ್ಕೊಂಡೊರೆ ಹುಗಿಬಂಡಿ ಉಗಳೊಹಂಗೆ ಬುಸುಬುಸು ಒಗಿ ಉಗುಳ ತೊಡಗಿದ್ರು. "ಜಗತ್ತಿನೊಳಗ ಮದ್ವಿ ಮಾಡಿದ್ರ ಹಿಂಗ ಮಾಡಾಕ್‌ಬಿಡ್ರೊ ನಿಮ್ಮಾಪ್ರ. ಬುದ್ವಣ್ಣ ಬಹಳ ದುಡ್ಡ ಖರ್ಚು ಮಾಡಿದಾ ನಾನ್ ಕೇಳಿದಂಗ ಸುತ್ತ ಯಾ ತಾಂಡದಾಗೂ ಹೀಂಗ ಖರ್ಚ ಮಾಡಿಲ್ಲ, ಏನಂತಿ ಹಟ್ಟಿಹಿರಿಯಣ್ಣ" ಕಾರಬಾರಿ ಕುಲುಮುನಾಯ್ಕ ತಡಿಯಾಕ ಆಗದೆ ಬಸಬಸಾಂತ ಮನಸ್ಸಿನೊಳಗಿದಿದ್ವನ್ನ ಹೊರಗ ಹಾಕದ. ಒಂದ ಬಾಟಲ ಏರ್ಸಿ ಇನ್ನೊಂದರ್ಧ ಸುರ್ಕೊಂಡಿದ್ದ ಸಿದ್ವನಾಯ್ಕ. ತನ್ನ ಹಟ್ಟಿಹಿರಿಯನ ಗತ್ತಿನೊಳಗೆ ಕಣ್ಣಮುಚ್ಕೊಂಡು "ಖರ್ಚು ಮಾಡಲೇಬೇಕಾಗುತ್ತೆ ಕಣಯ್ಯ ಕಾರಭಾರಿ. ನಾಳೆ ನಿನ್ನ ಮಕ್ಕಳ ಮದ್ವಿಮಾಡ್ತಿಯಾ ಅವಾಗ ನೀನು ಖರ್ಚು ಮಾಡ್ಲೆಬೇಕು. ಏನಪ್ಪ ಅಂತಂದ್ರ, ಬುದ್ವನಾಯ್ಕನ ಸೋದ್ರ ಸಂಬಂಧಿಗಳ್ಯಾರು ಇಲ್ಲವಲ್ಲ. ಎಲ್ಲಿಂದಲೊ ಒಂಟಿಹಕ್ಕಿ ಹಂಗೆ

*ಖಾಸಡಾ - ಮದುಮಗ ಹಾಕಿಕೊಳ್ಳುವ ಬಟ್ಟೆಯ ಪಾದರಕ್ಷೆ.

*ಬಲಿಯಾ - ಆನೆ ದಂತದಿಂದ ಮಾಡಿದ ರಟ್ಟೆ ಬಳೆಗಳು.

*ಮಾಳ್ಳಿ - ಮೀನು.

ಬಂದು ಸೇರ್ಕೊಂಡಾನ, ನಾವು ನಮ್ಮ ಮನುಷ್ಯನೆ ಅಂತ ಸೇರಿಸಿಕೊಂಡಿವಿ ಅದೇ ದೊಡ್ಡದು." ಅಂತೇಳಿ ಬಹಳ ವರ್ಷಗಳಿಂದ ತನ್ನ ಮನಸ್ಸಿನೊಳಗಿದ್ದ ಕೆಟ್ಟ ಆಲೋಚನೆಯನ್ನ ಹೊರಹಾಕಿದ. ಹಟ್ಟಿಹಿರಿಯನ ಮಾತುಕೇಳಿದ ಹುಸೇನಿ, ಕೆಂಚೀರಯ್ಯಗ ನೆತ್ತಿ ಉರಿಯಿತು. ತಡಿಯಾಕ ಆಗದೆ, "ಅಲ್ಲೋ ಸಿದ್ದನಾಯ್ಕ ನೀನೆ ಹಿಂಗಂದ್ರ ಹ್ಯಾಂಗಂತೀನಿ. ಈ ಊರಾಗ ಯಾರು ಮಳಿ ಬಡ್ಕೊಂಡೋರು, ಗಿಡ ನೆಟ್ಟು ಈ ಊರಿಗ ಮೂಲ ನಾನೆ ಅಂತ ಹೇಳೋರು ಯಾರು ಅದಾರ ಹೇಳು. ನಿಮ್ಮಪ್ಪನೂ ಯಾವುದೋ ಊರಿಂದ ವಲಸೆ ಬಂದೋನೆ" ಖಂಡುತುಂಡಾಗೆ ಹೇಳಿದ ಹುಸೇನ ಸಾಬಿ. "ಹಂಗಲ್ಲ ಹುಸೇನಸಾಬಿ ನಾವ ಬಂದು ಏಟ ವರ್ಷಗಳಾದ್ವು. ಹೊಲ, ಮನಿ ಎಲ್ಲಾ ಅದಾವ, ನಮ್ಮ ತಾತ - ಮಮುತ್ತಾತಂದಿರು ಬಂದು ನೆಲಸಿರಬೇಕು ಊರಾಗ" ಅಂತೇಳಿ ತನ ವಾದನ ಸಮರ್ಥಿಕೊಳ್ಳಾಕ ನೋಡಿದ. ಕೆಂಚೀರಯ್ಯಗ ಸರಿಕಾಣಲಿಲ್ಲಾ. "ಆದ್ರು ನೀ ಏನೆ ಹೇಳು ನಾಯಕಪ್ಪ ನಿನ್ನ ಮಾತು ಸರಿಯಿಲ್ಲ ಬಿಡು. ತಾಂಡದ ಬಹಳ ಮಂದಿಗ ಬುದ್ದನಾಯ್ಕನ ಮಗ ಗೊತ್ತಾನಾಯ್ಕ ಬುದ್ಧಿವಂತ, ದುಡಿತಾನ, ನಿಮ್ಮಗಳಿಗ ನೋಡಾಕ ಆಗ್ತಿಲ್ಲ ಆಟೇಯ" ಅವನ ಮಾತಿಗ ಪ್ರೋತ್ಸಾಹ ಸಿಗದಂಗ ಮಾಡಿದ. ಅವರ ಮಾತಿನ ನಡುವೆ ಹೊತ್ತು ಸರದು ಕತ್ತಲಾಗಿದ್ದೆ ತಿಳಿಲಿಲ್ಲಾ. ಗಡಿಯಾರಕಂಬದಿಂದ ಹುಡುಕ್ತಾ ಬಂದ ಗೊತ್ತಾನಾಯ್ಕ, ಹೆಂಡದ ಪೆಂಟದ ಮೇಲೆ ಕುಂತೋರನ್ನ ಎಚ್ಚರಸಿದಾಗ್ಲೆ ಮಾತಿನ ಒಳಸುಳಿಯಿಂದ ಹೊರಗ ಬಂದು "ಅರೆ ಇವ್ನ, ಮರತು ಎಷ್ಟೊತ್ತು ಕುಂತ ಬಿಟ್ವಿ. ಏಳ್ರೋ ಎತ್ತಗಳು ಹಸ್ಕೊಂಡಾವ ಕತ್ತಲು ಬಹಳ ಆಗೈತಿ ತಾಂಡಕ ಹೋಗಿ ಮುಟ್ಟೋದ್ರಾಗ ಕೊಳಿ ಕೂಗತ್ತೈತೇನೊ" ಕಾರಬಾರಿ ಗಡಬಡಿಯಿಂದ ಎದ್ದ.

ರಾತ್ರಿ ಕತ್ತಲೊಳಗ ಬಂಡಿ ಕಾಡದಾರಿಗುಂಟ ಹೊಂಟಿದ್ದವು. ಹೆಂಡದ ಅಮಲಿಗ ಕೆಲವರು ಕುಂತಕುಂತಲ್ಲೇ ತೂಕಡಿಸತೊಡಗಿದ್ರು. ಹೆಂಗಸರು ನಾಡಮಾತಗಳನ್ನೆಲ್ಲಾ ತಕ್ಕೊಂಡು ಜಗಳ ಆಡೋರಗತಿಲೆ ಜೋರಜೋರಾಗಿ ಮಾತಾಡ್ತಿದ್ರು. ಗುಡ್ಡದಮೂಲಿ ಬರುತ್ಲೆ ಬುದ್ದನಾಯ್ಕ "ಬಂಡಿನೋಡಿ ಹೂಡಿರಲೇತಮ್ಮ ಮೂರುಗಾಡಿನೂ ಒಂದರಹಿಂದ ಒಂದು ಹೋಗಲಿ" ಎಚ್ಚರಿಸಿದ. ಊರುತಲುಪಿದಾಗ ಮೂಡಲದಾಗ ಕೆಂಪಹರಿದಿತ್ತು. ದೀಪಮಲಿಕಂಬ ದಾಟಿ ಕರಗಲ್ ತಡಾದು ಬೇನಮರದ ಕಟ್ಟಿಹತ್ರ ಬಂಡಿನಿಲ್ಸಿ ಕೊಳ್ಳಹರದ್ರು. ಮಂದಿ ಇಳದು ತಮ್ಮ ತಮ್ಮ ಮನಿಗ ಹೋದ್ರು. ಬುದ್ದನಾಯ್ಕ ಗೊತ್ತನಾಯ್ಕ ಮೀಟಿಬಾಯಿ ಕೆಳಗಿಳದ್ರು. ಬಂಡಿಬಂದು ನಿಂತಿದ್ದ ಶಬ್ಧ ಕೇಳಿ ಓಡಿಬಂದ ಕಟುವಾ, ಪಾಮಿ ಸಾಮಾನ ತುಂಬಿದ ಚೀಲಗಳನ್ನ ಹೊತ್ಕೊಂಡು ಮನಿಕಡೀಗ ಹೊಂಟ್ರು.

ಕಾರ್ತಿಕಮಾಸ ಮುಗದ ಹನ್ನೊಂದನೆ ದಿನ ಗುಡಿಸಲಿನ ಮುಂದ ಹಂದ್ರ ಹಾಕಾಕ ಇಂಗಳಳ್ಳಿ ಹಾಸಿಗಿಯೊಳಗಿದ್ದ ಮಲ್ಲಪ್ಪನ ತ್ವಾಟದಿಂದ ತೆಂಗಿನಗರಿ, ಹಂದರಗಾಯಿ, ಎಲಿತಂದ್ರು. ಊರೆಲ್ಲಾ ತಿರಗಾಡಿ, ಎಡೆನಗ್ಗ, ದೊಡ್ಡ ಪೊಲ್ಸುಗಳನ್ನ, ಹಂದ್ರಕ್ಕ ಬಿಗಿಯೊ ಸೆರಗಾ, ಎಕ್ಕಿ ಪೆಳೆ, ಬತ್ತಿತಪ್ಲ ತಂದು ಹಂದ್ರಕ್ಕ ಕಟ್ಟಿ, ಬಣ್ಣದ ಹಾಳಿಗಳನ್ನು ಸುತಲೀ ದಾರಕ್ಕ ಹಚ್ಚಿ ರಂಗ ರಂಗಾಗಿ ಮಾಡಿದ್ರು. ಪೂರ್ವಕ್ಕ ಸರಿಯಾಗಿ ಒಂದು ನಗ್ಗ ಹುಗದು ಮಂಡೇವಡೊ* ಅಂತಂದು ನಿಲ್ಲಸಿದ್ರು. ಅದರ ಪಕ್ಕದಾಗೆ ಬೆಲ್ಲದ ನೀರ ಕಲ್ಸಿ ಜಾಕಾಯಿಪುಡಿ ಉದರಿಸಿ ಮದುಮಗ ನಡಬಗ್ಗಿಸಿ ದೊಡ್ಡ ಜನರಿಗೆಲ್ಲಾ ಕೊಡೊ ಕಾರೆವು ನಡದಿತ್ತು. ಒಬ್ಬೊಬ್ಬರು ಹುಡುಗನಿಗೆ ಮಾವ ಆಗೋರು ಬೇಕಂತ್ಲೆ ಐದಹತ್ತು ನಿಮಿಷ ಹುಡುಗ ಬಗ್ಗ ಬೇಕಂತ ಬೆಲ್ಲದ ನೀರ ತಂಗೊಂತಿರಲಿಲ್ಲಾ. ಮದುಮಗ ಬಗ್ಗಿ ಸಾಕಾದ ಮೇಲೆ, "ನೀ ನನ್ನ ಮುಂದ ಬಂದ ನಿಂತಿ ಏನು? ಪಾಪ ಬಗ್ಗಿ ನಿಂತು ಬಹಳ ಹೊತ್ತಾಗಿರಬೇಕು" ಅಂತ ಹೇಳಿ ಗ್ಲಾಸ್ ಇಸ್ಕೋಂತಿದ್ರು. ಹೆಂಗಸರೆಲ್ಲಾ ಮದುಮಗನ್ನ ಹಾಡು ಹೇಳ್ಕೋಂತ ಹೊರಗ ಕರ್ಕೊಂಡುಬಂದ್ರು. ಇಷ್ಟುವರ್ಷ ತನ್ನ ಆಶ್ರಯದಾಗ ಬೆಳೆದು ತನ್ನನ್ನ ಪ್ರೀತಿಯಿಂದ ಕಾಣ್ತಿದ್ದ ಮಗ ಇವತ್ತು ಮತ್ತೊಬ್ಬ ಹೆಂಗಸಿನ ಪಾಲಾಗ್ತಾನ ಅನ್ನೊ ತನ್ನ ಎದಿಯಾಳದ ನೋವನ್ನ ಅವನ ತಾಯಿ ಇದ್ದಕ್ಕಿದಂಗೆ ಗೊತ್ತಾನಾಯ್ಕನ ಕತ್ತಹಿಡದು ಅತ್ತು ಅತ್ತು ತನ್ನ ದುಃಖ ತೋಡಿಕೊಳ್ತಿದ್ಲು. ಮದ್ವಿಗಂಡು ತಗ್ಗಿ ಬಗ್ಗಿ ಚುಟ್ಟ ಎಲಿಅಡಿಕಿ ಕೊಟ್ಟ. ಊರಾನ ಎಲ್ಲಾ ದೇವರುಗಳಿಗ ಹೋಗಿ ಎಲಿಅಡಿಕಿ ಇಟ್ಟು ನಮಸ್ಕಾರ ಮಾಡಿ ಹೊರಗ ಬರೋದೆ ತಡ, ಹುಡುಗರು ಹೊಡದಾಡಿ ಎಲಿಅಡಿಕಿ ಎತ್ತಕೊಂಡು ಓಡಿಹೊಕ್ಕಿದ್ರು. ಕಡೀಗ ತಾಂಡದ ಕಡಿಂದ ಕಾಮಿಬಾಯಿ ನಡಕ ಬಂದಾಕಿನ ಎರಡು ಗಿಟಕು ಕೊಬ್ಬರಿ ತಗೊಂಡು ಚೂರಮಾಡಿ ಬೆಲ್ಲ, ಚೂರ ಕೊಬ್ಬರಿ ನೆರದ ಎಲ್ಲರಿಗೂ ಹಂಚಿದ್ಲು. ಅಂದ್ರ ಊರಾನ ಕಾರ್ರೇವು ಮುಗದ್ವು ಅಂತ್ಲೆ. ಗೊತ್ತನಾಯ್ಕ ಒಂದು ಕೆಂಪನೆ ಬಟ್ಟೆಯಿಂದ ಮಾಡಿದ ಒಳ್ಳೆ ಮಜಬೂತಾದ ಕೋತ್ಲೊ ಹಾಕ್ಕೊಂಡಿದ್ದ. ಅವನ ಅವ್ವ ಕೌಡಿ, ಗಾಜು ಹಾಕಿ ವರ್ಷಾನುಗಟ್ಲೆ ಅದಕ್ಕೆ ಕಸೂತಿ ಮಾಡಿದ್ಲು. ಕರಿಪೀಕಲು ಮೈ ಧೋತ್ರ ಬ್ಯಾರೆ ಕೇಡು. ಒಂದು ಕೈಯಾಗ ಧೋತ್ರ ಮತ್ತೊಂದು ಕೈಯಾಗ ಕಟಾರಿ. ತಲಿಮ್ಯಾಲಿನ ಪೇಟಾನೆ ವಜ್ಜಿಯಾದಂಗಿತ್ತು. ಅಂವ 'ಭುಕ್ಯಾ' ಪಂಗಡಕ್ಕೆ ಸೇರಿದವನು, ಜಾತ್ ಪಂಗಡಕ್ಕೆ ಸೇರಿದ ಹುಡುಗಿಯರೆಲ್ಲಾ "ಏನು ನೀನು ಊಟ್ಟಿರೊ ಧೋತ್ರನೆ

---

* ಮಂಡೇವಡೊ - ಹಂದರದೊಳಗೆ ಒಂದು ಗೂಟ ಹುಗದು ಕಟ್ಟಿದ ಬಟ್ಟೆಯ ಕೆಳಗಿನಿಂದ ಮದುವೆ ಗಂಡು ಕಡೆ ಹೋಗುವ ರೀತಿ.

ಬಗ್ಗತಾ ಇಲ್ಲಾ ನಿನಗೆ. ಇನ್ನೂ ನಮ್ಮ ಹುಡುಗಿಯನ್ನ ಹ್ಯಾಂಗ ಬಗ್ಗಸ್ತಿ" ಅಂತ ಗೇಲಿ ಮಾಡ್ತಿದ್ರು.

ತಾಡಪುರ ತಾಂಡಕ್ಕ ಐದು ಕಿಲಾರಿ ಬಂಡಿಗಳು ಹೊಂಟವು. ಅಡವಿದಾಟಿ ಹೋಗ ಬೇಕಾದ್ದರಿಂದ ಗಡಾನೇ ಬಂಡಿಕಟ್ಟಿದ್ರು. ಬೆಲ್ಲತಿನ್ನೊ ಕಾರೆವ ಮಾಡಾಕಾಂತ ಐದುಜನ ಹಿರಿಯರು ಬೆಳಗಾಮುಂಜಾನೆನೆ ಕಾಕಪುರತಾಂಡ ಬಿಟ್ಟಿದ್ರು. ತಾಡಪುರಕ್ಕೆ ಬಂಡಿ ತಲುಪಿದಾಗ ಸಂಜಿಯಾಗಿತ್ತು. ಊರಹುಡುಗಿಯರ ಹಿಂಡು ಸೇವಾಬಾಯನ ಮಟ್ಟೋದ ಹತ್ರ ಸೇರ್ಕೊಂಡು. "ಮದುಮಗನೆ ನಿನ್ನ ಜಾತಿಯಾವುದು. ನಿನತಾಯಿ ಬಹಳ ನಿಧಾನ. ನಿಮ್ಮತಂಗಿ ಬರಿಹಲ್ಲ ಕಿರಿತಾಳೆ" ಹಾಡಿನಲ್ಲೆ ಮದುಮಗನ ಇಡೀ ಕುಟುಂಬದರನ್ನ ಬೊಯ್ಯುತ್ತಿದ್ದರು. ಹುಡುಗನ ತಾಯಿ ಕಟ್ಟಿಕೊಟ್ಟ ಅಕ್ಕಿಹಿಟ್ಟು ಬೆಲ್ಲವನ್ನ ಎಲ್ಲರಿಗೂ ಹಂಚಿದ ಮೇಲೆ ತಾಡಪುರದ ಹಟ್ಟಿನಾಯ್ಕನ ಮನಿಮುಂದ ಹೋಗಿ ಅವನಿಗೆ ಕೊಡಬೇಕಾದ ಕರಕೊಟ್ಟು ಅಲ್ಲಿ ಡಾವೊ ಕೇಳುವ ಕಸಳಾವತಗಳಿಗೆ ಹುಡುಗ ಉತ್ತರ ಹೇಳಬೇಕಿತ್ತು. ಗೊತ್ತಾನಾಯ್ಕಗ ಅವೆಲ್ಲ ಬಾಯಿಪಾಠ ಆಗಿದ್ದರಿಂದ ಅವನೇ ತಮ್ಮ ಭಾಷೆಯೊಳಗ ಶಾಸ್ತ್ರ ಕೇಳಾಕ ಬಂದೋನಿಗ ತಿರುಗಿಶಾಸ್ತ್ರ ಕೇಳಿದ. ಆ ಮನುಷ್ಯ ಹೇಳಾಕ ಆಗದೆ ಒದ್ದಾಡಿ ಹೋದ.

ರಾತ್ರಿ ಕೆಲವು ಶಾಸ್ತ್ರಗಳು ಮುಗಿದಿದ್ದವು. ಆದ್ರು ಗೊತ್ತನಾಯ್ಕನಿಗೆ ಹುಡುಗಿ ಹೆಂಗದಾಳಂತ ನೋಡೊ ಭಾಗ್ಯ ಸಿಗಲಿಲ್ಲಾ. ಹದಿನಾರು ದಿನಗಳ ಕಾಲ ಅವನಿಗಾಗಿ ಮಾಡಿದ್ದ ಗುಡಿಸಲೊಳಗ ಅವನ ಸೋದರ ಮಾವನ ಕೂಡ ತಾಡಪುರದಲ್ಲೆ ಉಳದ. ಅದಾಗಿ ಒಂದವಾರಕ್ಕೆ ಬ್ಯಾಟಿ ಕಡಿಯೊ ಕಾರೆವು. ಬುದ್ದನಾಯ್ಕ ಹದಿನಾರು ರೂಪಾಯಿ ಕೊಟ್ಟು ಸಾಕಿದ ಟಗರನ್ನೆ ತಂದಿದ್ದ. ಭರ್ಜರಿ ಸಂತೆ ಮಾಡಿಸಿ ಒಂದ ಕೇಸಪೂರ್ತಿ ಹೆಂಡ, ಅದು ಸಾಲದ್ದಕ್ಕೆ ಭಟ್ಟಿಸಾರಾಯಿ ಮಾರೊ ಕೊರಚರಟ್ಟಿಯ ಸಣಗನ ತಾಗಿಂದ ಎರಡೂವರಿ ಗಡಗಿ ಸಾರಾಯಿ ಕೊಡಿಸಿದ. ಮಂದಿ ಒಂದು ಹಬ್ಬದಂಗೆ ಅಂದ್ಕೊಂಡು ಕುಡಿದು ತಿಂದು "ಮದ್ವಿ ಅಂದ್ರ ಇದಹೌದು ನೋಡ್ರಪ್ಪ ನಾಯಕ. ನಮ್ಮ ಗೋರಮಾಟಿಗಳಿಗ ಎನಪ್ಪ ಅಂದ್ರೆ ತಿನ್ನೋದು ಕುಡಿಯೋದು ಆಟೇಯ. ಇವನ್ನ ಬಿಟ್ಟು ಇನ್ನೇನೈತಿ ಜೀವನದಾಗ. ಇದು ನಾಕದಿನದ ಸಂತಿ, ಈ ಜೀವನದಾಗೆ ಎಲ್ಲಾನೂ ಮಾಡಬೇಕು ಕಣಯ್ಯ" ಕಾಕಾಪುರದ ಕಾರಭಾರಿ ತನ್ನ ಇಚಾರ ಹೇಳದ. ಇಡಿರಾತ್ರಿ ಕುಡಿದು ಬ್ಯಾಟಿಕಡದು ಎಲ್ಲಾ ಮಂದಿನೂ ಒಂದಗೂಡಿ ಅಡಗಿಮಾಡಿ, ಕೆಲಮಂದಿ ನಗಾರಿಬಾರಿಸ್ತಾ ಹಾಡಹೇಳಿದ್ರು. ಮತ್ತ ಕೆಲವರು ಕುಣದ್ರು. ಹೆಂಗಸರು ತಮ್ಮ ಎಂದಿನ ಧಾಟಿಯೊಳಗ ಅದೇರಾಗ ಹಾಡ್ತಾ ಗಂಡಸರು ಹೆಂಡಕುಡದ ಉಳಿಸಿ ತಮ್ಮ ಪಾಲಿಂದ ಕೊಡ್ತಾರೊ

ಇಲ್ಲಾಂತ ಕಾಯ್ತಿದ್ರು. ಅವರ ಲೋಕದೊಳಗೆ ಮುಳಿಗಿದ್ದ ಮಂದಿಕಂಡ ಹಿರಿಕಳಾದ ಡೊಂಗೀಬಾಯಿ, "ಏನಪ್ಪ ನಾಯಕ ಕಾರಭಾರಿ ಇದೇ ಏನು? ನಿಮ್ಮ ರೀತಿ ನೀತಿ ನೀವ ನೀವೆ ಕುಡಿಯಾಕ ಹತ್ತಿರಿ. ಹುಕ್ಕಾ ಸೇದ್ತಿದ್ದಿರಿ, ಒಳ್ಳೊಳ್ಳೆ ಮೆತ್ತನಮಾಸ ಹುರಿದು ಹೊಡಿಯಕಹತ್ತಿರಿ. ಇನ್ನೂ ನಾವ್ಯಾಕ ಇರಬೇಕು. ಕರೀರಿ ಬುದ್ದಣ್ಣಾಗ ಆಟು ಕೇಳ್ತೀನಿ ನಮ್ಮ ಹೆಂಗಸರ ಪಾಲಿನ ಹೆಂಡತಂದಾನ ಇಲ್ಲಾಂತ" ಒಳ್ಳೆ ಜೋರಾಗೆ ಕೇಳಿದ್ಲು. ಡೊಂಗೀಬಾಯಿ ಮಾತಕೇಳಿ ಹಟ್ಟಿಹಿರಿಯನಿಗ ಕುಡದಿದ್ದು ಇಳದಂಗಾತು. "ಎಯ್ ನಿಮ್ಮ ಮಂಜಾಳಾಗ, ಹೆಂಗಸರಿಗ ಕೊಟ್ಟಿಲೆನ್ರೋ...... ಬಾರೊ ಗಣಪು ಎತ್ತು ಈ ಹೆಂಡ, ಸಾರಾಯಿ ಹೋಗಿ ಡೊಂಗೀ ಬಾಯಿ ಮುಂದಿಟ್ಟು ಹೆಣ್ಣಮಕ್ಕಳಿಗ ಹಂಚಂತ ಹೇಳು. ಮದ್ಲೆ ಆವರಿಗ ಕೊಡಬೇಕು. ಪಂಥಿಯೊಳಗ ಪರಪಂಥಿ ಮಾಡಬಾರ್ದು ಕಣಯ್ಯ". ಗಡಬಡಿಯಿಂದ ಕಳಸಿದ ಹಿರಿಯ. ಗಣಪು ಮತ್ತೊಂದಿಬ್ಬರು ಅವನ ಸ್ನೇಹಿತರು ಹೆಂಡಸಾರಾಯಿ ತುಂಬಿದ್ದ ಗಡಗಿಗಳನ್ನು ಎತ್ಕೊಂಡಬಂದು "ತಗೊ ಡೊಂಗೀ ದೊಡ್ಡಮ್ಮ ಹೆಣಮಕ್ಕಳಿಗ ಹಂಚಾಕಂತ" ಅಂದು ಕೊಡಾಕಬಂದ. ಸಿಟ್ಟಬಂತು, "ಯಾವನ್ಲೋ ನೀನು ಎತ್ಕೊಂಡಹೋಗು ಇಲ್ಲಿಂದ, ನಾವೇನು ಗತಿಗೆಟ್ಟು ಹೆಂಡ ಸಾರಾಯಿ ಕುಡಿಯಾಕಂತ ಬಂದಿಲ್ಲಾ. ಏನೋ ತಾಯಿ ಇಲ್ಲದ ಮಗಳು ಬಾಣಿ ಸುಖವಾಗಿ ಗಂಡನಮನಿ ಸೇರ್ಕೊಳ್ಳಿ ಅಂತೇಳಿ ಬಂದೀವಿ, ಹಟ್ಟಿಹಿರಿಯ ಮತ್ತು ಕಾರಭಾರಿ ಮುಂದಿಡು ಕುಡಕೊಳ್ಳಿ" ಒದರಾಡಿದ್ಲು.

ಬುದ್ದನಾಯ್ಕ, ಕಾಕಪುರದ ಕಾರಭಾರಿ ಜುಕ್ಕಜುಲುಮಿವಾಡಿ. ಅವರ ಮಕನೋಡಬ್ಯಾಡ್ರಿ ನಾವು ಪರ ಊರಿಂದ ಬಂದಿರೋರು ನಮ್ಮಮಾರಿನೋಡ್ರಿ. ನಮಗ ಬೆಲಿಕೊಡ್ರಿ ಅಂತ ಅಂಗಲಾಚಿಂದ ಹೆಂಗಸರೆಲ್ಲಾ ಹೆಂಡ ಸಾರಾಯಿ ಮುಗಸಿ ಗಂಡು ಮಕ್ಕಳಿಗೆ ಊಟಕ್ಕೆ ಕುಂದ್ರಿಸಿದ್ರು.

ಒಂದು ತಿಂಗಳಕಾಲ ಗೊತ್ತಾನಾಯ್ಕ ಕಾಕಾಪುರ ಬಿಟ್ಟು ತಾಡಪುರದಾಗ ಠಿಕಾಣಿ ಹೂಡಿದ್ದ. ಆವನಿಗೆ ಬರೀ ಕೆಪ್ಪಅಂದಭಟ್ರ ಗದ್ದಿದೇ ಚಿಂತಿ, ಅಂಟ್ವಾಳಮರದ ಗದ್ದಿನೂ ನೀನೆ ಮಾಡ್ಬಿಯಂತಲೇ ಗೊತ್ತಾನಾಯ್ಕ ಕೆಲಸ ನೀಟಮಾಡ್ತಿಯ, ಹೇಳದಂಗೆ ಕೇಳ್ತಿಯ, ಆ ಡೊಳ್ಳಿನ ಅಂಜಿನ ತಾವಿಂದ ಇಸ್ಕೊಂಡು ನಿನಗಕೊಡ್ತಿನಿ. ಮನಿಮಂದಿ ಎಲ್ಲಾ ಸೇರಿಮಾಡ್ತಿರಿ ನೀವು, ಅಂದಿದ್ರು. ಏನಾತೊ ಏನೋ ಅಂತೇಳಿ ನೂರಸಲ ಯೋಚನೆ ಮಾಡಿದ್ದ. ಯಾರು ಮಾಡಿದ್ರೋ ಈ ಹಾಳ ಶಾಸ್ತ್ರನ, ಒಂದು ತಿಂಗಳಮದ್ದಿ, ನನಗಾರ ಸಾಕಾಗಹೋತು ಅಂದ್ಕೊಂಡ. ಏಳೆಂಟು ಚಕ್ಕಡಿಗಾಡಿಗಳು ತಾಡಪುರ ತಾಂಡಾನ

ನಸುಕಿನೊಳಗೆ ಬಿಟ್ಟು ಸಂಜೀಗ ಕಾಕಾಪುರ ಸೇರಾಕು ಹ್ವಾರೆಗ ಹೋಗಿದ್ದ ಹುಡುಗಿಯರ ಗುಂಪುಬರಾಕು ಸರಿಹೊತು. ಕೈಯಾಗಿದ್ದ ಬುತ್ತಿ ಗಂಟಿನ ಅರವಿಗಳನ್ನ ಲಂಗದೊಳಗ ಬಚ್ಚಿಟ್ಕೊಂಡವರೆ ಸೇವಾಬಾಯನ ಗುಡಿ ಮುಂದ ಇಳದಿದ್ದ ದಿಬ್ಬಣದ ಚಕ್ಕಡಿಗಳು ಕೊಳ್ಳ ಹರಿಯಾಕ ಮದ್ಲೆ ಕಾಕಾ ಅಂತ ಕಾಗಿಗಳು ಕೂಗೊಹಂಗೆ "ಎಲ್ಲಿಂದ ಬಂದಿರಿ ನಮ್ಮ ಸೌತಿಯರೆ" ಹಾಡನೊಳಗ ಬೊಯ್ಯೋದು ಸುರುಮಾಡಿದ್ರು. ಹಟ್ಟಿಹಿರಿಯ ಬಂದು ಮಧ್ಯೆ ನಿಂತು ಎರಡಕಡಿ ಹುಡಿಗಿಯರನ್ನ ಸುಮ್ನೆ ಇರಿಸಿದ. ಶಾಸ್ತ್ರಗಳನ್ನ ಮುಗಿಸಿ ಊಟ ಮಾಡ್ರೊ ಹೊತ್ತಿಗೆ ಸೌರಾತ್ರಿಯಾಗಿತ್ತು. ಜಿಂಗಿಬಾಯಿ ಬುದ್ದನಾಯ್ಕನ ಮನಿ ಹೊಸಲಿಮ್ಯಾಲ ಮಳಿಬಡದು ಬಾಣವ್ವನ್ನ ಮನಿ ತುಂಬಿಸಿದ್ಲು.

ಕೈಕಾಲು ಬಲಿಯದ ದನಕಾಯೊ ಬಾಣವ್ವ ಗೊತ್ತನಾಯ್ಕನ ಹೇಣ್ತಿಯಾಗಿ ತಾಡಪುರದ ಎಲ್ಲಾ ಸಂಬಂಧಗಳನ್ನ ಕಳ್ಕೊಂಡು ಕಾಕಾಪುರ ಸೇರಿದ್ಲು. ಬದುಕ ಏನು ಅಂತ ತಿಳಿಯೊ ಮದಲೆ ಬದುಕಿನ ಬಾಹುಬಂಧನದೊಳಗೆ ಸೇರಿದ್ಲು. ಹೊತ್ತಾರೆ ಎದ್ದು ಒಂದು ಕಬ್ಬಿಣದ ಪುಟ್ಟಿತುಂಬ ಜ್ವಾಳ ಹಾಕ್ಕೊಂಡು ಬೀಸೆಕಲ್ಲಿನ ಮುಂದ ಕುತ್ಕೊಬೇಕು. ರೂಢಿ ಇಲ್ಲದಕ್ಕ ಒಂದೊಂದು ಸಲ ಬೀಸೆಕಲ್ಲಿಗ ತಲಿಯಾನಿಸಿ ತೂಕಡಿಸುತ್ತಿದ್ಲು. ಅಕಿಗಿಂತ ದೊಡ್ಡವಳಾದ ಪಾಮಿ ಕಾಲಚಾಚಿ ಮಕ್ಕೊಂಡಿದ್ರು ತನ್ನ ಮಗಳಂಗೆ ಇರೊ ಬಾಣಿ ಮಾತ್ರ ನಿದ್ದಿ ಮಾಡೊ ಹೊತ್ತಿನ್ಯಾಗ ಎದ್ದು ಬೀಸಬೇಕು. ದೊಡ್ಡ ಚಂಡಾಳಿಯಾದ ಮೀಟಿಬಾಯಿ ನೋಡ್ರೊ ಮಟನೋಡಿ ಜಡಿಹಿಡದು ಎಳದ ಬಿಸಾಕಿ ಚರಿಗಿತುಂಬ ನೀರ ತಂದು ಸುರಿತಿದ್ಲು. ಬಾಣವ್ವ ಬದುಕಿನ ಜೊತಿಗ ಗುದ್ದಾಡ್ತಾ ಗುದ್ದಾಡ್ತಾ ತಾಯಾಗತೊಡಗಿದ್ಲು. ಕಾಲು ಕೈ ಬಲತು ಒಂದು ಆಕಾರ ಪಡಿಯೊ ಹೊತ್ತಿನ್ಯಾಗೆ ಹಿರಿಮಗ ನುಗ್ಲಾ ಹುಟ್ಟಿದ್ದ. ಗೊತ್ತಾನಾಯ್ಕನಿಗೆ ಬಹಳ ಖುಷಿಯಾಗಿತ್ತು. ನೆಲದ ಮ್ಯಾಲಕೂಡದಂಗ ಗಾಣದ ಎತ್ತಿನಹಂಗ ದುಡಿಯತೊಡಗಿದ. ವರ್ಷ ವರ್ಷ ಹೊಸ ಹೊಸ ಹೊಲ ಕೊರಿಗ ಮಾಡ್ತಾ ಹೋದಂಗೆಲ್ಲಾ ಕಾಳು ಕಡಿ, ಎತ್ತು, ಹಸುಗಳನ್ನ ಖರೀದಿಸಿದ. ಪ್ರತಿವರ್ಷ ಒಂದೊಂದರಂಗ ಆರೇಳ ವರ್ಷದಾಗ ಮೂರು ಹೆಣ್ಣು ನಾಕ ಗಂಡು ಮಕ್ಕಳಾಗಿದ್ದು ಬಾಣಿಗೆ. ಅಷ್ಟೊತ್ತಿಗಾಗಲೆ ಪಾಮಿ ಮದ್ವಿಯಾಗಿತ್ತು. ಒಬ್ಬಳೆ ಮಗಳು ಕಣ್ಣೆದುರಿಗೆ ಇರಲಿ ಅಂತಂದು ಮೀಟಿಬಾಯಿ ಹಟ ಹಿಡಿದು ಅಕ್ಕ ಪಕ್ಕದ ಊರಗಳಿಂದ ಬಂದಿದ್ದ ಸಂಬಂಧಗಳನ್ನೆಲ್ಲಾ ನಿರಾಕರಿಸಿ ಕಾಕಪುರದ ಕುಂಟ್ಯಾನಾಯ್ಕನ ಮಗ ಗುರವಾನಾಯ್ಕನಿಗೆ ಕೊಟ್ಟು ಮದ್ವಿಮಾಡಿದ್ಲು. ಸಂತೂರು ತಾಂಡದಿಂದ ತನ್ನ ಎಲ್ಡನೇ ಮಗ ಕಟುವಾನಾಯ್ಕನಿಗೆ ಹೆಣ್ಣುತಂದ್ಲು. ಒಂದೇ ಗುಡಿಸಲಾಗ ಜಾಗ


ಸಾಲದಾತು. ಹೆಂಗಸರು ಕೆಲಸಮಾಡೊ ಮುಂದ ಕೈಕೈ ಆಟಿಯ ತೊಡಗಿದಂಗೆ ಮಾತಿಗೆ ಮಾತು ಬದಲಾಗತೊಡಗಿದ್ವು. ಹಿರೇಮಗ ಗೊತ್ತಾನಾಯ್ಕ ಒಬ್ಬನೆ ದುಡಿಯೋದು, ಅವನ ಹೇಣ್ತಿ ಬಾಣಿ ವರ್ಷಕ ಒಂದರಂತೆ ಮಕ್ಕಳನ್ನ ಹಡೀತಾ ಅದಾಳ ಒಂದು ದೊಡ್ಡದಾಗ್ತಿದಂಗೆ ಮತ್ತೊಂದು ತಯಾರಾಗಿರ್ತಿತ್ತು. ಅದರಿಂದ ಅವಾಗ ತಾನೆ ಮದ್ವಿಯಾಗಿದ್ದ ಎಲ್ಡನೆ ಮಗ ಕಟುವನಿಗೆ ಅನ್ಯಾಯ ಆಗಾಕ ಹತ್ಯತಿ ಅಂತೇಳಿ ಅದ್ಕೊಂಡಾಕಿನೆ ಯಾವುದೋ ಅರ್ಥ ಇಲ್ಲದ ಗಲಾಟೆ ತಕ್ಕೊಂಡು ಹಿರಿಮಗ ಸೊಸಿಯನ್ನ ಹೊರಗಹಾಕೆಬಿಟ್ಲು. ಗೊತ್ತಾನಾಯ್ಕ ಬಾಣಿ ಮತ್ತು ಅವರ ಹತ್ತಮಂದಿ ಮಕ್ಕಳನ್ನ ಉಟ್ಟಬಟ್ಟಿಮ್ಯಾಲ ಮನಿಯಾಗಿಂದ ಒಂದು ತುಂಡಸಾಮಾನ ಕೊಡದಂಗೆ ಓಡಿಸಿದ್ಲು. "ಹೋಗೊ ಮಗನೆ ಹತ್ತ ಹಡದಿಯಲ್ಲ ಹಂದಿಯಂಗ, ಅವುಗಳ ಹೇಲು-ಉಚ್ಚಿ ಬಾಚಿ ದೊಡ್ಡೋವ ಮಾಡೀನಿ. ನಿನ್ನಂಗೆ ಇನ್ನೊಬ್ಬನೂ ನನ್ನ ಮಗ ಅದಾನ. ಅವನನ್ನ ಸಾಕಬೇಕು ಅವನ ಮಕ್ಕಳಂತ ಆಗ್ತಾವ ಅವನ್ನ ನೋಡಬೇಕು" ಮಕತಿರುಗಿಸಿ ತಿರಗಿ ನೋಡದಂಗ ಹೋದ್ಲು. ಗೊತ್ತನಾಯ್ಕ ಒಂದುಮಾತ ತಿರುಗಿ ಹೇಳದಂಗೆ ಪುಟ್ಟಿಕೆಳಗ ಹಾಕಿ ಮುಚ್ಚೊ ಹಂಗಿರೊ ಹತ್ತ ಹುಡುಗರನ್ನ ಕಟ್ಕೊಂಡು ಜಿಂಗಿಬಾಯಿ ಮನಿಪಕ್ಕದ ವಾರಿ ಚಪ್ಪರದಾಗ ಕಲ್ಲು ಹೂಡಿ ಜಿಂಗಿಬಾಯಿ ಹತ್ರದಿಂದ ಒಂದುಪಾತ್ರಿ ಇಸ್ಕೊಂಡು ಬದುಕ ಆರಂಭಿಸಿದ.

ಮನಿತುಂಬ ಉಣ್ಣೋ ಮಕ್ಕಳು, ಎತ್ತಿಲ್ಲ, ಮನಿ ಇಲ್ಲಾ, ಹೊಲಾನು ಇಲ್ದಂಗ ಹೊರಗ ಹಾಕಿದ ತನ್ನ ತಾಯಿಗ ಯಾವತ್ತು ಒಂದುಮಾತ ಹೇಳದಂಗ ಅವರಿವರ ಹೊಲ್ದಾಗ ದುಡಿಯತೊಡಗಿದ. ರಾಗಿಗಂಜಿ, ಜ್ವಾಳದನುಚ್ಚು, ಮುದ್ದಿ ಭಾಗ್ಯವು ಆಗಿತ್ತು. ಮೀಟಿಬಾಯಿ ಮಾಡಿದ ಘನಂದಾರಿ ಕೆಲ್ಸಕೇಳಿ ಊರೆಲ್ಲಾ ಮರಗಿತ್ತು. ಕೆಂಚೀರಯ್ಯ, "ಬ್ಯಾಡಹೋಗು ನೀ ಚಿಂತಿಮಾಡಬ್ಯಾಡ ನಿನ್ನಂಗೆ ಕೆಲ್ಸಮಾಡೋರಿಗ ಸಾವಿಲ್ಲ. ನೀ ದೊಡ್ಡಮನುಷ್ಯ ಆಗ್ತಿಯಾ. ಈ ಊರೊಳಗೆ ದೊಡ್ಡ ಶ್ರೀಮಂತ ಆಗ್ತಿಯಾ ಹೋಗು" ಅಂತಾ ಧೈರ್ಯ ಹೇಳಿದ. ಹುಸೇನಸಾಬಿ, ನಜರೆಸಾಬ ಆಗಬಾರದ ಆತಲ್ಲಾ ಎಂಥಪಾಡ ದುಡಿತಿದ್ದ ಹುಡುಗ ಯಾರದೊ ಮಾತಕೇಳಿ ಮೀಟಿಬಾಯಿ ತೆಪ್ಪಮಾಡಿದ್ಲು. ಅಂತ ತಮ್ಮ ಆತಂಕ ತೋಡಿಕೊಂಡಿದ್ರು. ಪೂಜಾರಿ ಪಾಪನಾಯ್ಕ ಮಾತ್ರ ತನ್ನ ತಂತ್ರ ಫಲಿಸಿದಕ್ಕೆ ಮೀಟಿಬಾಯಿಗ ಕರ್ಕೊಂಡ ಹೋಗಿ ಒಂದು ಮಡಕಿ ಹೆಂಡಕುಡಿಸಿದ. ಅವನಂಗೇ, ಬುದ್ದನಾಯ್ಕನ ಮನಿಏಳಿಗೆ ಬಯಸದ ಬಹಳ ಮಂದಿಗ ಖುಷಿಯಾಗಿತ್ತು.

ಗೊತ್ತನಾಯ್ತನ ರೆಕ್ಕಿಪುಕ್ಕ ಮುರದು ಪಂಜರದಾಗ ಹಾಕಿ ಕೂಡಿದಂಗಾಗಿತ್ತು. ಮೈಸಡ್ಲು ಬಿಟ್ಟು ಮೂರುಲೋಕ ಗೆಲ್ಲಾಕನ್ನೋ ಬಯಕೆ ಹೊಂದಿದೋನಿಗ ಏನೂ

ಇಲ್ಲಂಗಾಗಿ ಅವರಿವರ ಕೂಲಿಯಿಂದ ಮಕ್ಕಳ ಹೊಟ್ಟೆ ಹೊರಿಯಾಕ ಆಗದ ಪರಿಸ್ಥಿತಿ ಉಂಟಾಗಿತ್ತು. ಅವನ ಪರಿಸ್ಥಿತಿ ತಿಳ್ಕೊಂಡ ಕೆಪ್ಪ ಅಂದಭಟ್ಟ ಚೆಲುವಾಪುರದಿಂದ ಬಿಸಲಾಗ ನಡ್ಕೊಂಡು ಒಂದುದಿನ ಕಾಕಾಪುರಕ್ಕೆ ಬಂದೇ ಬಿಟ್ಟ. ಕೂಲಿಗ ಹೋಗಿದ್ದ ಗೊತ್ತನಾಯ್ಕನ್ನ ಕರಿಸಿದ. "ಏನಲೆ ಗೊತ್ತಾ, ನಾ ಏನ ಸತ್ತಹೋಗಿನೊ ಹ್ಯಾಂಗ? ಒಂದು ಮಾತ ಹೇಳಬಾರ ದೇನಲೆ ಚಿಟಕಿ ಹೊಡಿಯೋದ್ರಾಗ ನಿನ್ನ ಏನಮಾಡಬೇಕೊ ಅದನ್ನ ಮಾಡ್ತಿದ್ದೆ. ನಿನ್ನಂತ ದುಡಿಯೋ ವಸ್ತಾದಿ ಸಿಕ್ಕ್ರ ಕೇಳಿ ಏನಲೆ" ಭಟ್ರು ಕಾಳಜಿ ತೋರ್ಸಿದ್ರು. "ಭಟ್ರೆ ತಮಗ ಯಾಕ ತೊಂದ್ರೆ ಕೊಡಾಕಂತ" ಮಾತ ನಿಲ್ಸಿದ. "ಸಂಜಿಗ ಊರಕಡೀಗ ಬಾ ನಮ್ಮದನದಾಗ ಒಂದು ಕರ ಐತಿ ಮತ್ತೊಂದು ನೋಡಿರ್ತಿನಿ ಹೊಡ್ಕೊಂಡು ಬಂದು ಸಾರಮಾಡಿ ಮುಂದಿನ ಮುಂಗಾರಿಗ ಹೂಡಾಕ ಬರೊಹಂಗ ಮಾಡ್ಕೊ". ಅಂದವರೆ ಒಂದು ಮಾತು ಆಡದಂಗೆ ಹೊಂಟಬಿಟ್ರು.

ಗೊತ್ತಾನಾಯ್ಕನ ಹಿರಿಮಗ ನುಗ್ಗಾ ಕರುಗಳನ್ನ ಹಿಡ್ಕೊಂಡು ಸಾರಮಾಡಿದ. ಕರುಗಳನ್ನ ಮೇಯಿಸೋದು, ಮೇವತರೋದು, ನೀರಕುಡಸೋದು ಮಾಡ್ತಿದ್ದ. ಗೊತ್ತಾನಾಯ್ಕ ಕೂಲಿಮಾಡಿ ಒಂದಕ್ಕೆರಡರಂಗೆ ಗುತ್ತಗಿ ಹಿಡದು ದುಡಿದು ಕಾಸಿಗ ಕಾಸ ಮಾಡಿದ. ಕರಗಳು ದೊಡ್ಡೋವ ಆಗ್ತಿದ್ದಂಗೆ ಮೂರನೆ ವರ್ಷಕ್ಕೆ ದೀಪಾವಳಿ ಅಮವಾಸ್ಯೆ ದಿನ ಕಸಿಮಾಡೊ ಕಾಸಿಂಸಾಬಿ ಹತ್ರ ಹೋದವನೆ ಅರಿಸಿಣ, ಔಡ್ಲೆಣ್ಣೆ, ಕೂರಗಿಬಟ್ಲ ಒಯ್ದು ಹನಮಪ್ಪನ ಗುಡಿಮುಂದ ಪಾಡಾಗೆ ಮೇಯ್ಕೊಂಡಿದ್ದ ಹೋರಿಗಳ ಬೀಜಗಳನ್ನ ಹೊಡೆಸಿದ. ಕಾಸಿಂಸಾಬಿ ಮೂರಾಣಿ ತಗೊಂಡು ಹೋರಿಗಳನ್ನ ಬಿಟ್ಟ. "ನೋಡು ಗೊತ್ತಣ್ಣ, ಇನ್ನೊಂದು ಮೂರು ನಾಕ ತಿಂಗಳು ಕೈಯಾಗ ಹಿಡದ ಮೇಸ್ರಿ, ಹುಳ್ಳಿನುಚ್ಚು, ಹಸಿಹುಲ್ಲು ಮೇಸಬಿಡ್ರಿ ಅಮ್ಯಾಲನೋಡು ಹೆಂಗ ಹೊಡಿತಾವ ಒಂದುನಾಕದಿನ ಬಿಟ್ಟು ಮೂಗದಾರ ಪೋಣಿಸೋನ. ಹ್ಯಾಂಗಾರ ಕೈಯಾಗ ಹಿಡದ ಮೇಸಾಕ ನಿನ್ನ ಹಿರಿಮಗ ಬಂದಾನ ಈಗೇನ ಕಷ್ಟ ಇಲ್ಲಾ ನಿನಗ." ಹೇಳಿದ. ಗೊತ್ತಾನಾಯ್ಕಗ ಮಗ ನುಗ್ಲಗ ಸಾಲಿ ಕಲಸಬೇಕಂತ ಭಾರಿ ಆಶಿ ಇತ್ತು. ಎರಡು ವರ್ಷ ಇಸ್ಕೂಲಿಗ ಹ್ವಾದ್ರು ಒಂದು ಅಕ್ಷರ ಬರ್ಲಿಲ್ಲ. ಅದಕಂತ್ಲೆ ಮಾಟಣಗೇರಿ ಅಂದಾನಪ್ಪ ಮಾಸ್ತರು, ಕರದು ಹೇಳಿಂದ ಅವನನ್ನ ಬಿಡಿಸಿ. "ನಾನು ಅವಿದ್ಯಾವಂತ, ಮಗನೆ ನೀನಾರು ನಾಕ ಅಕ್ಷರ ಕಲ್ತಿಅಂತ ಅಂದ್ಕೊಂಡಿದ್ದೆ, ನೀನು ಒಂದು ಅಕ್ಷರ ಕಲಿಬಾರ್ದ" ಸಿಟ್ಟಿಂದ ಕಪಾಳಕ ನಾಕ ಬಾರಿಸಿದ. "ನಾ ಏನಮಾಡ್ಲಿ ಮೇಷ್ಟೆ ಕಲಿಸಲಿಲ್ಲಾ" ಅತ್ಕೊಂತ್ಲೆ ಅಂದ ನುಗ್ಗಾ. "ಕಲಿಲ್ಲಿದ್ದು ಪಾಡಾತು ಬಿಡು ನೀ ಒಬ್ಬನೆ ಏನ ಅಲ್ಲ ಮತ್ತಿನ್ಯಾರಾದ್ರು ಕಲ್ತಾರು". ಅಂದ್ಕೊಂಡು ತನ್ನ ಎರಡನೆ ಮಗ ಗೊಂದಾನಾಯ್ಕನ ಒಯ್ದು ಇಸ್ಕೂಲಿಗೆ ಸೇರ್ಸಿದ.



ಪೋಲಿಸರು ತಾಂಡಕ್ಕೆ ಬಂದದ್ದು

ಕಾಕಾಪುರದಾಗ ದುಡದು ಉಣ್ಣೋ ಜನರೆ ಹೆಚ್ಚಿದ್ರು. ಅದ್ರಾಗ ಒಂದಿಷ್ಟು ಜನ ದುಡದೋರ ಸಂಪತ್ತು ದೋಚಿಕೊಂಡು ಬರೊರು ಇದ್ರು. ಗೊತ್ತಿಲ್ದಂಗ ಹಾಡಹಗಲೇ ಮಂದಿ ಕಣ್ಣಾಗ ಮಣ್ಣಗೊಜ್ಜಿ ಲೂಟಿಮಾಡ್ತಿದ್ರು. ಕುರಿಮಂದೆ, ಜ್ವಾಳದ ಹೊಲಗಳು, ಶೇಂಗಾ, ಮೆಣಸಿನಕಾಯಿ ಕೈಗೇನ ಸಿಗತೈತೊ ಅದನ್ನ ಹೊತ್ಕೊಂಡ ಬರೋದ ಅವರ ಕಸಬಾಗಿತ್ತು. ಕೋಡಿಭೀಮ, ಕುಣಬಿಲಕ್ಕ, ಹಡಬಿಲಸಣ, ಜೀನಗ ಜೈಲುಸೇರಿಂದ ಅವರ ಶಿಷ್ಯಂದಿರಾದ ಕಾಣು, ಲಂಗೂರು ಜೀನುಬಾ ಮತ್ತು ಚಕ್ರಾನಾಯ್ಕ ಸೇರ್ಕೊಂಡು ಮಾಡದಿರೊ ಕೆಲ್ಸ ಒಂದಲ್ಲ ಎರಡಲ್ಲಾ. ಗೋಡಿ ಹೊಡಿಯೋದು, ಕದ ಮುರಿಯೋದು, ಬೀಗ ಎಗ್ಗರಿಸೋದು ಎಲ್ಲಾದ್ರಲೂ ಎತ್ತಿದಕೈ. ಒಂದ್ಸಲ ಕಾಕಪುರದಿಂದ ಪಶ್ಚಿಮಕ್ಕೆ ಹದಿನೈದು ಮೈಲಿ ದೂರದ ಸಂಬಾಪುರಕ್ಕ ಹೋದ್ರು. ಕಾಣು ಸಂಬಾಪುರದಲ್ಲಿರೊ ದೊಡ್ಡಮನಿ ಹುಡ್ಕೊಂಡು ಹೋಗಿ ಅಲ್ಲಿ ಮಂದಿ ವಾತಾವರಣ ತಿಳ್ಕೊಂಡ ಬಂದ. ದೊಡ್ಡ ಹಳೆಮನಿ, ಎತ್ತು,

ದನಕರುಗಳನ್ನ ನೋಡಿದ್ರ ಬಹಳ ಸಾವುಕಾರ್ರೇ ಇರಬೇಕು ಅಂದ್ಕೊಂಡು ಚಾಚೂತಪ್ಪದೆ ವರದಿ ಒಪ್ಪಿಸಿದ. ರಾತ್ರಿ ಹನ್ನೆಲ್ಡಕ್ಕ ಸರಿಯಾಗಿ ಗೋಡಿಗ ಕನ್ನ ಹಾಕೋದಾಗಿ ನಿರ್ಧರಿಸಿದ್ರು. ಮಂದಿ ಎಲ್ಲಾ ಮೂರ್ನೆಜಂಪು ನಿದ್ದಿಯೊಳಗ ಇಳಿಯೋ ಕಾಲ. ನಡುರಾತ್ರಿ ಸದ್ದಲ್ಲದಂಗೆ ಕನ್ನ ಹಾಕಿದ್ರು. ಕಾಣು ಹೊರಗ ಕಾಯೋನು, ಲಂಗೂರ, ಜೀನುಬಾ, ಚಕ್ರನಾಯ್ಕ ಗ್ವಾಡಿಹೊಡದು ಕಿಂಡಿಯೊಳಗಿಂದ ಜಿಗದು ಕೈಗಸಿಕ್ಕಿದ್ದನ ಬಾಚ್ಕೊಂಡು ರಾತ್ರಿದೇನಾರು ಉಳ್ಕೊಂಡಿದ್ರ ತಿಂದು ಉಂಡು ಇದ್ದದ್ದು ಬದ್ದದ್ದು ಎಲ್ಲಾ ಬಳ್ಕೊಂಡು ಓಡಬಿಡ್ತಿದ್ರು. ಅವರು ಎಷ್ಟು ಜೋರ ಓಡ್ತಿದ್ರಂದ್ರ, ಅರ್ಧಕ್ವಿಂಟಲ್‌ಚೀಲ ಹೊತ್ಕೊಂಡು ಊರಮಂದಿ ಬೆನ್ನಹತ್ತಿದ್ದರ ಅವರ ಕೈಗಸಿಗದಂಗೆ ಓಡಿ ಬಿಡ್ತಿದ್ರು. ನಾಕ ಜನರಾಗ ಮೂವರು ಒಳ್ಳೇ ಎದ್ದಾಳು, ಸುತ್ತ ಮುತ್ತಲ ಕುರುಬರ ಕುರಿಗಳನ್ನ ತಿಂದು ತಿಂದು ಒಳ್ಳೆ ತ್ವಾಳಾದಂಗಾಗಿದ್ರು. ಗ್ವಾಡಿ ಹೊರಗಿದ್ದ ಕಾಣು ಇದ್ದಕಿದ್ದಂಗ ಎಂದಿನ ತಮ್ಮ ಧನಿಯನ್ನ ತಗದು ಎಚ್ಚರಿಸಿದ. ಜೀನುಬಾ, ಚಕ್ರ ಗ್ವಾಡಿ ಜಿಗದು ಹಾರಿ ಓಡಿದ್ರು, ಲಂಗೂರಗ ಮಾತ್ರ ಮನಿಯಿಂದ ಹೊರಗ ಬರಾಕಾಗಲೇ ಇಲ್ಲಾ. ಎನಪ್ಪ ದೇವ್ರೆ ಮಾಡ್ಲಿ ಅಂತ ಯೋಚ್ನೆ ಮಾಡ್ದ. "ಯವ್ವ ಮಾಂಕಾಳಮ್ಮ ಯಾವುದಾದ್ರು, ಒಂದ ದಾರಿ ತೋರ್ಸು. ನಮ್ಮವ್ವ ಇವರ ಕೈಗೇನಾರ ಸಿಕ್ರೆ ಮುಗೀತ ನನ್ನ ಕತಿ" ಅಂತ ಯೋಚನೆ ಮಾಡ್ತಿರುವಾಗಲೇ ಸಣ್ಣಹತ್ತಿ ಬಿಡಸಿ ಒಟ್ಟಿರೊ ಕ್ವಾಣಿಕಾಣ್ತು. ಮೂರದಿನ ಅದ್ರಾಗೆ ಬಚ್ಚಿಟ್ಕೊಂಡು ಮನಿಯಾಗಿಂದ ಬಂಗಾರ ತುಂಬಿದ ಕೊಡಪಾನ ಹೊತ್ಕೊಂಡ ಬಂದಿದ್ದ. ಆ ಮನಿ ಮಂದಿ ಬ್ರಿಟೀಷ ಸರ್ಕಾರಕ್ಕ ಮನ್ನಿ ಸಲ್ಲಿಸಿದ್ಕ ಅರ್ಧ ಚಣ್ಣದ ಪೋಲಿಸರು ಕಾಕಾಪುರಕ್ಕೆ ಬಂದು ಕಾಣು, ಲಂಗೂರ, ಚಕ್ರನಾಯ್ಕ, ಜೀನೂಬನ ಹುಡಕಾಟ ನಡೆಸಿದ್ರು. ಕಾಕಾಪುರದಾಗ ಕಳ್ಳಭಟ್ಟಿ ಸಾರಾಯಿ ಮಾಡ್ತಿದ್ದ ಚೊಕ್ಲ, ಸುಗಣಾ, ಚೆನ್ನೀರಿ, ಚಾಮವ್ವ ರಾತ್ರೊರಾತ್ರಿ ತಿಪ್ಪಿಕೆದರಿ ನಡಕ ಕೊಳತ ಬೆಲ್ಲಾನ ಟ್ಯೂಬಿನೊಳಗ ತುಂಬಿ ಗಪ್ಪಮಾಡಿದ್ರು. ಭಟ್ಟಿಇಳಿಸಾಕ ಇಟ್ಟಿದ್ದ ಸ್ವಾರಿಗಳನ್ನ ಅಲ್ಲಲ್ಲೆ ಹೊಡದ ಚೂರಮಾಡಿದ್ರು.

ತಾಂಡದಾಗ ಒಬ್ಬ ಗಂಡಸಿಲ್ದಂಗ ಓಡಿಹೋಗಿದ್ರು ಸಿಕ್ಕೊರ್ನ ತಗೊಂಡೋಗಿ ಏರೋಪ್ಲೇನ್ ಹತ್ಸಿದ್ರು. ಬುದ್ದನಾಯ್ಕ, ಗೊತ್ತನಾಯ್ಕ, ಅವನ ತಮ್ಮ ಯಾರೊಬ್ಬರು ವಾರದಿಂದ ಮನಿಸೇರಲಿಲ್ಲಾ. ಅಡವಿ ಹೊಲ್ದಾಗ ಕೆಲ್ಸಮಾಡಿ ಹಗಲಲ್ಲಿ ದೊಡ್ಡಜ್ವಾಳದಾಗ ಅಡಗಿ ಕುಂತ್ಕೊಳ್ತಿದ್ರು, ರಾತ್ರಿ ಆದಿಂದ ರಾಗಿ ಹೊಲಗಳ ಮ್ಯಾರಿಗ ಬಂದು ಮಲಗ್ತಿದ್ರು. ಹದಿನೈದು ದಿನದ ಮ್ಯಾಲ ಜಿನೂಬನ ಪತ್ತೆ ಹಚ್ಚಿಂದ ಅಂವ ಯಾರ್‍ಯಾರ ಎಲ್ಲೆಲ್ಲದಾರಂತ ಬಾಯಿ ಬಿಟ್ಟ. ಪೋಲಿಸರು ಅವರನ್ನ ಹುಡಿಕಿ ತಗದ ಮ್ಯಾಲ ಊರಿಗ ಗಂಡಸರು ವಾಪಾಸಾಗಿದ್ರು. ಜಿನುಬಾ, ಚಕ್ರ, ಕಾಣು, ಲಂಗೂರ ನಾಕಜನರನ್ನ

ಹಿಂಡಲಗಾ ಜೈಲಿಗ ಒಯ್ದು ಹಾಕಿದ್ರು. ಎಟಹೊಡದ್ರು ಬಂಗಾರದ ಸುದ್ದಿ ಬಾಯಿ ಬಿಡಲೇ ಇಲ್ಲಾ. ಸೂಳಿ ಮಕ್ಕಳು ಹೊಡದದ ಹೊಡದಂಗ ರಬ್ಬರ್ ಉಬ್ಬೊಹಂಗ ಉಬ್ಬಿದ್ರೆ ವಿನಃ ಜುಪ್ ಅನ್ನಿಲ್ಲಾ. ಅದನ್ನ ಕಂಡ ಹಿಂಡಲಗಾ ಜೈಲಿನ ಬ್ರಿಟಿಷರ ಸಾಹೇಬ ನಾಕಮಂದಿದು ಹಿಮ್ಮಡಿನರ ಕಸಿಮಾಡಾಕ ಹೇಳಿದ. "ಒಳ್ಳೆ ಕುದರಿ ಓಡ್ದಂಗ ಓಡ್ತಿರಲ್ಲಾ, ಈಗ ಓಡ್ರಲೆ ಮಕ್ಕಳ್ರಾ. ಹಿಂಗಾಲಿನ ನರ ಕಸಿಮಾಡಿದ್ರ ಅಡ್ಡಾಡಾಕ ಸಹ ಆಗಂಗಿಲ್ಲಾ" ಅಂತಂದು ನಾಕಮಂದಿನರ ತಪ್ಪಿಸಿದ. ಹಿಂಡಲಗ ಜೈಲಿನಾಗ ಹತ್ತುವರ್ಷಕಾಲ ಆರೈಕೆ ಆದಿಂದ ಕಾಕಾಪುರ ಸೇರಿದ್ರು. ದೆವ್ವದಂತ ಇಡೀ ಕುರಿಗಳನ್ನ ಹೆಗಲಮ್ಯಾಲ ಹಾಕ್ಕೊಂಡ ಊರಬಿಳೊ ಮಟ ಓಡ್ತಿದ್ದ ಕಾಣು, ಲಂಗೂರ, ಚಕ್ರ, ಜೀನೂಬ, ನಾಯಿಬಡಿಯೊ ಕೋಲಾಗಿ, ದಿಕ್ಕೆಟ್ಟು ಊರ ಸೇರಿದ್ರು, ಒಂದುಕಾಲದಾಗ ಎದಿಲೆ ನಡಿತ್ತಿದ್ದ ಕಾಣು, ಲಂಗೂರ, ಚಕ್ರ, ಇವರೇನಾ ಅಂತ ಜನ ಮಾತಾಡತೊಡಗಿದ್ರು.

ಅವರು ಊರಸೇರಿ ತಿಂಗಳಾಗಿಲ್ಲಾ ಗೊತ್ತಾನಾಯ್ಕನ ಮನಿ ಮುಂದಿನ ಸೋನ್ಯಾನ ಹೇಣ್ತಿ ಉರ್ಲ ಬಿಕ್ಕೊಂಡ ಸತ್ತು ಹೋದ ಸುದ್ಧಿ ತಿಳಿದ ಪೋಲಿಸರು ಎಲ್ಡನೇ ಸಲ ಊರ ಉಸಾಬರಿಗ ಬಂದಿದ್ರು. ಸೋನ್ಯಾ ಅವನ ತಮ್ಮ ಗಬಡುನ ಹಿಡ್ಕೊಂಡ ಹೋಗಿ ಬಳ್ಳಾರಿ ಸೆಂಟ್ರಲ್ ಜೈಲಿನೊಳಗ ಕುಂದ್ರಸಿದ್ರು. ಸಾಲದಂತ ಊರಾಗ ಕೆಲಮಂದಿ ವಿಚಾರಣೆ ಮಾಡಿದ್ರು. ಗೊತ್ತಾನಾಯ್ಕನ ಗುಡಿಸಲು ಹಿಂದಿದ್ಕ ಅವನ್ನೆಳಕಂಡ ಹೋಗಿದ್ರು. ಆಗ ಅವನ ಕೊನೆಯ ಹುಡುಗ ಚೆನ್ನಿಂಗ ತೊಟ್ಲಾಗಿದ್ದ. ಬಾಣಿ, ಗೊತ್ತಾನಾಯ್ಕ, ಕೆಂಬವ್ವ, ಹಸನ್‌ಬಿ, ಕೆಂಚೀರಯ್ಯ ಎಲ್ಲರನ್ನೂ ಎಳ್ಕಂಡು ಹೋಗಿ ಕೂಡಿಹಾಕಿದ್ರು. ಬಾಣವ್ವಗ ಕುಂತು ಕುಂತು ಸಾಕಾದಾಗ ಸುಳ್ಳೆ ಮಲಗಿರೊ ಕೂಸನ್ನ ಚಿವುಟಿ ಅಳಸ್ತಿದ್ಲು. "ನಮ್ದೇನ ಕೊಡೋದು ತಗೊಳೋದಿಲ್ಲಾ ಯಾಕ ನಮ್ಮನ ತಂದ ಕೊಡ್ಯಾರೇನೊ" ಅಂತ ಹಳ ಹಳಿಸುತ್ತಿದ್ದಳು ಅವತ್ತಿಂದು ಕಾನೂನು ಹಂಗಿತ್ತು. ಮಂದಿ ಎದಿಯಾಗ ಹೆದರಿಕಿ ಹುಟ್ಟಿಸಾಕಂತ ಅವರು ಏನಮಾಡಾಕು ಸಿದ್ದರಿದ್ರು. ಸಂಜಿವರಿಗೆ ಕುಂತಿದ್ದೊರು ವಾಪಾಸನಡದು ಹೋಗೊ ಹೊತ್ತಿಗ ಸರ್ವೊತ್ತು ಆಗಿರತಿತ್ತು. ಅವಳ ಹಿರಿಮಗಳು ಗಮಣಿ, ಜ್ವಾಳದ ನುಚ್ಚಬೇಯಿಸಿ ನೀರನಂಗ ಮಾಡಿ ಎಲ್ಲರಿಗೂ ಒಂದೊಂದುತಾಟ ಉಣಿಸಿ ಮಲಗಿಸಿರತಿದ್ಲು. ಗೊತ್ತನಾಯ್ಕ ಬಾಣಿ ವಾಪಾಸು ಬಂದಾಗ ಉಳಿದಿರೋದನ್ನ ಗೆಬರಿ ತಿಂದು ಅಡ್ಡಾಗತ್ತಿದ್ರು.

ವಾರಕ್ಕ ಒಂದು ದಿನದಂಗ ಆರತಿಂಗಳ ಅಡ್ಡಾಡಿ ಸಾಕಸಾಕಾಗಿ ಹೋದ್ರು. ಯಾರೋ ಮಾಡಿದ್ಕ ಸುತ್ತು ಮುತ್ತನವರೆಲ್ಲಾ ಅಲೆದಾಡಬೇಕಾತು. ಸೋನ್ಯಾ, ಗಬಡುಗ ಮತ್ತ

ಮೂರತಿಂಗಳು ಜೇಲಿನೊಳಗ ಹಾಕಿ ಚೆನ್ನಾಗಿ ಜಡದು ಬಿಟ್ಟಿದ್ರು. ಗೊತ್ತನಾಯ್ಕನಿಗ ರೊಕ್ಕದ ಜರೂರು ಇದ್ದಿದ್ಕ ಕೋಡಿಸರದಾಗಿಂದ ದೊಡ್ಡ ಜಾಲಿಕೊನಿಗಳ ಬೀಳಿಸಿ ಸೀಳಿ ದೊಡ್ಡಹೊರಿ ಮಾಡ್ಕೊಂಡು ಹನ್ನೊಂದು ಮೈಲಿದೂರದ ಹಂಪಾಪುರ ಪಟ್ಟಣಕ್ಕ ಹೊತ್ಕೊಂಡ ಹೋಗ್ತಿದ್ದ. ಅವನ ಕೂಡ ಬಾಣವ್ವ. ದೊಡ್ಡಮಗ ನುಗ್ಗಾ ಎಲ್ಲಾ ಸೇರಿ ಹನ್ನೊಂದ ಮೈಲಿ ಕಟ್ಟಿಗಿ ಹೊತ್ತು ಸಾಗತಿದ್ರು. ಐದಾರು ಜಾಗದಾಗ ಇಳಿಸಿ ಎತ್ತಿ ಹಂಪಾಪುರ ಮುಟ್ಟೋದ್ರಾಗ ನೆತ್ತಿ ಉರಿಕೀಳತ್ತಿತ್ತು. ಇಡಿ ಪ್ಯಾಟಿಸುತ್ತಿ "ಕಟಗಿಬೇಕೆನ್ರವ್ವ ಟಗಿ" ಅಂತ ಗೊತ್ತಾ ಒಂದು ಓಣಿ, ಬಾಣಿ ಮತ್ತು ಅವಳ ಮಗ ಮತ್ತೊಂದು ಓಣಿ ತಿರಗಾಡಿ ಜುಕ್ಕ ಜುಲಮಿಯಿಂದ ಮೂರು ಹೊರಿಗಳನ್ನ ಹನ್ನೆಲ್ಡ ಆಣೆಗ ಮಾರಿಂದ ಬಿಡುಗಡೆ ಪಡಿತ್ತಿದ್ರು. ಒಂದು ದಿನ ಹಂಪಾಪುರದಾಗ ಐನಾತಿ ತಳಿ ಕುದುರಿ ಮ್ಯಾಲ ಕುಂತಿರೊ ಮಂದಿ ದಂಡು ಹೊಂಟಿತ್ತು. ಗೊತ್ತಾನಾಯ್ಕ, ಅವನ ಹೇಣ್ತಿ ಪಕ್ಕದಾಗಿದ್ದ ಖಾಲಿಜಾಗದಾಗ ಅಡಕ್ಕೊಂಡ ಕುಂತು ಆ ವಿಚಿತ್ರಮಂದಿನ ನೋಡಿದ್ರು. ಕೆಂಪು ಮಂಗ್ಯಾನಂತ ಮಕ, ಎಲ್ಲಾ ಒಂದೇ ತರ ಅವನಪ್ಪ ಬುದ್ದನಾಯ್ಕ ಹೇಳ್ತಿದ್ದ ಕೆಂಪುಜನ ಇವರೆ ಇರಬೇಕಂತ ಧೈರ್ಯ ತಂದ್ಕೊಂಡ. "ಹೌದು ಈ ಕೆಂಪು ಜನ ಇವತ್ತುಯಾಕ ಬಂದಾರಂತ" ಹೆಂಡತಿ ಮಾರಿ ನೋಡ್ದ. ಮಂದಿ ಅವತಾರ ನೋಡೆ ಅವರ ದೊಡ್ಡ ಹುಡುಗ ನುಗ್ಗಾ ನಡಗಾಕ ಹತ್ತಿದ್ದ. ಬಾಣಿಗ ಏನ ಗೊತ್ತು, ಅಂತ ಕೆಂಪ ಜನಾನ ಜೀವಮಾನದಾಗ ನೋಡಿದ್ದೆ ಮೊದಲ ಸಲ. ಹಿಂದಿಂದ ದೊಡ್ಡ ಗಲಾಟಿ ಸುರು ಆತು. ಒಂದು ಗುಂಪು ಜನ "ಕೆಂಪು ಮೂತಿ ಜನಗಳೆ ದೇಶ ಬಿಟ್ಟು ತೊಲಗಿ, ಸೈಮನ್ ದೇಶ ಬಿಟ್ಟು ತೊಲಗು" ಅಂತ ಕೂಗ್ತಾ ಹೊಂಟವರನ್ನ ಚದುರಿಸಾಕ ಕುದುರಿ ಮ್ಯಾಲಿನ ಜನ ತಮ್ಮ ಕೈಯಾಗಿನ ಚಾಟಿಯಿಂದ ದನಕ್ಕೆ ಬಾರಿಸೊಹಂಗ ಬಾರಸತಿದ್ರು.

"ಅಯ್ಯ ನನ್ನ ಹಣಿಬರವೆ ಅವರು ಅದ್ಯಾವ ಸೀಮೆ ಮಂದಿ ಅಂತೀನಿ" ಅಂತ ರಾಗ ಎಳದ್ಲು. ಕರ್ಲಳ್ಳಿಗ ಬಂದಾಗ ಕರ್ಲಳ್ಳಿಯಿಂದ ಮುಂದೊಂದು ಹಳ್ಳಿದಾಟಿ ಒಳಹಾದಿಗ ಬಂದ್ರ ದಾರಿ ಹತ್ರ ಅಕ್ಕಿತ್ತು. ಅದಕ್ಕೆ ಅದೇ ದಾರಿ ಹಿಡ್ಕೊಂಡು ಹೊಂಟಿದ್ರು. ಬ್ರೀಟಿಷರ ಕುರಿತು ತನಗ ತಿಳಿದಿರೊ ಸತ್ಯನ ಹೇಳಿದ ಗೊತ್ತನಾಯ್ಕ. "ಯಪ್ಪ, ಅವರೇನ ತಿಂತಾರ ಹೊಟ್ಟಿಗ. ಅವನವ್ನ ಹಂಗ ಕೆಂಪಗ ರಕ್ತದ ಹನಿ ಇದ್ದಂಗದಾರ" ಅಂದ ನುಗ್ಗ. "ಏನ್‌ತಿಂತಾರೊ ಗೊತ್ತಿಲ್ಲ, ಇಲ್ಲಿಯವರಲ್ಲಾ ಬಹಳ ದೂರದೊರು." ಅಂತ ಮಾತನಲ್ಲೇ ಅವರ ದೂರ ತೋರಿಸಿದ. ಹೊತ್ತು ಬಾತಿಗುಡ್ಡದ ಹಿಂದ ಇಳಿಯಾಕ ಮಾರದೂರಿತ್ತು. ನಂದಗೇರಿ ಹಳ್ಳದಾಗಿನ ಹನ್ಮಂತಭಟ್ರ ಹೊಲದ ಪಕ್ಕದ ಗೊರಪ್ಪನಗುಂಡಿ ಪಕ್ಕದಾನ

ಒಂದು ಸಣ್ಣ ಗುಂಡಿ ನೋಡಿದ್ದೆ "ಅಪ್ಪ ಈ ಗುಂಡಿಯೊಳಗ ಜಗ್ಗಿ ಮೀನ ಅದಾವ, ನಮ್ಮೂರ ಬೊಂಡಣ್ಣ ಮನ್ನಿನ್ಯಾಗ ಒಂದ ಜೋಳದ ಬೀಜದ ಚೀಲ ತುಂಬ ಹಿಡ್ಕೊಂಡು ಬಂದಿದ್ದ. ಇಳಿಯಾನೇನ ಗುಂಡಿಯೊಳಗ." ಅಂತೇಳಿ ಗುಂಡಿ ಬಿಚ್ಚಿದ. "ಹೌದಮಗ, ಮನಿಯಾಗ, ಸಾರಮಾಡಾಕ ಏನು ಇಲ್ಲ" ಅಂದ್ಲು ಅವನವ್ವ. ಅಪ್ಪ ಮಗನು ಹೊತ್ತಗಿತ್ತು ನೋಡದೆ ಕೈಉಡಕಿಯಿಂದ ಮೀನ ಹಿಡಿಯಾಕ ಗುಂಡಿಗ ಇಳದ್ರು. ನೀರು ನಡದವರಿಗಿತ್ತು. ಗೊತ್ತಾನಾಯ್ಕ ಛಳಿಯೊಳಗ ನಡಗ್ತಾ ದಂಡಿಯೊಳಗ ಬೆಳದಿದ್ದ ಆಪಿನ ಬುಡಕ ಕೈಹಾಕಿದ. ಎರಡ ಮೀಸಿಗಿರ್ಲು ಸಿಕ್ಕವು, ಅಂದವನೆ ದಂಡೆಗೆ ಬಿಸಾಕಿದ. ನುಗ್ಲ ತೆಲ್ಕೊಂತ ಮತ್ತೊಂದು ದಡಕ ಹೋದವನೆ ಒಂದು ಹೋರಿನೊಳಗ ಕೈಹಾಕದ ಅವನ ಕೈಗೊಂದು ಮೀನು ಬಡದಂಗಾತು. "ಅಪ್ಪ ಓಡಿಬಾ, ಔಲಮಟ್ಟೊ ಹಾವಮೀನ್ನೈತಿ" ಕೂಗಿದ. ಕೈಯಿಗ ಸಿಕ್ಕ ದೊಡ್ಡದೊಂದು ಹೊಟ್ಟಿಪರಕಿ ಮೀನ ಬಿಸಾಡಿ ಆಚೆದಡಕ ಈಜಿ ಹೋದ. "ಮೆತ್ತಗ ಕೈಬಿಡು, ಮುಂದಹೋಗಿ ನೋಡ. ಯಾವದಾರ ಬೋನದಾವೆನಂತ" ಅಂದವನೆ ಕೈಹಾಕಿದ. ಒಂದ ಕೇಜಿ ಆಟದಪ್ಪದ ಹಾವ ಮೀನು ಪಟ್ರಗುಡತಿತ್ತು. ಹ್ಯಾಂಗೊ ಮಾಡಿ ಬಿಗಿಯಾಗಿ ಹಿಡದು ಹೊರಗ ಎಳ್ಕೊಂಡು ಬಂದು ದಂಡಿಗ ಬಿಸಾಕಿದ. ಒಂದ ಕೇಜಿ ದಪ್ಪದ್ದು. "ಇನ್ನೊಂದನಾಕ ಹಿಡಿರಿ ಹೋಗನತ್ಲಾಗೆ ಹುಳಿಗಾತು ಹೊತ್ತಿದಿದ್ರೆ ಬೇಸ್ಯಾಗೆ ಹಿಡಬಹುದಿತ್ತು" ಅಂದ್ಲು ಬಾಣಿ. ಒಂದೆರಡ ಕಲ್ಲಮೀನು ಒಂದೆರಡು ನುಣಿಗ್ಯ, ಒಂದು ಅರ್ಧಕೇಜಿದ ಗೊದ್ಲಿ ಮೀನು ಸಿಕ್ಕಿದ್ದೆ. ಗೊತ್ತಾನಾಯ್ಕ "ಸಾಕನಡಿರಿ ನಿಮ್ಮ, ಥಂಡಿಯಾಗಾಕ ಹತ್ತು" ಗುಂಡಿಯೊಳಗಿಂದ ಮೇಲ ಬಂದು ಎದಿ ಬಕ್ಕಣದಾಗಿಂದ ಒಂದ ಕೂರಿ ಬೀಡಿ ತಗದು ಹಲ್ಲಿನೊಳಗ ಕಚ್ಚಿ ಕಡ್ಡಿಗೀರಿ ಹೋಗಿ ಉಗಳ್ತಾ ಧೋತ್ರ ಉಡತೊಡಗಿದ. ನುಗ್ಲಾ ಹಾ... ಹೂ ... "ಎನಥಂಡಿ ಐತಪ್ಪ" ಅಂತ ತನ್ನ ಚಣ್ಣ ತೊಟ್ಕೊಂಡವನೆ ಅವನಪ್ಪನ ಟವಲಿನೊಳಗ ಕಟ್ಟಿದ ಮೀನ ಗಂಟ ಹೊತ್ಕೊಂಡ ಹೊಂಟ.

ಗೊತ್ತಾನಾಯ್ಕ ಹಿಂದಲೂರಾಗೆ ಉಳ್ಕೊಂಡು ಒಂದು ಬಾಟಲಿ ಹೆಂಡ ಏರಿಸಿಕೊಂಡು ಬಂದ. ಅಷ್ಟೊತ್ತಿಗಾಗಲೇ, ಮೀನ ತಿಕ್ಕಿ ಚಲ್ಪ ಹೊಟ್ಟಿಯೊಳಗಿನ ಹೊಲಸು ತಗದು ಹುಣಸಿಹುಳಿ, ಕೆಂಪಮೆಣಸ ಮುಂದಮಾಡಿ ಸಾರ ಮಾಡಿದ್ಲು ಬಾಣವ್ವ. ಹುಡ್ರು ಕೆಲವರು ಮಕ್ಕೊಂಡಿದ್ರು ಬಾಣವ್ವ, "ಎ ಗಮಣು ಹುಡುಗ್ರನ ಎಬ್ಬಿಸು ಉಪಾಸ ಮಕ್ಕೊಂಡಾವ ಉಣ್ಣಲಿ" ಅಂದ್ಲು. "ಮಕ್ಕೊಂಡೋರನ್ನ ಏನ ಎಬ್ಬಿಸ್ತಿ ಬಿಡವ್ವ ಮುಂಜಾನೆ ಉಣ್ತಾರೆ" ಗೊತ್ತಾನಾಯ್ಕ ಮಗಳಿಗೆ ಹೇಳಿದ. ಒಬ್ಬನೆ ಅರ್ಧಕೇಜಿ ಮೀನು ಮೂರಮುದ್ದಿ ಉಲ್ಡಿಸಿ ಕೈ ತೊಕ್ಕೊಂಡೆದ್ದ.



ದೀಪಾವಳಿಯ ದಿನದಂದು

ಕಟುವಾನಾಯ್ಕನಿಗೆ ಒಂದರ ಮೇಲೊಂದರಂಗೆ ಆರು ಹುಡುಗಿಯರಾದ್ರು. ಕಡೀಗೊಬ್ಬ ಗಂಡ ಹುಡುಗ, ಬೂಸಾ ಅನ್ನೊ ಹುಡುಗ ನಾಕ ವರುಷ ಬದುಕಿ ತೀರ್ಕೊಂಡ. ಕಟುವಾ ಮತ್ತವನ ಹೇಣ್ತಿ ಚಾಂವಿಬಾಯಿಗ ಗೊತ್ತಾನಾಯ್ಕನ ಸಂಸಾರ ಕಂಡು ಹೊಟ್ಟಿ ಉರಿಯತೊಡಗಿತು. ಅವನಿಗೆ ಹತ್ತ ಮಕ್ಕಳು ಅದ್ರಾಗ ಏಳಗಂಡು. ನನಗ ಒಂದೂ ಇಲ್ಲಾ ಅಂದವನೆ ನಾಣೂರಟ್ಟಿ ಚೌಡಾನಾಯ್ಕನ ಮಗಳು ಬಸಂತಿಯನ್ನ ಲಗ್ನ ಆಗೆ ಬಿಟ್ಟ. ಆಕೀಗೂ ಒಂದರ ಮ್ಯಾಲೊಂದರಂಗೆ ಎರಡ ಹೆಣ್ಣ ಆದ್ವು. ಮೀಟಿಬಾಯಿಗ ಎಲಿಲ್ಲದ ಸಿಟ್ಟು. "ಥು ಹಾಳಹೆಂಗಸರು, ನನ್ನ ಮಗನಿಗ ಗಂಡು ಮಕ್ಕಳನ್ನೆ ಹೆತ್ತ ಕೊಡ್ಲಿಲ್ಲಾ ಅವನ ಕರ್ಮಾನೆ ಹಂಗೇನೊ ನಾನು ಹಂಗೇ ಬಿಡೊಳಲ್ಲ. ನೂರ ಬರಲಿ ನೂರ ಹೋಗಲಿ ಇನ್ನೊಂದು ಮದ್ವಿಮಾಡ್ತಿನಿ. ಇದ್ದ ಒಬ್ಬ ಮಗಳ ಹೊಟ್ಟಿಯೊಳಗ ಒಂದು ಹುಳ ಆಗಲಿಲ್ಲಾ" ಅಂತ ಕೊರಗತೊಡಗಿದ್ಲು.

ತನ್ನ ಹಿರಿಮಗ ಗೊತ್ತಾನಾಯ್ಕ ಮಕ್ಕಳ ಕಟ್ಕೊಂಡು ದುಡಿತಿರೋದು ಸಹಿಸಾಕ ಆಗ್ಲಿಲ್ಲಾ. ತನ್ನ ಕಿರಿಮಗನಿಗೆ ಒಂದು ಗಂಡ ಕೂಸಿದ್ರ ಸಾಕಿತ್ತು. ಬರಿ ಹೆಣ್ಣ ಬೋಳ್ಯಾರನ್ನ ಕಟ್ಕೊಂಡು ನರಕಕ್ಕ ಹೋಗ್ತಾನಂವ ಅಂತ ಕೊರಗತೊಡಗಿದಳು.

ಕಾಕಾಪುರದಾಗ ದೀಪಾವಳಿದೊಂದು ವಿಚಿತ್ರ ಮೆರಗು. ಹರೆಯದ ಹುಡುಗಿಯರು ತಿಂಗಳ ಮೊದಲಿಂದ್ಲೆ ಪ್ರತಿದಿನ ಸಂಜಿಗ ಉಂಡು ದೀವಟಿಗೆಗ ಆಗೋ ಆಟು ಎಣ್ಣಿತಗೊಂಡು ತಾಂಡದದುರ್ಗವ್ವನ ಗುಡಿಮುಂದ ಹಾಜರಿರ್ತಿದ್ರು. ಮನಿಗೊಬ್ಬರೊ ಇಬ್ಬರೊ ಹುಡುಗಿಯರು ಬಂದು ರಾತ್ರಿ ಹನ್ನೆರಡು ಒಂದರ ಮಟಾನು ತಮ್ಮ ಭಾಷೆ ಹಾಡು ಅದಕ್ಕ ತಕ್ಕನಂಗ ನೃತ್ಯ ಮಾಡ್ತಿದ್ರು. ಅದನ್ನ ನೋಡಾಕ ಕುಡದ್ರು, ಪ್ರಜ್ಞೆ ಇರೊ ಗಂಡಸರು, ಹುಡುಗರು, ಹೆಂಗಸರು ಬಂದು ಸೇರ್ತಿದ್ರು. ಹುಡುಗಿಯರ ಗುಂಪಿನ ನಡುವೆ ಸಣ್ಣ ಸಣ್ಣ ಹುಡ್ರು ಹೋಗಿ ಕುಂತ್ಕೊಂಡು ಅವರು ಕುಣ್ಕೊಂತ ತಿರಗೊ ಹಂಗಂಗೆ ತಿರಗಾಡ್ತಿದ್ರು. ಆ ಹುಡುಗಿಯರ ಡಾನ್ಸ ನೋಡಾಕ ಬಂದ ಗಂಡ ಹೈಕ್ಳು, ನಾವೇನ ಬರಿ ಅವರನ್ನ ನೋಡೋದ ನಡ್ರಲೇ ಅಂತ, ಕಲ್ಲು, ದಿಬ್ಬ ಲೆಕ್ಕಿಸ್ದೆ ಚಂದ್ರನ ಬೆಳಕಿನೊಳಗೆ ಒಲಿಯಾನ ಬೂದಿ ತಂದು ಅಡ್ಡಗೆರಿ ಹಾಕಿ, ಕಬ್ಬಡಿ ಆರಂಭಿಸುತಿದ್ರು. ಅದೊಂದೆ ಮಧ್ಯದ ಗೆರಿ ಹಿಂದು ಇಲ್ಲಾ ಮುಂದು ಇಲ್ಲಾ. ಒಂದುಹುದ್ರಿ ಗೆರಿದಾಟಿ ಹೊದ್ನಂದ್ರ ಮತ್ತೊಂದು ಕಡಿಯವರು ಅರ್ಧ ಊರಿಗ ಓಡ್ತಿದ್ರು. ಅವರನ್ನ ಬೆನ್ನಹತ್ಕೊಂಡು ಹೋಗಿ ಮುಟ್ಟಿ ಬರಾಕು, ಇಲ್ಲಾ ಅವನೆ ಔಟಾಗಬೇಕು. ಅರ್ಧಮಂದಿ ಇವರ ಆಟ, ಅರ್ಧಮಂದಿ ಹುಡುಗಿಯರ ಡಾನ್ಸ್ ನೋಡ್ತಿದ್ರು. ಒಂದೊಂದುದಿನ ಹುಡುಗರು ಹುಡುಗಿಯರು ಸೇರಿ ಕಬಡ್ಡಿನೊ ಇಲ್ಲಾ ಒಬ್ಬರ ಮ್ಯಾಲ ಒಬ್ಬರು ಹತ್ತೊ ಅಂಡೋಲ್ ಪಂಡೋಲ್ ಆಟ ಆಡ್ತಿದ್ರು. ಕೆಲಮಂದಿ ಹಿರಿಯರಿಗದು ಇಷ್ಟ ಆಗ್ತಿರಲಿಲ್ಲಾ. "ಏನ ಮಾಡ್ತಾರ್ರಪ್ಪ, ಕುಣೇರಿ ಅಂದ್ರ ಬಿಟ್ಟಬಿಟ್ಟು ಗಂಡುಹುಡುಗರ ಜೊತಿಗ ಕಬಡ್ಡಿ ಆಡ್ತಾರ, ಹಾಳಾತ್ರಪ್ಪೋ ಜಗತ್ತು" ತಮ್ಮ ಪಾಡಿಗ ತಾವ ಗೊಣಗಿಕೊಂಡು ಸುಮ್ಮನಾಗ್ತಿದ್ರು. ಹುಡುಗರು ಹುಡುಗಿಯರು ಇಡೀ ರಾತ್ರಿ ದಂಡುದಂಡಾಗಿ ಇರೋದು ಗಂಡು ಹೆಣ್ಣು ಒಂದೇ ಅನ್ನೊ ಹಾಗಿತ್ತು.

ದೀಪಾವಳಿ ಆರಂಭ ಆತಂದ್ರ ಎಲ್ರೂ ಹೊಸ ಅರವಿ ಉಟ್ಕೊಂಡು ಬಲಿಪಾಡ್ಯದ ದಿನವಂತು ಮುಂಜಾನೆ ಆರಗಂಟಿ ಸುಮಾರಿಗೆ ಒಂದುವಾರ ಮುಂಚೆ ಇಡೀ ಊರಾಗ ಸಾಬ್ರು, ಊರ ಮನಿಯೋರು, ಅವರಿವರಂತ ಭೆದ ಇಲ್ದೆ ಹಂಚಿಕಿ ಎತ್ಕೊಂಡ ಹೋಗಿ ಶನಿವಾರದ ಕುರಿಸಂತ್ಯಾಗಿಂದ ಗಡದ್ದಾದ ಒಂದ ಟಗರ ಕೊಂಡ್ಕೊಂಡು ಬಂದು

ಬಲಿಕೊಟ್ಟು ಅಮಾವಾಸ್ಯೆದಿನ ಪ್ರತಿಯೊಬ್ಬರು ರಕ್ತದ ಮಕನೋಡಿ ತಮ್ಮ ಎಡಗೈಕಿರು ಬೆಳ್ಳನ್ನ ರಕ್ತದಾಗ ಅದ್ದಿ ಬಲಿಪೂಜೆ ಮಾಡ್ಕೊಳ್ತಿದ್ರು.

ಮಾಂಸನ ಪಾಲಮಾಡಿ ಹಟ್ಟಿಹಿರಿನಿಗೊಂದು ಎಲಬು, ಕಾರಭಾರಿಗೊಂದು, ಇನ್ನ ಉಳಿದವುಗಳನ್ನ ಯಜಮಾನರಿಗೊಂದೊಂದು ಹಾಕ್ತಿದ್ರು. ಹೊಟ್ಟೆಯೊಳಗಿನ ಕಳ್ಳುಪಚ್ಚಿಯನ್ನ ಕೆರಿಗ ಒಯ್ದು ನೀರಹಾಕಿ ಸರೀಗ ತೊಳದು ಸಳೋಯಿ* ಮಾಡಿ, ಸಂಜೀಗ ಹೆಂಡದ ಜೊತಿಗ ಹಂಚ್ಕೊಂಡು ತಿಂದು ಇಡೀ ಊರೋರು ಉಂಡಿಂದ, ಮನಿಗೊಬ್ಬ ಹುಡುಗಿ ದೀಪ ಹಿಡ್ಕೊಂಡ ತಾಂಡೆದುರಗವ್ವನ ಗುಡಿಗ ಸೇರ್ತಿದ್ಲು. ಊರ ಹುಡುಗಿಯರೆಲ್ಲಾ ಸೇರಿದ ಮ್ಯಾಲ ಹಟ್ಟಿನಾಯ್ಕನ ಮನಿಗಹೋಗಿ ಹೊಸೋರ್ಷ ದೀಪಾವಳಿಯಲ್ಲಿ ತಂದೆ ನಿನಗೆ ಒಳ್ಳೆದಾಗ್ಲಿಂತ ಕೇಳ್ಕಂತೀನಿ ತಾಯಿ ನಿನಗೆ, ಅಣ್ಣ, ತಮ್ಮ, ಚಿಕ್ಕಪ್ಪ ಹಿಂಗ ಪ್ರತಿಯೊಬ್ಬರ ಹೆಸರು ಅವರ ಪೂರ್ವಜರ ಹೆಸರ ಕರದು ಅವರಿಗೂ ಒಳ್ಳೆದಾಗ್ಲಿಂತ ಬೇಡ್ಕಂತಿದ್ರು. ಅವರು ಹೇಳಿಯಾದ ಮ್ಯಾಲ ಮನೆಯ ಯಜಮಾನ ಬಂದು ಪ್ರತಿಯೊಬ್ಬರಿಗೂ ಎಲ್ಡುಪೈಸಾ, ಮೂರಪೈಸ, ದೊಡ್ಡೋರಿಗೆ ಐದ ಪೈಸಾ ಕೊಡ್ತಿದ್ದ. ಇಡೀ ಊರಾಗ ಒಂದು ಮನಿ ಬಿಡ್ದಂಗ ಮೇರಾ ಮುಗಿಸೋದ್ರಾಗ ಬೆಳಕ ಹರಿತಿತ್ತು. ದೀಪಗಳನ್ನ ಗುಡಿಯಾಗಿಟ್ಟು ಕುಣಿತಿದ್ರು. ಕೆಲಹುಡುಗರು ಹುಡುಗಿಯರು ಹಾಕ್ಕೊಂಡಿರೊ ಹೊಸ ಅರವಿ ನೋಡ್ತಾ ಜೊಲ್ಲು ಸುರಸಿಕೊಂಡು ಅವರ ಹಿಂದಿಂದ ತಿರಾಗಾಡಿದ್ರು, ಮತ್ತ ಕೆಲವರು ನಾಡಸುದ್ದಿ ಮಾತಾಡ್ತಾ ಹೊತ್ತ ಕಳೀತಿದ್ರು. ಊರಾನ ಯಜಮಾನ್ರು ಮಾತ್ರ ತಿಂದುಂಡು ಸಂಪಾಗಿ ನಗಾರಿ, ಕಂಚಿನ ತಟ್ಟೆಗಳನ್ನ ಹಿಡದು ಸಂಜಿಮುಂದ ಹೆಂಗಸರು ಗಂಡಸರು ದುರ್ಗವ್ವನ ಗುಡಿಮುಂದ ಜನಜಾತ್ರಿ. ಗೊತ್ತನಾಯ್ಕ ಕರ್‍ರಗಿದ್ರು ಚಿಗರಮೀಸಿ, ಹರಿತವಾದ ಕಣ್ಣಿದ್ದು ಯಾವುದೇ ಹೆಣ್ಣು ಒಂದೆಲ್ಡಸಲ ತಿರುಗಿ ನೋಡೊ ಆಕರ್ಷಣೆ ಇತ್ತು. ದೊಡ್ಡೋರೆಲ್ಲಾ ನಗಾರಿ ಮುಂದ ಕುಂತು ಹಾಡ ಹೇಳ್ತಿದ್ರ ವರ್ಷಕ ಒಂದುದಪ ಹೆಂಗಸರೆಲ್ಲಾ ಕುಣಿಯೋದು, ಹಾಡು ಹೇಳೋದು ಮಾಡ್ತಿದ್ರು. ಗಣಿಯಜ್ಜ ಯಾವಾಗ್ಲು ನಗಾರಿ ಬಾರ್‍ಸೋನು, ಹಾಡಿಗೆ ತಕ್ಕಂಗ ತಾಳ ಹಾಕೋದು ಅವನು ಮಾತ್ರ ಕಲ್ತಿದ್ದ. ಇಡೀರಾತ್ರಿ ನಿದ್ದಿ ಇಲ್ದೆ ನಗಾರಿ ಬಾರಿಸಿ ಬಾರಿಸಿ ಸುಸ್ತಾಗಿದ್ದ. "ಏ ತಮ್ಮ ತಗೊ ಬಾರೊ" ಅಂತೇಳಿ ನಗಾರಿ ಬಾರಿಸೊ ಕೋಲಗಳನ್ನ ಗೊತ್ತಾನಾಯ್ಕನ ಕೈಗ ಕೊಟ್ಟ. ಹಂಗುಹಿಂಗು ತಾಳದ ಲಯವಿದ್ದ

* ಸಳೋಯಿ - ಬೋಟಿ.

ಗೊತ್ತನಾಯ್ಕ ಗುಂಪಿನಡಕ್ಕ ಕುತ್ಕೊಂಡು ನಗಾರಿ ಬಾರಿಸತೊಡಗಿದ, ತಲಿಗೊಂದು ಟವೇಲು ಸುತ್ತಿ, ಬಿಳಿಯಂಗಿ, ಬಿಳಿಧೋತ್ರ, ಚಿಗರಮೀಸಿ ಬೇಕಂತ್ಲೆ ಹೆಂಗಸರು ನೋಡ್ಡೊಹಂಗಿದ್ದ. ಕುಣಿತಿದ್ದ ಹೆಂಗಸರು ಯಾವುದಕ್ಕೊ ನಿಲ್ಲಿಸಿದ್ರು. "ಅಯ್ಯ ಅಕ್ಕ ಗೊತ್ತನಾಯ್ಕ ನಗಾರಿ ಹೊಡಿಯಾಕ ಹತ್ಯಾನ ನೋಡಾನ ಬರ್ರಿ" ಅಂತೇಳಿ ನಿಶಾನಿ ಕಟ್ಟಿ ಮುಂದ ಸಾಲಾಗಿ ನಿಂತ್ರು. ಗೊತ್ತಾನಾಯ್ಕ ಹೊಡಿತಾ ಹೊಡಿತಾ ಅಚಾನಕ್ ಮಕ ಮ್ಯಾಲ ಮಾಡ್ದ ಅವನ ಭಂಗಿಯನ್ನ, ಕೈ ಮೇಲೆತ್ತಿ ನಗಾರಿ ಹೊಡಿಯೋದನ್ನ ಮೈ ಮರತ ನೋಡ್ತಿದ್ದ ಚೆಂಪಿ ಕಡೀಗ ದೃಷ್ಟಿಹೋತು. ಅವನ ಮೈ ಕಾವೇರಿ ತಾಳ ತಪ್ಪದಂಗಾತು. ಕಣ್ಣೋಟ ಬದಲಿಸಿದ ಯಾಕೊ ಮತ್ತ ಮತ್ತ ನೋಡಬೇಕ ಅನಿಸಿತು. ಆಕಿ ನೋಟ ಬದಲಿಸಿರಲಿಲ್ಲಾ. ಅವನು ತಪ್ಪು ತಾಳಹಾಕಿದ್ದ. "ಯಾಕೋ ತಮ್ಮ ಇಟೊತ್ತಿಂದ ಪಸಂದಾಗೆ ಬಾರಸ್ತಿದ್ದೆ ಏನಾತು" ಕೇಳಿದ ಗಣಿಯಜ್ಜ. ಗೊತ್ತನಾಯ್ಕ ಮಾತಾಡಲಿಲ್ಲಾ. ಆಕಿ ಕಡೀಗ ನೋಡೋದ ಬಿಟ್ಟು ಹಾಡಿನೊಳಗ ಹೋಗಾಕ ಪ್ರಯತ್ನ ಮಾಡಿದ. ಮನಸ್ಸು ತನ್ನ ಹಿಡಿತದಿಂದ ತಪ್ಪಿಸಿಕೊಂಡು ಲಂಗುಲಂಗಾಮಿಲ್ಲದ ಕುದುರಿ ಹಂಗ ಓಟಕಿತ್ತಿತ್ತು. ಏನಾರ ಎಡವಟ್ಟು ಆದೀತಂತ ಹಾಡುಹೇಳೊ ನೆಪಮಾಡಿ ಚೆಂಪಿ ಕಡೀಗ ನೋಡತೊಡಗಿದ. ಇಬ್ಬರು ಮೈಮರತು ಒಬ್ಬರನೊಬ್ಬರು ನೋಡ ತೊಡಗಿದರು. ತಮ್ಮ ವ್ಯವಹಾರದ ನಡಕ್ಕ ಯಾರು ಇಲ್ಲವೇ ಇಲ್ಲಾ ಅನ್ನೊ ತೀರ್ಮಾನ ತಗೊಂಡಂಗಿತ್ತು. ಇಬ್ಬರ ಎದಿಯೊಳಗ ಕಿಡಿಯೊಂದು ಹತ್ಕೊಂಡಿತ್ತು. ಚೆಂಪಿ ಚೆಂದುಳ್ಳಿ ಚೆಲುವಿ, ಅಷ್ಟೇನು ಗಿಡ್ಡಲ್ಲದ ನಿಲುವು, ಕೆಂಪಗಿನ ಮೈಬಣ್ಣ, ಮೂರ ಮಕ್ಕಳ ತಾಯಿ ಆದ್ರೂ ಚಂಪಿ ಮಾತ್ರ ಮದ್ವಿಯಾಗದ ಹದಿನಾರರ ಹರೆಯದ ಹುಡುಗಿಯಂಗ ಕಾಣ್ತಿದ್ಲು. ಕೆಂಪು ಲಂಗ, ಅದಕೊಪ್ಪುವ ಕುಬಸ, ಕೆಂಪು ಓಡ್ನಿ ಬೆಳ್ಳಿನಾಣ್ಯ, ಕಾಚುಗಳನ್ನು ಹಾಕಿ ಹೊಳಿಯೊ ಹಂಗ ಮಾಡಿರೊ ಒಡ್ನಿಗ ಬೀಳಬಾರದಂತ ಹೇರ್ ಪಿನ್ನ ಹಾಕಿ ಸಿಗಸಿಕೊಂಡಿದ್ಲು. ಎರಡು ಕಡೀಗ ಎರಡ ತೊಂಡ್ಲು. ಮದುಮಗಳಂಗ ಕಾಣ್ತಿದ್ಲು. ಗೊತ್ತನಾಯ್ಕನ ನೋಡಿ ಒಂದ ಸಲ ನಕ್ಕಳು. ಗೊತ್ತನಾಯ್ಕಗ ದಿಕ್ಕು ತಪ್ಪಿ ಹೋತು. ಸೇವಾಬಾಯನ ಮಟ್ಟಿನೊಳಗ* ಸೇರಿ ನಗಾರಿಬಾರಿಸ್ತಾ ದೇವರ ಭಜನೆ ಮಾಡ್ತಿದ್ದೋರು ಕುಂತ್ಕೊಂಡಹತ್ರ ತೊಗಡಿಸ್ತಾ, ಒಂದೆಲ್ಡ ಹಾಡ ಹೇಳಿ ಅಲ್ಲಲ್ಲೇ ಬಿದ್ಕೊಳ್ಳೋರು ಯಾರೊ ಅರ್ಧ ಕಣ್ಣು ಮುಚ್ಕೊಂಡ ಗೋಡಿಗ ಒರಗಿ ಅರ್ಧಂಬರ್ಧ ಹಾಡು ಹೇಳೋರಯಾರೋ ಬೆಳಗಾಗೊತನಕಾನೂ ಹಾಡು ಕುಣಿತ ಊರಾಗ ಇರ್ತಿತ್ತು. ಯಾವ ಅಹಿತಕರ ಘಟನೆಗೆ

* ಮಟ್ಟೊ - ಗುಡಿ.

ಆಸ್ಪದಾನೆ ಇರ್ಲಿಲ್ಲಾ. ಅದಾದಮ್ಯಾಲ, ಹುಡುಗಿಯರು ಹೋಗಿ ಮಾರಿತೊಳ್ಕೊಂಡು ಚೂರು ಪಾರು ಕೆಲ್ಸ ಮಾಡಂಗಿಲ್ಲಾ ಹಟ್ಟಿಹಿರಿಯನ ಮನಿಂದ ಒಬ್ಬ ಕೂಗ್ತಾ ಬಂದೆ ಬಿಟ್ಟ "ಹೂವ ಹರಿಯಾಕ ಎಲ್ಲಾ ಹುಡುಗಿಯರು ದೇವಸ್ಥಾನದ ಮುಂದ ಬರಬೇಕಂತ್ರವ್ವ" ಕೂಗಿ ಹೇಳ್ತಿದ್ದ. ಕೈಯಾಗೊಂದೊಂದು ಹಣ್ಣು, ಒಣಕೊಬ್ಬರಿ, ಮೈಸೂರುಪಾಕು, ಲಾಡು, ರಸಗುಲ್ಲಾ, ನಾನಾ ನಮೂನಿ ಸಿಹಿ ಕಟ್ಕೊಂಡು ಹೊಂಟಬರ್ತಿದ್ರು. ಊರ ಮುಂದಿನ ಹೊಲಗಳಲ್ಲಿರೊ ಗುರೆಳ್ಳಹೂ, ತೊಂಡಿಸೊಪ್ಪಿನಹೂ, ಹುಲ್ಲಿನಹೂ, ಯಾವ್ಯಾವ ಹೂ ಸಿಗ್ತಾವೊ ಅವೆಲ್ಲವನ್ನ ಕಿತ್ಕೊಂಡು ಪುಟ್ಟಿತುಂಬ್ಕೊಂಡ ಬರ್ತಿದ್ರು.

ಮುಂಜಾನೆ ನಸಕಿನೊಳಗೆ ಕಸ ಸಗಣಿ ಒಂದೇತಾಗ ದುಂಡಗಮಾಡಿ ಜ್ವಾಳ ಹಸನಮಾಡೊ ಮರ ಮತ್ತ ರಾತ್ರಿ ಮಾಂಸದ ಸಾರ ಬಡಸಿದ ಸೌಟನ್ನು ತಗೊಂಡು ಮನಿಯಾನ ಚಿಕ್ಕ ಹುಡುಗ "ಅಲ್ಲಿ ಉದ್ರು ಇಲ್ಲಿ ಉದ್ರು ತುರುಸೋ ಜೀವಿ ಹೊರಗ ಕುಂದ್ರು" ಅಂತ ಸಾಮಾನ್ಯ ತಿಳಿವಳಿಕೆಯೊಳಗ, ಎತ್ತಗಳಿಗ ಹತ್ತೊ ಉಣ್ಣಿ ಓಡಿಸೋ ಪದ್ಧತಿ ಅಂತ ಹಿರಿಯರು ಹೇಳ್ತಿದ್ರು. ಆದ್ರ ಮಂದಿ ತಮ್ಮತಮ್ಮೊಳಗೆ ಅನ್ನೋದೇನಂದ್ರ ರಾತ್ರಿ ಲಕ್ಷ್ಮಿ ಪೂಜಿಮಾಡಿಂದ, ಲಕ್ಷ್ಮಿ ಶೆಟ್ಟಿಮನಿ ಬಿಟ್ಟು ಲಮಾಣಿಗರಹತ್ರ ಬಂದಾಕಿನ ದರಿದ್ರಜನ ಅಮಂಗ್ಲ ಮಾಡೋದ್ರ ಮೂಲಕ ಹೊರಗ ಓಡಿಸಿದರು. ಅಲ್ಲಿಂದ ದನದ ಕೊಟ್ಟಿಗೆಯೊಳಗಾರು ಉಳ್ಕೊಂಡೇನು ಈ ಮಂದಿಗ ಹಸುಗಳಂದ್ರ ಭಾಳ ಪ್ರೀತಿ ಅಂತ ಗೊಂದ್ಲ್ಯಾಗ ಕುಂತ್ರ ಬೆಳಗಾ ಮುಂಜಾನೆ ಐದಗಂಟೆಗ ಮಾಂಸದಸಾರ ಬಡಿಸಿದ ಸೌಟು ಮರಬಡದು ಹೀಯಾಳಿಸಿ ಹೊರಗ ಓಡಸ್ತಿದ್ರು. ಅದಕ್ಕ ಲಮಾಣಿಗರು ಊರೂರು ಅಲದು ಕೂಲಿನಾಲಿ ಮಾಡ್ತಾ, ಉಪ್ಪಮಾರಿ, ಕಟಗಿ ಮಾರಿದ್ರು ಉದ್ಧಾರ ಆಗವಲ್ರು. ಗೋವಿಂದನಾಯ್ಕ ತನ್ನ ಅನುಭವದ ಕತಿಹೇಳಿದ್ದ. ಮಂದಿ ವಾಜ ನಿಲ್ಲಿಸಿದ್ದೆ ಬೀಡಿಸೇದತೊಡಗಿದ್ರು. ಹಿಂಗ ಕತೆಯ ನಂತರ ಒಂದು ಕತೆಯನ್ನು ಹಾಡನಲ್ಲೇ ಹೇಳೊ ನಿಪುಣರು ಈ ಮುದುಕರು.

ಎತ್ತಗಳ ಬೀಜ ಹೊಡಸೊರು, ದೀಪಮಲಿ ಕಂಬದ ಹತ್ರ, ಹನ್ಮಂತ ದೇವರ ಗುಡಿಹತ್ರ ತಮಗೆಲ್ಲಿ ಪಾಡ ಅನಸತೈತೊ ಅಲ್ಲಿಗ ತಮ್ಮ ಹೋರಿಗಳನ್ನು ಹೊಡ್ಕೊಂಡು ಬರ್ತಿದ್ರು. ಕಸಿಮಾಡೊ ಕಾಸಿಂಗೆ ಛಾನ್ಸಂದ್ರ ಛಾನ್ಸ್ ಅವತ್ತು. ಯಾವತ್ತು ಎಣಿಸದ ಘಳಿಗೆ ಇವತ್ತು ಎದರಾತಲ್ಲ ಅಂತ ಗೊತ್ತಾನಾಯ್ಕ ಆಲೋಚನೆ ಮಾಡ್ತಿದ್ದಂಗೆ ಚಂಪಿ ನಾಕೈದ ಸಲ ಊರಾಗ ಎದುರಾಗಿದ್ಲು. ಆಕಿ ಗಂಡ ಸವಣುನ ಹೊಲ ಗೊತ್ತಾನಾಯ್ಕನ ಅಡವಿ ಹೊಲದ ಪಕ್ಕದಾಗಿದ್ರು ಆಕಿ ಹೊಲಕ ಅಷ್ಟೇನ ಬರ್ತಿರಲಿಲ್ಲಾ. ಅವಳ ಅತ್ತಿನೆ

ಹೆಚ್ಚುಕಮ್ಮಿ ಕೂಲಿ ಆಳುಗಳನ್ನ ಕರ್ಕೊಂಬಂದು ಕೆಲಸಮಾಡಿಸುತ್ತಿದ್ಲು. ಸವಣು ಮದ್ವಿ ಆಗೊ ಮಟಾನು ಪಾಡಾಗೆ ಇದ್ದ. ಒಳ್ಳೆ ಎದ್ದಾಳು. ಎರಡು ಗಂಡು ಒಂದು ಹೆಣ್ಣ ಆದಿಂದ ಇದ್ದಕ್ಕಿದಂಗ ಹಣ್ಣಹರತ ಎಲಿಹಂಗ ಆಗಿಹೋದ. ಹಾಸಗಿ ಹಿಡಿದ ಸವಣು ಅದ್ಯಾವ ಗುಪ್ತರೋಗಕ್ಕೆ ತುತ್ತಾಗ್ಯಾನ ಅನ್ನೋದು ಯಾರಿಗೂ ತಿಳಿಯಲಿಲ್ಲಾ. ಹರೆಯದ ಚೆಂಪಿ ಮಾತ್ರ, ಇಡೀ ಊರಾನಮಂದಿ ಗೊತ್ತಾನ ದುಡಮಿ, ಶಿಸ್ತು ಅವನನ್ನ ಕುರಿತೆ ಮಾತಾಡ್ತಿದ್ದರಿಂದ ಅಕೀನೂ ಸಹಜವಾಗೆ ಮನಸೋತಿದ್ಲು. ಹನ್ಮಪ್ಪನ ಒಕಳಿ ಉಚ್ಚಾಯದಾಗ ತೇರಿನಗಾಲಿನ ಒಬ್ಬನೆ ಹಿಡದ ನಿಲ್ಲಿಸಿದ್ದ ಅಂತ ಪುಕಾರ ಎದ್ದಿದ್ದೆ ಚಂಪಿಮನಸ್ಸಿನೊಳಗ ಗೊತ್ತಾ ಹೊಕ್ಕೊಂಡ. ಅತ್ಲಾಗ ಅವಳ ಗಂಡ ಹಾಸಗಿ ಹಿಡದು ತಿಂಗಳಾಗಿಲ್ಲಾ ಆಕೀಗ ಮೈದನ ಆಗೊ ಪೂಜಾರಿ ಪಾಪು ನಾಯ್ಕ ಆಕಿಹೊಲಕ ಗಳೇಕ ಹೋದಂಗಮಾಡಿ ಗೆಳತನ ಮಾಡೊ ಯೋಚನೆಮಾಡಿದ. ಮತ್ತೊಂದುಕಡಿಂದ ಆಕಿ ಮನಿ ಹತ್ರದ ಕೆಂಚೀರಯ್ಯ ಒಂದು ಕೈ ನೋಡೇಬೀಡಾನ ಅಂತ ಪ್ರಯತ್ನಿಸಿದ್ದ. ಚೆಂಪಿ ಮಾತ್ರ ಜುಪ್ ಅಂದಿರಲಿಲ್ಲ.

ಗೊತ್ತಾನಾಯ್ಕ ಅಡವಿಹೊಲಕ ಗಳೆತಗೊಂಡ ಹೋಗೋದನೆ ಕಾಯತೊಡಗಿದ್ಲು. ಅವನ ಹಿರಿಮಗ ನುಗ್ಗಾ ಅವನ ಕೂಟಾಗ ಬರ್ತಿದ್ದ. "ಮಗ ನೀನ ಬರಾಕ ಹೋಗಬೇಡ ಗದ್ದಿ ಕಡೀಗ ಹೋಗಿನೀರ ಎಷ್ಟ ಹೊಗೈತಂತ ನೋಡು" ಅಂತ ಸಾಗಹಾಕ್ದ. ಗಳೇವನ್ನ ಹೊಲದ ಕಡೀಗ ಹೊಡದವನೆ ಚೆಂಪಿಕೂಡ ಮಾತಾಡ್ತ ನಿಂತ. ಆಕೀ ಕಂಡಿದ್ದೆ ಅವನ ಬಾಯೊಳಗಿಂದ ಮಾತುಗಳು ಹೊರಗ ಬರ್ಲಿಲ್ಲಾ. ಆಕೀನೆ ಮುಂದವರದು "ಮೈದ್ನಾ, ನಿನ್ನ ನೋಡಿದಂದಿಂದ ನನ್ನ ಮನಸ್ಸು ನನ್ನ ಹತ್ರನೇ ಇಲ್ಲ" ಅಂದವಳೆ ತನ್ನ ಆಶೆಯನ್ನ ಅವನಿಗ ಹೇಳಿದ್ಲು. "ನೋಡ ಚಂಪಿ, ನಾನು ನನ್ನ ಹೆಂಡತಿಗ ಯಾವತ್ತು ಅನ್ಯಾಯ ಮಾಡಿಲ್ಲ. ಆದ್ರ ದೀಪಾವಳಿದಿನ ನಿನ್ನ ನೋಡದಾಂಗಿಂದ ಈ ಜಗತ್ತೆ ತಿಳಿತಾ ಇಲ್ಲಾ. ನಂದೊಂದು ಮಾತೈತಿ ಅದನ್ನ ನೀ ಒಪ್ಕೊಳ್ಳೊದಾದ್ರ ನಾನು ನಿನ್ನವನಾಗ್ತೀನಿ" ಅಂತೇಳಿ ತನ್ನ ಕರಾರನ್ನ ತಿಳಿಸಿದ. ಆಕಿ ಮಾರಿ ಸಣ್ಣದಾತು. ಆದ್ರೂ ನಗುತಂದು ಕೊಂಡವಳೆ, "ನಿನ್ನ ಸಂಬಂಧ ನಾನು ಏನ ಬೇಕಾದ್ರು ಮಾಡಾಕಸಿದ್ದ. ಅದೇನಮಾತು ಗಡಾನೆ ಹೇಳು" ಅವನನ್ನೆ ಕುತೂಹಲದಿಂದ ನೋಡ ತೊಡಗಿದ್ಲು "ನೋಡು ಈ ಊರು ಸರಿ ಇಲ್ಲಾ, ನಿನಗ ಗೊತ್ತಿದ್ದಿದ್ದೆ ಐತಿ, ನಾಏನ ಹೇಳಬೇಕಾದ್ದಿಲ್ಲ. ಏನಪ್ಪ ಅಂದ್ರ ನಿಮ್ಮ ಬೆಡಗದ ಮನಿಗಳೆ ಜಾಸ್ತಿ ಅದಾವ, ಆದ್ರ ಯಾವ ದೊಡ್ಡ ಗಂಡಸದಾನ ಬಿಡು. ಆದ್ರೂ ಆ ಪೂಜಾರಿ, ಸೋನ್ಯಾ, ಗಬಡು ಟರ್ ಪರ್ ಮಾಡ್ತಾರ ಒಂದೀಟು, ಅವರನ್ನೆಲ್ಲಾ

ನಿಭಾಯಿಸಿ ಕೊಂತೀನಿ ಬಿಡು. ನೀನು ಮಾತ್ರ ಯಾವುದೇ ಕಷ್ಟ ಬಂದ್ರೂನೂ ಯಾರು ಕೇಳಿದ್ರು ನನ್ನ ಹೆಸರ ಹೇಳ್ಕೊಂಡು ಕಾಲ ಕಳಿಯೋದಾದ್ರ ನಾನು ನಿನಗೇನ ಬೇಕಾದ್ದನ್ನ ಕೊಡಾಕ ರಡಿ. ಇದು ನಿನಗ ಹಿಡಿಸಿದ್ರ ಹೂಂ ಅನ್ನು, ಇಲ್ಲಾ ಯವತ್ತಾರು ನಿನ್ನಕಡೀಗ ನೋಡಿದ್ನಂದ್ರ ನಮ್ಮಪ್ಪ ಬುದ್ದನಾಯ್ಕನಿಗ ಹುಟ್ಟಿದೋನ ಅಲ್ಲಾಂತ ತಿಳ್ಕ." ಅಂದವನೆ ಆಕಿ ಉತ್ತರಕ್ಕಾಗಿ ಕಾದ. ತುಟಿ ಅರಳಿಸಿ ನಕ್ಕವಳೆ ತೊಗರಿ ಸಾಲೊಳಗ ಅವನನ್ನ ತೆಕ್ಕಿಬಡ್ಕೊಂಡು ಬಿದ್ಲು. ಸುದ್ದಿ ಇಡೀ ಊರಿಂದೂರಿಗೆ ಒಣಗಿದ ಹುಲ್ಲಿಗ ಬೆಂಕಿ ಹತ್ಕೊಂಡಂಗ ಕ್ಷಣಾರ್ಧದಾಗ ಹತ್ಕೊಂಡಿತ್ತು. ಪೂಜಾರಿ ಪಾಪಗನಾಯ್ಕ ತನ್ನ ಚಂಡಿಕಿ ಬಿಟ್ಟು ಹೆಂಡದಂಗಡಿಯೊಳಗ ನೂರಸಲ ಹೆಂಡ ಕುಡದಾಗೊಮ್ಮೆ ಗೊತ್ತಾನಾಯ್ಕನಿ ಗೊಂದು ಗತಿಕಾಣೀಸೊ ಪ್ರತಿಜ್ಞೆಮಾಡಿದ್ದ. ಅವನ ಅಣ್ಣ ಸೋನ್ಯಾನಾಯ್ಕ "ಅವನ ಪಾಪದ ಕೊಡ ತುಂಬತಂತೇನೆ. ಎಲ್ಲಿಂದಲೋ ಬಂದ ಪರದೇಶಿ ನಮ್ಮ ಹೆಂಗಸರ ಮ್ಯಾಲ ಕಣ್ಣ ಹಾಕ್ತಾನಂದ್ರ ಏಟ ಧೈರ್ಯ ಇರಬೇಕು. ಇವತ್ತಿನವರಿಗ ನಮ್ಮ ಗಡ್ಡಿ ಮ್ಯಾಲ ಯಾರು ಬೆಟ್ಟಮಾಡಿಲ್ಲ. ಯಾವನಾರು ಬೆಟ್ಟತೋರ್ಸಿದ್ರ ಅವನ ಬೆಳ್ಳ ಕತ್ತರಿಸೊ ಕುಲದೋರು ನಾವು, ಹುಲಿಗಳ ವಂಶ ನಮ್ದು. ನಾವು ಒಬ್ಬೊಬ್ಬರೆ ಹುಲಿಗಳಿದ್ದಂಗ ಏನೋ ಸಾಣಅಣ್ಣ ನೆಲಕ್ಕ ಬಿದ್ದಾನ; ಆ ಹೆಂಗಸಿಗ ತಿಳಿಬಾರ್ದ. ಆದದ್ದಾಯ್ತು ನಮ್ಮ ಬೆಡಗದೊಳಗ ದೆವ್ವದಂತ ಗಂಡಸರು ಒಬ್ಬರಿಗಿಂತ ಒಬ್ಬರು ತಾಕತ್ತಿರೋರ ಅದಾರ, ಅದನ್ನ ಬಿಟ್ಟು ಆ ಬೋಲಾನ ಹಿಂದ ಬಿದ್ದಳಲ್ಲಾ ಅಕೀದು ಏಟ ಇರಬೇಕು". ಅಂತ ಬುರಗ ಬಂದ ಹೆಂಡ ಊಬಿ ಸುರದ್ಕೊಂಡು ಅಲ್ಲಿ ಕುಂತಿದ್ದ ಊರಾನ ಹೆಂಗಸರೆಲ್ಲಾ ಅವನ ಪೌರುಷದಮಾತಿಗ ಮಳ್ಳಾದಾರು ಅಂದ್ಕೊಂಡಿದ್ದ. ಯವಾಕೀನೂ ನದರೆತ್ತಿ ಅವನ ಕಡೀಗ ನೋಡಲಿಲ್ಲಾ. ಬದಲಿಗೆ ಕುಡದ ಹೆಂಡ ಅಮಲೇರ್ತಾ ಇರೋದಕ್ಕ ಮತ್ತೊಂದೀಟು ಅಮಲ ಹೆಚ್ಚ ಮಾಡಿಕೊಳ್ಳಾಕ ಸೊಂಟದಿಂದ ನಶ್ಯೆ ಡಬ್ಬಿತಗದು ಒಂದೊಂದು ಹಿಡಿ ಹಿಡದು ಸ್ವಾಟಿಗ ತಿಕ್ಕೊಂಡು ಸೀರಿ ಸೆರಗಿಂದ ವರಿಸಿಕೊಂಡ. ಅಂದಿಬಾಯಿಗ ತಡಿಯಾಕ ಆಗದೆ, "ಕೆಳ್ರೆಅಲ್ಲಿ, ಹೇಳ್ತಿರೋದನ್ನ, ಗೊತ್ತಣ್ಣ ಏನಾರು ಕೇಳದ, ಚಣ್ಣದಾಗ ಕಟ್ಕೊಬೇಕು ಹಂಗ ಹೊಡಿತಾನ" ಅಂದ್ಲು. ಮತ್ತೊಬ್ಬಾಕಿ, "ಏಯ್ ಬಿಡ, ಅವಂದೇನ ಕೇಳಿಯಾ, ಇಡಿ ಊರಿಂದೆಲ್ಲಾ ತಿಂದು ಈಗೇನ ಸಿಗ್ತಿಲ್ಲಾ ಅದಕ್ಕ ಹಿಂಗಾಡ್ತವ್ನೆ ಬೇವರ್ಸಿ" ತನ್ನ ಸಿಟ್ಟನ್ನ ವ್ಯಕ್ತಪಡಿಸಿದ್ಲು. ಮಾಡಾಕ ಹ್ವಾರೇಇಲ್ಲದೆ ಊರ ಉಸಾಬರಿ ವಹಿಸಿಕೊಂಡು ಹಂಚಿಕಿದ್ರಾಗ ಹೆಂಡಕುಡಿಯೋದು. ಯಾರಿಗಾರ ದಂಡಹಾಕಿದ್ರ ಆದ್ರಾಗು ತಿನ್ನೋದು ಮಾಡ್ತಿದ್ದ ಆ ಸತ್ಯ ಇಡಿ ಊರಾನ ಸಣ್ಣೋರು, ದೊಡ್ಡೋರು ಪ್ರತಿಯೊಬ್ಬರಿಗೂ ತಿಳಿದ

ಹೋಗಿತ್ತು. ಅದಕ್ಕೆ ಅವನ ಮಾತನ್ನ ಮಂದಿ ಕೇಳ್ತಾನೆ ಇರ್ಲಿಲ್ಲಾ. ಆದ್ರು ಹೊರಗಿನೂರುಗಳೊಳಗ ತಾನೆ ದೊಡ್ಡ ಪೋತಪ್ಪನಾಯ್ಕ ಅಂತ ಸಾರಿದ್ದ. ಗೊತ್ತಾನಾಯ್ಕನ ತಮ್ಮ ಕಟುವಾ ಹೆಂಡದಂಗಡಿಗ ಬಂದಿದ್ದ ನೋಡಿ ಬಾಲಸುಟ್ಕೊಂಡ ನಾಯಿ ಹಂಗ ಕೊಂಯಿ ಗುಡತೊಡಗಿದ. ಆದ್ರ ವಿಷಯ ಮಾತ್ರ ಒಳಗೊಳಗೆ ಹೊಗಿಯಾಗತೊಡಗಿತ್ತು.

ಹತ್ತು ಮಕ್ಕಳಾದಮ್ಯಾಲ ಅದೆಂಥ ಚಟ ಈ ಹಾಳ ಗಂಡಸರದು ಅಂತ ಬಾಣವ್ವ ಒಳಗೊಳಗೆ ಸಂಕಟಪಡ್ತಿದ್ಲು. ಬಹಳ ನಾಜೂಕಾಗೆ ಗಂಡನೊಳಗಿನ ಬದಲಾವಣೆ ಗುರುತಿಸದ್ಲು. ಅಂಡೂರದೆ ದುಡಿತಿದ್ದೋನಿಗ ಎಲ್ಲಿಂದ ಬಂದ್ರು ಚಂಪಿಮನಿ ಹತ್ರ ಕುಂದ್ರೋದನ್ನ ರೂಢಿಮಾಡಿಕೊಂಡಿದ್ದ. ಭಟ್ರಗದ್ದಿ ನೀರ ಅನ್ನುತ್ತಿರಲಿಲ್ಲಾ, ಎಮ್ಮಿ ಕರದ ಹಾಲ ಮಾರೋದು ಅಂತಿರಲಿಲ್ಲಾ. ಹೊಲ್ದಾಗ ಏನಾಗ್ಯೆತಿ ಅಂತ ಸಹ ಕಾಳಜಿಮಾಡೋದ ಕಮ್ಮಿಮಾಡ್ದ. ಅವನ ಹೆಂಡತಿಗ ಮದ್ಲೆ ಗುಟ್ಟು ತಿಳಿದಿದ್ಕ ಸುಮ್ಮನಾಗಿದ್ಲು. ಈಗ ಗಂಡ ಹಾದಿತಪ್ಪಿಂದೇನಾರಒಂದು ಮಾಡಾಕಂತ ಸಂದರ್ಭ ಕಾಯತೊಡಗಿದ್ಲು. ಅವನು ಹೊಲಮನಿಮ್ಯಾಗ ಕಾಳಜಿ ಕಮ್ಮಿ ಮಾಡಿದ್ದ. ಅದನ್ನ ಬಂಡ್ವಾಳ ಮಾಡ್ಕೊಂಡ ಬಾಣವ್ವ "ಹಾಳಾದ ನನಸೌತಿ ಅಂತಹದ್ದೇನ ಮಾಟ ಮಾಡ್ಯಾಳೋ ಯಾವಾಗ ನೋಡಿದ್ರು ಸುಮ್ಮೆ ಆಕಿ ಹಿಂದಿಂದ ಸುತ್ತುತಾನ" ಅಂತ ತನ್ನ ಸಿಟ್ಟು ಹೊರಗ ಹಾಕಿದ್ಲು. ಬಾಯಿ ಮುಚ್ಕೊಂಡ ಕೇಳ್ತಿದ್ದೋನು ಜಗಳತಗಿಯೋದ ಬ್ಯಾಡ ಅಂತೇಳಿ ಅರಗಾಗಿ ಚೆಂಪಿಮನಿಕಡೀಗ ನಡದ.

ಹಿರಿಯನಾದ ನುಗ್ಲ, ಗೊಂದಾ, ಹನುಮ, ಗಮಣು, ಪುತಳಿ, ಪೀಣು, ಪಾಂಗೋಶಿ, ಜಂಬ, ಕುಮಾರಿ, ಚನ್ನಿಂಗ, ಮನಿಯೊಳಗಿದ್ರು ಇಡೀಮನಿ ಅನ್ನೋದು ಗಿಜಗನಗೂಡಾಗಿತ್ತು. ದೊಡ್ಡೋರು ಮೂರ್ನಾಕ ಹುಡ್ರು ಅರ್ಥ ಮಾಡ್ಕೊಳ್ಳೊಹಂಗಿದ್ರು. ಬಾಕಿವೆಲ್ಲಾ ಪುಟ್ಟಿ ಅಡಿಗ ಹಾಕಿ ಮುಚ್ಚೊ ಅಂತೋವು. ನುಗ್ಲ ಎತ್ತು, ಎಮ್ಮಿ, ಸೊಪ್ಪಿ ಹುಲ್ಲಂತ ಅರಬಾಡಿಸ್ತಿದ್ದ. ಗೊಂದಾ ಸಾಲಿಗ ಹೋಗ್ತಿದ್ಕ ಮೇಷ್ಟ್ರು ಬರಿಯಾಕ ಹೇಳಿದ್ದನ ಬರೀತ್ತಿದ್ದ. ಗಮಣು ಒಲಿಮ್ಯಾಲ ಮುದ್ದಿಗಿಟ್ಟಿದ್ದು ಹೆಸರಿಗ ಬಂದಿರೋದನ್ನ ಗಮನಿಸ್ತಿದ್ಲು. ತಮ್ಮ ಪಾಡಿಗ ತಾವ ಕೆಲ್ಸಮಾಡ್ತಾ ಇದ್ದೋರು ಅವರಪ್ಪ ಬಂದಿದ್ಕ ಗದ್ಲ ಇಲ್ಲದೆ ಗಪ್‌ಚುಪ್ ಆದ್ರು. ಬಾಣಿ ಎದ್ದು ಮುದ್ದಿ ಕೊಡಿಸಾಕ ಹೋದ್ಲು. ಪಾಂಗೋಶಿ ಹೋದವಳೆ, "ಹೊಟ್ಟಿಹಸದು ತಲಿತಿರಗ್ತಿರೊ ಹಂಗ ಆಗ್ಯತಿ ಉಣ್ಣಾಕ ಇಕ್ಕು" ಅಂತ ಪೀಡಿಸಿದ್ಲು. ಅಕಿ ಮೇಲಿಂದ ಅಕಿಗಂಡನಿಗ ತಾಗೊ ಹಂಗ "ಇಷ್ಟೊತ್ತಿಂದ

ಅಲ್ಲೆ ಕಂತಿದ್ದೆ ಈಗ ಉಣ್ಣಾಕ ಕೇಳ್ಕೊಂಡು ಬಂದಿಯಲ್ಲ ಅಕಿ ಹಾಕ್ಲಿಲ್ಲೇನು" ಅಕಿ ಬಾಯೊಳ ಮಾತ ಬಾಯಾಗಿತ್ತು ಕೈಗಸಿಕ್ಕ ಕಾಯಿಗೋಲ ಎತ್ಕೊಂಡವನೆ "ಏನೇ ನಿನ್ನವ್ವನ, ನನ್ನ ಕೇಳ್ತಿ, ನಿನ್ನ ಉಳಿಸಂಗಿಲ್ಲಾ" ಅಂದವನೆ ಮಕ ಮುಸಡಿ ಒಂದೂ ನೋಡ್ದಂಗೆ ಜಪ್ಪಿದ. ಹೊಡ್ತಾ ತಾಳಲಾರದೆ ಬಾಣವ್ವ ಕಿಚೋ ಅಂತ ಚಿರಿದ್ಲು. ಹುಡ್ರೆಲ್ಲಾ ಲಬ್ ಲಬ್ ಹೊಯ್ಕೊಂಡ್ರು ಯಾರೂ ಬಿಡಸೋರಿಲ್ಲಾ.

"ಏ ಹೊಡ್ದು ಸಾಯಿಸಬಿಡೊ ಮಗನೆ, ಆ ನನ್ನ ಸೌತಿ ಸಲವಾಗಿ ನನಗ ಹೊಡಿತಿಏನೋ? ಅಕೀನಾರ ಇರಾಕು ಇಲ್ಲಾ ನಾನಾರು ಇರಾಕು ಲೋ ನಿನ್ನ ಮೀಸ್ಯಾಗ....." ಬೋಯ್ಯಿಗಳ ಮಳಿಸುರಿಸಿದ್ಲು. ತಡಯಾಕ ಆಗದ ಗೊತ್ತನಾಯ್ಕ ಕಲ್ಲ ತಗೊಂಡವನೆ ಬೀಸಿದ, ಬಾಣವ್ವನ ಹಣಿಗ ಬಡದು ಮೂರ್ಛೆ ಹೋದ್ಲು. ಗೊಂದಾ, ಗಮಣಿ ನೀರ ಕುಡಿಸಾಕ ನೋಡಿದ್ರು. ಹಲ್ಲ ಬಿಗಿಯಾಗಿ ಕಟ್ಕೊಂಡಿದ್ವು "ಯವ್ವ, ಏ ಯವ್ವ, ಕಣ್ಣ್‌ಬಿಡಬೆ" ಅಂತ ಗಮಣಿ ಅಳ್ತಾ ಮನಿಯಾಗಿಂದ ಚುಂಚಗ ತಂದು ಸ್ವ್ಯಾಟ್ಯಾಗಿಂದ ತಿವದಾಕೀನೆ ಒಂದುಚೂರ ನೀರ ಬಿಟ್ಲು. ನುಗ್ಲ ಬಳಿ ಹೊಡದು, ದೀಪದ ಮೇಲೆ ಕಾಸಿ ನೆತ್ತ್ಯಾಗ ಬಿಸಿ ಮುಟ್ಟಿಸಿದ. ಸಣ್ಣ ಹುಡ್ರೆಲ್ಲಾ ಏನ ನಡಿದಿದೆ ಅಂತ ಗೊತ್ತಿಲ್ಲದೆ ಒಬ್ಬರ ಮಕ ಒಬ್ಬರ ನೋಡ್ತಾ ಅಳ್ತಿದ್ರು. ರಕ್ತದ ಮಡುವಿನೊಳಗ ಬಿದ್ದಿರೊ ಬಾಣವ್ವ ಸತ್ತಾಳೊ ಬದುಕ್ಯಾಳಂತ ನೋಡದೆ ಗೊತ್ತಾಸಾಯ್ಕ ಸಿದಾ ಚೆಂಪಿಮನೀಗ ನಡದ ಬಿಟ್ವ. ಅದುನಡದು ಎಷ್ಟೋಹೊತ್ತಿನ ಮ್ಯಾಲ ಮೀಟಿಬಾಯಿ ಮತ್ತ ಕಟುವಾ ಮನಿಂದ ಹೊರಗ ಬಂದು "ಏನಾಗ್ಯತಂತ ಈ ರಂಡೀಗ ಯಾಕ ಹಿಂಗ ಕೈತೊಕ್ಕೊಂಡು ಹಿಂದ ಬಿದ್ದಾಳಂತ ನನ ಮಗಂದು. ಕೂಡಿದ್ದಾಗೇನಾರು ನ್ಯಾಲಗಿ ಹೊರಗ ತಗದಿದ್ರ ಎಳ್ಕೊಂಡ ಬಿಡ್ತಿದ್ದೆ. ಈಗ ಭಾರಿ ಆಗ್ಯೆತಿ". ಅಂತೇಳಿ ಬಾಣೆನ ಬೋಯ್ಕೊಂತ, ನಿಂತ್ಲು. "ಆ ಕಡೆ ಹೊಗೆ ಮದುಕಿ, ನಿನ್ನ ಮಗ ಸೂಳಿ ಮನೀಗ ಹೋಗೊದನ್ನ ಯಾರು ಕೇಳಬಾರದೇನೊ" ಗಮಣಿ ಸಿಟ್ಟಿಂದ್ಲೆ ಕೇಳಿದ್ಲು. "ಬಾಯಿಮುಚ್ಚೆ, ಚೋಟುದ್ದ ಅದೀಯ, ವಟ ವಟ ಮಾತಾಡ್ತೀಯ. ಅಂವ್ವಗಂಡ್ಸು. ಹತ್ತ ಹೆಂಗಸರನ್ನ ಬೇಕಾದ್ರ ಇಟ್ಕೊಂತಾನ ಹೆಂಗಸಾದೋಳು ಸಹಿಸ್ಕ ಬೇಕು. ಇಲ್ಲಾ, ಹೊಡ್ತಾತಿಂದ ಸಾಯಾಕು ಆಟೇಯ." ಅಂತ ಗದರಿಸಿದ್ಲು ಮುದುಕಿ. ಬೋ ಸಂಬಾಯಿತ ಗಂಡ ಬುದ್ದನಾಯ್ಕ, ಬೋಯ್ಯಾಕ ಬರಲ್ಲ, ಗದರಿಸಾಕ ಬರೋದಿಲ್ಲ, ಒಂದು ಮಾತಾಡಿದ್ರ ಹೆಚ್ಚಾತು. ಅರ್ಧ ಮಾತಾಡಿದ್ರ ಕಮ್ಮಿ ಆತು ಅನ್ನೋ ಪೈಕಿ ಮನುಷ್ಯ ಆತನನ್ನೆ ಗೊಳ ಹೊಯ್ಕೊಂಡ ಸಾಕಮಾಡಿದ್ಲು ಮುದುಕಿ ಮೀಟಿಬಾಯಿ. ಇನ್ನು ಅವನೇನ ಹೊಡ್ಡ-ಬಡ್ಡ ಮಾಡ್ಯಾನು. ಹಂಗಿದ್ರು ತನ್ನ ಮಗ ಮಾಡಿದ್ದ ಸರಿ


ಅಂತ ವಾದ ಮಾಡ್ತಿದ್ಳು. ಮುದುಕ ಮಾತ್ರ ಬಹಳ ಮರುಗಿದ. ಎರಡೂ ಉಲ್ಕಾಕೇಸುಗಳು, ಮುದುಕ ಬಹಳ ಥಂಡ ಮನುಷ್ಯ, ಸಣ್ಣ ಹುಡ್ರು ಬೋಯ್ದರೂ ಬೋಯ್ಸಿಕೊಂಡು ಸುಮ್ಮನಾಗ್ತಿದ್ದ. ಆದರೆ ಮುದುಕಿ ಭೋ ಘಾಟಿ ಹೆಂಗಸು.

ಬಾಯಿ ಹಚ್ಕೊಂಡ್ಳಂದ್ರ ಹಲವಾಗಲ ಜಿಡ್ಡಿದ್ದಂಗ, ಹಿಡ್ಕೊಂಡೆ ಬಿಡ್ತಿದ್ಳು. ಆಕೀಕೂಡ ಜಗಳಕ ನಿಂತಾವ ತಾನೆ ಸೋತು ಆಕೀಗ ಶರಣಾಗೊವರಿಗ ಬಿಡ್ತಿರಲಿಲ್ಲ. ಅದು ಇಡೀ ಊರಿಗಲ್ಲ, ಸುತ್ತಮುತ್ತಲ ಊರಗಳಿಗೂ ಗೊತ್ತಾಗಿತ್ತು. ಯಾರೊಬ್ಬರೂ ಆಕಿ ಸುದ್ದಿಗೆ ಬರ್ತಿರಲಿಲ್ಲಾ. ಅವರು ಕೋರಿಲೆ ಮಾಡ್ತಿದ್ದ ಹೊಲದ ಮೇಲಿನ ಹೊಲದ ರಂದಪ್ಪ ಬಹಳಯಟ್ಟಿ ಮನುಷ್ಯ. ಇಡೀ ಬಂಗಳಂದೂರ ಮಂದಿ ಎತ್ತಗಳೆಲ್ಲಾ ಬಡಕಲಾಗಿ ಸಾಯಂಗಾಗಿದ್ರ ರಂದಪ್ಪನ ಎತ್ತಗಳ ಮಾತ್ರ ಹೋರಿ ಕಂಡಂಗ ಇದ್ವು. ಹಂಗ ಕೈ ಇಟ್ರ ಕೈ ಜಾರಬೇಕು ಸುತ್ಲ ಐದಹಳ್ಳಿ ಮಂಗಿ ರಂದಪ್ಪನ ಎತ್ತಗಳ ಬಗ್ಗೆ ಮಾತಾಡ್ತಿದ್ರು. ಯಾರು ಅದರ ಬಗ್ಗೆ ತಲೀನ ಕೆಡಿಸಿಕೊಂಡಿರಲಿಲ್ಲಾ. ರಾಗಿಯಂತು ಮಣಕಾಲಮಟ ಬೆಳದಿಂದ ಚಿಕಳ ಹೊಡದು ಎರೆಡೆರೆಡು ತೆನಿ ಕೀಳಲಿ ಅಂತ ಜೋಲಿಗ* ಎತ್ತ ಬಿಡ್ತಿದ್ರು. ಯಾರು ಬೇಕಾರು ಬರುವಿದ್ದಾಗ ಹೊಲದಾಗ ಎತ್ತ ಬಿಟ್ಟು ಮೇಯಿಸಬಹುದಾಗಿತ್ತು. ತಗರಿ ಹೂವಿಗ ಬಂದಾಗ ಅಲಸಂದಿ ಬಳ್ಳಿ, ಅವರಿ ಬಳ್ಳಿ, ಉದ್ದು, ಮಡಕಿಕಾಳ ಬಳ್ಳಿ, ಹಿಂಗಾರು ಹೆಸರು, ಹುಳ್ಳಿ ಹಾಕಿರೊ ಮಂದಿ ಕವಳಾಗೊ ಮಟ ಕಾಯ್ತಿದ್ರು. ತಗರಿ ಅಕ್ಕಡಿಯೊಳಗ ಬೆಳದಿರೊ ಕೂಳಿ ಜ್ವಾಳದ ಸೊಪ್ಪಿಗಂತ ಎತ್ತಗಳನ್ನ ಬಿಟ್ಟು ಮೇಯಿಸ್ತಿದ್ರು. ರಂದಪ್ಪ ಹೊತ್ತ ಇಳದ ಮ್ಯಾಲ ಎತ್ತ ಮೇಯಿಸಾಕ ತರ್ತಿದ್ದ. ಮಂದಿ ಎಲ್ಲಾ ಹೊಲದಿಂದ ಮನಿಸೇರಿದ ಮ್ಯಾಲ ಮೆಲ್ಲಗೆ ಹಗ್ಗ ಹೆಗಲಮ್ಯಾಲಹಾಕಿ ಮಂದಿ ಹೊಲ್ದಾಗ ಮೇಯಾಕ ಬಿಡ್ತಿದ್ದ. ಮೀಟಿಬಾಯಿ ಬಹಳ ಸಲ ಅವನ ಕುರಿತು ಕೇಳಿದ್ಳು. ಮೇಲಿನ ಅಗಸಿ ಪೆಳಿ ಹತ್ರ ಒಂದು ಅಕ್ಕಡಿ ಹೊಲನೆಲ್ಲಾ ಯಾರೊ ಮೇಯಿಸಿದ್ರು. ರಂದಪ್ಪನ ಬಗ್ಗೆ ಕೇಳಿದ್ದ ಆಕಿ ರಂದಪ್ಪ, ಗನಿಸಾಬಿ ಹೊಲದ ಮ್ಯಾರಿ ಮ್ಯಾಲ ಎತ್ತ ಮೇಯಿಸ್ತಾ ಅವನ ಮತ್ತು ಬುದ್ದನಾಯ್ಕ ಮಾಡ್ತಿದ್ದ ಕೆಪ್ಪ ಭಟ್ಟರ ಮ್ಯಾರಿಗ ಹೊಡ್ಕೊಂಡ ಬಂದ. ಸುತ್ತಲು ನೋಡಿದ. ಯಾರು ಕಾಣಲಿಲ್ಲಾಂತ ಹಗ್ಗ ಮೈಮ್ಯಾಲ ಬಿಸಾಡಿದವನೆ ಬುದ್ದನಾಯ್ಕನ ಹೊಲದಾಗ ಇಳಿಸಿದ. ಬಂದು ಮೇಯಲಿ ಅಂತೇಳಿ ಕಾದಿದ್ದ ಮೀಟಿ ಬಾಯಿ "ಯಾವನ್ಲೋ ನೀನು, ಎಲ್ಲಾ ತಗರಿ ತಿಂದು ಬಿಡ್ತೋ ನಿನ್ನ ಔಸಡಗ" ಅಂತೇಳಿ ಕೂಗಿದ್ಳು. ರಂದಪ್ಪ, ಹೆಂಗಸು ಆಕಿ ಏನ ಮಾಡ್ಯಾಳಂತ "ಏನಾತ ಬೇ, ಹಿಂಗ್ಯಾಕ ಸತ್ತೊರಹಂಗ ಒದರಾಕ ಹತ್ತಿ." ಜಬರಿಸಿದ. "ಯಾವನ್ಲೆ ನೀನು ಹೊಲ್ದಾಗ ಬಿಟ್ಟದ್ದಲ್ಲದೆ

* ಜೋಲಿ - ರಾಗಿ ಸಸಿ ಹೊಡೆಯುವ ಮುನ್ನ ಎತ್ತುಗಳನ್ನು ಬಿಟ್ಟು ಮೇಯಿಸುವುದು.

ನನಗೆ ರೊಪ್ ಹಾಕ್ತಿಯಾ" ಅಂತೇಳಿ ಸೀರಿ ಎತ್ತಿ ಮುಂದಕ್ಕ ಸಿಗಸಿದ್ಲು. ಇಬ್ಬರದು ಜಠಾಪಠಿ ಸುರು ಆತು. ಅವನ ಕೊಳಪಟ್ಟಿಹಿಡಿದು "ಏನೊ ನನಮಗನೆ ನಂದಾ ಹೊಲ್ದಾಗ ಬಿಟ್ಟು ನಂಜೊತಿನ ಜಗಳಕ್ಕ ಬರ್ತಿಯಾ" ಅಂದವಳೆ ಎರಡ ಬಾರ್ಸಿದ್ಲು. "ಬೇ ಲಮಾಣಿ, ನಿಮ್ಮಮ್ನ ನನಗ ಹೊಡಿತಿ ಏನಬೇ ಸುಕಾಲಿ" ಅಂತ ದೂಕಿದ. ಮೀಟಿ ಬಾಯಿ ಮಾರು ದೂರ ಹೋಗಿ ಬಿದ್ಲು. ಗುತ್ತಿಗಿ ಹಿಡದು ಸೊಪ್ಪಿಕಡಿಯಾಕ ಹೋಗಿದ್ದ ಕಾಕಾಪುರದ ಆಳು ಸಂಬಣ್ಣ ಹೊಲ ಬಿಟ್ಟು ಬರಾಕು ಸರಿಹೋತು. "ಸತ್ನೆಯವ್ವಾ, ಇವನ ಒಸಡಗಲಿ. ಸಾಯಿಸಬಿಟ್ಟ ನನ್ನ" ಮಂದೀನ ನೋಡಿ ಮತ್ತೊಂದೀಟ ಬಾಯಿ ಜೋರಮಾಡಿದ್ಲು. ರಂದಪ್ಪ ಗಾಬರಿಯಾದ, ಅವನ ಹೆದರಿದನ್ನ ಗಮನಿಸಿದ ಮೀಟಿಬಾಯಿ, ವ್ಯಾಕ ಎದ್ವಾಕಿನೆ, "ಏನ್ಲಾ ಭಾಡಕೌ ನನ್ನ ದೂಡ್ತಿಯಾ" ಅಂದಾಕಿನೆ, ಖ್ಯಾಕರಿಸಿ ರಂದಪ್ಪನ ಮುಖದ ವ್ಯಾಲ ಪಚ್ಚಂತ ಉಗುಳಿದ್ಲು. ರಂದಪ್ಪ ಪರಿಸ್ಥಿತಿಯನ್ನ ಅರ್ಥ ಮಾಡಿಕೊಳ್ಳಳ್ಳಾಕ ಮೊದ್ಲು ಆ ನೀಚ ಹೆಂಗಸು ಮಾಡಿದ ಕೆಲ್ಸದಿಂದ ಮಾನಸಿಕವಾಗಿ ದೃತಿಗೆಟ್ಟಿದ್ದ "ಥೂ ಯಾ, ನೀಚ ಹೆಂಗಸಿದು, ಎಯ್ ನಿಮ್ಮಮ್ಮನ ಕೆಟ್ಟ ಜಾತಿ ತಂದು" ಮಾತಾಡಾಕ ಆಗದೆ ಟವೇಲಿಂದ ಮಾರಿ ಒರಿಸಿಕೊಂಡು ಮಂದಿನ ಎದುರಿಸಾಕ ಆಗದೆ ಸೀದಾ ಎತ್ತು ಹೊಡ್ಕೊಂಡು ಹೊಂಟೆ ಬಿಟ್ಟ. ಮೀಟಿ ಬಾಯಿ ತಾನು ಗೆದ್ದ ಖುಷಿಯೊಳಗ ಮಂದಿಗ ತನ್ನ ಪ್ರತಾಪ ಕೊಚ್ಕೊಕೊಳ್ತಾ ಹೊಂಟ್ಲು. ರಂದಪ್ಪ ಮಾತ್ರ ತಿಂಗಳಾದ್ರು ಕಾಕಾಪುರದ ಹಾಸಗಿಗ ಎತ್ತ ಹೊಂಡ್ಕೊಂಡು ಬರ್ಲಿಲ್ಲಾ. ಅವನು ಮಂದಿ ಹೊಲ್ದಾಗ ರಾತ್ರಿ ಎತ್ತು ಮೇಸೊದನ್ನ ನಿಲ್ಸಿಬಿಟ್ಟ. ಅದರೆ ಸುತ್ತ ಮುತ್ತ ಹಳ್ಳಿಗೆಲ್ಲಾ "ಉಗಿಸಿಕೊಂಡ ರಂದಪ್ಪ" ಅಂತೆ ಹೆಸರವಾಸಿಯಾದ.

ಗೊತ್ತಾನಾಯ್ಕ ಪೂರ್ತಿ ಅವನವ್ವನ ಚಾಳಿಯನ್ನೆ ಹೊತ್ತಿದ್ದ. ಅವನ ತಮ್ಮ ಕಟುವಾ ಅಂತು ಮತ್ತೊಂದೀಟು ಬೇವರ್ಸಿಯಾಗಿದ್ದ. ಗಳೇಕ ಹೂಡಿದ ಎತ್ತು ನಡಿಲಿಲ್ಲಾಂತ ಹೊಡದ ಹೊಡದು ಹಣ್ಣಗಾಯಿ ನೀರ್ಗಾಯಿ ಮಾಡಿದ್ದ. ಕೊಂಬಮುರದು, ಮೂಗಿಂದ ರಕ್ತ ಸೋರಿ ಎತ್ತು ಹೊಲದಿಂದ ಮನಿಗ ಬರೋದ್ರಾಗ ಸತ್ತ ಹೋಗಿತ್ತು. ಕಾಕಾಪುರದ ಮಂದಿ ಅದೇ ಶಾಪ ಅವನಿಗ ಅಂಟಿರೋದಂತ ಮಾತಾಡಿಕೊಳ್ತಿದ್ರು. ಬಾಣಿ ಇನ್ನೂ ಸುಧಾರಿಸಿಕೊಳ್ತಿದ್ಲು. ಗೊತ್ತಾನಾಯ್ಕನ ನಡತೆಯೊಳಗೇನು ಫರ್ಕ ಬೀಳಲಿಲ್ಲಾ. ಯತಾವತ್ತು ಆ ಮಾಟಗಾತಿ ಚೆಂಪಿ ಮನಿಗ ಎಡತಾಕೊದ ಬಿಡಲಿಲ್ಲಾ. ಇಡೀ ಊರಾಗ ಹೊಗಿಯಾಡ್ತಿದ್ದ ಸುದ್ದಿ ತಾರಕಕ್ಕ ಏರಿತ್ತು. ಮಂದಿ ಗೊತ್ತಾನಾಯ್ಕನ ಬಗ್ಗೆ ಗುಸು ಗುಸು ಸುರುಮಾಡಿದ್ರು. ಅದು ಸ್ಫೋಟಗೊಳ್ಳಾಕ ಹೆಚ್ಚುದಿನಗಳೇನು ಹಿಡಿಲಿಲ್ಲಾ.



ಗುದ್ದಮನ ಕಟ್ಟಿ ಪಂಚಾಯತಿ

ಸೋನ್ಯಾನಾಯ್ಕ, ಗಬಡು, ಪೂಜಾರಿ, ಮತ್ತ ಅವರ ಓಣಿ, ಚೆನ್ನಿಂಗ, ಬದಿಯಾ, ಸಕ್ರು, ಚೊಕ್ಕಾ, ಕಿಷುಣಾ, ಸೋನ್ಯಾನಾಯ್ಕನ ಮನಿಯಾಗ ಸೇರಿದ್ರು. "ಅಲ್ಲಪ್ಪ, ನಮ್ಮ ಗಡ್ಡಿಯ ನಾವೆಲ್ಲ ಸತ್ತ ಹೋಗಿದ್ವೇನು ? ಆಕಿ ಹ್ಯಾಂಗ ಅವನನ್ನ ಇಟ್ಕೊಂಡಾಳಂತ" ಕಿಷುಣಾ ತನ್ನೊಳಗಿನ ತಳಮಳ ತೋಡಿಕೊಂಡಿದ್ದ. ಚೆಂಪೀಗಂಡ ಸಾಣು ಮದ್ವಿಯಾದ ಹೊಸದರಲ್ಲಿ ಹೆಂಡತೀನ ಕರ್ಕೊಂಡ ತಾಳಿ ಮರದ ಹೊಲಕ ಹೋಗಿದ್ದ. ಆಳೆತ್ತರಕ ಬೆಳೆದಿದ್ದ ತೊಗರಿ ಅಕ್ಕಡಿ, ಎತ್ತು ಬಿಟ್ಟ ಬರಾಕಂತ ಓಣಿಗ ಹೋದ ಅದೇ ಹೊತ್ತಿಗ ಸರಿಯಾಗಿ ಕಿಷುಣಾ ಅವರ ಹೊಲದಾಟಿ ತನ್ನ ಹೊಲಕ್ಕ ರಾಗಿ ಸಿವುಡ ಕಟ್ಟಾಗ ಹೊಂಟಿದ್ದ. ಅತ್ತಿಗಿಯಾಗಬೇಕಿದ್ದ ಚೆಂಪಿನ ನೋಡಿ "ಎನಾ ಅತ್ತಿಗಿ ಒಬ್ಬಳೇ ಬಂದಿಯೇನು, ಎಲ್ಲಿ ಸಾಣು" ಅಂತೇಳಿ ಆಕೀನ ಮಾತಿಗೆಳೆದ. ಅಂಜಕೊಂತಲೆ ಮಾತು ಆರಂಭಿಸಿದ ಚೆಂಪಿಗೆ ಅಂವ ಅಲ್ಲಿರೋದ

ಬ್ಯಾಡಾಗಿತ್ತು. ಗಂಡ ಬಂದಾನನ್ನೊ ಹೆದರಿಕಿ. ಅವನು ಹೋಗಾಕ ತಯಾರಿರಲಿಲ್ಲ. "ಚೆಂಪಿ ನೀ ಬಹಳ ಸುಂದರವಾಗಿದ್ದೀಯಾ, ನಿನ್ನಂತೋಳು ಸೀಗಬೇಕಾರ ಏಳು ಜನ್ಮದ ಪುಣ್ಯಾನ ಮಾಡಬೇಕು" ಅಂತ ಕಣ್ಣು ಮಿಟಿಕಿಸಿದ. ಚೆಂಪಿ ಮೈ ಮುಳ್ಳಾಗಿತ್ತು. "ಗಂಡ ಬರೋದ್ರಾಗ ಇಲ್ಲಿಂದ ಜಾಗ ಖಾಲಿ ಮಾಡ್ದೆ ಸರಿಹೋತು," "ಹಿಂಗ್ಯಾಕ ಮಾಡ್ತಿಯ ನೀನು. ಆಮ್ಯಾಲ ಹಂಗೆ ಅಡ್ಡಾಡ್ಕೊಂತ ಬಾ ಹೊಲದ ಕಡೀಗ" ಅಂತೇಳಿ ಅನ್ನೋದಕ್ಕೂ ಸಾಣು ಬರೋದ್ಕು ಸರಿಹೋತು. "ಏನಂದ್ಯೋ ಮಗನೆ ನನ್ನ ಹೆಂಡತಿನ ಕರಿತೀಯಾ ನಿನ್ನ ಕಡದು ಬಿಡ್ತೀನಿ" ಅಂದವನೆ ಕೈಯಾಗಿದ್ದ ಕುಡಗೋಲು ಎತ್ಕೊಂಡು ಓಡಿದ. ಕಿಷುಣಾ, "ಯಪ್ಪಾ ಸತ್ನೊ. ನಾ ಹಿಂಗ ಅನ್ನಿಲ್ಲೋ" ಅಂದವನೆ ಅಡ್ಡಬಿದ್ದು ಓಡತೊಡಗಿದ. ಚೆಂಪಿ ಓಡಿಹೋದಾಕಿನೆ ಗಂಡನ್ನ ಕೈ ಹಿಡಿದು, "ಹೋಗಲಿ ಬಿಡ್ರಿ ಅತ್ಲಾಗೆ. ಆ ಹೇನಬುರಕ ನಿಂದೇನು ಕೆಲ್ಸ, ನಾಮರ್ಧ ಮನಿಯಾಗಿರೊ ಹೇಣ್ತೀನ ಬಿಟ್ಟು ಬಂದಾನ ಬ್ಯಾರೆರನ್ನ ನೋಡಾಕ" ಅಂತ ಸಮಾಧಾನ ಮಾಡಾಕ ನೋಡಿದ್ಲು. ಸಾಣು ಪಿತ್ತ ನೆತ್ತಿಗೇರಿತ್ತು. "ಬಿಡೆ, ಆ ಮಗನ್ನ ಒಂದಕೈ ನೋಡ್ಕೋತೀನಿ. ಕಟ್ಟಿಗಿ ಹೊತ್ಕೊಂಡು ಪ್ಯಾಟಿತಿರಗೊ ಹೇಣ್ತಿ ಹತ್ತಮಂದಿ ಗೆಣಕಾರರನ್ನ ಮಾಡ್ಕೊಡಂಗೆ ಅಂದ್ಕೊಂಡಾನ" ಅಂತಂದು ಎಗರಾಡಿದ. ಆ ಘಟನೆಯನ್ನ ತನ್ನ ಜೀವಮಾನದಾಗೆ ಮರಿಲಿಲ್ಲಾ ಕಿಷುಣಾ. ಅವತ್ತಿಂದ್ಲೆ ಚೆಂಪಿಮ್ಯಾಲ ಸೇಡು ತಿರ್ಸ್ಕೊಬೇಕಂತ ಅವಕಾಶ ಕಾಯತೊಡಗಿದ. ಇಂಥ ಒಳ್ಳೆ ಅವಕಾಶ ಇಷ್ಟು ಗಡಾನೆ ಬರುತ್ತೆ ಅಂತ ಕಿಷುಣಾ ಯೋಚ್ನೆನೆ ಮಾಡಿರಲಿಕ್ಕಿಲ್ಲಾ. "ಎ ಕಿಷುಣಾ ಏನು ಯೋಚ್ನೆ ಮಾಡಾಕಹತ್ತಿ" ಅಂತಾ ಅವನ ಚಿಗಪ್ಪನ ಮಗ ಕೇಳಿಂದ, ಗಾಬರಿಯಿಂದ ಎಚ್ಚರಾದ. "ಏನೂ ಇಲ್ಲಾ. ಆ ಮಗಂದು ಆ ಹೆಂಗಸಿಂದು ಮರ್ಯಾದಿ ಯನ್ನ ಪಂಚಾತಿಯೊಳಗ ತಗೀಯಾಕು" ಅಂತಾ ತನ್ನ ಆಕ್ರೋಶ ವ್ಯಕ್ತಪಡಿಸಿದ. ಹಂಗೆ ಸುಮ್ಮಸುಮ್ನೆ ಮಾಡಾಕ ಬರಂಗಿಲ್ಲಾ, ಏನು ಮಡಾಕು ಅಂತ ಎಲ್ಲರೂ ಯೋಚಿಸಿದ್ರು. "ಗೊತ್ತಾನಾಯ್ಕನನ್ನ ಸುಕಾಸುಮ್ನೆ ಪಂಚಾತಿ ಯೊಳಗ ಎಳ್ಕೊಂಡು ಬರಾಕ ಆಗಂಗಿಲ್ಲಾ. ಯಾವುದಾದ್ರು ದಾರಿ ಹುಡಕ್ರೋ ನಿಮ್ಮಾಪ್ರ." ಅಂತಾ ತಲಿಕೆರ್ಕೊಂಡ ಚೊಕ್ಕ. "ಹಿಂಗಮಾಡಿದ್ರ ಹ್ಯಾಂಗ, ಹತ್ರ ಬರ್ರಿ" ಕಿವಿಯಾಗ ಏನೇನೊ ಹೇಳಿದ ಗಬಡು.

ಹೆಂಗಸರು - ಗಂಡಸರು ಮಕ್ಕಳು ಮರಿಗಳು ಗುದ್ದಮನ ಗುಡಿ ಗಾರಿ ಕಟ್ಟಿಮ್ಯಾಲ ಕುತ್ಕೊಂಡು ಪಂಚಾತಿಯೊಳಗ ಏನೇನ ಆಗತೈತಿ ಅಂತ ಬಾಯಿಬಿಟ್ಕೊಂಡು ಕೇಳ್ತಿದ್ರು. ಐದಳ್ಳಿ ಹಟ್ಟಿಗೌಡ್ರು ಪಂಚಾಯ್ತಿಗ ಸೇರಿದ್ರು. ಗೊತ್ತಾನಾಯ್ಕ ಮಾತ್ರ ಕೆಳಗ

ಚೆಂಡಹಾಕ್ಕೊಂಡ ಕುಂತಿದ್ದ. ಬಾಣಿ, ಮಕ್ಕಳು ಒಂದು ಮೂಲಿಯೊಳಗ ಅನಾಥರಂತೆ ಕುತ್ಕೊಂಡಿದ್ರು. ಬುದ್ದನಾಯ್ಕ ಮಗ ಮಾಡಿರೋ ಘನಂದಾರಿ ಕೆಲ್ಸ ನೋಡಾಕ ಮಂದಿನಡಕ ಕುಂತಿದ್ದ. ಮೀಟಿಬಾಯಿ ಹೆಂಗಸರ ಸಾಲಿನೊಳಗ ಕುತ್ಕೊಂಡು ಯ್ಯಾರ್ಯಾರು ಏನೇನು ಮಾಡ್ತಿದ್ರು ಅನ್ನೋದನ್ನ ಹೆಂಗಸರಿಗೆಲ್ಲಾ ಹೇಳ್ತಿದ್ಲು. ಇಂತ ನೂರಾ ಎಂಟು ಪಂಚಾತಿಗಳು ನಡದಾವ. ತಾಂಡಾದೊಳಗ ನಡಿಯೊ ಎಲ್ಲಾ ಜಗಳ ತೀರ್ಮಾನ ಆಗೋದೆ ಈ ಪಂಚಾಯ್ತಿಯೊಳಗ. ಹಟ್ಟಿ ಹಿರಿಯ ಮತ್ತು ಮುಖಂಡ ಸಿದ್ದನಾಯ್ಕ, ಕೆಂಚೀರಯ್ಯ, ಕಾಣು, ಕಾಯಕದ ಕಬರಯ್ಯ, ಹುಸೇನ ಸಾಬಿ, ಬಂದಾಸಾಬಿ, ಕಾರಭಾರಿ ಕುಲುಮು. ಡಾವೋ ಗಣಪು ಎಲ್ಲರೂ ಗಂಭೀರವಾಗಿ ಯೋಚಿಸ್ತಾ ಇದ್ರು. ಕಾಕಾಪುರದ ಹತ್ರದ ತನ್ನ ಹೊಲನೋಡಾಕ ಬಂದಿದ್ದ ಅಗಸರ ಗುನಗ, ಡಾವೋಗಣಪುನಾಯ್ಕ, ಕಾಕಪುರದ ಪಂಚಾಯ್ತಿ ಛೇರ್ಮನ್ ಮರಿಸಿದ್ದಯ್ಯ ಎಲ್ಲಾ ಬಂದಾಗಿತ್ತು. ಕಿಷುಣಾ ಎದ್ದವನೆ, "ನಾವೆಲ್ಲರೂ ಪಂಚಾತಿಯೊಳಗ ಸೇರಿದೀವಿ ಮತ್ತ ಸುರುಮಾಡಿಬಿಡಾನು" ಅಂತಾ ಕೇಳಿದ. ಕುಂತವರಲ್ಲಿ ಕೆಲವರು "ಯಾರು ಬರೋರಿಲ್ಲ ಸುರುಮಾಡ್ರಿ" ಅಂದ್ರು. ಗೊತ್ತನಾಯ್ಕ ಮೇಲೆದ್ದವನೆ, "ಇನ್ನೊಂದು ಸ್ವಲ್ಪ ಹೊತ್ತ ಸುಮ್ಮನಿರ್ರಿ, ಕೇಪ್ಪಂದಭಟ್ರು ಬರೋರದಾರ ಬಂದಿಂದ ಸುರುಮಾಡಾನಂತ". ತನ್ನ ಗುರುವಿಗಾಗಿ ಕಾಯ್ತಿದ್ದ ಗೊತ್ತನಾಯ್ಕ ಎಲ್ಲರನ್ನೂ ತಡದ. "ನಮ್ಮಲಮಾಣಕ್ಯರ ಪಂಚಾಯ್ತಿಯೊಳಗ ಭಟ್ರದೇನ ಕೆಲಸನೋ ಹುಡುಗ" ಹಟ್ಟಿನಾಯ್ಕ ಸಿದ್ದ ಗೊಣಗಿದ. "ಯಾರಿಗೊತ್ತು ಆ ಭಟ್ಟಂದು ಇವನದು ಅದೇನ್ನೈತೊ" ಸೋನ್ಯಾ ಹೇಳಿದ. ಗೊತ್ತನಾಯ್ಕ ಎಲ್ಲಾನು ಹೇಳಾಕಂತ ಮೇಲೆದ್ದ, ಅದ್ರ ಭಟ್ರು, ಅವನ ತಾವ ಕಾಕಪುರಕ ಬರೋ ಮುಂದ ಹೇಳಿದ್ದ ಕೆಲವು ಎಚ್ಚರಿಕೆ ಮಾತಗಳು ನೆನಪಾದವು. ಮಾತು ಬಾಯಿಗ ಬರಲಿಲ್ಲಾ, ಸುಮ್ಮನೆ ಕುಂತ್ಕೊಂಡ. "ಕೆಲ್ಸ ಬಗ್ಸಿ ಬಿಟ್ಟ ಮಂದಿ ಎಟ್ಕೊತ್ತು ಇರ್ತಾರಪ್ಪ, ಅದೇನ ತಿರ್ಮಾನ ಮಾಡಿ ಏಳ್ರಿ ಅತ್ಲಾಗೆ" ಕಿಷುಣ ಹೇಳಿದ. "ಮಾತಾಡಬಹುದು, ಗೊತ್ತಾನಾಯ್ಕ ಭಟ್ರ ಹಾದಿಕಾಯಕ ಹತ್ಯಾನ ಇನ್ನೇನ ಬರಬಹುದು ಅಲ್ಲಿವರಿಗ ಗಪ್ಪಾಗ್ರಿ" ಕಾರಭಾರಿ ಕುಲುಮು ಗೊತ್ತಾನಾಯ್ಕನ ಕಡೀಗ ನೋಡಿದ. ಗೊತ್ತಾ ನಾಯ್ಕ ಚೆಲುವಾಪುರದ ಹಾದಿಕಡೀಗ ನೋಡ್ದ. ಕೆಪ್ಪಂದಭಟ್ರು ಬರಾಕ ಹತ್ತಿದ್ರು. "ಆಯ್ತು ಸುರುಮಾಡ್ರಪ್ಪ ಏನುನಿಮ್ಮ ಮಾತಗಳು ಭಟ್ರು ಬಂದ್ರು". ಅಂತ ಹೇಳಿದ. "ನೋಡಪ್ಪ, ಪಂಚಾಯ್ತಿಯೊಳಗ ಕುಂತೋರೆ ನಮ್ಮ ವತಾರ, ಗಡ್ಡಿ ಇಪ್ಪತ ಮನಿದು ದೊಡ್ಡವತಾರ. ನಮ್ಮ ಗಡ್ಡಿಯೊಳಗ ಯಾರೂ ನಾರ್ಮದರಿಲ್ಲಾ. ಎಲ್ಲರೂ ಗಂಡಸರೆ, ಹುಲಿ ಇದ್ದಂಗ ಅದೀವಿ. ಏನೋ ನಮ್ಮಣ್ಣ

ಸಾಣು ನೆಲಹಿಡಿದಾನ, ಅದನ್ನೆ ನೆಪಮಾಡಿಕೊಂಡ ನಾಕಮಕ್ಕತಾಯಿ ಆಗಿಯೂ ಆಕಿ ಹೀಂಗ ಮಾಡ್ತಾಳ. ಅದೇಕ್ಕೆನ ಪರಿಹಾರ ಕೊಡ್ತಿರಿ ನೀವೆ ಕೊಡಾಕು" ಸೋನ್ಯಾ ಎದ್ದವನೆ ಕೇಳ್ಕಂಡ.

"ಏನಲೇ ಗೊತ್ತಾನಾಯ್ಕ ನೀ ಏನಂತಿ, ಅದು ಅವರ ಗಡ್ಡಿಗ ಸಂಬಂಧಿಸಿದ್ದು, ನೀ ಹಂಗೆಲ್ಲಾ ಮಾಡಬಾರದು". ಅಗಸರ ಗುನಗ ನೇರವಾಗೆ ಹೇಳಿದ. "ಅದೆಲ್ಲಾ ಹಂಗಲ್ಲ ಗುನಗಪ್ಪ, ನಿನಗೆಲ್ಲಾ ತಿಳಿಯೋದಿಲ್ಲಾ ಸುಮ್ಮಕಿರು. ಗಲ್ಲಿ, ವಠಾರ, ಮತ್ತು ಗಡ್ಡಿ ಅಂದ್ಕೊಂಡು ಕೂಡಬಾರದು. ಎಲ್ಲಾಕ್ಕಿಂತ ಮೊದ್ಲು ಆ ಹೆಂಗಸು ಏನಂತಾಳಂತ ಕೇಳಿ ತಿಳಿರಿ." ಭಟ್ರು ಮಾತಾಡಿಂದ ಎಲ್ಲಾರು ಗಪ್ಪಾದ್ರು. "ನೀ ಏನಂತಿ ಚೆಂಪಿ, ನಿಮ್ಮ ಗಡ್ಡಿ ಮೀಸೆ ಹೊತ್ತಗಂಡಸರು ನೀನು ಗೊತ್ತಾನಾಯ್ಕನ ಜೊತಿಗ ಸಂಬಂಧ ಇಟ್ಕೊಂಡಿಯಂತ ಪಂಚಾಯ್ತಿ ಸೇರಸಿದ್ದಾರೆ. ಅವನ್ನು ಬಿಟ್ಟ ನಿಮ್ಮ್ ಗಡ್ಡಿಯೊಳಗೆ ಇರು ಗಂಡಸನ್ನ ನೋಡ್ಕೊಂಡು ದಿನಕಳಿ ಬಹುದಿತ್ತು. ಇದೇನ ನಿನ್ನ ಕೆಲ್ಸ" ಹಟ್ಟಿಹಿರಿಯ ಕೇಳಿದ. ಚೆಂಪಿ ನೆತ್ತಿ ಉರಿಕಿತ್ತಿತ್ತು. "ನಾಯಕಪ್ಪ ನೀನೆ ಹೇಳು, ಮದ್ವಿ ಆದ ಹೊಸದ್ರಲೇ ಕಿಷಣು ತನ್ನ ಹೊಲಕ್ಕ ಕರದ. ನಾನು ಒಬ್ಬಾಕಿನೆ ಮನಿಯೊಳಗಿದ್ದಾಗ ಆ ಸೋನ್ಯಾ ಕೈ ಹಿಡದ. ಒಂದು ದಿನ ಕೆಲ್ಸಕ ಕರ್‍ಕೊಂಡು ಹೋಗಿ ಬಾಯಿಗ ಬಂದಂಗ ಬೊಗಳಿದ ಗಬಡು. ಇವರೆಲ್ಲಾ ಒತ್ತಾಯದಿಂದ ನನ್ನ ಅಡ್ಡದಾರಿ ತುಳಿಸಾಕ ನೋಡಿದ್ರು. ಅದು ನನ್ನ ಗಂಡ ಸರಿಯಾಗಿದ್ದಾಗಲೆ" ಚೆಂಪವ್ವ ದಾವಣಿ ಸೆರಗಿಂದ ಕಣ್ಣು ಒರೆಸಿಕೊಂಡ್ಲು. "ನೀಯಾಕ ಅಳ್ತಿ ಬಿಡವ್ವ, ಈಗೇನ ಆಗಿದೆ" ಸಮಾಧಾನ ಮಾಡಾಕ ನೋಡ್ದ ನಾಯಕ. "ನನ್ನ ಮನಸೆ ಸತ್ತು ಹೋಗ್ಯೆತೆ, ಅವರಮ್ಯಾಲ ನನಗ ಪ್ರೀತಿನೆ ಹುಟ್ಟಿದಂಗಾಗ್ಯೆತಿ" ತನ್ನ ವಾದವನ್ನ ಮುಂದಿಟ್ಲು.

"ನೋಡು ಚೆಂಪವ್ವ ನೀ ಹೇಳಿದ್ದೇನೊ ಸರಿ, ನಿನ್ನ ಮನಸ್ಸಿನ ವಿರುದ್ಧ ಪಂಚಾತಿ ತೀರ್ಮಾನ ತಗೊಳಾಕ ಆಗಂಗಿಲ್ಲಾ. ನೀ ಅದೇನ ಹೇಳಬೇಕಂತಿದ್ದಿಯಾ ಅದನ್ನ ಹೇಳು" ಭಟ್ಟರು ಚೆಂಪವ್ವಗ ಹೇಳಿದ್ರು. ಅದನ್ನೆ ಗಮನಿಸುತ್ತಿದ್ದ ಅಗಸರ ಗುನಗ "ಭಟ್ರೆ ಹಂಗ ಅಂದಬಿಟ್ರ ಅದಕ್ಕೇನಾರು ಅರ್ಥ ಐತಾ?. ಇದೇ ಮುಂದುವರಿತಂದ್ರ ನಮ್ಮ ಹಳ್ಳಿಗಳು ಉದ್ಧಾರ ಆದಾವ. ನಾಳೆ ಸಂಬಂಧಗಳೆಲ್ಲಾ ಕೆಟ್ಟು ಕೆರಹಿಡದು ಹೋದಾವು" ಖಾರವಾಗೆ ಮಾತಾಡಿದ. "ನೋಡು ಗುನಗ, ಇಂಥ ಸಾವರ ಪ್ರಸಂಗಗಳನ್ನ ಕಂಡೋನು ನಾನು. ಸುತ್ತ ಹಳ್ಳೀಯೊಳಗ ಇಂಥವೆ ಕೇಸಗಳಾಗ್ತಾವ, ಅವನೆಲ್ಲಾ ಬಗೆ ಹರಿಸೋರೆ ನಾವು. ನೀ ನಿನ್ನೆ ಮನ್ನೆ ಕಣ್ಣ ಬಿಟ್ಕೋನು. ವಿವೇಚನೆ ಇಟ್ಕೊಂಡು ಮಾತಾಡಬೇಕು. ಇದು ಮನಸ್ಸಿಗೆ ಸಂಬಂಧ ಪಟ್ಟಿದ್ದು, ವೈಯಕ್ತಿಕ ವಿಷಯ. ಮದ್ಲು ಬಾಯಿ ಮುಚ್ಕೊಂಡು

ಆ ಯವ್ವ ಏನುಮಾತಾಡ್ತಾಳ ಕೇಳೋನ. ಚೆಂಪವ್ವ ನೀ ಏನ ಹೆದರಬ್ಯಾಡ ನಾನದೀನಿ" ಅಂದರು ಭಟ್ಟರು. ಛೇರ್ಮನ್ ಮರಿಸಿದ್ದಯ್ಯಗ ಭಟ್ರಮಾತು ಸರಿಅನಿಸಿತು. ಬಾಯಾಗಿದ್ದ ಎಲಿಅಡಕಿ ಚಲ್ಟ ಉಗಳಿದೋನೆ, "ಭಟ್ರು ಅಂದದ್ದು ಸರಿ ಐತಿ ಅವರು ತಿಳಿದೋರು, ಅನುಭವಸ್ಥರು, ಸುತ್ತೆಲ್ಲಾ ತಿರಗಾಡಿ ತೀರ್ಮಾನ ಕೊಟ್ಟೋರು ಅವರು ತೂಕದಿಂದಲೆ ಮಾತಾಡ್ತಾರೆ. ಅವರು ಹೇಳಿದ್ದನ ಕೇಳ್ಕೊಂಡು ತೀರ್ಮಾನ ಮಾಡ್ಕೊಳ್ಳೋದು ಒಳ್ಳೆದು ಅನಿಸುತ್ತೆ. ಏನಂತಿರಪ್ಪ, ಇಲ್ಲಾ ನೀವ ನೀವೆ ಬಗೆಹರಿಸಿಕೊಳ್ಳೊದ್ಯಾದ್ರ ನಮ್ಮದೇನ ಅಭ್ಯಂತರವಿಲ್ಲ" ಅಂದವನೆ ಮಂದಿಮಾರಿ ನೋಡ್ದ. ಎಲ್ಲಾರೂ ತೆಪ್ಪಗಾದ್ರು. ಚೆನ್ನಿಂಗ, ಬದಿಯಾ ಎದ್ದವರೆ, "ಭಟ್ರು ದೊಡ್ಡೋರು ಬುದ್ಧಿವಂತರು ಅದೆಂಗಂತಾರ ಹಂಗೆ ಆಗ್ಲಿ " ಅಂದ್ರು.


"ಹಿಂಗ ಹ್ಯಾಂಗ ಆಗತೈತಿ, ನಮ್ಮ ಕುಲದಪ್ರಶ್ನಿ ನಮ್ಮ ಮರ್ಯಾದಿ ಪ್ರಶ್ನಿನೂ ಹೌದು" ಅಂತ ಸಕ್ರು ಗೊಣಗಿದ. "ಆಗಲ್ರಪ್ಪ, ಹಿಂಗಾಗೋದಿಲ್ಲ. ಆ ಹೆಣಮಗಳು ನಮ್ಮಾಕಿ, ಅಷ್ಟಸುಲಭದಿಂದ ಬಿಟ್ಟಕೊಡಾಕ ಆಗೋದಿಲ್ಲ. ಏನಬೇಕಾದ್ರ ಆಗಲಿ ಗೊತ್ತಾನಾಯ್ಕ ಅಕಿ ಸುದ್ದಿ ಬಿಟ್ಟಬಿಡಬೇಕು ಹಂಗೇನಾದ್ರು ಇನ್ನ ಮ್ಯಾಲ ಆ ಕಡೀಗ ಕಾಲಿಟ್ಟ ಅಂತಂದ್ರ ಕಾಲಕಡದ ಹಾಕ್ತಿವಿ". ಸೋನ್ಯಾನಾಯ್ಕ ಚೆಂಪಿ ಕಡೀಗ ಹಸ್ಕೊಂಡವನಂತ ನೋಡ್ತಾ ಹೇಳ್ದ. "ಎಯ್ , ಮುಚ್ಕೊಬಾಯಿ, ಭಾರಿಶೂರ ಇವನು, ಕಾಲಕಡಿತಾನಂತ, ಹೋಗಿ ನಿನ್ನ ಮನಿಮುಂದ ನಾಯಿ ಬೆಕ್ಕ ಅದಾವೇನ ಅವುಗಳ ಕಾಲ ಕಡ್ಕೊಹೋಗು. ಈ ಸಂಬಂಧ ಆ ಹೆಂಗಸಿಗೆ ಮತ್ತ ನಮ್ಮಣ್ಣಗೆ ಸಂಬಂಧಿಸಿದ್ದು ನಿಮಗ್ಯಾಕ ಬೇಕು" ಗೊತ್ತಾನ ತಮ್ಮ ಕಟುವಾ ಹೆಗಲ ಮ್ಯಾಲಿದ್ದ ಟವೇಲು ತಗದು ಜಾಡಿಸಿ ಆವೇಷದಿಂದ ಹೇಳಿದ. "ಎಯ್ ನೀಯಾವನ್ಲೆ ಮಗನೆ ನಡಕ ಬಾಯಿ ಹಾಕೋನು. ಸೋನ್ಯಾ ಅಣ್ಣ ನಮ್ಮ ಹಂದೋಣಿ ತಾಲ್ಲೂಕಿಗೆ ದೊಡ್ಡ ಮನುಷ್ಯ ಎಂಥೆಂಥ ಛೇರ್ಮನ್ನರು, ಎಂ.ಎಲ್.ಎ. ಗಳು ಅವನತಾವ ಬರ್ತಾರ ನೀವೇನು ಪುಟಗೋಸಿಗಳು" ಅಂತ ಮ್ಯಾಲೆದ್ದ ಚೋಕ್ಯ. "ಏನಂದ್ಯೋ ನಿನ್ನ ಸಾಕದೋಳನ್ನ, ಮಗನೆ ಅಂತಿಯಾ, ನಿಮ್ಮಪ್ಪಗ ಹುಟ್ಟಿದೋನೆ ಆಗಿದ್ರ ಕಟ್ಟಿ ಬಿಟ್ಟು ಬಾರಲೇ ಎಯ್, ಯಾರ್ಯಾರವು ಮೀಸೆ ಆದಾವಲ್ಲ ಅವರೆಲ್ಲಾ ಬರ್ರಲೇ" ಅಂತ ಗೊತ್ತಾನಾಯ್ಕ ಎದ್ದ ಬಿಟ್ಟ. ಕೆಪ್ಪ ಅಂದಭಟ್ಟರು "ಲೇ ಹುಡುಗ ಗೊತ್ತಾನಾಯ್ಕ ನೀವ ನೀವ ಹಿಂಗ ಸಿಟ್ಟುಸೆಡವು ಮಾಡ್ಕೊಂಡು ಹಾರಾಡೋದಾದ್ರ ನಮ್ಮನ್ಯಾಕ ಕರದ್ರಿ. ಅಷ್ಟದೂರದ ಚೆಲುವಾಪುರದಿಂದ ನಡ್ಕೊಂಡ ಬರೊದಾರ ಏನಿತ್ತ ನಮ್ಗ. ಹಂಗಾದ್ರ ಹಟ್ಟಿಹಿರಿಯ ಕಾರಭಾರಿ ನೀವೆ

ಮಾಡ್ಕೊಳ್ರೀ, ನಾವ್ಯಾಕ ನಿಮ್ಮ ನಡಕ" ಮೇಲೆದ್ದರು. ಹಟ್ಟಿಗೌಡ ಓಡಿ ಬಂದವನೆ ತಮ್ಮಿಂದ ಬಗಿಹರಿಯೋದಲ್ಲಾ ಅಂತ ಗೊತ್ತಾತು ಅದ್ಕೆ, "ಧಣಿ ನೀವೆ ತೀರ್ಮಾನ ಮಾಡಾಕು ಈ ಕೇಸು ತಾವೇ ಬಗೆ ಹರಿಸಿ" ಅಂತ ಮುಂದಬಂದ. ಗುನಗನಿಗೆ ಅಷ್ಟೇ ಬೇಕಾಗಿತ್ತು. ಭಟ್ರು ಅದನ್ನ ತಿಳ್ಕೊಂಡೆ ಹೆದರ್ಸೋ ಆಟ ಆಡಿದ್ರು ಹಟ್ಟಿಹಿರಿಯ ಹಿಂದಕ್ಕ ತಿರುಗಿದವನೆ, "ನಿಮ್ಮಾಪ್ರ, ಜ್ಞಾನಿ, ತಿಳವಳಿಕೆ ಇರೋ ಪಂಡಿತ್ರು ಬಂದಾರ, ನಾಕ ಬುದ್ದಿಮಾತು ಹೇಳ್ತಾರ ಅಂಥನಾವಿದ್ರ ನಿಮ್ಮದೇನ ಎತ್ಕೊಂಡಿರಲ್ಲಾ. ಸರಿರಪ್ಪಾ ನೀವೆ ಮಾಡ್ಕೊಳ್ರಿ ನಾವೆಲ್ಲಾ ಎದ್ದ ಹೊಕ್ತೀವಿ" ಹೊರಡಾಕ ಮುಂದಾದ. "ಇರ್ಲಿಬಾ ನಾಯಕಣ್ಣಾ. ಇನ್ನೂ ಬಹಳ ಅನುಭವಿಸಬೇಕು. ಬಂದುಬಿಡು. ಬಹಳ ನೀರುಕುಡಿಯಾಕು, ಬಹಳ ದೂರನಡಿಬೇಕು ಏನುಮಾಡೋದು ನಾವೆ ಸುಧಾರಿಸಕೋಬೇಕು" ಸಮಾಧಾನ ಮಾಡಿದ ಹುಸೇನಸಾಬಿ. ಎಲ್ಲರೂ ತಮ್ಮ ತಮ್ಮ ಜಾಗದಾಗ ಕುತ್ಕೊಂಡ್ರು. ಅಲ್ಲಿವರಿಗ ಸುಧಾರಿಸಿಕೊಂಡಿದ್ದ ಮೀಟಿಬಾಯಿ, ಎದ್ದಾಕಿನೆ "ಏನ್ರಪ್ಪ, ನಿಮ್ಮ ಬಾಯಿಗ ಬಂದಂಗ ಮಾತಾಡಿದ್ರ ಆತು, ನಮ್ಮನ್ನೇನ ಅಷ್ಟುಹಡ್ಡಂತ ತಿಳಿದೀರೊ ಹ್ಯಾಂಗ. ಆವಾಗಿಂದ್ಲು ಕೇಳ್ತಾನೆ ಅದೀನಿ, ತಾಂಡ ಅಂತಂದ್ರ ಬರಿ ಒಂದೇ ಗಡ್ಡಿನಾ? ಬಾಕಿದೋರೆಲ್ಲಾ ಸತ್ತಾರೇನು ? ಬರ್ರಿ ಯಾರ್ಯಾರ ಬತ್ತೀರಿ ನೋಡ್ತಿನಿ, ನಿಮಗೆಲ್ಲಾ ನಾ ಒಬ್ಬಾಕಿನೆ ಸಾಕು" ಎಷ್ಟೋ ದಿನದ ಸಿಟ್ಟು ಹೊರಗಹಾಕಿದ್ಲು. ಯಾರೊಬ್ಬರು ಮಾತಾಡಲಿಲ್ಲ.

ಅದೇ ಸಂದರ್ಭಕ್ಕ ಕಾಯ್ತಿದ್ದ ಚೆಂಪವ್ವ ಎದ್ದಾಕಿನೆ, "ಹಿರಿಯರೆ ಪಂಚಾಯ್ತಿಯೊಳಗಿನ ಎಲ್ಲಾ ಪಂಚಾಯ್ತಿದಾರ್ರೆ ಎಲ್ಲಾ ಹಿರಿಯರೆ ನಾ ಒಂದಮಾತು ಹೇಳ್ತಿನಿ, ನೀವೆ ತಿಳ್ಕೊಂಡು ಅದೇನ ತೀರ್ಮಾನ ಕೊಟ್ರೂನು ಅದನ್ನ ಒಪ್ಪಿಕೊಳ್ಳೀನಿ" ಮಂದಿ ಗುಸುಗುಸು ಮಾತಾಡತೊಡಗಿದರು. ಏನು ಗಟ್ಟಿ ಹೆಂಗಸಂತ ಕೆಲವರು, ಗಂಡ ಇನ್ನೂ ಜೀವಂತ ಅದಾನ, ಇರುವಾಗ್ಲೆ ಹಿಂಗ ಮಾಡಾಕಹತ್ಯಾಳಂತ ಗೊತ್ತಾನಾಯ್ಕನಿಗೆ ದಿಗಲಾಯ್ತು. ಏನಾರು ಎಡವಟ್ಟು ನಿರ್ಧಾರ ಮಾಡಗೀಡ್ಯಾಳಂತ ಅವನ ಮಕ ಬಿಳಚಿಕೊಳ್ತು. ಒರೆಗಣ್ಣಿಂದ ಅಕಿ ಕಡೀಗ ನೋಡಿದ. ಅಕಿ ಕಣ್ಣು ಮಿಟುಕಸಿ ಭರವಸೆ ಕೊಟ್ಲು. ಮಂದಿ ಕಾತರದಿಂದ ಏನಂತಾಳಂತ ಅಕಿಕಡೀಗ ಮನಸಕೊಟ್ರು. ತನ್ನ ದೃಢವಾದ ನಿರ್ಧಾರವನ್ನು ಗಂಟಾಘೋಷವಾಗಿ ಸಾರಿ ಹೇಳಾಕ ಗಟ್ಟಿಮನಸ್ಸು ಮಾಡಿ ಇಂತಹ ಅವಕಾಶ ಬಿಟ್ರೆ ಈ ಮಂದಿ ತನ್ನ ಹರ್ಕೊಂಡು ತಿಂತಾರ ಈ ಊರ್ನಾಗ ಬಾಳೇವ ಮಾಡೋದ ಕಷ್ಟ ಆದೀತು ಅಂದಾಕೀನೆ: "ನೀವು ಯಾರು ಏನುಬೇಕಾರು ಹೇಳ್ರಿ?

ಏನುಬೇಕಾರ್ರು ಮಾಡ್ಕೊಳ್ರಿ? ನನಗ ಯಾರ ಗಡ್ಡಿ ಬೇಕಿಲ್ಲಾ, ಏನು ಬೇಕಿಲ್ಲ ಅವನನ್ನೆ ಒಪ್ಕೊಂಡೀನಿ ಯಾರ ಏನು ಮಾಡಿದ್ರು ಅವನ್ನ ಬಿಡಂಗಿಲ್ಲಾ ಇಷ್ಟೆ ನನ್ನ ಮಾತು. ಇದ್ರ ಮೇಲಿಂದು ನಿಮ್ದು. ಆದ್ರ ಒಂದುಮಾತು ಯಾರಾರು ಏನಾರು ಮಾಡಕ ಬಂದ್ರ ನಾನು ಸುಮ್ಮನಿರಂಗಿಲ್ಲಾ" ಅಳಕಿಲ್ಲದೆ ಮಾತು ಮುಗಸಿ ತಾನು ಕುಂತ್ಕೊಂಡಿದ್ದ ಹತ್ರ ಹೋಗಿ ಕುಂತ್ಲು. ಬಾಣವ್ವಗ ಯಾರೊ ಎದಿಗ ಕಲ್ಲುತಗೊಂಡು ಹೃದಯ ಹೊಡಿಯೊ ಮಟಾನು ಹೊಡಿತಿರೊ ಹಂಗನಿಸಿತು. ಅವನು ಹೊಡದಿದ್ದ ತಲಿಯಾನ ಗಾಯ ಮಾದಿರಲಿಲ್ಲಾ ಅದು ಜುಮುಜುಮು ಅಂತ ನೋಯತೊಡಗಿತು. ತನ್ನ ಅಸ್ತಿತ್ವ ಕಸ್ಕೊಳ್ಳಾಕ ತಯಾರಾಗಿರೊ ತನ್ನ ಸವತಿಯನ್ನ ಸುತಾರಂ ಒಪ್ಕೊಳ್ಳೊದಿಲ್ಲಾಂತ ಕೂಗಿ ಹೇಳಬೇಕಂತ ಎಷ್ಟು ಜೋರಾಗಿ ಬಾಯಿ ತಗದ್ರು ಯಾರೋ ಗಂಟಲು ಹಿಚುಕಿದಂಗಾಗಿ ಮಾತೇಹೊರಗೆ ಬರ್ತಿರಲಿಲ್ಲಾ. ಯಾರವರು ? ಸಮಾಜ? ಅವಳತ್ತೆ? ಅವಳ ಗಂಡನ ಮರ್ಯಾದೆ? ಮಕ್ಕಳ ಭವಿಷ್ಯ? ತನ್ನ ಅಸಹಾಯಕ ಬದುಕು? ಅಕಿ ತಲಿಯೊಳಗ ನಡಿತಿರೊ ಸಂಘರ್ಷಕ ಕೊನೇನೆ ಇಲ್ದಂಗಾಗಿತ್ತು. ಕಟ್ಟಿಗೆ ಮಾರಿದ್ದು, ಬ್ಯಾರೆ ಆಗಿದ್ರ ಹೊಸದ್ರಲ್ಲಿ ಒಂದು ಒಪ್ಪತ್ತು ಮಕ್ಕಳನ್ನು ಉಪಾಸ ಇಟಿದ್ಕ ಸಾಯೋ ನಿರ್ಧಾರ ಮಾಡಿದ್ದು, ಪುಟ್ಟಿಕೆಳಗ ಹಾಕಿ ಮುಚ್ಚೋ ಹಂಗಿರೊ ಚಿಕ್ಕ ಚಿಕ್ಕ ಮಕ್ಕಳ ಭವಿಷ್ಯ ಒಮ್ಮೆಗೆ ನುಗ್ಗಿ ಬಂದು ಅಳು ತಡಿಯಾಕ ಆಗದೆ ಬಿಕ್ಕಳಿಸಿದ್ಲು. ಅವಳ ಹಿರಿಮಗಳು ಗಮಣು ಕೇಳಿಸಿಕೊಂಡಾಕಿನೆ ಹತ್ರ ಹೋಗಿ "ಯವ್ವ, ಯಾಕ ಅಳ್ತಿದ್ದೀಯಾ ಸುಮ್ನಾಗಬೇ, ಕೇಳಿದ ಮಂದಿನಾರು ಏನಂದಾರು. ಹತ್ತ ಮಕ್ಕಳನ್ನ ಹಡದೀಯಾ ನಾ-ನೀ ಅನ್ನೋದ್ರಾಗ ಎಲ್ರೂ ದುಡಿಮಿಗ ಬಂದು ಬಿಡ್ತಾರ ನಮ್ಮದೇನ ಯೋಚ್ನೇಮಾಡಾಕ ಹೋಗಬೇಡ. ಯಾವಾನಾರು ಕಟ್ಕೊಂಡು ಓಡಿಹೋದ್ರೂ ಅವನೆ ನಿನ್ನ ಅಳಿಯಾ ಅನಿಸಿಕೊಂತಾನ ಯವ್ವಾ ನೀ ಮನಸ್ತಾಪ ಮಾಡ್ಕೊ ಬೇಡಾ ನನ್ನ ಸೌತಿ ಅದೆಂಥಾ ಮಾಟ ಮಾಡ್ಸ್ಯಾಳೊ ಏನೊ. ಒಂದುಗಳಿಗಿ ನಾಗರಹಾವು ಕಡದು ಸಾಯಿಬಾರದ" ಎರಡೂ ಕೈ ಮುಂದು ಮಾಡಿ ಲಟಕಿ ಮುರುದ್ಲು. ಪೆಕ್ರನಂತ ನುಗ್ಲಾಗ ಹಿಂದು ತಿಳೀಯಂಗಿಲ್ಲಾ. ಸುಮ್ನೆ ಮಂದಿ ಮಾತಾಡೋದನ್ನ ನೋಡ್ತಿದ್ದ. ಎರೆಡನೆಯವನಾದ ಗೊಂದಾಮಾತ್ರ ಒಳಗೊಳಗೆ ಹಲ್ಲ ಕಡಿತಿದ್ದ. ಏನು ನಡದ್ಯೆತಂತ ಸರಿಯಾಗಿ ತಿಳಿಯಾಕ ಆಗದಿದ್ರು ಏನೋ ಅವನವ್ವನ ಮನಸ್ಸಿಗ ಘಾತ ಆಗೊ ಅಂತದ್ದ ನಡದ್ಯೆತಿ ಅಂತೇಳಿ ಗ್ರಹಿಸಿಕೊಂಡು ತನ್ನ ಸಿಟ್ಟು ಒಳಗೊಳಗ ತೋರಿಸುತ್ತಿದ್ದ. ಹನುಮ, ಪಿಣು, ಪಾಂಗೋಶಿ, ಜಂಬಗ, ಕುಮಾರಿ, ಚೆನ್ನಂಗಿ, ಏನೂ ಅರಿಯದ ಕೂಸುಗಳು ತಮ್ಮ ಪಾಡಿಗ ತಾವು ಆಟ ಆಡಾಕ ಹತ್ತಿದ್ದು.

ಪಂಚಾತಿ ಕಟ್ಟಿ ಮ್ಯಾಲ ಮಂದಿ ನಾಯಿ ಕಚ್ಚಾಡ್ಡಂಗ ಕಚ್ಚಾಡ್ತಿದ್ರು. ಯಾವ ನಿರ್ಣಯಕ್ಕೂ ಬರಲಿಲ್ಲಾ. ಎಲ್ಲಾ ತಮ್ಮ ತಮ್ಮ ಅಭಿಪ್ರಾಯ ಹೇಳಿ ಜಾಗ ಖಾಲಿ ಮಾಡಿದ್ರು. ಭಟ್ರು, ಹಟ್ಟಿಹಿರಿಯ, ಕಾರಭಾರಿ ಮತ್ತ ಡಾವ್ಯೊ, ಗೊತ್ತಾನಾಯ್ಕಗ ಬುದ್ಧಿವಾದ ಹೇಳೀದ್ರು. ಆದ್ರ ಅವನು ಆ ಎಲ್ಲಾ ಹಂತ ದಾಟ್ಕೊಂಡು ಹೋಗಿದ್ಕ ಅವರು ಹೇಳ್ತಿದ್ದ ಶಬ್ಧಗಳು ತಲಿಯಾಗ ಹೋಗದೆ ಅಕ್ಕಪಕ್ಕದಾಗೆ ಹಾದು ಹೊಂಟಿದ್ವು. ಹೇಳೊವರಿಗೆ ಹೇಳಿ ಅವರಪಾಡಿಗ ಅವರು ಹೋದ್ರು. ಅವನು ಕೇಳೊ ಆಟು ಕೇಳಿದ, ಹೂಂ ಅಂದು ಮನಿಗ ಹ್ವಾದ್ರ ಮತ್ತ ರಾಮಾಯಣ ನಡೆಯೋದು ಖಾತ್ರಿ ಮಾಡ್ಕೊಂಡು ಗದ್ದಿಗ ನೀರಹಾಸಕ ಹೊಂಟು ಬಿಟ್ಟ. ಪರಿಸ್ಥಿತಿ ತಿಳಿಯಾಗೊ ಮಟ ಮನಿ ಮಂದಿಯೊಂದಿಗೆ ಸರಿಯಾಗಿ ನಡ್ಕೊಂಡು ರಾತ್ರಿ ನೀರ ಹಾಸೊ ನೆಪ ಹೇಳಿ ಚಂಪಿ ಮನಿಗ ಹೋಗ ತೊಡಗಿದ. ಆರಂಭದ ಹುರುಪಿನೊಳಗ ಲಗುಬಗೆಯಿಂದ ಅಡ್ಡಾಡ್ತಿದ್ದ. ಇಲ್ಲೂ ವೈಮನಸ್ಸು, ವೈಪರಿತ್ಯ ಆರಂಭ ಆದಿಂದ ಕಟ್ಕೊಂಡೊಳು, ಇಟ್ಕೊಂಡೊಳ ನಡುವಿನ ವ್ಯತ್ಯಾಸ ಗೊತ್ತಾತು. ಬರೋದು ದಿನಕ ಒಂದಸಲ ಇದ್ದಿದ್ದು ಎರಡ ದಿನಕೊಮ್ಮೆ ಬತಾಬರ್ತಾ ವಾರಕ್ಕೊಮ್ಮೆ ಆತು. ತನ್ನ ಹೇಣ್ತಿ, ಮಕ್ಕಳು, ದುಡಿಮೆ, ನಡುವೆ ಚಂಪಿ ನೆನಪು ಮಾಸ್ತಿರೊ ಹಂಗನಿಸಿತು.



ಹೊಲ ಖರೀದಿಗೆ ಅಡ್ಡಗಾಲು ಹಾಕಿದವರು

ಗೊತ್ತಾನಾಯ್ಕನ ಛಲಮಾತ್ರ ಕಮ್ಮಿಯಾಗಿರಲಿಲ್ಲಾ. ಆರೆತ್ತಿನ ಕಮತ ಮಾಡಬೇಕು. ಸಿಕ್ಕಷ್ಟು ಭೂಮಿಯನ್ನು ಖರೀದಿ ಮಾಡ್ಕೊಬೇಕು ಅನ್ನೋದೆ ಅವನ ಮಹದಾಶೆಯಾಗಿತ್ತು. ಪಾಣಿಶೆಟ್ಟಿಯ ಮಕ್ಕಳು, ಹೊಲಮಾರಿ ಪ್ಯಾಟೀಗ ಹೋಗೊ ಯೋಚನೆ ಇಟ್ಕೊಂಡಿದ್ರು. ಪಾಣಿಶೆಟ್ಟಿ ಚೆಲುವಾಪುರದಾಗ ದೊಡ್ಡಕಿರಾಣಿ ಅಂಗಡಿ ಇಟ್ಕೊಂಡು ಚೆನ್ನಾಗಿ ಕಮಾಯಿಸಿ ಕಾಕಾಪುರದ ಹಾಸಿಗಿಯೊಳಗ ಹದಿನೈದು ಎಕರೆ ಒಳ್ಳೆ ಕೆಂಪು ಮಣ್ಣಿನ ಜಮೀನು ತಗೊಂಡಿದ್ದ. ಪಾಣಿಶೆಟ್ಟಿ ಸತ್ತಿಂದ ಅವನ ಇಬ್ಬರು ಮಕ್ಕಳು ಚೆಲುವಾಪುರ ಬಿಡೊ ಯೋಚನೆ ಮಾಡಿದ್ರು. ಆ ಮಾತು ಕೇಳಿದ ಕೆಪ್ಪಲಂದಭಟ್ಟ ಗೊತ್ತನಾಯ್ಕನಿಗ ಸುದ್ದಿ ಮುಟ್ಟಿಸಿಂದ ಹೆಂಗಾರ ಮಾಡಿ ಜಮೀನು ಖರೀದಿಸಬೇಕಂತೇಳಿ ಯೋಚನೆ ಮಾಡಿದ. ಅವನವ್ವ ಮೀಟಿಬಾಯಿ ಆಗ್ಲೆ ಹಾಸಿಗಿ ಹಿಡದಿದ್ಲು. ಗೊತ್ತಾನಾಯ್ಕ ಹೊಲಖರೀದಿಮಾಡ್ತಿರೋದು ಮೀಟಿಬಾಯಿಗ ತಿಳೀದಿದ್ದೆ ಅವನ ಕರೆಯಿಸಿ "ಮಗ, ನಿನ್ನ ಹಿಂದೆ ನಿನ್ನ ಎಂಜಲು

ಮಲಿಯುಂಡ ಇಬ್ಬರು ಅದಾರನೋಡು, ನಿನಗ ನೆನಪಿದ್ರ ಸಾಕು ನೀ ಹಿಡಿಯೋ ಹೊಲ್ದಾಗಿಂದ ಅರ್ಧನ ಅವರಿಬ್ಬರಿಗ ಬಿಟ್ಕೊಡು" ಅಂದ್ಲು. "ಆಯ್ತು ಅವರನ್ನ ಬಿಟ್ಟು ನಾ ಒಬ್ಬನೆ ಏನನ್ನು ಮಾಡಿದ್ದಿಲ್ಲ, ಒಂದರೊಟ್ಟಿಯೊಳಗಿಂದ ಅರ್ಧ ಕೊಡ್ತಿನಿ." ಅಂತ ಮಾತು ಕೊಟ್ಟಿಂದ ಮುದುಕಿ ನೆಮ್ಮದಿಯಿಂದ ಉಸರುಬಿಟ್ಲು. "ಹಾಳ ಮನಿ ದೇವ್ರು ಮಕ್ಕಳ ಸಿರಿ ಸಂಪತ್ತು ದಿಂಡ ದಿರ್ಬೇವು ನೋಡಾನಂತಿದ್ರೆ ಈಗ್ಲೆ ನೆಲಕ್ಕ ಬೀಳಿಸಿದ್ನ." ಅಂತ ಹಳಹಳಿಸತೊಡಗಿದ್ಲು. ಆಕಿ ಮಾಡೊ ಅವತಾರದಾಗ ಮನಿಮಂದಿ ರೋಸಿ ಹೋಗಿದ್ರು. ಆರುತಿಂಗಳಿಂದ ಹಾಸಗಿ ಬಿಟ್ಟು ಎದ್ದಿರಲಿಲ್ಲಾ. ಮಲಗಿದ್ದಲ್ಲೆ ಎಲ್ಲಾನು ಮಾಡ್ತಿದ್ಲು. ಕಟುವಾನ ಮೊದಲನೆ ಹೇಣ್ತಿ ಚಾಂವಿ "ಎಲ್ಲಿಯವಳೋ ಏನೊ ಹಾಳಮನಿ ಮುದುಕಿ, ಅತ್ಲಾಗ ಗಡಾನೆ ಸಾಯ ಬಾರ್ದ ಆ ದೇವರು ಇಕಿ ಹಣೆ ಬರಹದ ಚೀಟಿ ಎಲ್ಲೊ ಕಳದಿರೊ ಹಂಗ ಕಾಣತೈತಿ" ತನ್ನ ಸಿಟ್ಟು ವ್ಯಕ್ತಪಡಿಸತೊಡಗಿದ್ಲು. ಮುದುಕಿ ಹತ್ರಾನೆ ಇದ್ದು ಮೇಲ್ನೋಟಕ್ಕೆ ಸೇವೆ ಮಾಡ್ದಂಗ ಮಾಡಿ ಆಕಿ ಹತ್ರ ಇದ್ದ ಕಸೂತಿ ಕೆಲಸದ ಅರವಿಗಳನ್ನ, ಇದ್ದ ಆಟು ಬೆಳ್ಳಿ ರೂಪಾಯಿಗಳನ್ನು ಲಪಟಾಯಿಸಿಕೊಂಡ್ಲು. ಮುದುಕಿ ಹಿರಿಮಗ ಗೊತ್ತಾನಾಯ್ಕನ ಹತ್ರ ಬಾಯಿ ಬಿಡಾಕ ಮುಂಚೆ ಸತ್ಲು. ಗೊತ್ತಾನಾಯ್ಕಗ ಬಹಳ ದುಃಖಾಗಿತ್ತು. ತನ್ನ ಮನಿತನದ ನಡಿವಿನಕಂಬ ಉರುಳಿಹೋತಲ್ಲ ಅಂತ ರೋದಿಸಿದ. ಇಡೀ ನಮ್ಮವಂಶದ ಭದ್ರ ಬುನಾದಿಯಾಗಿದ್ದ ತನ್ನ ತಾಯಿ ಇನ್ನೂ ಬದುಕಬೇಕಿತ್ತು. ಎಲ್ಲಿಂದಲೋ ಹಕ್ಕಿಯಂಗ ಹಾರಿ ಬಂದು ಕಾಕಾಪುರದೊಳಗೆ ಒಂದು ಅಸ್ತಿತ್ವವನ್ನು ಕಲ್ಪಿಸಿ ಇನ್ನೇನು ಒಳ್ಳೆಕಾಲ ಬಂದಾವು ಅನ್ನುವಾಗ್ಲೆ ಹೀಂಗ ಹೋಗಿಬಿಟ್ಟಳು. "ಮುದುಕಿ ಸತ್ತಿದು ಪಾಡಾತುನೋಡು" ಅಂತೇಳಿ ಒಂದಿಷ್ಟು ಮಂದಿ ಮಾತಾಡಿಕೊಳ್ಳತೊಡಗಿದರು. ಗೊತ್ತನಾಯ್ಕ, ಕಟುವಾನಾಯ್ಕ ಮತ್ತ ಅವರ ತಂಗಿ ಪಾಮಿ ಮುದುಕ ಬುದ್ದನಾಯ್ಕ ಅನಾಥರಾಗಿದ್ದರು. "ಏನುಮಾಡೋದು ಆಕಿ ಹಣೆಬರಹದಾಗ ಆಟ ಬರದಿತ್ತು, ಆಟದಿನ ಬದುಕಿದ್ಲು ಹೋದ್ಲು" ಅಂತಾ ಬುದ್ದನಾಯ್ಕ ನಿರ್ಲಿಪ್ತನಾದ.

ಗೊತ್ತನಾಯ್ಕ ಮೈಕೊಡವಿಕೊಂಡು ಎದ್ದ. ಪಾಣಿಶೆಟ್ಟಿಯ ಹದಿನೈದು ಎಕರೆ ತರಿಜಮೀನು, ಅದು ಊರಪಕ್ಕದಾಗೆ ಇದ್ದಿದ್ಕ, ಹಟ್ಟಿಹಿರಿಯ, ಹುತ್ತಪ್ಪ, ಸೋನ್ಯಾ, ಗಬಡು, ಚೊಕ್ಕ, ಗುಂಪು ಗುಂಪಾಗಿ ಚೆಲುವಾಪುರದ ಕಡೀಗ ಹೋಗಿ ಪಾಣಿಶೆಟ್ಟಿಯ ಇಬ್ಬರು ಮಕ್ಕಳ ಹತ್ರ ಸುಕಾಸುಮ್ಮನೆ ಹಾಳ ಬಿದ್ದಿದ್ದಅಂಗಡಿಮುಂದ ಕುತ್ಕೊಂಡ. ಹಂಗಾತ ಶೆಟ್ರು, ಹಿಂಗಾತು ಅಂತ ಮಾತಾಡಿ, ಹೊಲ ಕೊಡೋದಾರ ನಮಗೆ ಕೊಡಬೇಕಂತ ತಾಕತ್ತ ಮಾಡಿ, ಹುಡ್ರ ಆಗಿದ್ಕ ಸ್ವಲ್ಪ ಹೆದರಿಸಿ ಬರ್ತಿದ್ರು. ಮತ್ತೊಂದು

ಗುಂಪು ಹೋಗಿ ನೋಡ್ರಿ, ಶೆಟ್ರೆ ನಿಮ್ಮಪ್ಪ ಇದ್ದಾಗ ನಮ್ಮೂರಿಗ ಬಹಳ ಬರ್ತಿದ್ರು. ಬಂದ್ರೆ ನಮ್ಮ ಮನಿ ಕಟ್ಟಿಮ್ಯಾಲ ಕುತ್ಕೊಂಡು ನೀರು ಮಜ್ಜಿಗೆ ಕುಡ್ಕೊಂಡು ಹೋಗ್ತಿದ್ರು, ನೋಡ್ರಿ ನಮಗಾ ಹೊಲ ಕೊಡಬೇಕು. ಇಲ್ಲಂದ್ರ ಯಾರಿಗೂ ಕೊಡಬ್ಯಾಡ್ರಿ. ಅದೆಂಗ ಕೊಡ್ತಿರಿ ನೋಡೆ ಬಿಡ್ತಿವಿ, ಅಂತ ತಲಿಯಾಗ ಹುಳ ಬಿಟ್ಟು ಬರ್ತಿದ್ರು. ಹುಡುಗರಿಗೆ ಅವರೆಲ್ಲರನ್ನೂ ನಿಭಾಯಿಸೋದು ಸಮಸ್ಯೆಯಾಗಿತ್ತು. ಶೆಟ್ರ ಹುಡುಗರಿಗೆ ಅವರು ಹೇಳಿದ್ದು ತಲಿಯೊಳಗೆ ಇರಲಿಲ್ಲಾ. ಕೆಪ್ಪಲಿಂದಭಟ್ಟರು ಅವರನ್ನ ಕುಂದ್ರಿಸಿ ಹೇಳಿದ್ರು. "ನೋಡ್ರಪ್ಪ ರಾಮಶೆಟ್ಟಿ, ಲಕ್ಷಣ ಶೆಟ್ಟಿ ನಮ್ಮ ಆಸ್ತಿ ಮಾರಬೇಕಾದ್ರು ಯೋಗ್ಯರಿಗೆ ಕೋಡಬೇಕು. ಅದು ನಮ್ಮ ಧರ್ಮ. ಮಾರಿದ ತಕ್ಷಣ ನಮಗೂ ನಮ್ಮ ಆಸ್ತಿಗೂ ಸಂಬಂಧ ಮುಗಿತು ಅಂತ ತಿಳಿಯಬಾರದು. ಅದು ಯೋಗ್ಯವಾದ ವ್ಯಕ್ತಿಯ ಕೈಸೇರಿತಾಂತ ಆಲೋಚನೆಮಾಡಬೇಕಾದ್ದು ಬಹಳ ಮುಖ್ಯವಾದ್ದು. ಅದಕ್ಕೆ ನಾನು ಹೇಳೊದೇನಂದ್ರೆ ಗೊತ್ತಾನಾಯ್ಕನೆ ಯೋಗ್ಯ, ಶ್ರೇಷ್ಠವ್ಯಕ್ತಿ, ನಿಮ್ಮಪ್ಪ ಬದುಕಿದ್ದಾಗ್ಲೆ ಆತನಿಗೆ ಕೊಡಬೇಕು ಅಂತ ನನಗೆ ಹೇಳ್ತಿದ್ದ. ಯಾರು ಏನಂದ್ರು ಅವನಿಗ ಕೊಡೋದು ಒಳಿತು" ಅಂತಂದು ಸರಿಯಾಗಿ ತಿಳಿಸಿ ಹೇಳಿದ್ದ. ಹುಡ್ರು ಭಟ್ಟರ ಮಾತು ಕೇಳ್ತಿದ್ರು. ಅವರು ಹೇಳಿಂದ ಮುಗಿತಂತ ತಿಳ್ಕೊಂಡಿದ್ರು. ಸೋನ್ಯಾ, ಅಗಸರ ಗುನಗನ ಕಡಿಂದ ಪ್ರಯತ್ನ ನಡಸಿದ್ದ. ಹಟ್ಟಿಹಿರಿಯ ಶಂಭುಭಟ್ಟನ್ನ ಬಿಟ್ಟಿದ್ದಾ. ಅಗಸರ ಗುನಗ ಹೋಗಿ "ಲೇ ಹುಡ್ರ ಯಾವಾನೂ ರೊಕ್ಕ ಹೆಚ್ಚು ಕೊಡ್ತಾನಲ್ಲ ಅವನ ಹೆಸರಿಗ ಹೋಲ ಬರೀರಿ, ಯಾರೇನು ನಿಮ್ಮಪ್ಪಗ ಸಂಬಂಧಿಕರಲ್ಲಾ. ಅವನ್ಯಾವನೊ ಗೊತ್ತಾನಾಯ್ಕನಿಗೆ ಕೊಡ್ತೀನಿ ಗಿಡ್ತೀನಿ ಅಂತೀರಂತ, ಯಾಕ ? ಅವನೇನಾರ ನಿಮ್ಮ ಸಂಬಂಧಿನ, ಅಂವ ಲಮಾಣಿಗ ನೀವು ಶೇಟ್ರು. ಅವನಿಗೂ ನಿಮಗೂ ಯಾವ ಸಂಬಂಧಿಲ್ಲಾ ಸೂತ್ರಿಲ್ಲಾ". ಒಂದ ಗಂಟಿಕಾಲ ಕೊರದಿದ್ದ. ರಾಮ ಲಕ್ಷಣ ಶೆಟ್ಟಿಗ ಹೊಲ ಹಂಗೆ ಬೀಳು ಬಿದ್ದಿರವಲ್ಲದಾಕ ಮಾರೋದೆ ಬ್ಯಾಡ ಅನಿಸಿತು.

ಬಸವಣ್ಣ ದೇವರ ಗುಡಿಯಾಗ ಕಾಕಾಪುರದ ಎಲ್ಲಾ ಕಿಲಾಡಿಗಳು ಸೇರಿದ್ರು. ಗೊತ್ತಾನಾಯ್ಕ, ಕಟುವಾ, ಪಾಮಿ, ಮೂವರೆ ಒಂದು ಕಡೀಗಿದ್ರ, ಇಡೀ ಊರಿಗ ಊರೆ ಒಂದ್ಕಡೆ. "ಆ ಶೆಟ್ಟಿ ಗೊತ್ತಾನಾಯ್ಕನಿಗ ಹೊಲ ಹೆಂಗ ಕೊಡ್ತಾನ ನೋಡಾನು" ಅಂತ ಸೋನ್ಯಾ, ಹಟ್ಟಿಹಿರಿಯ ಗುಡಿಯೊಳಗ ಮಾತಾಡ್ಕೊಳ್ತಿದ್ರು. "ನಮ್ಮಗಾಗ್ಲಿಲ್ಲಿದ್ರು ಪರವಾಗಿಲ್ಲ. ಆ ಮಗನಿಗ ಮಾತ್ರ ಆಗಬಾರದು. ಅದರ ಮ್ಯಾಲ ಹಂಗೇನಾರ ಅಂವ ತಗೊಂಡ್ರ ಅವನ ಜೀವಮಾನದಾಗೆ ಉದ್ಧಾರ ಆಗಿರಬಾರದು ಹಂಗ ಮಾಡಿಬಿಡ್ರಿ" ಅಂತ ಪೂಜಾರಿ ಪಾಪುಗನಾಯ್ಕ ತನ್ನ ಅಂತರಾಳದ ವೈರತ್ವವನ್ನ ವ್ಯಕ್ತಪಡಿಸಿದ. ಮಾತುಕತಿ

ಆರಂಭ ಆತು. ಚೆಲುವಾಪುರದ ಕೆಲಮಂದಿ ಗೊತ್ತನಾಯ್ಕನಿಗ ಆಗದೋರು ಸೋನ್ಯಾನ ಕಡೀಗ ವಕಾಲತ್ತು ಮಾಡಾಕ ಸೇರಿಕೊಂಡಿದ್ರು, ಅಗಸರ ಗುನಗ, ನಂಜಯ್ಯ, ಡಿಳ್ಳಿ, ಗಂಗಯ್ಯ ತಮ್ಮೊಳಗೆ ಮಾತಾಡ್ಕೊಂಡು ಶೆಟ್ರ ಹುಡುಗರ ಮ್ಯಾಲ ಒತ್ತಾಯ ಹೇರಿದ್ರು. "ನಾವು ಚೆಲುವಾಪುರದ ಊರಮುಖಂಡರಾಗಿ ಹೇಳಾಕ ಹತ್ತೀವಿ. ತಮ್ಮಗಳ್ಯಾ ಕಾಕಪುರ ನಮಗ ಬಹಳ ಬೇಕಾದ ಹಳ್ಳಿ. ಅಲ್ಲಿ ಮಂದಿ ನಮಗ ಬಹಳ ಹತ್ರದವರು. ನಾವುಗಳು ಹೇಳ್ದಂಗ ನೀವು ಕೇಳಬೇಕು. ಈಗ ರೇಟಿಗ ಕುಂತಾಗ ಅವನು ಹೇಳಿದರೇಟಿನ ಮ್ಯಾಲ ಎಲ್ಡರೂಪಾಯಿ ನಮ್ಮ ಸೋನ್ಯಾ ಎರಸ್ತಾನ ಅವನಿಗೆ ಹೂಂ ಅಂದು ಬಿಡ್ರಿ" ಅಂತ ತಾಕೀತು ಮಾಡಿದ್ರು. ಶೆಟ್ರಹುಡ್ರು ಆತು ಕುಂತ್ಕೊಂಡು ಮಾತಾಡನ ಬರ್ರಿ ಅಂದವರೆ ಗುಂಪನ್ಯಾಗ ಕುಂತ್ರು. ಭಟ್ರು ಎದ್ದವರೆ "ಹೊಲಶೆಟ್ರದು, ಕೊಳ್ಳಾಕ ಬಂದಿರೊ ನೀವುಗಳೆಲ್ಲಾ ದುಡ್ಡ ಕೊಟ್ಟು ಕೊಳ್ಳಾಕ ಬಂದೀರಿ, ಭೂಮಿತಾಯಿ ಒಲಿಯಾಕು ಋಣಬೇಕು. ನಿಮ್ಮ ನಿಮ್ಮ ಕ್ರಯ ನೀವೇ ಕೂಗಬಹುದು." ಅಂತಂದು ಕುಂತ್ಕೊಂಡ್ರು. "ಅರವತ್ತೈದು ರೂಪಾಯಿಗ ಒಂದು ಎಕ್ಕರೆ" ಅಂತ ಸೋನ್ಯಾ ಕೂಗಿದ, ಮತ್ಯಾರಾರು ಕೂಗ್ತಾರೇನಂತ ಮಂದಿ ಸುಮ್ಮಗಾದ್ರು. ಅಗಸರ ಗುನಗ ಸವಾಲ ಕೂಗಿದ, ಅರವತ್ತೈದು ರೂಪಾಯಿ ಒಂದಸಲ, ಎರಡ ಸಲ." ಗೊತ್ತಾನಾಯ್ಕ ಎದ್ದವನೆ "ಅರವತೇಳುವರೆ" ಅಂತ ಕೂಗಿದವನೆ ಕುತ್ಕೊಂಡ. ಗುನಗ ಗಪ್ಪಾದ. ಭಟ್ರು "ಅರವತ್ತೇಳುವರೆ ಒಂದಸಲ ಎರಡ ಸಲ" ಅನ್ನೋದ್ಕ ಬದೀಯಾ ಎದ್ದು, ತನ್ನ ಕೈಲಾಗದಿದ್ರೂ ಗೊತ್ತಾನಾಯ್ಕಗ ಈ ಹೊಲ ಆಗೋದು ಒಂದೀಟ ದುಡ್ಡ ಜಾಸ್ತಿ ಕೂಗಿ ಅವನಿಗ ತೊಂದ್ರಿ ಮಾಡಾನಂತ "ಎಪ್ಪತ್ತುರೂಪಾಯಿ ರೋಖಡಿ" ಅಂದ. ಭಟ್ರಿಗ ಯಾಕೊ ಸರಿಕಾಣಲಿಲ್ಲ. ಡಿಳ್ಳಿ ಸವಾಲುಕೂಗುದ್ರ "ಎಪ್ಪತ್ತುರೂಪಾಯಿ ಒಂದಸಲ, ಎರಡಸಲ, " ಗೊತ್ತನಾಯ್ಕ ಭಟ್ಟರ ಕಡೀಗ ನೋಡ್ದಾ. ಭಟ್ಟರು ಒಂದೇ ರೂಪಾಯಿ ಹೆಚ್ಚುಮಾಡುವಂತೆ ಸನ್ನೆ ಮಾಡಿದ್ರು. ಎದ್ದವನೆ "ಎಪ್ಪತ್ತೊಂದು ರೂಪಾಯಿ" ಅಂದ. ಭಟ್ರು "ಎಪ್ಪತೊಂದು ಒಂದುಸಾರಿ,ಎರಡುಸಾರಿ, ಮುರುಸಾರಿ" ಅಂತ ಕೂಗಿದವರೆ ಮುಕ್ತಾಯ ಹಾಡಿದ್ರು. ಹದಿನೈದು ಎಕರೆ ಜಮೀನಿಗೆ ಒಟ್ಟು ಸಾವಿರದ ಅರವತ್ತೈದು ರೂಪಾಯಿ ನಗದು ಕಟ್ಟೊ ಹಂಗಾತು. ಶೆಟ್ರ ಹುಡುಗರ ಹತ್ರ ಗೊತ್ತನಾಯ್ಕ ಐನೂರು ರೂಪಾಯಿಗೆ ಮಾತಾಡಿದ್ದ. ಆದ್ರ ತಮಗಾಗದ ಮಂದಿಸಲುವಾಗಿ ಮತ್ತೆ ಐದುನೂರು ರೂಪಾಯಿ ಹೊರಬೇಕಾಗಿ ಬಂತು. ಶೆಟ್ರ ಹುಡುಗರಿಗೆ ಬಹಳ ಖುಷಿಯಾಗಿತ್ತು. ಹೊಲ ತಾವು ಯಾರಿಗೆ ಕೊಡಬೇಕು ಅಂತ ನಿಶ್ಚಯಿಸಿದ್ರೊ ಅವರಿಗೆ ಸಿಗ್ತಲ್ಲಾ, ತಾವು ಕೊಟ್ಟ ಮಾತು ಉಳ್ಕೊಂತಲ್ಲಾ ಅಂತ.

ಗೊತ್ತನಾಯ್ಕ ಹಾಲುಮಾರಿದ್ದು, ಬಾಡಗಿ ಹೊಡದದ್ದು, ಭಟ್ರ ಗದ್ದಿ ಮಾಡಿ ಅವರ ಕಡೀಗ ಬಿಟ್ಟಿದ್ದು, ಗೋಪಾಲಪುರದ ಗಂಗಮಾಳಪ್ಪನ ತಾವ ತನ್ನ ಮೀಸೆ ಒತ್ತೆ ಇಟ್ಟು ಮುನ್ನೂರು ರೂಪಾಯಿ ಸಾಲ ತಂದಿದ್ದು ಸೇರ್ಸಿದ್ದ. ತನ್ನ ಎಳುವರೆ ಎಕರೆಗಾಗೊ ಹಣದಾಗ ಇನ್ನೂರು ಕಮ್ಮಿಯಾತು. ಕಟುವಾ, ಪಾಮಿದು ತಲ ಮೂರುವರೆ ಎಕ್ಕರೆ ಹೊಲದ ಹಣವನ್ನು ರೊಖಡಿಯಾಗಿ ಕೊಟ್ಟು ಭಟ್ರಿಗ ಕರದು ಕಿವಿಯಾಗ ಹೇಳ್ದ. "ಮುಂದಿನ ಬೆಳಿಯಾಗ ಹೆಂಗಾನ ಮಾಡಿ ಬಾಕಿ ದುಡ್ಡು ಕಟ್ತೇನಿ ಧಣಿ, ಈಗ ನಮ್ಮ ತಾವಿರೋದು ಎಂಟುನೂರು ಚಿಲ್ಲರೆ ಕಟ್ಟಿ ಪ್ರಾಂಮಸಾರಿ ನೋಟ ಬರಿರಿ." ಅಂತೇಳಿ ತನ್ನ ಅಸಹಾಯಕತೆ ತೋಡಿಕೊಂಡ. ಭಟ್ರಿಗೆ ಯಾಕೊ ಸರಿಕಾಣಲಿಲ್ಲ. "ಅಲ್ಲೋ ಇನ್ನೆಷ್ಟು ಕಡಿಮೆ ಬಿಳ್ತಾ ಇದೆ ಹೇಳು" ಅಂದ್ರು "ಒಂದು ಇನ್ನೂರೈವತ್ತು, ರಿಜಿಸ್ಟ್ರೇಷನಿಗ ಒಂದು ಐವತ್ತು." ಅಂತೇಳಿ ಕೈ ಹಿಸುಕಿಕೊಂಡ ಗೊತ್ತನಾಯ್ಕ. "ಹೂಂ ನೀ ಹೆದರ ಬ್ಯಾಡ ಕೆಲ್ಸ ಪೂರ್ತಿ ಮುಗಸಾನ ನಾಳಿಗೆ ಹಂದೋಣೆಗ ಹೋಗಿ ನಿಮ್ಮ ನಿಮ್ಮ ಹೆಸರಿಗ ಪತ್ರ ಮಾಡಿಸಿ ಬಿಡಾನ ನೀ ಇಲ್ಲೆ ಇರು" ಅಂದವರೆ ಎಲ್ಲೋ ಹೋಗಿ ಒಂದು ಮೂನ್ನೂರ ಎಪ್ಪತ್ತೈದು ರೂಪಾಯಿ ಎಣಿಸಿ "ಇಗೋ ಮುನ್ನೂರೆಪ್ಪೈತ್ತೈದು ಐತಿ ಮೊದ್ಲು ಹಿಡದ ಕೆಲ್ಸ ಮುಗಿಸು" ಅಂತೇಳಿ ಅವನ ಕೈಗ ದುಡ್ಡು ಕೊಟ್ಟು ಪ್ರಾಂಸರಿ ನೋಟ ಬರಿಯಾಕ ಸುರು ಹಚ್ಕೊಂಡ್ರು. ಸೋನ್ಯಾ ಗಬಡು ಪೂಜಾರಿ ಹಟ್ಟಿಹಿರಿಯನ ಮಾರಿಗೆ ಎಕ್ಕಡದಿಲೆ ಹೊಡದಂಗಾಗಿತ್ತು. "ನಾನು ಇನ್ನೊಂದು ಎಂಟಾಣಿ ಏರಿಸಬೇಕು ಅಂದ್ಕೊಂಡಿದ್ದೆ. ಆಟ್ರಾಗ ಆ ಭಟ್ಟ ಮುಗಿಸಿ ಬೀಡಾಕ" ಸಕ್ರು ಹೇಳಿದ. "ನಿವೇನಾರ ಹೇಳ್ರೊ ಆ ಹೊಲ ಅವನಿಗ ಆಗೋದಿತ್ತು ಆತು" ಕಾರಭಾರಿ ಕುಲುಮು ಗಾಯದಮ್ಯಾಲ ಕಾರದಪುಡಿ ಸುರದಂಗ ಹೇಳಿದ. ಅವರೆಲ್ಲರ ಮಾರಿ ಸುಟ್ಟ ಬದ್ನಿಕಾಯಿ ಹಂಗಾತು. ಯಾರೂ ಮಾತಾಡಲಿಲ್ಲ. ಎದ್ದವರೆ ಸೀದಾ ದ್ಯಾವಜ್ಜನ ಹೆಂಡದಂಗಡಿ ಕಡೀಗ ಹೊಂಟರು. ಮಧ್ಯಾಹ್ನದಾಗೆ ಎಲ್ಡೆಲ್ಡು ಬಾಟಲು ಕುಡದು ತೂರಾಡ್ಕೊಂಡು ಭಟ್ಟರ ಮಾವಿನಮರದ ನಳಕಿಗ ಬಂದಾಗ ಅವರವರೊಳಗ ತಿಕ್ಕಾಟ ಸುರು ಆಗಿ ಗುದ್ದಾಡ್ಕೊಂಡು ಊರು ಮುಟ್ಟಿದ್ರು.

ಗೊತ್ತಾನಾಯ್ಕ, ಕಟುವಾ, ಪಾಮಿ, ದುಡ್ಡುಕಟ್ಟಿ ನೋಟು ಇಸ್ಕೊಂಡು ಸಂಜಿಯಾಗಿದ್ಕ ಹೆಂಡದಂಗಡಿಗ ಹೋಗಿ ಹೆಂಡಕುಡದು ಊರಕಡೀಗ ಜಾಡಬಿಟ್ರು. ಹೊಲ ಅವರಂತೆ ಆಗಿದ್ಕ ಕೆಲಮಂದಿಗ ಹೊಟ್ಟೆಕಿಚ್ಚು, ಅಗಸರ ಗುನಗ ಚೆಲುವಾಪುರ ಊರಮುಂದ ನಿಂತ್ಕೊಂಡು, "ಅವನ ಅದೆಂಗ ಗಳೆ ಹೂಡ್ತಾನ ನಾನು ನೋಡ್ತಿನಿ ಅವನೇನು ದೊಡ್ಡ ಪಾಳೇಗಾರ ಅಂದ್ಕೊಂಡಾನೇನು. ಆ ಭಟ್ಟನ ಚೇಲ ಅವನು

ಅದಕಂತ್ಲೆ ಅವನ ಕಡೀಗ ಮಾತಾಡಿ ಮುಗಿಸಿಕೊಟ್ಟ. ಕುಸ್ತಿ ಇನ್ನ ಮ್ಯಾಲ ಸುರು ಆಗೋದೈತಿ ಇನ್ನ ಮ್ಯಾಲಸುರು ಆಗತೈತಿ." ಆ ಮೂವರಿಗೂ ಕೇಳೊ ಹಂಗ ಮಾತಾಡ್ತಿದ್ದ. ಕಟುವಾ, ಪಾಮಿಗ ಹೆದರಿಕೆ ಆತು. ಅವನ್ನ ನೋಡಿ ಅವರಣ್ಣ ಗೊತ್ತಾನಾಯ್ಕನ ಹಿಂದ ಸರದ್ರು "ಏ ಗುನಗಾ, ನಿಮ್ಮಪ್ಪಗ ಹುಟ್ಟೋನಾಗಿದ್ರ ನಾಳೇನೆ ನನಮುಗ ಗಳೇವು ಹೂಡ್ತಾನ ತಡಿ ಬಾ, ನಾ ಇರಬೇಕು, ಇಲ್ಲಾ ನೀನಾರ ಇರ್ಬೇಕು" ಗೊತ್ತಾನಾಯ್ಕ ನೆರದಿದ್ದ ಮಂದಿ ಗುಂಪಿನೊಳಗ ಸವಾಲು ಹಾಕಿದ. ಬಿಳಿಯಂಗಿ, ಬಿಳಿಧೋತ್ರ ಉಟ್ಕೊಂಡು ತಾನೊಬ್ಬ ಶ್ರೀಮಂತನಂತಲೂ ತಾನು ಬಿಳಿ ಅರವಿಹಾಕ್ಕೊಂಡಿರೋದ್ಕ ಮಂದಿ ಮರ್ಯಾದಿ ಕೊಡ್ತಾರಂತ್ಲೂ ತಿಳ್ಕೊಂಡಿದ್ದ ಅಗಸರ ಗುನಗನಿಗೆ, ಯಾರೊ ಕ್ಯಾಕರಿಸಿ ಮಾರಿಮ್ಯಾಲ ಉಗಳಿದಂಗಾತು, ಬಿಳಿವಲ್ಲಿಯಿಂದ ಮಾರಿ ಒರಿಸಿಕೊಂಡವನೆ "ಲೇ ಗೊತ್ತನಾಯ್ಕ ಯಾಕಲೇ ಅಡಿಗ ಹಲ್ಲು ಬಂದಾವೆನಾ ಮಗನೆ ಇಲ್ಲೆ ಸಿಗದ ಹಾಕಬಿಟ್ಟೇನು." ಅಂದ್ಕೊಂತ ತನ್ನೂರಿನ ಮಂದಿ ಹುಡುಕಾಡ ತೊಡಗಿದ. "ಇದು ಊರು ಹೌದು, ಹಿಂಗ್ಯಾಕ ಮಾತಾಡಾಕಹತ್ತಿ ಬಾಯಿ ಬಿಗಿ ಹಿಡದ ಮಾತಾಡು ತಾಂಡ ಅಲ್ಲಾ" ಪಾಮಿ ಎಚ್ಚರಿಸಿದ್ಲು. "ಊರಾದ್ರೇನಂತೆ, ತಾಂಡ ಅಲ್ಲದಿದ್ರ ಏನಾತು ನ್ಯಾಯ ನ್ಯಾಯನೆ. ಅಯ್ಯ ನಾವು ಹೀಂಗ ಹೆದರತಾ ಹೋದ್ವಿ ಅಂದ್ರ ಕಾಕಾಪುರ ತಾಂಡಾದಾಗ ಬದುಕೋದು ಕಷ್ಟ ಆದೀತು. ಮನುಷ್ಯ ಸುಮ್ನೆ ಆವಾಜ ಮಾಡಬೇಕು, ಹಂಗಾರ ಮಂದಿ ಹಿಂದ ಸರಿತಾರ" ಅಂತ ಬಾಯಿ ಜೋರ ಮಾಡಿದ. ಪಾಮಿ, ಕಟುವಾ, ಒತ್ತಾಯದಿಂದ ಎಳ್ಕಂಡು ಹ್ವಾದ್ರು. ಗೊತ್ತಾನಾಯ್ಕ ಏನೇನೊ ಬಡಬಡಿಸ ತೊಡಗಿದ. ಅಗಸರ ಗುನಗಾ ಅಲ್ಲಿ ನಿಲ್ಲದಂಗೆ ಮರೆಯಾದ.

ಹದಿನೈದುವರಿ ಎಕರಿ ಜಮೀನು ಗೊತ್ತಾನಾಯ್ಕನ ಹೆಸರಿಗ ಮಾಡ್ಸಿದ್ರು ಶೆಟ್ರು ಹುಡ್ರು. ಕಟುವಾ, ಪಾಮಿ ಸುಮ್ನೆ ಒಪ್ಕೊಳ್ಳದೆ ವಿಧಿ ಇರಲಿಲ್ಲಾ. ಅವರು ಸುಮ್ನನಿದ್ದದ್ದು, ಗೊತ್ತಾನಾಯ್ಕನಿಗೆ ಜೀವನದಾಗ ದೊಡ್ಡದೊಂದು ಸಾಧನೆ ಮಾಡಿದಂತೆ ಅನಿಸಿತು. ಯಾವುದೋ ಸೀಮಿಯಿಂದ ಬಂದು ಅಲೆಮಾರಿಯಾಗಿದ್ದೋರು ಒಂದು ನೆಲೆ ನಿಂತು ಕಾಕಾಪುರದ ಗಡಿಯೊಳಗೆ ಭೂಮಿ ಹೊಂದೊದ್ರ ಮೂಲಕ ಶಾಶ್ವತ ನೆಲೆಯನ್ನ ಸ್ಥಾಪಿಸಿದ ಸಂತೋಷ ಆಗಾಕ ಹತ್ತಿತ್ತು. ಅದೂ ಅಲ್ಲದೆ ತನ್ನ ಶತ್ರುಗಳನ್ನ ಮಣ್ಣು ಮುಕ್ಕಸಿದ್ದು ಅತ್ಯಂತ ದೊಡ್ಡ ಸುದ್ದಿಯಾಗಿತ್ತು. ಅವನ ಮಕ್ಕಳಾದ ನುಗ್ಗಾ, ಗೊಂದಾ, ಹನುಮ, ಪೀಣು, ಜಂಬ, ಕುಮಾರಿ, ಚೆನ್ನಿಂಗ ಬಹಳ ಖುಷಿಪಟ್ಟು ಅವರಪ್ಪನ ಬಗ್ಗೆ ಹೆಮ್ಮೆಯಿಂದ ಎಲ್ಲಾರ ಮುಂದು, "ನಮ್ಮಪ್ಪ ಏಳುವರಿ ಎಕ್ಕರೆ ಜಮೀನ ತಂಗೊಂಡ್ರಾನ್ರೊ ಶೂರರ

ಏನಂದ್ಕೋಡೀರಿ ನಮ್ಮಪ್ಪನ್ನ" ಅಂತಾ ಊರಾಗೆಲ್ಲಾ ಟಾಂ ಟಾಂ ಹೊಡಿತಾ ಅಡ್ಡಾಡಿದ್ರು.

ಆ ವರ್ಷನೆ ಭತ್ರದಟ್ಟಿ ಗ್ರಾಮದ ಭತ್ತನಾಯ್ಕ ಅನ್ನೊ ಹುಡುಗನಿಗೆ ಅವನ ಹಿರಿಮಗಳು ಗಮಣಿನ ಕೇಳಾಕ ಬಂದ್ರು, ಭತ್ತನ ಅಪ್ಪ ತೀರ್ಕೊಂಡು ಬಹಳ ದಿನಗಳಾಗಿದ್ದು, ಅವರವ್ವ ಒಬ್ಬಾಕಿನೆ ಇದ್ಲು. ಒಬ್ಬನೆ ಮಗ ಬಹಳ ಬಡತನದ ಮನಿತನ. ನೋಡಾಕ ಹೋದೊರೆಲ್ಲಾ ಹುಡುಗನ್ನ ಹಿಂಜರದ ಬಂದಿದ್ರು. ಆದ್ರೂ ಗೊತ್ತನಾಯ್ಕ ಮತ್ತ ಬಾಣಿ, "ಈಗೇನೊ ನಾಕದಿನ ಬಡತನ ಬಂದಿರಬಹುದು ನಾಳೆ ಹೊಲಮನಿಯಾಗ ದುಡುದು ಪಾಡಾಗೇ ಆದಾರು ಕೊಟ್ಟು ಬಿಡಾನ, ಹುಡುಗೀನ ಎಟದಿನಾಂತ ಮನಿಯಾಗ ಇಡಾಕಾದೀತು" ಅಂತ, ಬಾಣಿಬಾಯಿ ಗಂಡನೆದುರಿಗೆ ಹೇಳಿದ್ಲು. ಹುಡುಗ ಸಂಭಾಯಿತ, ಹತ್ತು ಎಕರೆ ಜಮೀನು ಮುಂದೊಂದು ದಿನ ಸಪೋಲು ನದಿ ನೀರುಹಾದು ಹೊಲಗಳೆಲ್ಲಾ ನೀರಾವರಿ ಆಗ್ತಾವ ಅಂತ ಯಾರೊ ಇಂಜಿನಿಯರು ಚಾನಲ ತಗಸಾಕ ಹತ್ಯಾನ ಅಂದಿದ್ಕ ಗೊತ್ತಾನಾಯ್ಕನು ಒಪ್ಕೊಂಡು, ತನ್ನ ಮನಿಯಿಂದಲೆ ಮಣಗಟ್ಟಲೆ ಬೆಲ್ಲಾ, ಈ ಕಡಿಂದ ಹೋಗೊ ಮಂದಿಗ ಉಣ್ಣಾಕ ಜ್ವಾಳ, ಅಕ್ಕಿ, ಎಲ್ಲಾನು ಹೇರ್ಕೊಂಡು ಹೋಗಿ ಕೆಡವಿ ಆ ಮ್ಯಾಕ ಮದ್ವಿ ಮಾಡಿ ಮಗಳನ್ನು ಅಳಿಯನ್ನು ಭತ್ರದಟ್ಟಿಗ ಕಳಿಸಿಕೊಟ್ಟಿದ್ದ. ನುಗ್ಲ ಮಾತ್ರ ಬಹಳ ಹುರುಪಿನಿಂದಲೇ ಭಟ್ಟರ ಹೋರಿಗಳನ್ನು ಸಾರಮಾಡಿ, ಶೆಟ್ರ ಹೋಲ್ದಾಗ ಕುಂಟಿ ಹೊಡಿಯೋದು, ಕಂಬತ್ಕಿ ಮಾಡೋದು ದಲ್ಲಿ್ಗ ಹೊಡಿಯೋದು ಮಾಡಿ ಮುಂಗಾರು ಮಳಿಗಾಗಿ ಜಾತಕ ಪಕ್ಷಿಯಂತೆ ಕಾದ್ಕೊಂಡು ಕುಂತಿದ್ದ. ಮೊದ್ಲೆಲ್ಲಾ ಭಟ್ಟರ ಗದ್ದಿ ಕಬ್ಬಿನ ಆಲಿಮನಿ, ಭತ್ತದ ಕೋಯ್ಲು ಮಾಡ್ಕೊಂಡು ಅಡವಿ ಹೊಲ ಹಸನು ಮಾಡ್ಕೊಂಡು ಹೊಸ ಹೊಲಕ್ಕ ಗಳೆ ಹೂಡಿದ್ದ. ಗೊತ್ತಾನಾಯ್ಕ ಸಣ್ಣ ಹುಡ್ರನೆಲ್ಲಾ ಕಟ್ಕೊಂಡು ಹೊಲ್ದಾಗಿನ ದೊಡ್ಡ ದೊಡ್ಡ ಕಲ್ಲಗಳನ್ನ, ಮುಳ್ಳು ಸಣ್ಣ ಪೆಳಿಗಳು, ಸಣ್ಣಪುಟ್ಟ ಒಡ್ಡಗಳು, ಹುತ್ತಗಳನ್ನು ಸಮಮಾಡ್ತಾ ಬಂದ. ಮ್ಯಾಲಿನ ಒಡ್ಡಿನ ಕೆಳಗ ಬಿದ್ದಿದ್ದ ದೊಡ್ಡ ಸರಕ್ಕೆ ರಕ್ಕಸ ಪಟ್ಟಿ ಗಡ್ಡಿಗಳನ್ನು ಒಡ್ಡುಹಾಕಿ ಕಲ್ಲುಕಟ್ಟಿ ನೀರ ಸೋಸಿ ಹೋಗಂಗೆ ಮಾಡಿದ. ಈಗ ಅವನಿಗ ಕೈತುಂಬ ಜಮೀನು ಮೈತುಂಬ ಕೆಲ್ಸ. ಸಣ್ಣ ಪುಟ್ಟವೆಲ್ಲವೂ ಮಾಡ್ಕೊಂತನೆ ಹೊಂಟ. ಕಾಕಾಪುರದ ಮಂದಿ ದಂಗಾಗಿದ್ರು. ಮಕದ ವ್ಯಾಲ ಬೆಳ್ಳ ಇಟ್ಕೊಂಡು ಗೊತ್ತಾನಾಯ್ಕ ಬದುಕುಕಟ್ಟೋ ಪರಿಯನ್ನ ನೋಡತೊಡಗಿದರು. ಹಂಪಾಪುರದ ಖಾದರ ಸಾಬು ಕಾಕಾಪುರದಾಗ ಕೊಟ್ಟ ಸಾಲ ವಾಪಸ್ಸು ಬರದಕ್ಕೆ ಪಂಚಾಯ್ತಿ ಸೇರ್ಸಿ ಪೂಜಾರಿ ಪಾಪುಗನಾಯ್ಕನ ಎತ್ತಗಳನ್ನ ಹೊಡ್ಕೊಂಡು ಹೊಂಟ. ಹಂಪಾಪುರಕ್ಕ ಒಯ್ದು ಕೇಳಿದಷ್ಟಕ್ಕ ಯಾಕ ಕೊಡಾಕಂತ ಗೊತ್ತಾನಾಯ್ಕನಿಗೆ

ಹತ್ತರೂಪಾಯಿ ಕಮ್ಮಿ ಮಾಡಿ ಕೊಟ್ಟುಹ್ವಾದ. ಗೊತ್ತನಾಯ್ಕ ಬಹಳ ದಿನಗಳಿಂದಲೂ ಕನಸ ಕಂಡಿದ್ದ ನಾಕೆತ್ತಿನ ಕಮತ ಇಟ್ಕೊಂಡು ಸುತ್ತಲ ಹಳ್ಳಿಯೊಳಗ ಗೊತ್ತನಾಯ್ಕ ಅಂತಂದ್ರ ಯಾರಂತ ಗೊತ್ತಾಗೊ ಹಂಗ ಒಂದು ಭರವಸೆ ಸೃಷ್ಟಿಸಿದ್ದ. ಯಾರ ಸುದ್ದಿಗ ಹೋಗದೆ, ಅವನ ಮನಿ ಮುರದ್ನೊ, ಇವನ ಪಂಚಾಯ್ತಿ ಮಾಡಿ ಅದ್ರಾಗ ಬಂದಿದ್ದ ಲಾಭದಿಂದ ಆಟು ದುಡ್ಡನ ಎಬ್ಬಿಸಿ ಮಜಾ ಮಾಡಿದ್ನೊ ಅನ್ನೋ ಜನರಿಗಿಂತ ಭಿನ್ನವಾಗೆ ಯೋಚನೆ ಮಾಡ್ತಿದ್ದ. ಕಾಕಾಪುರದ ಬೂಸಿಗೊಟ್ಟಬಾಯಿ ಬೂದಾನಾಯ್ಕ, ಇರೊ ಒಂದು ಕಲ್ಲಂಗಡಿ ಹಣ್ಣ ಚಿಪ್ಪಿನಾಟು ಹೊಲ್ದಾಗ ಕುಂತ್ಕೊಂಡು ಸವಲೂರ ಮಂದಿ ಮುಂದೆಲ್ಲಾ ನಾಡ ಸುಳ್ಳ ಹೇಳ್ತಿದ್ದ. ಬಂದು ಕುಂತ ಮಂದಿಗ ಅವನ ಎತ್ತುಗಳ ಬಗ್ಗೆ "ನನ್ನ ಎಲ್ಲೂ ಎತ್ತಗಳಾದವಲ್ಲ ಒಂದೇನಮೂನಿ ಅದಾವ, ನೋಡೋರದು ದೃಷ್ಟಿತಾಕಬೇಕು ಅವನವ್ವನ" ಸೊಟ್ಟಗಿರೊ ಬಾಯಿಯನ್ನು ತಿರುಗಿಸಿ ಹೇಳ್ತಿದ್ದ. ಊರಾಗ ತಾನೇ ಜಮೀನ್ದಾರ ಅನ್ನೋದನ್ನ ಬ್ಯಾರೆ ಹೇಳ್ತಿದ್ದ. ವಾರಕ್ಕೆರಡು ಸಲ ರಂಗೋಲಿ ಹಿಟ್ಟು ಹೊತ್ಕೊಂಡು ಹಂಪಾಪುರ, ಹರದಗಿ ಸುತ್ತಾಡಿ ಹೆಂಡಕ ಕಾಸ ಸೇರಿಸುತ್ತಿದ್ದ ಅವನಿಗೂ ಗೊತ್ತಾನಾಯ್ಕನ ಮ್ಯಾಲ ಇಲ್ಲದ ಹೊಟ್ಟೆಉರಿ.

ಎಲ್ಲದನ್ನು ಸಹಿಸಿಕೊಂಡು ಒಂದು ಕಲ್ಲುಬಂಡಿಯಂತಾಗಿದ್ದ ಗೊತ್ತಾನಾಯ್ಕ ಕಾಕಾಪುರ ಅನ್ನೊ ಊರೊಳಗೆ ಬದುಕಿದ್ದ, ಬದುಕಿನ ಬಗ್ಗೆ ಹೊಸ ಕನಸುಗಳನ್ನ, ಭರವಸೆಯನ್ನ ಕಂಡುಕೊಂಡಿದ್ದ. ತನ್ನ ಹೆತ್ತವರಿಗಾಗಿ, ತನ್ನ ಬದುಕಿನ ದೀಪವನ್ನು ಬೆಳಗಿಸುವ ಮಕ್ಕಳಿಗಾಗಿ ಹೋದಲ್ಲಿಂದ ಒಂದು ಒಳ್ಳೆಯ ಕಲ್ಲು ಸಿಕ್ಕರು ತಂದು ಒಟ್ಟು ಗೂಡಿಸಿ, ಒಂದರ್ಥ ಕಲ್ಪಿಸಲು ಹೆಣಗಾಡತೊಡಗಿದ. ಬದುಕನ್ನ ವಿಸ್ತೃತ ಗೊಳಿಸುತ್ತಾ ಹೊಂಟ. ಎರಡನೆಯ ಮಗಳ ಮದ್ವಿ ಮಾಡಿದ. ಹಿರೇ ಮಗ ನುಗ್ಲನಿಗೆ ಹೆಣ್ಣ ತಂದ, ಎರಡನೇ ಮಗ ಗೊಂದ ಹಂದೋಣೆಯಲ್ಲಿ ಎಸ್ಸಲ್ಸಿ ಓದ್ತಿದ್ದ. ಮೂರನೆಯವನಾದ ಹನಮ ನಾಕದಿನ ಸಾಲಿಗ ಹೋದವನು, ಹೊಳ್ಳಿ ಹೋಗಾಕ ಮನಸ್ಸೆ ಮಾಡದೆ ಅವನವ್ವನ ಹಿಂದೆ ಹೋಗತೊಡಗಿದ. ನಾಕನೇಯ ಪೀಣು ಬಂಡು ಮೇಷ್ಟ್ರು ಸಾಲಿಗ ಹೊಂಟಿದ್ದ. ಐದನೇಯ ಜಂಬ, ಆರನೇ ಕುಮಾರಿ ಮತ್ತ ಕಡೇಯ ಚೆನ್ನಿಂಗ ಬರೆಬತ್ಲೆ, ಹಾಕ್ಕೊಳ್ಳಾಕ ಚೊಣ್ಣ ಇಲ್ದೆ ಊರಾಗ ಸುತ್ತಾಡ್ತಿದ್ರು. ಸಾಲ ತೀರಿಸೋದು, ಹೊಟ್ಟೆಹೊರಿಯೋದು, ಮಗನ ಸಾಲಿಗ, ಮಗಳ ಸಾಲಿಗೆ, ಮಗಳ ಮದ್ವಿ ಎಲ್ಲಾನು ದುಡಿದೆ ಮಾಡಬೇಕು. ಸಂಸಾರದ ಹೊರೆ ಬೆಳಿತಾಹೋತು. ದಿನದಿನಕ್ಕೆ ಉಣ್ಣೊರು ಹೆಚ್ಚಾದ್ರು, ಖರ್ಚು ಹೆಚ್ಚಾತು. ಮನಿ ನಿಭಾಯಿಸೋದು ದುಸ್ತರ ಆಗತೊಡಗಿತು. ಮಕ್ಕಳು ಮೊಮ್ಮಕ್ಕಳು

5

ಮನಿ ಬೆಳಿತಾಹೋದಂಗೆ, ಪಕ್ಕದಾಗಿದ್ದ ಅವನ ತಮ್ಮ ಕಟುವಾನ ಕಿರಿ ಕಿರಿ ಹೆಚ್ಚಾಗತೊಡಗಿತು. ಅಕ್ಕಪಕ್ಕದ ಮನಿಯಾಗ ಬದುಕೋದು ದುಸ್ತರ ಅನಿಸಿತು. ಗೊತ್ತಾನಾಯ್ಕನ ಶತ್ರುಗಳಾದ ಸೋನ್ಯಾನಾಯ್ಕ, ಚೊಕ್ಕ, "ಏನೋ ಕಟುವಾ, ನಿಮ್ಮಣ್ಣ ದಿನದಿಂದ ದಿನಕ್ಕೆ ಮೇಲೆರ್ತಾ ಹೋಗ್ತಾ ಅದಾನ ನೀ ಖಾಲಿಪಿಲಿ ಕುಂತಿಯಾ, ಏನಾರ ಮಾಡಯ್ಯ. ಇನ್ನೊಂದು ನೀವು ಬ್ಯಾರೆ ಆದಾಗ ನಿನ್ನ ಬಾಯಿಬಡದು ದುಡ್ಡ ಮಾಡ್ಕೊಂಡಾನ ಆ ದುಡ್ಡು ತಗದೆ ಅವನು ಹೊಲ ಖರೀದಿಸದ್ದು. ಅದಕ್ಕೆ ಅಲ್ವೆ ನಿನಗ ಬರಿ ಮೂರುವರಿ ಎಕರಿ ಕೊಡಸಿದ್ದು, ಅಂವ ಏಳುವರಿ ಎಕರಿ ಜಮೀನು ತಗೊಂಡಿದ್ದು" ಹಿಂಗಂದು ಸುಮ್ಮನಿದ್ದ ಕಟುವಾನ ತಲಿಕೆಡಿಸಿದ್ರು ಪೂಜಾರಿ ಮತ್ತ ಸೋನ್ಯಾ. ಅಲ್ಲಿವರೆಗೆ ಅಣ್ಣ ಅಂತಂದ್ರ ದೇವರು, ದೊಡ್ಡೋನು, ನನಗ ಒಳ್ಳೇದ ಮಾಡ್ತೋನಂತ ತಿಳ್ಕೊಂಡಿದ್ದ ಕಟುವಾನ ನಂಬಿಕೆಗಳೆಲ್ಲಾ ಬುಡಮೇಲಾದಂಗಾಗಿ ದ್ಯಾವಗನ ಹೆಂಡದಂಗಡಿಗ ಹೋಗಿ ದಿನಾ ಕುಡಿಯೋದಕ್ಕಿಂತ ಒಂದುಬಾಟಲು ಹೆಚ್ಚು ಕುಡ್ಕೊಂಡು ಬಂದ. "ಎಲ್ಲಾ ತಮ್ಮ ತಮ್ಮ ಸ್ವಾರ್ಥಕ್ಕೆ ಸಾಯಿತಾರ, ಎಯ್ ನೀಯೇನು ಭಾರಿ ದೊಡ್ಡ ಮನುಷ್ಯ ಅಲ್ಲ್ ಬಿಡು ನನಗೆ ಮೋಸಮಾಡಿಯ, ಬೇಕಂತ್ಲೆ ಮೂರು ಹೆಂಗಸರನ್ನು ನನ್ನ ಕೊಳ್ಳಿಗ ಕಟ್ಟಿದೆ, ಕಡಿಮೆ ಹೊಲ ಕೊಡಿಸಿದೆ. ಮುದುಕಿಗ ಮೋಸ ಮಾಡಿ ಎಲ್ಲಾ ದುಡ್ಡು ಬಾಚ್ಕೊಂಡು ಹೋದೆ. ಎ ದೊಡ್ಡ ಮನುಷ್ಯ ಗೊತ್ತಾನಾಯ್ಕ ಹೊರಗ ಬಾರೋ" ಈ ಗ್ವಾಡಿಯಿಂದ ಆ ಗ್ವಾಡಿಗ ಆ ಗ್ವಾಡಿಯಿಂದ ಈ ಗ್ವಾಡಿಮಟಾನು ತೂರಾಡ್ಕೊಂತ, ಒಬ್ಬನೆ ಪ್ರಪಂಚದಾಗ ಇರೋನಹಂಗೆ ಮತಾಡ್ತಿದ್ದ ಕಟುವಾ. ಅವನ ಮೂರುಜನ ಹೆಂಡಂದಿರು ಗಾಬರಿಯಾಗಿದ್ರು. ದೊಡ್ಡಾಕಿ ಚಾಂವಿ, ಓಡಿಬಂದಾಕಿನೆ "ಈಗ ಬಂದುಬಿಡ್ರಿ, ಇಲ್ಲಾಂದ್ರ ಹಾಕ್ಕೊಂಡು ಅಂಡಹರದಾರು. ಸುಕಾಸುಮ್ಮನೆ ಆತನ ತಲಿಯಾಕ ತಿಂತೀರಿ" ಸೂಕ್ಷ್ಮವಾಗೆ ಹೇಳಿದ್ಲು. "ಎ ನಡಿಯೇ ಯಾವಾಕಿನೀನು ಮನ್ನೆ ಆಶೆಟ್ಟಿ ಹೊಲತಗೊಂಡಾಗ ಮೋಸಮಾಡ್ಯಾನ. ಅವನ್ದೇನ ಹಚ್ಚಿ ಮೋಸಗಾರಂದು. ನಾಕ ಮಕ್ಕಳದಾರಂತ ಹಾರಾಡ್ತಿರಬಹುದು. ನನಗೂ ಅದಾರಲ್ಲ ಹದಿನೈದಿಪ್ಪತ್ತು ಹೆಣ್ಣ ಹುಡುಗಿಯರು, ಮೂರ್ನಾಕ ಗಂಡ ಹುಡ್ರು, ಮೂರ ಜನ ಹೇಣ್ತೆಯರು. ನೀವೆಲ್ಲಾ ನಿಂತ್ರಿ ಅಂದ್ರ ಇಡೀ ಅರ್ಧ ಊರನ್ನ ಬೆನ್ನಹತ್ತಿ ಹೊಡಿಬಹುದು" ಅಂದವನೆ ಜೋರಾಗಿ ದೂಕಿದ. ಮದ್ಲೆ ಉದ್ದಕಿದ್ದ ಚಾಂವಿ, ಏಟುದ್ದ ಅದಾಳೊ ಆಟುದ್ದಾನೂ ಬಕಬರ್ಲೆ ಬಿದ್ಲು. "ಎ ನಿನ್ನ ಹೆಸರಿಲ್ದಂಗಾಗ್ಲಿ. ಯಾರದೊ ಸಿಟತಂದು ನನ್ನ ಮ್ಯಾಲತಗೀತಿಯಲ್ಲಾ. ಯಾವನವನು ನಿನ್ನ ತಲಿತಿಕ್ಕದೋನು" ಅಂತ ಲಬಲಬ ಬಡ್ಕೊಂಡ್ಲು.

ಹೆಂಡದಂಗಡಯಿಂದ ಅದೇತಾನೆ ಬಂದ ಗೊತ್ತನಾಯ್ಕ ಮನಿಹತ್ರ ನಡಿತಿರೊ ರಾಮಾಯಣ, ಮತ್ತ ಸುರು ಆತಲ್ಲ ಅಂತಂದು ಗುದ್ದಮ್ಮನ ಕಟ್ಟಿ ಮ್ಯಾಲ ಕುಂತು ಬೀಡಿ ಹಚ್ಚಿದ. ಕಟುವಾಗ ತಡಿಯಾಕ ಆಗದೆ ಗೊತ್ತಾನಾಯ್ಕನ ಮನಿನುಗ್ಗಿ ಸಣ್ಣ ಹುಡ್ರನೆಲ್ಲಾ ಹಿಡದು ಹೊಡೆಯ ತೊಡಗಿದ. "ಎಲ್ಲಿಗ ಹೋಗ್ಯಾನ್ರೋ ಅವನು ಮೋಸಗಾರ, ತಮ್ಮನ ಬಾಯಿ ಬಡದೋನು" ಅಂತೇಳಿ ರಂಪ ಮಾಡಿದ.

ಸುದ್ದಿ ತಿಳದ ಗೊತ್ತನಾಯ್ಕ ಒಂದೇ ಉಸಿರಗ ಓಡಿಬಂದು, "ಏನೋ ತಮ್ಮ ಏನು ನಿನ್ನ ಸಮಾಚಾರ. ನೋಡು, ಒಳ್ಳೆ ಮಾತಿಂದ ಹೇಳಕಹತ್ತಿನಿ ನೀನು ಮುಕ್ಕಾರೆ ಕುಡದಿಯಾ ಮನೀಗ ಹೋಗ. ಈಗ ಮಾತಾಡೊವ್ಯಾಳೆ ಅಲ್ಲ" ಸಮಾಧಾನದಿಂದ ಕಳುಹಿಸಕಾ ನೋಡಿದ. "ಏನ್ ಮಾಡ್ಕೊಂತಿಯೋ ನೀನ^ು. ನಾಹೋಗಂಗಿಲ್ಲಾ ಏನ ಹರ್ಕೊಂತಿಯೊ ಹರ್ಕೊ ಹೋಗು" ಗೊತ್ತನಾಯ್ಕನ ಮನಿಯೊಳಗ ಕುಂತ. ಅವತ್ತೆ ಹಂದೋಣೆಯಿಂದ ಬಂದಿದ್ದ ಗೊತ್ತನಾಯ್ಕನ ಎರಡನೇ ಮಗ ಗೊಂದಾ ಅವನ ಗೆಣಕಾತಿ ಕಾಯಕದ ಕಬುರಯ್ಯನ ಮಗಳು ಶಾವಂತಿ ಹತ್ರಕ್ಕ ಹೋಗಿದ್ದ. ಅವರಪ್ಪಗೂ ಅವನ ಚಿಗಪ್ಪಗೂ ಜಗಳ ಹತ್ಕೊಂಡಿದ್ದನ ಯಾರೋ ಹೇಳಿದ್ರು. ಅವಳನ್ನ ಅಲ್ಲೆ ಬಿಟ್ಟವನೆ ಮನಿಕಡೀಗ ಓಡಿದ. ಅವರಪ್ಪ ಪರಿಪರಿಯಿಂದ ಬೇಡ್ಕೊಂಡ್ರು ಕಟುವಾನಾಯ್ಕ ತನ್ನ ಮೊಂಡತನ ಬಿಡದನ್ನ ನೋಡಿದ ಗೊಂದಾ. ಅಲ್ಲೆ ಪಕ್ಕದಾಗಿದ್ದ ಕಾಯಿಗೋಲ ತಗೊಂಡ. "ಏನ ಬೇಕೊ ನಿನಗೆ ಮಗನೆ. ಆ ಮುದುಕಿನ ಒಳಗ ಹಾಕ್ಕೊಂಡು ಇಡೀ ಮನಿತನನೆ ಮುರದೆ. ಅದು ಅಲ್ಲದೇ ನಮ್ಮಪ್ಪಂತಾವ ಆಸ್ತಿ ಕೇಳಾಕ ಬಂದಿಯಾ" ಅಂದವನೆ ಬೆನ್ನಿಗ, ಕಾಲಿಗ ರಪಾ ರಪಾ ಬಾರಿಸಿದ. ಗೊತ್ತಾನಾಯ್ಕ ನೋಡ ನೋಡ್ತಿದಂಗೆ ಎರಡು ಕಡೀಗ ಮಾರಾಮಾರಿ ಹತ್ಕೊಂಡು ರಕ್ತ ಸಿಕ್ತಾಗಿ ಹೋತು. ನೆರದಮಂದಿ ಸುಮ್ಮನೆ ಬಿಟ್ಟಾರ ಅವನಿಗನಾಕ ಮಂದಿ ಕಲಿಸಿದ್ರು. ಇವನಿಗ ನಾಕಮಂದಿ ಹೇಳಿಕೊಟ್ರು. ಮನಿಮುರಕ ಸೋನ್ಯಾ ಮಾತ್ರ ದೂರದಿಂದಲೇ ನೋಡಿ ನಗ್ತಾ ಇದ್ದ. ಕಟುವಾನ ತಲಿಹೊಡದು ಮೈಯೆಲ್ಲಾ ರಕ್ತ ಆಗಿತು. ಗೊತ್ತಾನಾಯ್ಕನ ಬೆರಳ ಹೊಡದು ರಕ್ತ ಹೊರಗಬರಾಕ ಹತ್ತಿತ್ತು. ಕಟುವಾನ ಹೆಂಡದಮಲು ಇಳದಿತ್ತು. ತಲಿನೋವು ಹೆಚ್ಚಾಗಿ "ಯವ್ವಸತ್ನೆ ಎಲ್ರೂಸೇರಿ ಕೊಂದಬಿಟ್ರು" ಅಂತ ಇಡಿ ಊರಿಗ ಊರೇ ಕೇಳೊ ಹಂಗ ಕೂಗ್ತಿದ್ದ. ಸೌರಾತ್ರಿವರಿಗ ಬೊಯ್ಕೋದು ಕಿರಚೋದು ನಡದೆ ಇತ್ತು. ಊರಾನ ಮಂದಿ ಚಾಡಿ ಚುಚ್ಚೊ ಅಷ್ಟು ಚುಚ್ಚಿದ್ರು. ತಮ್ಮ ತಮ್ಮ ಮನಿಗ ಹೋಗಿ ಮಕ್ಕೊಂಡ್ರು.


ಕಟುವಾನ ದಾಳ ಮಾಡಿ ಗೊತ್ತಾನಾಯ್ಕನ ಮನಿಮುರಿಯೋ ಯೋಜನೆ

ಹಾಕ್ಕೊಂಡಿದ್ದ ಸೋನ್ಯ, ಪೂಜಾರಿ, ಗಬಡು, ಕಿಷುಣಾ, ಬದಿಯಾ, ಸಕ್ರು, ಚೆನ್ನಿಂಗ, ಚೊಕ್ಕ ಮಾತ್ರ ನಿದ್ದಿಮಾಡ್ದೆ ರಂಡಮುಂಡಿ ದೇವಿರಿಬಾಯಿ ಮನಿಯೊಳಗ ಗುಪ್ತಸಮಾಲೋಚನೆ ನಡೆಸಿದ್ರು. ಕಟುವಾನ ಹೆಂಗಾನಮಾಡಿ ಕರೆಸಿಕೊಂಡು ದೇಗೂರ ಪೋಲಿಸ ಠಾಣೆಗೆ ಕಳಿಸಿ ಕೇಸು ಕೊಡಸೋದು ಅವರ ದುರಾಲೋಚನೆಯಾಗಿತ್ತು. ಇಬ್ಬರ ಮನಿ ಅಕ್ಕಪಕ್ಕ ಇರೋದ್ರಿಂದ, ಅವನ್ನ ಕರಿಯಾಕ ಹೋಗೋದು ಹ್ಯಾಂಗಂತ ಯೋಚಿಸಿದ್ರು ಅಷ್ಟೊತ್ತಿಗೆ ಸರಿಯಾಗಿ ಕಟುವನ ಮೂರನೆ ಹೇಣ್ತಿ, ಅವನ ಹಿರಿಮಗಳು ದುರಗಿಯನ್ನ ಕರ್ಕೊಂಡು ಸೋನ್ಯಾನ ಹುಡ್ಕೊಂಡು ಬಂದ್ಲು. "ಇದುಸರಿನಾ ಮಾವ, ಮೈ ಚರ್ಮ ಹಸರಾಗೋ ಹಂಗ ಹೊಡದಾರಲ್ಲಾ. ಕಕ್ಕ ತಂದಿ ಸಮಾನಂತ ತಿಳಿಲಿಲ್ಲಾ ನನ್ನ ಹಾಟಗಳ್ರಿಗೆ. ಅವರ ಔಸಡಗಾ, ಅವರ ಕೈಗ ಒಂದು ಘಳಿಗಿನಾಗರಹಾವು ಕಚ್ಚಲಿ" ಅಂತ ಅದೇ ಹೊತ್ತಿನ್ಯಾಗ ಶಾಪ ಹಾಕ ತೊಡಗಿದ್ಲು. "ಎಯ್, ಅವರದ್ ಭಾಳ ಆಗ್ಯೆತಿ ಬಿಡು. ಊರಾಗ ಗೂಳೀಗಳಾಗ್ಯಾರ. ಅಣ್ಣ, ಹಿಂಗೆ ಬಿಟ್ರೆ ಇಡಿ ತಾಂಡನೇ ಬಗ್ಗಸೋದಂತು ಗ್ಯಾರಂಟಿ. ಆ ಸಾಲಿ ಓದ್ತಾನಲ ಆ ಸೂಳಿಮಗ ಸೊಕ್ಕನ್ಯಾಗ ಅದಾನಂತಿಯಾ, ಬಿಡಸಾಕ ಹೋದವರನ್ನೆ ಹಿಡದು ಹೊಡಿತಾನ ಪ್ಯಾಟ್ಯಾಗ ಸಿನಿಮಾ ಗಿನಿಮಾ ನೋಡ್ತಾನಲ್ಲ ಅದಕ್ಕ" ಆ ಮನಿಮ್ಯಾಲಿನ ತನ್ನ ಸಿಟ್ಟನ್ನ ಹೊರಹಾಕಿದ ಪೂಜಾರಿ ಪಾಪುಗನಾಯ್ಕ. ಉಳದವರೆಲ್ಲಾ ತಮ್ಮ ತಮ್ಮ ವರದಿಯನ್ನ ಒಪ್ಪಿಸಿದ್ರು ಸೋನ್ಯಾನ ಮುಂದ. ಚೊಕ್ಕ ಮಾತ್ರ ತನ್ನ ಬಹಳ ದಿನಗಳ ಬಯಕೆ ಈಡೇರಿಸಿಕೊಳ್ಳೊಹೊತ್ತ ಇದೇ ಅಂದವನೆ ಕತ್ತಲೊಳಗ ಕರ್ಕೊಂಡ ಹೋಗಿ ಮೈಕೈ ಮುಟ್ಟಿ ತನ್ನ ಬಹಳ ವರ್ಷದ ಹಸಿವನ್ನ ತೀರಿಸಿಕೊಂಡ. ಎಷ್ಟೋ ವರ್ಷಗಳಿಂದ ಅಕಿಮ್ಯಾಲ ಕಣ್ಣಿಟ್ಟಿದ್ದ. ಕಟುವಾ ಮೂವರು ಹೆಂಡಂದಿರ ಕಾಟ ತಡಿಯಲಾರದೆ ದಿನ ರಾತ್ರಿ ಹೆಂಡಕುಡ್ಕೊಂಡು ಬಂದು ಒಂದು ಮೂಲಿಯೊಳಗ ಬಕ್ಕಬರ್ಲೆ ಬಿದ್ಕೊಳ್ತಿದ್ದ. ಹದಿಹರೆಯದ, ಚಾಂವಿ, ಗಿಂಡಿ, ಬಸವಿ ಕತ್ತಲೊಳಗ ಕೈಯಾಡಿಸ್ತಾ ತಮಗಸಿಗದ ಸುಖಕ್ಕಾಗಿ ಹಾತೊರಿತಿಯುತ್ತಿದ್ರು. ಕಟುವಾ, ಗಂಡಸಾದ್ರು ಮೂವರ ಆಶಿ ತಿರಸಾಕ ಆಗದಂತೋನು. ಅವನೇನು ಹೈದ್ರಾಬಾದ ನಿಜಾಮನಾ, ಇಲ್ಲಾ ದಿನರಾತ್ರಿ ಹಾಸಗಿ ಬದಲಿಸೊ ರಾಜ ಮಹಾರಾಜ್ನ. ಹಗಲೆಲ್ಲಾ ಬಿಸಲೊಳಗೆ, ಹಸಿಹಿಂಡಿ ರೊಟ್ಟಿ ಉಂಡು ನಡದಾಗ ನರಭಳ್ ಅನ್ನೊಹಂಗ ದುಡಿಯೊ ಒಬ್ಬ ಸಾಮಾನ್ಯ ಮನುಷ್ಯ. ಕಾಮ ಅನ್ನೋದು ಒಂದು ಕ್ಷಣದ ಹಸಿವು. ಮನಸು ದೇಹಗಳೆರಡು ಗುದ್ದಾಡೊ ಸಮಯ. ಹಗಲೆಲ್ಲಾ ನೆಲದ ಜೊತಿಗ ಗುದ್ದಾಡಿ ತನ್ನ ತನವನ್ನೆ ಕಳ್ಕೊಂಡು. ಇಡಿ

ಬದುಕೆ ಸಾಕಾದವನ ಹಾಗೆ ಮುದುಡಿಕೊಂಡು ಮಲಗೊ ಅವನ ದೇಹಕ್ಕಾಗಿ ಹಪಹಪಿಸೊ ಮೂರು ಜೀವಿಗಳಿಗೆ ಮಂಜಾನೆಯವರೆಗೆ ಮುಲಕಾಟವೆ ಗತಿ. ಹುರುಪಿನೊಳಗೋ ಗೊತ್ತಾನಾಯ್ಕ ಬುದ್ಧಜ್ಜನ ಮನಿತನದ ಹೆಸರಿನಿಂದಾಗಿ ಮದ್ವಿಯಾದ ಮೂವರು ಹೆಂಗಸರು ತಮ್ಮ ತಮ್ಮ ತೌರಿಗೆ ಹಿಡಿಶಾಪ ಹಾಕತೊಡಗಿದರು.

ಮೂರನೇ ಹೇಣ್ತಿ ಬಸವಿ ಮತ್ತು ಕರಿಯಾಕ ಬಂದ ಕಟುವಾನ ಎರಡನೇ ಹೇಣ್ತಿ ಮಗಳು ಸೋನ್ಯಾನ್ನ ಕರ್‍ಕೊಂಡವರೆ ಹಿಂದಿನ ಓಣಿಯಿಂದ ಅವನ ಮನಿಗ ಹ್ವಾದ್ರು. ಮಾರಿಮ್ಯಾಲ ಟವೇಲು ಮುಚ್ಕೊಂಡು ಸಬ್ಬಳನ ಮನಿ ಮೂಲಿಯಿಂದ ಒಳಗ ಬಂದ್ರು. "ಏನೊ ಸೋನ್ಯಾ ನಿನ್ನ ಮಾತ ಕೇಳಿ ಜಗಳಕ್ಕ ಹೋದೆ, ಆದ್ರ ನಮ್ಮಣ್ಣನ ಹುಡುಗರು ಈ ಪಾಡುಮಾಡಿದ್ರು ನಂದು. ಅಯ್ಯಪ್ಪ ಸುತ್ನೋ" ಮೈ ಕೈ ಮುಟ್ಟಿನೋಡ್ಕಂಡ. "ನೀನೇನು ಹೆದರ ಬ್ಯಾಡೊ ಅಣ್ಣ" ಅಂದವನೆ ಅವನನ್ನೆ ನೋಡ್ತಾ ಅವನ ಖಾಲಿ ಪೌರುಷದ ಮಾತಗಳನ್ನ ಕೇಳ್ತಾ ನಿಂತಿದ್ದ ಕಟುವಾನ ಎರಡನೇ ಹೇಣ್ತಿ ಗಿಂಡಿ ಕಡೀಗ ನೋಡಿ ಮೀಸೆಯೊಳಗೆ ನಗ್ತ ತನ್ನ ಧಾಟಿಯನ್ನ ಬದಲಿಸಿದ. "ನಾವಿಲ್ಲಾ, ಒಂದು ಕೆಲ್ಸಮಾಡು ಈಗ್ಲೆ ಬಂಡಿಕಟ್ಕೊಂಡು ದೇಗೂರ ಪೋಲಿಸ್ ಠಾಣೆದಾಗ ಕಂಪ್ಲೆಂಟು ಮಾಡು. ಏಳೋ ಈಗ ಕುಂತ್ಕೊಳ್ಳೋ ಹೊತ್ತಲ್ಲಾ. ಅಂವ ಹೋಗಿ ಕಂಪ್ಲೆಂಟ್ ಕೊಡಾಕ ಮುಂಚೇನ ನಾವ ಹೋಗಾಕು" ಅಂತೇಳ ತನ್ನ ಸ್ವಾರ್ಥಕ್ಕ ಅವನ ತಲಿ ತುಂಬಿದ. ಸೊನ್ಯಾನ ಮುಖವಾಡದ ಪರಿಚಯ ಇರದ ಕಟುವಾ ಮುಲಕಾಡ್ತಾ ಕಾಲ ಎಳಿತಾ ದೇಗೂರ ಕಡೀಗ ಹೊಂಟ. ಸೋನ್ಯಾ ತನ್ನ ಮಂದಿಯನ್ನ ಅವನ ಜೊತಿಗ ಕಳುಹಿಸಿ ಅವನ ಖರ್ಚಿಗಂತ ಕೈಯಾಗಿದ್ದ ಐದು ರೂಪಾಯಿ ಕೊಟ್ಟು ಮುಂದಿನದು ತಾನು ನೋಡೊದಾಗಿ ಭರವಸೆ ಕೊಟ್ಟು ಕಟುವಾನ ಮನಿಗಕಡೀಗ ಹೊಂಟ. ತಟ್ಟನೆ ಏನೋ ಆಲೋಚನೆ ಬಂದಿದ್ದ ಓಡಿಹೋಗಿ ಒಂದ ಬಾಟಲು ಹೆಂಡ ಖರೀದಿಸಿದ. ಲುಂಗಿಪಂಚೆಯೊಳಗ ಮುಚ್ಕೊಂಡು ಕಟುವಾನ ಇನ್ನೊಂದು ಗುಡಿಸಲ ಬಾಗಲ ದಬ್ಬಿ ಒಳಗ ಬಂದ. ಗಿಂಡಿ ತಲಿಒಂದು ಕಡೀಗ, ಕಾಲೊಂದು ಕಡೀಗ ಮಾಡ್ಕೊಂಡು ಉಲ್ಡಾಡ್ತಿದ್ದ ತನ್ನ ಹೆಣ್ಣ ಹುಡುಗಿಯರನ್ನ ಸರಿಯಾಗಿ ಮಲಗಿಸಾಕ ಪ್ರಯತ್ನಮಾಡ್ತಿದ್ಲು. ಬಾಗಲು ತಳ್ಳಿದ ಶಬ್ದ ಕೇಳ್ದಾಕಿನೆ, "ಯಾರವರು" ಕೂಗಿದ್ಲು. ಪಿಸುಮಾತಿನೊಳಗೆ "ನಾನೇ ಗಿಂಡಿ ಸೋನ್ಯಾ" ಅಂದವನೆ ಬಾಗಲಮುಚ್ಚಿ ಅಕಿ ಹತ್ರ ಬಂದಿದ್ದ. "ಏನ ಮೈದ್ನಾ ಇಟೊತ್ತಿಗ ಬಂದಿಯಾ" "ಏನೊ ಇಲ್ಲಾ ಮನಿಯೊಳಗ ನಿನ್ನ ಗಂಡ ಇಲ್ಲಾ ನಿನ್ನ ಮೈದುನನ ಮಕ್ಕಳು ಹರೆಯದವರು ಎಲ್ಲಾರ ನಿನ್ನ ಮನಿಗ ನುಗ್ಯಾರಂತ ಬಂದೆ ನಿನಗ ಬ್ಯಾಡಾಂದ್ರ ಹೊಕ್ಕೀನಿ ಬಿಡು" ಅಂತ

ಬಾಗಲಮಟ ಬಂದ. "ಇರ್ಲಿ ಬಾ ಕುತ್ಕೊ" ಅಂತ ತಟ್ಟು ಹಾಕಿದ್ಲು. ಅವನು ಹೆಂಡದ ಬಾಟಲು ತಗದು ಅಕಿ ಮುಂದಿಟ್ಟ. ಬಾಯಾಗ ನೀರ ಬಂತು ನುಂಗಿಕೊಂಡು ಸುಮ್ಮನಾದ್ಲು. ಅವನೆ ಅಕೀಗ ಕುಡಿಸಿದ. ಕೇಸ ಕೊಡಾಕ ಹೋದರು ಮುಂಜಾನಿ ಮಟಾನು ಬರೋದಿಲ್ಲಾಂತ ಗೊತ್ತಿತ್ತು ಅವನಿಗೆ. ರಾತ್ರಿ ಬಹಳ ಹೊತ್ತ ಆಗಿತ್ತು ಅಲ್ಲೆ ಅಕಿ ಹಾಸಗಿಯೊಳಗ ಬಿದ್ಕೊಂಡ. ಬರಿ ಒಂದಮಾತು ಅಂದು ಜಗಳ ಹಚ್ಚಿದ್ದು ಇಷ್ಟೊಂದು ಉಪಯೋಗ ಆದೀತಂತ ಅಂದ್ಕೊಂಡಿರಲಿಲ್ಲಾ.



ಎಲೆಕ್ಷನ್ ಸುಳಿಯಲ್ಲಿ

ಗೊತ್ತನಾಯ್ಕ ಕೆಪ್ಪಲಿಂದಭಟ್ಟರ ಗದ್ದಿ ಕಬ್ಬುಮುರಿದು ಆಲೆಮನೆಯೊಳಗೆ ಬೆಲ್ಲ ಮಾಡೋದ್ರಲ್ಲಿ ಮುಳಗೋಗಿದ್ದ. ಒಂದು ತಿಂಗಳ ಕಾಲ ಇಡೀರಾತ್ರಿ ಗಾಣದ ಎತ್ತಗಳ ತಿರುಗಿಸಿ ಹಗಲು ಹೊತ್ತಿನ್ಯಾಗ ಕಬ್ಬಿನರಸ ತಗದು ಕೊಪ್ಪರಿಕಿಯೊಳಗ ಸುರದು ಬೆಂಕಿ ಹಚ್ಚಿ ಕಾಯಿಸಿ ಹದ ಬರೊಮಟಾನು ಕಾದು ಅದಕ್ಕೆ ಬೇಕಾದ ರಾಸಾಯನ ಹಾಕಬೇಕು. ಒಂದುಚೂರು ಹೆಚ್ಚು ಕಮ್ಮಿಆದ್ರ ಇಡೀ ಬಾನಿನೆ ಕೆಟ್ಟುಹೋಗಿ ಸರಾಯಿಮಾಡೋ ಬೆಲ್ಲ ಆಗತಿತ್ತು. ಮತ್ತೊಂದು ಕಡೀಗ ಕಟುವಾ ಅವನ ಮ್ಯಾಲ, ಮಕ್ಕಳ ಮ್ಯಾಲ ಹಾಕಿದ ಕೇಸ ಬೇರೆ. ಅದೇ ಹೊತ್ತಿಗ ಸರಿಯಾಗಿ ಪಂಚಾಯ್ತಿ ಎಲೆಕ್ಷನ್ ಬ್ಯಾರೆ ಬಂದ ಬಿಡ್ತು. ಮಾಜಿ ಛೇರ್ಮನ್ ಅವರೂರ ಪಕ್ಕದ ತೆಂಬ್ರಳ್ಳಿ ಮರಿಸಿದ್ದಯ್ಯ, ನಾಮಪತ್ರ ಕೊಡಾಕ ಕರಿಯಾಕ ಖುದ್ದು ಆಲೆಮನಿಗ ಬಂದಿದ್ದ. ಒಲಿಮ್ಯಾಲ ಬೆಲ್ಲಾ ಕತಕತ

ಕುದಿಯಾಕ ಹತ್ತಿತ್ತು. ಒಳ್ಳೆ ಬಾನಿ ಇದು ಅದ್ಕೊಂಡಿದ್ದ ಗೊತ್ತನಾಯ್ಕ. "ಅಲ್ಲ ಮರಿಸಿದ್ದಯ್ಯನವರೆ ತಾಂಡದಾಗ ನನ್ನ ವಿರೋಧಿ ಮಂದಿನೆ ಜಾಸ್ತಿ ಆಗ್ಯಾರ ಅಂತದ್ರಾಗ ನೀವು ಬ್ಯಾರೆ ಈಲೆಕ್ಷನ್ ನಿಲ್ಲು ಅಂತಿದ್ದೀರಿ" ಅಂತ ರಾಗ ಎಳದ. "ನೋಡಯ್ಯ ಗೊತ್ತನಾಯ್ಕ ಈ ಮಂದಿನೆ ಹಿಂಗ. ಯಾರನ್ನೋ ನಂಬೊದು, ಯಾರನ್ನೋ ಪೂಜಿಸೋದು, ವಿಚಿತ್ರ ಬುದ್ಧಿವಂತರು. ಹೆಂಡ ಕುಡಿಸಿದ್ರೆ ನಿನ್ನಂಗೆ ಮಾತಾಡ್ತಾರ. ಮತ್ತೊಬ್ಬನ್ಯಾವನಾರು ಎರಡು ಬಾಟಲು ಕುಡಿಸಿದ್ರ ಅವನ ಹಿಂದೆ ಹಾಜರ್. ಅದಕ್ಕೆ ನೀ ನಿಲ್ಲು, ತಾಂಡಾದಾಗ ಏನಾರು ಕೆಲ್ಸಮಾಡೋನಂದ್ರೆ ನೀ ಒಬ್ಬನೆ" ಅಂದ ಮರಸಿದ್ದಯ್ಯ. ಗೊತ್ತನಾಯ್ಕ ಬಾಯಿ ಮುಚ್ಕೊಂಡ. ಅದ್ರೆ ಅವನ ಎದಿಯೊಳಗೆ ಪ್ರತಿಫಲಿಸ್ತಿದ್ದ ಅವನ ಶತ್ರುಗಳ ಗುಂಪು ಮಾತ್ರ ಅವನನ್ನ ಒಳಗೊಳಗೆ ಇರಿತಾ ಇತ್ತು. ಸಾಲದಕ್ಕೆ ಅವನ ತಮ್ಮ ಕಟುವಾನ ತಲಿಕೆಡಿಸಿ ಹೊಲದ ವಿಷಯದಾಗ ಎತ್ತಿಕಟ್ಟಿ ತನ್ನ ವೈರಿಯನ್ನಾಗಿ ಮಾಡಿರೋದು ತನಗೆ ಪ್ರತಿಕೂಲವೆ ಅಂದ್ಕೊಂಡ. ಆದ್ರು ಆಗೋದಾಗ್ಲಿ ನನ್ನ ಮ್ಯಾಲ ವಿಶ್ವಾಸವಿರೊ ಕರಿಂಸಾಬಿ, ಮಾಲಣ್ಣ, ಕಬರಣ್ಣ, ಕೆಂಚೀರಯ್ಯ, ಹುತ್ತಪ್ಪ, ಹುಸೇನಿ, ಕಾಣು, ಹಟ್ಟಿಹಿರಿಯ ಅದಾರ. ಒಂದಕೈ ನೋಡೆ ಬಿಡಾನ ಅನ್ನೋ ನಿರ್ಧಾರಕ್ಕ ಬಂದ. ಬೆಲ್ಲ ಹದಕ್ಕ ಬಂದಿತ್ತು. ಅಚ್ಚು ಮಾಡಾಕ ಈಚಲ ಚಾಪಿಮ್ಯಾಲ ಸುರುವಿದ್ರು. ಹುಡ್ರು ಅಂಟಗೋಲ ಸುತ್ತುತ್ತಿದ್ರು. ಇನ್ನೂ ಕೆಲವರು ಕಾಕಂಬಿ ತುಂಬ್ಕೊಳ್ತಿದ್ರು ಯಾರನ್ನು ಗದರಿಸಲಿಲ್ಲಾ. ಅವನ ಹಿರಿಮಗ ನುಗ್ಲಾನ ಕರದು "ಇನ್ನೊಂದು ಬಾನಿಗಾಗೊ ಆಟನ್ನ ನೀನು ಹನ್ಮ ಕೂಡ್ಕೊಂಡ ತಗದಿರ್ರಿ ಸಂಜಿಗ ಬಂದ ಬಿಡ್ತಿನಿ, ಇಲ್ಲೇ ಒಂದೀಟು ಹಂದೋಣಿ ಮಟ ಹೋಗಿ ಬರ್ತಿನಿ" ಅಂದವನೆ ಗಡಬಡಿಯಿಂದ ಹೊಂಟೆ ಬಿಟ್ಟ.

ಅವಾಗ ಆಗ್ಲೆ ಗೂನ ಬೆನ್ನಿನ ಬಸ್ಸಗಳು ಚಾಲು ಆಗಿದ್ವು. ಕ್ವಿಂಟಲ್ ಗಟ್ಟಲೆ ಹೊಗಿ ಉಗಳ್ತಾ ಹಿಂದಕೊಮ್ಮೆ ಮುಂದಕೊಮ್ಮೆ ದಬ್ಬಾಡ್ತಾ ಕರ್ಕೊಂಡ ಹೊಕ್ಕಿದ್ವು. ಭಾರತ ದೇಶದಿಂದ ಬ್ರಿಟೀಷ್ ಮಂದಿ ಹೋಗಿ ಪ್ರಜಾಪ್ರಭುತ್ವ ವ್ಯವಸ್ಥೆ ಬಂದಿತ್ತು. ಆದ್ರ ಕಾಕಾಪುರ ತಾಂಡದ ಅವಿದ್ಯಾವಂತ ಮಂದಿಗ ಸ್ವಾತಂತ್ರ್ಯಂದ್ರೇನು ? ಬ್ರಿಟೀಷರು ಯಾರು? ಯಾಕ ಆಳಿದ್ರು? ತಲಿಬುಡಾನೆ ಗೊತ್ತಿರಲಿಲ್ಲಾ. ಯಾವಾಗ್ಲೋ ಒಂದು ಸಲ ಗಾಂಧಿತಾತನ ಬಗ್ಗೆ ಕೆಂಚೀರಯ್ಯ ಒಂದ ತಾಸ ಭಾಷಣ ಮಾಡಿದ್ದ. "ಅದೇನು ಮನುಷ್ಯ ಅಂತೀನಿ, ಬೆಳಗಾವಿಗ ಬರ್‍ತಾನ ಆ ಪುಣ್ಯಾತ್ಮ ಅಂತ ಕೇಳಿದ್ದೆ, ಬಂದಿದ್ದ. ಹಂಗ ಹಂಗ ಜನಜಾತ್ರಿ ಒಂದು ಮೈಲಿ ದೂರದಿಂದ್ಲೆ ನೋಡಿದ್ವಿ. ತುಂಡ ಪಂಜಿ, ಕೈಯಾಗಕೋಲು ಗಂಭೀರ ನಡಗಿ, ತೂಕದಮಾತು ಇಡೀ ದೇಶದ ಮಂದಿ ಅವನ ಮಾತಕೇಳ್ತಿದ್ರಂತ.

ನಾನು, ಹುಸೇನಿ, ಕರಿಂಸಾಬಿ, ಹಟ್ಟಿ ಹಿರಿಯ, ಸಿದ್ದನಾಯ್ಕ ಕೂಡಿ ಹೋಗಿದ್ವಿ. ಸಾರ್ಥಕ ಆತು ನಮ್ಮ ಬದುಕು ಅಂತ ಒಬ್ಬ ಪುಣ್ಯಾತ್ಮನ ಕಂಡು ನೋಡಿ ಅವನು ಅಡ್ಡಾಡಿದ ಜಾಗದಾಗ ಅಡ್ಡಾಡಿ ಬಂದೇವಲ್ಲ ಆಟೆ ಸಾಕಮಗ" ಅಂತ ಹೇಳಿದ್ರ ಗೊತ್ತಾನಾಯ್ಕ ಮತ್ತ ಅವನ ಜತಿಗಾರರು ಭಾವುಕರಾಗಿ ಕೇಳ್ತಿದ್ರು. ಮುಂದ ಕೇಂಚೀರಯ್ಯ ಗಾಂಧಿಮ್ಯಾಲ ಒಂದು ಹಾಡಕಟ್ಟಿ ಜುಂಜಪ್ಪನ ಜಾತ್ರಿಯೊಳಗ ಭಜನಿಮ್ಯಾಳದಾಗ ಹಾಡಿದ. ಜುಂಜಪ್ಪನ ಜಾತ್ರಿಗ ಬಂದಿದ್ದ ಬ್ಯಾರೆ ಭಜನಿಮೇಳಗಳು ಕೆಂಚೀರಯ್ಯನ ಹಾಡು ಕೇಳಿ ದಂಗಾಗಿದ್ರು. ನಾಕೈದು ಮಂದಿ ಅವನ ಕೂಡ ಹತ್ತು ಸಲ ಹೇಳಿಸಿಕೊಂಡು ಕಲ್ತರು. ಬ್ರಿಟೀಷ ಮಂದಿ ದೇಶ ಬಿಟ್ಟಿಂದ ಅದ್ಯಾವನೊ ಗೋಡ್ಸಿ ಅನ್ನೋನು ಗಾಂಧಿನ ಕೊಂದ ಅಂತ ರೇಡಿಯೊದೊಳಗ ಕೇಳಿದ ಕಾಕಾಪುರದ ಬುದ್ದಿಜೀವಿಗಳಾದ ಕೆಂಚೀರಯ್ಯ, ಹುಸೇನಿ, ಸಿದ್ದನಾಯ್ಕ ಗೋಳೋ ಅಂತ ಅತ್ತು ಗಾಂಧಿಗ ಮರ್ಯಾದಿ ತೋರ್ಸಿದ್ರು. ಆಮ್ಯಾಲ ಹಳ್ಳಿ ಪಂಚಾಯ್ತಿ ಎಲೆಕ್ಷನ್ ಸುರು ಆತು. ಮದ್ಲ ಒಂದುದಪ ಕೆಂಚೀರಯ್ಯ ಗೆದ್ದ. ಆ ಮ್ಯಾಲ ಅವನನ್ನ ಸೋಲಿಸಿದ್ರು. ಹುತ್ತಪ್ಪ, ಕಾಣು, ಸಿದ್ದನಾಯ್ಕ ಮೆಂಬರ ಆದೇ ಆದ್ರು. ಈ ಎಲೆಕ್ಷನ್ ಮಾತ್ರ ಬ್ಯಾರೆ ನಮೂನಿಯಾಗಿತ್ತು. ಕೆಳಗಿನ ಓಣಿಯಿಂದ ಚೊಕ್ಕನ್ನ ನಿಲ್ಸಾಕಂತ ಸೋನ್ಯ, ಗಬಡು, ಪೂಜಾರಿ, ಚೆನ್ನಿಂಗ, ಬದಿಯಾ, ಸಕ್ರು, ಕಿಷುಣಾ ಎಲ್ಲರೂ ನಾಮಿನೇಷನ್ ಕೊಡಾಕ ಹೊತ್ತಾರೆ ಹೋಗಿ ತಾಲೂಕ ಪಂಚಾಯ್ತಿ ಆಫೀಸ ಮುಂದ ಕುಂತ್ಕೊಂಡಿದ್ರು. ಮರಿಸಿದ್ದಯ್ಯ, ಗೊತ್ತನಾಯ್ಕ, ಹುಸೇನಿ, ಕೆಂಚೀರಯ್ಯ ಮತ್ತೊಂದು ಮೂವತ್ತು ಮಂದಿ ಬರ್ತಿರೋದನ್ನ ಕಂಡವರೆ ಆಫೀಸ ಹಿಂದ ಮರಿಯಾದ್ರು. "ಬಂದಾರ ನೋಡಪ್ಪ ಅವರು ಗೊತ್ತಾನಾಯ್ಕ ಹೇಳಿದ." ಏನೂ ಆಗಂಗಿಲ್ಲಾ ನೀ ಏನು ಹೆದ್ರಾಕ ಹೋಗಬ್ಯಾಡ" ಕೆಂಚೀರಯ್ಯ ಗೊತ್ತಾನಾಯ್ಕನಿಗ ಧೈರ್ಯ ತುಂಬಿದ. "ಅವರೇನು ಮಾಡಲ್ಲ ದೊಡ್ಡಪ್ಪ. ಹಿಂಗೆ, ನನಮ್ಯಾಲ ಹೊಟ್ಟೆಕಿಚ್ಚು ಮಾಡ್ತಾ ಮಾಡ್ತಾ ಒಂದು ದಿನ ಸತ್ತ ಹೊಕ್ಕಾರ ಅಷ್ಟೇ ಬಿಟ್ಟು ಮತ್ತಿನೇನು ಆಗಲ್ಲ" ಗೊತ್ತಾನಾಯ್ಕ ಹೇಳಿದ. ಆಫೀಸಿನೊಳಗ ಹೋಗಿ ಗುಮಾಸ್ತನ ತಾವ ನಾಕಾಣಿ ಕೊಟ್ಟು ಮೂರು ಜನಾನು ನಾಮಿನೇಷನ್ ತುಂಬಿಸಿ ಸಹಿಹಾಕಿದ್ರು. ಬೇವಿನಮರದ ಪಕ್ಕದ ಮಾಂಸದ ಹೊಟೇಲಿಗ ಹೋಗಿ ಮೂವತ್ತು ಮಂದಿಗೂ ಮಾಂಸದೂಟ ಕೊಡಿಸಿದ್ರು. ಸಂಜಿಗ ಚೆಲುವಾಪುರದಾಗ ಇಳದಿಂದ ಎಲ್ಲರಿಗೂ ಒಂದೊಂದು ಬಾಟ್ಲಿ ಹೆಂಡ ಕುಡಿಸಿ ಕಾಕಾಪುರದ ದಾರಿಗ ಬಿಟ್ರು. ದಾರಿತುಂಬ ಥೇರ್ಮನ ಮರಿಸಿದ್ದಯ್ಯ ಮತ್ತು ಗೊತ್ತಾನಾಯ್ಕನದೆ ಸುದ್ದಿ. ಹಳ್ಳ ಇಳದು ಮಾವಿನಮರದ ನಳಕಿಗೆ ಬರೋದ್ರಾಗ ಹೊತ್ತ ಮುಳಗಿತ್ತು. ಕುಡದಿದ್ದ

ಅಮಲೇರುತ್ತಿದ್ದಂಗೆ ಮಾತು ಜೋರಾದ್ವು.

"ಅಲ್ರಪ್ಪ, ಉಣ್ಣಾಕ ಕೂಳಿಲ್ಲಾ, ಒಂದು ಬಾಟಲ ಹೆಂಡಕ್ಕ ಗತಿ ಇಲ್ದೆ ಅವರಿವ ಮಾರಿನೋಡ್ತಾನ ಚೊಕ್ಕನಾಯ್ಕ, ಇನ್ನೇನು ಎಲೆಕ್ಷನ್ ಮಾಡ್ಯಾನಂತ" ಕಾಣು ನಗ್ತಾ ಹೇಳಿದ. ಕಾರಬಾರಿ ಕುಲುಮು ತೇಲ್ಗಣ್ಣ ಮೇಲ್ಗಣ್ಣ ಮಾಡ್ತಾ "ಆ ಮಗನದ್ನೇನು ನಡಿರೋ ಗೊತ್ತಾನಾಯ್ಕನ ಹಿಂದೆ ಖುದ್ದ ಛೇರ್ಮನ್ರೇ ಅದಾರ ನಾಳೆ ಏನಾರು ಹೆಚ್ಚು ಕಮ್ಮಿ ಆದ್ರ ಅವರು ನಿಭಾಯಿಸ್ತಾರ. ಅಂತೋರಿಗೆ ನಾವೆಲ್ಲ ಓಟ ಹಾಕಬೇಕು. ಅದನ್ನ ಬಿಟ್ಟು ಯಾವನಾರು ತಿರುಕನಿಗೆ ಓಟಹಾಕಿದ್ವಿ ಮುಗೀತ ಕತಿ ನಾವು ಖಾಲಿ ಆದವಿ ಅಂತ್ಲೆ ಲೆಕ್ಕ" ಅಂತ ತನಗೆ ತಿಳಿದಿದ್ದನ್ನ ಮೂವತ್ತು ಮಂದಿಗೂ ತಿಳಿಸಿ ಅವರೊಳಗೆ ಗೊತ್ತನಾಯ್ಕ ಕುರಿತು ಒಳ್ಳೆ ಅಭಿಪ್ರಾಯ ಮೂಡಿಸಿದ. ಕಾರಭಾರಿ, ಗೊತ್ತನಾಯ್ಕ ಹಳೆ ಗೆಳೆಯರು. ಕಾರಭಾರಿ ಕುಲುಮು ಬಡವನಾದ್ರು ನಿಯತ್ತಿನ ಮನುಷ್ಯ. ಮನಿತುಂಬ ಹತ್ತರನ್ನೆರಡು ಹುಡ್ರು, ದುಡದದ್ದು ಹೊಟ್ಟೆ ಪಾಡಿಗ ಸಾಲದೆ ಕಷ್ಟ ಪಡ್ತಿದ್ದ. ಒಂದ ಹಬ್ಬ ಭಜನಿ, ವಾಜ ಏನೆ ಇದ್ರೂನೂವೆ ಗೊತ್ತಾನಾಯ್ಕ ಕಾರಭಾರಿ ಕಲುಮು ಜೊತೆಯಿಂದಲೇ ಹೊಕ್ಕಿದ್ರು. ಅವನ ಗೆಳೆಯ ಎಲೆಕ್ಷನ್ ನಿಂತಾನಂದ್ರ ಹುರುಪಿನಿಂದಲೇ ಅಡ್ಡಾಡಿ ಕೆಲ್ಸ ಮಾಡ್ತಿದ್ದ. ಅಂಗಡಿ ಸಂಗವ್ವ, ಗಂಡನ ಬಿಟ್ಟುಬಂದ ಸಂಗಿ, ರಾಧಿ, ಜಂಬಮ್ಮ, ಜೋಗಣ್ಣ ಗೊತ್ತಾನಾಯ್ಕನ ಕೆಲಸಕ್ಕ ಬರೊ ಖಾಯಂ ಆಳಗಳು. ಅದಕ್ಕೆ ಅವರೆಲ್ಲಾ ಗೊತ್ತನಾಯ್ಕನಿಗೆ ಓಟ ಹಾಕೊ ನಿರ್ಧಾರ ಮಾಡಿದ್ರು. ಹಿಂದಲೋಣಿಯೊಳಗ ಹದಿನೈದಿಪ್ಪತ್ತ ಮನಿಗಳು ಗೊತ್ತನಾಯ್ಕನ ಪರವಾಗಿದ್ರೆ, ಕೆಳಗಿನ ಓಣಿ ಮೂರ್ನಾಕ ಮನಿಗಳು ಅವನಿಗೆ ವಿರುದ್ಧವಾಗಿದ್ವು. ಊರ ಮನಿ ಓಟಗಳು ಅರ್ಧಕರ್ದ ಇವನ ಕಡೇಗಿದ್ವು. ಮರಿಸಿದ್ದಯ್ಯನ ಕುಲದವರ ಹದಿನೈದು ಮನಿಗಳೂ ಮರಿಸಿದ್ದಯ್ಯನ ಪರವಾಗೆ ಇದ್ದವು. ಸಾಬರ ಹನ್ನೊಂದು ಮನಿಗಳು ಗೊತ್ತನಾಯ್ಕನ ಬೇಕಾದವೆ. ಯಾಕಂದ್ರ ಅವರು ಗೊತ್ತನಾಯ್ಕನ ಅಪ್ಪನಗಂಗೆ ಪನಾಡ ಪಕ್ಷಿಯಾಗಿ ಎಲ್ಲಿಂದಲೋ ಬಂದು ಕಾಕಾಪುರದಾಗ ವಾಸವಾಗಿದ್ರು. ಊರಾನ ಮಂದಿ ಅವರನ್ನು ಅದೇ ನಜರಿಂದ ನೋಡ್ತಿದ್ರಿಂದ ಸಹಜವಾಗೆ ಗೊತ್ತನಾಯ್ಕನ ಕಡೀಗ ಮಾತಾಡ್ತಿದ್ರು. "ಏಯ್, ಗೊತ್ತಾ ಬುದ್ಧಿವಂತ ಕಣ್ರಯ್ಯ, ಬ್ರಾಂಬ್ರ ಹಿಂದ ಅಡ್ಡಾಡ್ತಾನ ಕತಿ-ಶಾಸ್ತ್ರ ಕಲ್ತಾನ, ಮಾತಾಡತಾನ, ಅವನಿಗ ತಪ್ಪ್ಯಾವುದು ಸರಿಯಾವುದು ಗೊತ್ತಾಗತೈತಿ" ಅಂತ ಮಂದಿ ಮಾತಾಡ್ತಿದ್ರು.

ಅವನ ವಿರೋಧಿ ಪಾಳೆಯದಾಗ ಚರ್ಚೆಮಾಡ್ತಿದ್ದ ವಿಷಯ ಅಂದ್ರ ಚೆಂಪಿನ ಇಡ್ಕೊಂಡಿರೋದು. "ಹೌದಪ್ಪ, ನೀವೇನಾರು ಅವನನ್ನ ಆರಿಸಿದ್ರಿ ಅಂತಂದ್ರ ನಿಮ್ಮ

ಹೆಂಡಂದಿರು ಅವನ ಹತ್ರ ಹೋಗಾಕ ಸುರುಮಾಡ್ತಾರ. ಏನಮಾಡ್ತಿರಿ, ನೋಡ್ರಪ್ಪ ಎಲ್ಲಾ ನಿಮ್ಮ ಕೈಯಾಗ ಐತಿ" ಅಂತಂದು ಮಂದಿ ಸಿಕ್ಕಹತ್ರ ಅಪಪ್ರಚಾರ ಮಾಡ್ತಿದ್ದ ಸೋನ್ಯಾ. ಎರಡನೆ ಅಜೆಂಡಾ ಗೊತ್ತಾನಾಯ್ಕನ ವಿರುದ್ಧ ತಗೊಂಡಿದ್ದು ಅಂದ್ರ -ನಿನ್ನೆ ಮನ್ನೆ ಈ ಊರಿಗೆ ಬಂದೋನು ಅನ್ನೋದು. "ನಮ್ಮಪ್ಪಂದಿರು-ಅಜ್ಜಂದಿರು-ಅವರಪ್ಪಂದಿರು ಬಾಳಿ ಬದುಕಿದ ಊರು. ನಿನ್ನೆ ಮನ್ನೆ ಬಂದೋನ ಕೈಯಾಗ ಅಧಿಕಾರ ಕೊಟ್ರ ಏನಾದೀತಂತ" ಪೂಜಾರಿ ಪಾಪುಗನಾಯ್ಕ ಹೆಂಡದಂಗಡಿಯೊಳಗ, ಕೊಂತವ್ವನ ಚಾದಂಗಡಿಯೊಳಗ, ಎಲ್ಲಿ ಮಂದಿ ಸಿಗ್ತಾರೊ ಅಲ್ಲೆಲ್ಲಾ ಅವೇ ಮಾತುಗಳು. ಗದ್ದಿಗ ನೀರ ಬಿಡಾಕ ಹೋಗೊರಿಗ ರಾತ್ರಿ ಬೆಳದಿಂಗಳಾಗ ರಾಗಿಕೊಯ್ಯಾಕ ಹೋಗೊರಿಗ, ಕರದ ಕರದು ಗೊತ್ತಾನಾಯ್ಕನ ವಿರುದ್ಧ ಹೇಳಿದ್ದೆ ಹೇಳಿದ್ದು. ಗೊತ್ತಾನಾಯ್ಕ ಬಾಣವ್ವ, ನುಗ್ಗಾ, ಗೊಂದಾ, ಹನುಮ, ಪುತಳಿ ಒಂದು ಮನಿ ಬಿಡದಂಗೆ ಅವನ ಗುರುತಾದ ಕೈಪಂಪಿಗೆ ಓಟುಹಾಕಾಕ ಹೇಳ್ತಾಹೋದರು. ಕೆಲವರು ಹೂಂ ಅಂದ್ರೆ ಮತ್ತೆ ಕೆಲವರು ಊಹೂಂ ಅಂದಿದ್ರು. ಗೊತ್ತಾನಾಯ್ಕ ಹದಿನೈದು ದಿನದಿಂದಲೂ ಮಂದಿ ಸಿಕ್ಕ ಸಿಕ್ಕ ಹತ್ರ "ಎನ್ರಪ್ಪಾ 23ನೇ ತಾರೀಖಿಗೆ ನಮ್ಮ ತಾಂಡದ ಸಾಲಿಯೊಳಗ ಓಟಹಾಕೋದೈತಿ ಏನೊ ನೀವೆಲ್ಲಾ ಅದೀರಂತ ನಿಂತು ಬಿಟ್ಟನಿ. ಪಾಪ ಧರ್ಮ ನಿಮ್ಮ ಕೈಯಾಗೈತಿ" ಅಂತ ಸಿಕ್ಕ ಸಿಕ್ಕಲೇ ಹೇಳ್ತಿದ್ದ. ಕೆಲವರಿಗೆ ಸಾರಾಯಿ, ಹೆಂಡ ಬೆಲ್ಲಕೇಳಾಕ ಬರೋರಿಗೆ ಬೆಲ್ಲಾ, ಬಂಡಿ ಕೇಳಾಕ ಬರೋರಿಗ ಬಂಡಿ, "ಗೊತ್ತಣ್ಣ, ಸ್ವಲ್ಪ ಎತ್ತಗಳನ್ನ ಕೊಡು ಇಲ್ಲೆ ಚೆಲುವಾಪುರದವರಿಗ ಬಂಡಿಕಟ್ಕೊಂಡು ಹೊಕ್ಕೀವಿ ಹಂಪಾಪುರದಿಂದ ನಮ್ಮ ತಂಗಿ ಬಂದಾಳ ಆಟು ಕಳಿಸಿ ಬರ್ತೀನಿ" ಅಂತ ಸಿಂಗಾಳಿ ಕೇಳ್ಕೊಂಡು ಬಂದ್ಲು. ಅವರಿವರ ಕೂಲಿಮಾಡಿ ಮೂರಕಾಸಿನ ಮರ್ಯಾದಿ ಇಲ್ಲದೆ ಬದುಕಿರೊ ಸಿಂಗಾಳಿಗೂ ಎಲೆಕ್ಷನ್ ಮುಂದ ಗೊತ್ತಾನಾಯ್ಕನ ಎತ್ತು ಬಂಡಿ ಬೇಕಾತು. ಇಲ್ಲಾ ಅಂದ್ರ ಅಕೀದು, ಅಕಿ ತಮ್ಮಂದಿರದು ಓಟು ಹಾಳಾಗು ತಾವಂತ, "ಹನುಮ ಬಂಡಿ ಕಟ್ಟಿ ಕೊಡೊ" ಮಗನಿಗೆ ಕೂಗಿ ಹೇಳಿದ. ಸಿದ್ನಿಂಗನ ಮೂರು ಎಮ್ಮಿಗಳು ದಿನ ಗೊತ್ತಾನಾಯ್ಕ ಹೊಟ್ಟಿನ ಬಣವೀಗ ಬಂದ ಮೇಯಿತಿದ್ದು, "ಸಿದ್ನಿಂಗ ಎಮ್ಮಿಗಳನ್ನ ಕಟ್ಕೋ ಮಾರಾಯ ದಿವಸಾ ಬಣಮಿಗ ಬರ್ತಾವ ಯಾಕಹಿಂಗ ಬಿಡ್ತಿ" ಅಂತ ಬಾಯಾನ ಮಾತು ಬಾಯಾಗಿತ್ತು. "ಎಯ್, ಮಗನೆ ಗೊತ್ತಾನಾಯ್ಕ, ನಾನೇನು ಬೇಕಂತ್ಲೆ ಬಿಡ್ತೀನೇನೂ ನಿನ್ನಬಣಮಿಗ. ಹೋಗಿ ತಿನ್ನಲಿ ಅಂತ ಏನು ಬಿಡಂಗಿಲ್ಲ ಕೆರಿ ಅಂಗಳಕ್ಕ ಹೋಗಿ ಜೇಕ ಮೇಯಲಿ, ಒಂದೀಟು ಹಾಲುಕೊಡ್ಲಿ ಅಂತಂದು ಬಿಡ್ತೀನಿ. ಮತ್ತೊಂದಸಲ ಮಾತಾಡ್ದೆ ಕಾಲಾಗಿರೋವನ್ನ

ತಗೊಂಡ ಹೊಡಿತೀನಿ" ಅಂತಂದು ಜೋರಮಾಡ್ದ. ಅವನ ಎದುರಾಳಿ ಕಾಲುಕೆರದು ಜಗಳ ತಗಿ ಬೇಕಂತ್ಲೆ ತಯಾರ ಮಾಡಿ ಕಳಿಸಿದ್ದ ಸಿದ್ನಿಂಗ ಜೋರು ಜೋರಾಗ ಬಾಯಿ ಮಾಡಿದ. ಈ ಮಗಹಾರಾಡ್ಲಿ ಎಲೆಕ್ಷನವರಿಗ ಅವನು ತಾಯಿ, ಹೆಂಡತಿ ಎಣಿಸಿ ಬೋಯ್ದರು ಸುಮ್ಮನಿದ್ದ. ಪಕ್ಕದಾಗ ಕುರಿಮೇಲಿಂದ, ಕೋಳಿ ಮೇಲಿಂದ, ನಾಯಿ ಮೇಲಿಂದ ಕಟುವಾನ ಮೂವರ ಹೇಣ್ತಿಯರು, ಹುಡುಗಿಯರು, ಮತ್ತ ಕಟುವಾ ದಿನ ಏನಾದರು ಒಂದು ಮಾತು ಹೇಳಿಯೇ ತೀರುತ್ತಿದ್ರು. ಎಲೆಕ್ಷನ್ ಮುಗಿಯೊ ಮಟಾನು ಸಹಿಸಿಕೊಳ್ಳುವುದು ಅನಿವಾರ್ಯವಾಗಿತ್ತು. ಗೊತ್ತಾನಾಯ್ಕ ಬಾಣಿ, ಕೇಳಿದ್ರು ಕೆಪ್ಪರಂತೆ ನಟಿಸತೊಡಗಿದರು. "ನಾನೊಳ್ಳೆ ಎಲೆಕ್ಷನಿಗೆ ನಿಂತಬಿಟ್ಟೆ ಅಂತ. ಸಣ್ಣ ಹುಡುಗ ಬ್ಯೋಯ್ದ್ರು ಬ್ಯೋಯಿಸಿಕೊಬೇಕು" ಗೊತ್ತಾನಾಯ್ಕ ಗೊಣಗಿದ. ಹದಿನೈದು ದಿನ ಅನ್ನೋದು ಹದಿನೈದು ವರ್ಷಕಳದಂಗಾಗಿತ್ತು. ದಿನಕ್ಕ ಒಂದೊಂದು ರೀತಿ ಮಾತುಗಳು ಕೇಳಿಬರ್ತಿದ್ವು ಎಲೆಕ್ಷನ್ ಬರೊವರಿಗ ಎಲ್ಲರ ಮುಲಾಜುಕಾಯ್ಕೊಬೇಕು. ಕುಡಸಬೇಕು ಮಾತಾಡಿಸ್ದೋರನ್ನ ಮಾತಾಡಿಸಬೇಕು ಅಣ್ಣ, ಅಕ್ಕ, ಮಾವ ಸಂಬಂಧಗಳನ್ನ ಹುಡುಕಿ ಹುಡುಕಿ ಕರಿಬೇಕು. ಇಷ್ಟೆಲ್ಲಾ ಆದ್ರೂ ಮಂದಿ ಗಂಟಿಗೊಂದು ಮಾತಾಡ್ತಿದ್ರು. ಒಂದು ದಿನ ಗೊತ್ತಾನಾಯ್ಕನ ಹತ್ರ ಕುಡದು ಇವನ ಹಿಂದ ಅಡ್ಡಾಡಿ ಇವನಂಗೆ ನಟಿಸಿ ಬೆಳಕ ಹರಿಯೋದ್ರಾಗ ಅವನ ಹಿಂದೆ ಅಡ್ಡಾಡ್ತಿದ್ರು. "ಗೊತ್ತಾ ನೀ ಏನು ತಪ್ಪತಿಳ್ಕೊ ಬೇಡಾ, ತಾಂಡ ಹೌದು, ಅದಕ್ಕೆ ಯಾರತಾಗು ಮಾರಿ ಸೊಟ್ಟ ಮಾಡ್ಕೊ ಬಾರದು. ಅದ್ಕೆ ಅವನು ಕರದ್ರು ಅವನ ಹಿಂದ ಹೋಗಲೇಬೇಕಲ್ಲ. ನೀ ಏನು ತಪ್ಪು ತಿಳಿಯಾಕ ಹೋಗಬ್ಯಾಡ. ನಾವೆಲ್ಲಾ ಓಟು ಹಾಕೋದೆ ನಿನಗೆ" ಅಂತ ಭರವಸೆ ಕೊಡ್ತಿದ್ರು. "ಆ ಮಗ, ತಮ್ಮನ ಬಾಯಿಬಡದು, ಹಾಲಿಗ ನೀರ ಸೇರ್ಸಿ, ಭಟ್ರಿಗೂ ಮೋಸ ಮಾಡಿ ದುಡ್ಡ ಮಾಡ್ಯಾನ. ಅವನ ಹಿಂದೆ ತಿರಗಾಡಿ ಅವನು ತಿನ್ನಿಸೊ ಹಂಗ ಸುಮ್ಮನೆ ತಿನ್ರಿ ಓಟುಮಾತ್ರ ನನಗ ಹಾಕ್ರಿ" ಅಂತ, ಚೊಕ್ಕ ಮಂದಿಮುಂದ ಪುಕಾರೆಬ್ಬಿಸಿದ್ದ.

ಕತ್ತಲರಾತ್ರಿ ಮಂದಿಗ ಹಬ್ಬ. ಆದ್ರ ಗ್ಗೊತ್ತನಾಯ್ಕನಿಗ ಸಂಕಟದ ದಿನ. ಇಡೀ ರಾತ್ರಿ ಎಚ್ಚರಿದ್ದು ಇಡೀತಾಂಡದಾಗ ಒಂದುಮನಿ ಬಿಡದಂಗೆ ಪ್ರಚಾರ ಮಾಡಿ ಹೆಂಡ, ಸಾರಾಯಿ ಹಂಚಿ, ಯಾರಮ್ಯಾಲ ಅನುಮಾನ ಐತೊ ಅವರಿಗೆಲ್ಲಾ ಗುದ್ದಮ್ಮನ ಕಟ್ಟಿ ಮೇಲಿನ ಬೇವಿನಗಿಡದ ಸಪ್ಪನ ಹಿಡಿಸಿ "ಅಣ್ಣ ನನ್ನ ಮ್ಯಾಲ ನಂಬಿಕಿ ಇಲ್ಲ ನಿನಗ, ನಾನು ಜನಮಕ್ಕ ಜನಮ ಕೊಡಾಕಿ ಹೌದು, ಎನ ಅಂದ್ಕೊಂಡಿಯ ನನ್ನ ಹೆಸರು ಸಿಂಗಾಳಿ" ಅಂತಂದು ಹೆಂಡದ ಅಮಲಿನ್ಯಾಗ ಮತ್ತಳಾಗಿರೊ ಸಿಂಗಾಳಿ ತೇಲಾಡ್ತಾ ಹೇಳಿದ್ಲು.

ಹಿಂಗ ರಾತ್ರಿ ಕತ್ತಲಾಗ ಎದ್ದು ಬಿದ್ದು ಒಂದು ಕಡಿಯಿಂದ ಹೇಳ್ಕೊಂತ ತಿರುಗಾಡಿದ. ಮತ್ತೊಂದ ಕಡೀಗ ಬಾಣಿಬಾಯಿ, ಪ್ರಚಾರ ಮಾಡ್ತಿದ್ರ ಚಂಪಿ ಹೊರಗ ಬರದೆ ತನಗೆ ಪರಿಚಯ ಇರೊ ಮಂದಿಗೆಲ್ಲಾ ಗೊತ್ತಾನಾಯ್ಕನಿಗ ಓಟಹಾಕಬೇಕಂತ ತಾಕತ್ತು ಮಾಡಿದ್ಲು. ಇಡಿರಾತ್ರಿ ಕತ್ತಲೊಳಗ ಕಣ್ಣಿಗೆ ನಿದ್ದಿ ಇಲ್ದಂಗೆ ತಮ್ಮ ಪರಿಚಯದ ವಲಯಕ್ಕೆ ಶತ್ರುಗಳು ನುಗ್ಗಿ ತಲಿತಿಕ್ಕಿ ಬದಲ ಮಾಡ್ಯಾರಂತ ಒಂದ ಮೂಲಿಯೊಳಗ ಗೊತ್ತಾನಾಯ್ಕ, ಮತ್ತೊಂದು ಮೂಲಿಯೊಳಗ ಕಾರಭಾರಿ ಕುಲುಮ, ಒಂದು ಕಡೀಗ ಬಾಣೀ, ಮತ್ತೊಂದು ಕಡೀಗ ಅವಳಣ್ಣ ತೆಕ್ಕಪ್ಪ ಕಾಯತೊಡಗಿದರು. ಗೊತ್ತಾನಾಯ್ಕನ ವಿರೋಧಿ ಚೊಕ್ಕನಾಯ್ಕನ ದಂಡು ತಮ್ಮ ಓಣಿಯೊಳಗೆ ಗೊತ್ತಾನಾಯ್ಕನ ಮಂದಿ ಹೋಗದಂಗೆ ಕಾಯಾಕ ಅವನ ಬೆಂಬಲಿಗರಿಗೆಲ್ಲಾ ನಿಲ್ಲಿಸಿದ್ದ. ಅವನು ಮಾತ್ರ ಸಾಬರ ಓಣಿ, ಊರಮನಿ ಮಂದಿ ಹತ್ರ ಹೋಗಿ ಗೊತ್ತಾನಾಯ್ಕನ ಬಗ್ಗೆ ಕೆಟ್ಟ ಶಬ್ಧಗಳಿಂದ ತೆಗಳುತ್ತಿದ್ದ. ಗೊತ್ತಾನಾಯ್ಕ ಅವರ ಹಿಂದಿಂದೆ ಹೋಗಿ ತನ್ನ ಬಗ್ಗೆ ಅವನು ಮಾಡ್ತಿರೊ ಸುಳ್ಳು ಆರೋಪಗಳನ್ನೆಲ್ಲಾ ತಿಳಿಸಿ ಹೇಳ್ತಿದ್ದ.

ಮುಂಜಾನಿ ಆರುಗಂಟೆಗೆ ಪೊಲಿಂಗು ಬೂತಿನ ಹತ್ರಹೋಗಿ ಬ್ಯಾಲೆಟ್ ಬಾಕ್ಸಿಗೆ ಕುಂಕುಮ ವಿಭೂತಿ ಹಚ್ಚಿ ಊದಿನಕಡ್ಡಿ ಬೆಳಗಿ ಓಟುಹಾಕಾಕ ಅನುವು ಮಾಡಿಕೊಟ್ಟರು. ಗೊತ್ತಾನಾಯ್ಕನ ಮನಿಯಾಗ ಚೀಲದ ಮ್ಯಾಲ ಚೀಲ ಮಂಡಕ್ಕಿ ಒಗ್ಗರಣಿ, ಚಾ, ಕುಡದು ಮಂದಿ ಓಟಹಾಕಾಕ ಹೊಂಟ್ರು. ಅವನ ಮನಿಯಾಗ ಚಾ ಕುಡದ ಮಂದಿ ಓಟ ಹಾಕಿದ್ರು, ಬಹುಮತದಿಂದ ಗೆಲ್ಲುವ ಎಲ್ಲಾ ಸಾಧ್ಯತೆಗಳಿದ್ದವು. ಹೊರಗಡೆ ನಿಂತಿದ್ದ ಚೊಕ್ಕ ಮಂದಿಗ "ಹೋಗ್ರೋ ಒಗ್ಗರಣೆ ಮಂಡಕ್ಕಿ, ಚಾ ಕುಡದು ಬಂದು ನನಗ ಓಟ ಹಾಕ್ರಿ" ಅಂತೇಳಿ ತಾಕತ್ತು ಮಾಡ್ತಿದ್ದ. ಗೊತ್ತ ಮಾತ್ರ ಬಸಲೂರ ಭರಮನ ಕೆಲಸಕ್ಕ ಹೊಂಟಿದ್ದ ಕೂಲಿ ಆಳುಗಳನ್ನ ಅಡ್ಡಗಟ್ಟಿ ಕರ್ಕೊಂಡು ಬಂದು ಮಂಡಕ್ಕಿ ಚಾ ಕುಡಿಸಿ ಭೂತಿಗ ಕಳುಹಿಸೊ ಏರ್ಪಾಟು ಮಾಡ್ದ. ಹೊಲಕ್ಕೆ ಹೋದೋರನ್ನ ಕರ್ಕಂಡು ಬರಾಕ ಅಲ್ಲಲ್ಲೆ ಹುಡುಗರನ್ನ ಬಿಟ್ಟ. ಅವನ ತಂಗಿ ಪಾಮಿ ಅವನ ಕಡೀಗ ಇದ್ರ ಅಕಿಗಂಡ ಮಾತ್ರ ನವಲಿಪಕ್ಕನಂಗೆ ಈಕಡೆ ಆಕಡೆ ಅಡಾಡಿಕೊಂಡಿದ್ದ. ಕಟುವಾನ ಇಡೀ ಮನಿ ವಿರುದ್ಧವಾಗಿತ್ತು. ಸಾಬರು ಊರಮನಿಯೋರು ಲಕ್ಕಪ್ಪ ಮಾಸ್ತರು, ಕಾಯಕದ ಕಬರಯ್ಯನ ಮನಿಮಂದಿ ಪೂರಾ ಗೊತ್ತಾನಾಯ್ಕನಿಗ ಹಾಕಿದ್ರು. ಅವನು ಜಿಪುಣನಾಗಿದ್ರು, ಆತನ ಹೇಣ್ತಿ ಬಾಣಿಬಾಯಿ ಹಸ್ಕೊಂಡದೀವಿ ಅನ್ನೋರಿಗ ಒಂದು ಹಿಡಿ ಹಿಟ್ಟನ್ನಾರು ಕೊಡ್ತಿದ್ಲು. ಬೇಡಿ ಬಂದವರಿಗ ಯಾವತ್ತೂ ಇಲ್ಲಾ ಅನ್ನಲಿಲ್ಲಾ. ಅಕಿ ಮನಸ್ಸನ್ನ ನೋಡಿ ಮಂದಿ ಓಟ ಹಾಕಿದ್ರು.

ಸಂಜಿಗ ಓಟು ಮುಗದು ಹೋತು. ಡಬ್ಬಶೀಲ್ ಮಾಡಿ ಹಂದೋಣಿ ಕಾಲೇಜಿಗ ಕಳಸಲಾಯ್ತು. ಅವತ್ತು ಎಮ್ಮಿ ಬಣವಿಗ ಬಿಟ್ಟು ಮುಕ್ಕಾಳರೆ ಗಾಂಚಾಲಿ ಮಾಡಿದ್ದ ಸಿದ್ನಿಂಗ ಸಣ್ಣಪ್ಪ-ದೊಡ್ಡಪ್ಪ ಅಂತ ಸಂಬಂಧ ಜೋಡಿಸಾಕ ಪ್ರಯತ್ನಮಾಡಿದ. "ಮಗನೆ ಅವತ್ತು ಜೋರಾಗೆ ಹಾರಾಡ್ತಿದ್ದೆ ಏನಾತು ಇವತ್ತು ಕಟ್ಟಿಸಲೇನು ಮರಕ್ಕ ನನ್ನ ಹಾಳು ಮಾಡಾಕಂತ ನಾಟಕ ಮಾಡಿದೆಯಲ್ಲಾ, ಇವತ್ತು ಒಂದು ಮಾತಾಡು, ನಿನ್ನ ಮಾಂಸ ಎಲ್ಲಾ ಹಚ್ಚಗ ಆಗೋ ಹಂಗ ಹೊಡಿಲಿಲ್ಲಾ ಆಮ್ಯಾಲ ಕೇಳು" ಗೊತ್ತಾನಾಯ್ಕ ಕೆಂಡಕಾರ ತೊಡಗಿದ. ಯಾರ್‍ಯಾರು ಏನೇನ ಅಂದಿದ್ರು ಎಲ್ಲಾರ ಸಿಟ್ಟನ್ನ ಸಿದ್ನಿಂಗನ ಮ್ಯಾಲೆ ತೀರಿಸಿ ಕೊಂಡ. ಊರಾಗ ವೈಷಮ್ಯದ ಹೊಗಿ ಸಣ್ಣಗೆ ಆಡಾಕ ಹತ್ತಿತ್ತು. ಎರಡು ಪಾರ್ಟಿಯಾಗಿ ಯಾರು ಯಾವಾಗ ಯಾರ ಮ್ಯಾಲ ಬೀಳ್ತರನ್ನೋ ಭಯದಿಂದ ತತ್ತರಿಸಿ ಹೋಗಿದ್ರು ಊರ ಜನ.

ಹುಸೇನಿ, ಕೆಂಚೀರಯ್ಯ, ಹೊತ್ತಾರೆ ಎದ್ದು ಚೆಲುವಾಪುರದ ಮಟ ಹತ್ತು ಬಂಡಿಕಟ್ಟಿದ್ರು. ಛೇರ್ಮನ್ ಮರಿಸಿದ್ದಯ್ಯನವರದು ಒಂದು ಹತ್ತು ಗಾಡಿ ಬಂದವು. ಒಂದರ ಹಿಂದ ಒಂದು ಇಪ್ಪತ್ತ ಬಂಡಿ ಚೆಲುವಾಪುರದ ದಾರಿಯೊಳಗ ಹೊಂಟವು. ಚೊಕ್ಕನ ಎದಿ ಹೊಡದಂಗಾತು. ಗೊತ್ತಾನಾಯ್ಕ ಗೆಲ್ಲೋದು ಗ್ಯಾರಂಟಿ ಅನಿಸಿ ಹಂದೋಣಿಗ ಹೊಗೋದೊ ಬ್ಯಾಡ ಅನಿಸಿತು. ಅಲ್ಲಿ ಇಲ್ಲಿ ಕೈಗಡ ಕಟ್ಟಗಡ ಅಂತೇಳಿ ಎರಡೂವರಿ ಸಾವಿರ ರೂಪಾಯಿ ಸಾಲ ಮಾಡ್ಕೊಂಡಿದ್ದ. ಈಗ ಮತ್ತೊಂದು ನೂರಿನ್ನೂರು ರೂಪಾಯಿ ಸಾಲ ಎಲ್ಲಿಂದ ಜೋಡಿಸೋದಂತ ಯೋಚನೆ ಮಾಡ್ತಿದ್ದ. ಚರಗಿ ತಗೊಂಡ ಬಯಲ ಕಡೀಗ ಹೊಂಟಿದ್ದ ಕಿಷುಣ, "ಏನೋ ಹೋಗೊ ತಯಾರಿ ಮಾಡಿಲ್ಲಾ. ಇವತ್ತು ನಿನ್ನ ಹಣಿ ಬರಹ ಪರೀಕ್ಷಿಸೋ ದಿನ. ಸೋನ್ಯಾಗ, ಪಾಪುಗನಾಯ್ಕನಿಗ ಒಂದು ಹತ್ತು ಮಂದಿಗ ಹೇಳುಸಾಕು" ಅಂದವನೆ ತಡಿಯಾಕ ಆಗದೆ ಮೇಷ್ಟ್ರ ಕಣದ ಹಿಂದ ಹೋಗಿ ಕುಂತ್ಕೊಂಡ. ಚೊಕ್ಕ ರೊಕ್ಕ ಎಲ್ಲಿಂದ ತರೋದು ಅಂತ ತಲಿಕೆರ್‍ಕೊಂಡ.

"ಏನಾರ ಆಗಲಿ, ಮೇಷ್ಟ್ರ ಹತ್ರ ಹೋಗಿ ಬರ್ತಿನಿ, ಒಂದು ನೂರುರೂಪಾಯಿ ಕೊಟ್ರು ಕೊಡಬಹುದು, ಕೊಡ್ಲಿಲ್ಲಾಂದ್ರೆ ಐತಲ್ಲಾ, ತಾಂಡದಾಗ ಬಸವಿಬಿಟ್ಟ ಆಕಳು ಮಾರಿದ್ದು, ಅದರ ಹೋರಿಕರಗಳನ್ನ ಹರಾಜ ಮಾಡಿದ್ದು, ಗುಡಿಮುಂದಿನ ದೊಡ್ಡಮರ ಮಾರಿದ ದುಡ್ಡು ಅವರ ಕೈಯಾಗೆ ಕಟ್ಟಿಸಿದು ಎಲ್ಲಿ? ಅಂತ ಕೇಳಿದ್ರೆ ಹೇಳಂಗಿಲ್ಲಾ. ಅಲ್ಲಿಟ್ಟೀನಿ, ಇಲ್ಲಿಟ್ಟೀನಿ ಅಂತ ಹೇಳಾಕ ಬರ್ತಾರ, ಆವಾಗ ನಂಬಕಿ ಹೊಕೈತಿ, ಮರ್ಯಾದಿ ಹೊಕೈತಂತ ಕೊಟ್ಟೆಕೊಡ್ತಾರ ನಮ್ಮ ಜಕ್ಕಪ್ಪ ಮೇಷ್ಟ್ರು" ಅಂತಾ ಕ್ರಿಮಿನಲ್ ಯೋಚನೆ ಮಾಡ್ಕೊಂಡವನೆ ಮೇಷ್ಟ್ರು ಹಾಸಗಿ ಬಿಟ್ಟುಮ್ಯಾಲೇಳಾಕ ಮುಂಚೆ ಅವನ

ಮನಿ ಕದ ಕಾಯತೊಡಗಿದ. ಚೊಕ್ಕ ಕುಂತಿರೋದನ್ನ ನೋಡಿದ ಮೇಷ್ಟ್ರ ಹಿರಿಮಗ ಜಂಬೇಸಿ, "ಏನ ಚೊಕ್ಕ, ಇತ್ಲಾಗ ಬಂದಿ, ಮೇಷ್ಟ್ರು ಹತ್ರ ಏನಾರ ಕೆಲ್ಸ ಇತ್ತ" ಅಂತ ಕೇಳಿದ. "ಏನಿಲ್ಲಾ ಜೆಂಬು ಸ್ವಲ್ಪ ಕೆಲ್ಸ ಇತ್ತು" ಅಂತಾ ತಲಿಕೆರ್‍ಕೊಂತ ನಿಂತ. ಮೇಷ್ಟ್ರು ಎದ್ದವರೆ ಒಂದು ಹನಡಿ ಸಿಗರೇಟ ತಗೊಂಡು ಸೇದ್ಕೊಂತ ಹೊಗಿ ಒಳಗ ತಗೊಂಡು ಯಾವುದೋ ಲೋಕದಾಗ ತೇಲಾಡ್ತಿರೊ ಹಂಗೆ ಸಿಗರೇಟಿನ ಹೊಗಿಯ ಮಜ ತಗೊಳ್ತಾ ಇದ್ರು. ಜೆಂಬನ ಮಾತು ಕೇಳಿದ್ವೆ. "ಯಾರವರು ಬೆಳಕು ಹರದಿಲ್ಲಾ ಏನದು" ವಾಸ್ತವಕ್ಕೆ ಬಂದಿದ್ರು. ನಾನು ಮೇಷ್ಟ್ರೆ ಚೊಕ್ಕ ಆಟಕೆಲ್ಸ ಇತ್ತು ಅಂತಾ ರಾಗ ಎಳದ. ಅವನ ಮಾತಿನ ಧಾಟಿಯನ್ನ ಗಮನಿಸಿದ ಮೇಷ್ಟ್ರು ರೊಕ್ಕಕ್ಕೆ ಬಂದಾನೀತ ಅಂತ ಜಾಗೃತರಾಗಿ, "ಏನಪ್ಪ ಚೊಕ್ಕನಾಯ್ಕ ಮುಗ್ಸಿದ್ರ ಚುನಾವಣೆ. ಯಾಕ ಬೇಕಿತ್ರಯ್ಯ ದುಡ್ಡು ಖರ್ಚಮಾಡೋದು ಇಬ್ಬರಾಗ ಒಬ್ಬ ನಾಮಪತ್ರ ಹಿಂದಕ್ಕ ತಕೊಂಡಿದ್ರ ಒಬ್ಬ ಗೆದ್ದ ಬಿಡ್ತಿದ್ದ" ಒಂದು ಜೂರಿ ಎಳದವರೆ ದಟ್ಟವಾದ ಹೊಗಿಯನ್ನ ಹೊರಗ ಉಗುಳಿದ್ರು. "ಹಿಂಗಂದ್ರೆ ಹ್ಯಾಂಗ ಮೇಷ್ಟ್ರೆ. ಎಲೆಕ್ಷನ್ ಮಾಡಾಕಂತ್ಲೆ ಇದ್ದಿದ್ದು ಈಗ ಯಾರನ್ನ ವಾಪಾಸ ತಕ್ಕೊ ಅಂತ ಹೇಳೋದು. ನಾನಂತು ಎಲೆಕ್ಷನಿಗ ನಿಲ್ಲಬೇಕು ಅಂತಂದೆ ನಿಂತೋನು. ಗೊತ್ತಾನಾಯ್ಕಗ ಹೇಳಿದ್ರ ನೀನೆ ವಾಪಾಸ್ಸು ತಕ್ಕೊ ಅಂತಿದ್ದ. ಅದಕಂತ್ಲೆ ಇಬ್ಬರು ನಿಂತು ಬಿಟ್ವಿ ಅತ್ಲಾಗ. ಇವತ್ತು ಐತಲ್ಲಾ ಯಾರ ಹಣಿ ಬರಹದಾಗ ಏನ್ ಬರದೈತಂತ" ಹುರಪನ್ನ ತೋರಿಸಿದ. ಮೇಷ್ಟ್ರಿಗ ಸೂಕ್ಷ್ಮ ತಿಳದದ್ವೆ "ಸ್ವಲ್ಪ ಹೊರಗೆ ಹೋಗಿಬರ್‍ಲಾ" ಮೇಲೆದ್ರು. "ಅಲ್ಲ ಎಷ್ಟೊತ್ತು ಆದೀತು" ಅವನು ಮೇಲೆದ್ದ. "ಕೆಲ್ಸ ಏನಂತ ಹೇಳು ನಾನು ಹಂಗ ಮುಂದಿನ ಹೊಲಕ್ಕ ಹೋಗಿ ನೋಡ್ಕೊಂಡು ಬಯಲ ಕಡೀಗ ಕುತ್ಕೊಂಡು ಬರೋದ್ರಾಗ ಎಂಟು ಒಂಭತ್ತು ಗಂಟಿ ಆಗತೈತಿ" ಅಂದ್ರು. "ಅಷ್ಟೊತ್ತ ನನಗ ಹೊತ್ತಾಗಿ ಹೊಗತೈತಿ" ಚೊಕ್ಕ ತಲಿಕೆರ್‍ಕೊಂಡ. ಮೇಷ್ಟ್ರುಮಕ ನೋಡಿ, "ಒಂದು ಇನ್ನೂರ ರೂಪಾಯಿ ಬೇಕಿತ್ತು ವಾರದಾಗ ವಾಪಸ್ಸುಮಾಡ್ತಿದ್ದೆ" ಪೀಠಿಕೆ ಹಾಕಿದ. ಮೇಷ್ಟ್ರಿಗೆ ಗೊತ್ತಿತ್ತು. ಅದಕ್ಕೆ ಏನು ಹೇಳಬೇಕಂತ ಆಲೋಚನೆ ಮಾಡಿಕೊಂಡಿದ್ದರಿಂದ "ಛೇ, ಭೂಮಿತಾಯಿ ಆಣೆಗೂ ಒಂದು ರೂಪಾಯಿ ಇಲ್ಲೋ" ಪ್ರಮಾಣ ಮಾಡಿದ್ರು. "ಹಿಂಗ್ಯಾಕ ಆಣಿ ಪ್ರಮಾಣ ಮಾಡ್ತಿರಿ ಎತ್ಲಾಗ ಹೋದವು ಆಕಳು ಹೋರಿಕರಗಳ ದುಡ್ಡು" ಒಂದೆ ಸಲ ಕೇಳಿ, ಮೇಷ್ಟ್ರು ಮರ್ಯಾದಿಗೆ ಕೈಹಾಕಿದ. ಹನ್ಮಂತ ದೇವರಿಗಂತ ಯಾರೊ ಪುಣ್ಯಾತ್ಮ ಬಸವಿ ಕೊಡಿಸಿದ್ದು ಒಂದು ಹೋರಿ ಕರ ಹಾಕ್ತು. ಮತ್ತೊಂದು ವರ್ಷಕ ಮತ್ತೊಂದು ಹಾಕ್ತು. ಹಿಂಗ ಮೂರುನಾಕ ವರ್ಷದಾಗ ಒಂದು ಹಿಂಡೆ ಆತು. ಊರಾನ ಹೊಲಗಳು, ಬಣವಿಗಳು ಒಂದೂ ಉಳೀದಂಗ ಮೇಯ ತೊಡಗಿದ್ದ ಕರುಗಳಿಂದ

ಮಂದಿ ಬ್ಯಾಸತ್ತು ಹರಾಜಮಾಡ್ಸಿದ್ರು. "ಹರಾಜಿನ ದುಡ್ಡುಯಾರು ಇಟ್ಕೊಂತಿರ್ರಪ್ಪ ಯಾರ ಕೈಗ ಕೊಡಾನ. ದುಡ್ಡಂದ್ರೆ ದೊಡ್ಡ ಜವಾಬ್ದಾರಿ ಹೌದು. ಸರಿ ಜೋಪಾನದಿಂದ ಇಟ್ಕೊಬೇಕಾಗತೈತಿ. ನಾಯಕ, ಕಾರಭಾರಿ, ಡಾವೊ ಯಾರಿಟ್ಕೊಂತಿರಾ" ಅಂತ ಊರಮಂದಿ ಕೇಳಿದ್ಕ. ಹಟ್ಟಿ ಹಿರಿಯ ಸಿದ್ದನಾಯ್ಕ "ನಾನಿಟ್ಕೊಂತೀನಿ, ಯಾಕ, ನಾ ಇಟ್ಕೊಂಡ್ರೆನಾಗತೈತಿ" ಅಂತಾ ಎದ್ದನಿಂತು ದುಡ್ಡಿಗ ಕೈಹಾಕ್ದ. ಹಟ್ಟಿಹಿರಿನ ಚಾಳಿ ಗೊತ್ತಿದ್ದ ಊರಮಂದಿ ಒಳಗೊಳಗೆ ಅವನ ಛತ್ರಿಬುದ್ಧಿಬಗ್ಗೆ ವಿರೋಧ ಮಾಡ ತೊಡಗಿದ್ರು. "ಅಲ್ಲಪ್ಪ, ನಮಕುಲಸ್ತರದ್ದು, ದಂಡದ್ದು, ಮಾತುಗಟ್ಟಿ ಮಾಡಿದ್ದು, ಬೆಲ್ಲ ತಿಂದದ್ದು ಯಾವುದಾರು ಸಣ್ಣ ಪುಟ್ಟದ್ದು ದುಡ್ಡು ಕಟ್ಟಿಸಿದ್ದನ್ನ ಅವನು ಹಜಂ ಮಾಡ್ಯಾನ. ಇನ್ನ ದುಡ್ಡು ಕೊಟ್ರ ಬಾಳೆಹಣ್ಣು ಸುಲದು ಬಾಯೊಳಗ ಇಟ್ಟಂಗೆ ಆದೀತು" ಅಂತಾ ತಮ್ಮೊಳಗೆ ಮಾತಾಡಿಕೊಂಡರು.

ಕಾರಭಾರಿ, ಡಾವು ಯಾರೊಬ್ಬರು ಯೋಗ್ಯರ ಪಟ್ಟಿಯೊಳಗ ಬಂದು ನಿಲ್ಲಲೇ ಇಲ್ಲಾ. ದುಡ್ಡು ಏನ ಮಾಡೋದು ಅಂತಾಯೋಚನೆ ಬಂದಾಗಲೆ "ಅಲ್ಲಾ ಹಿಂಗಮಾಡಿದ್ರ ಹ್ಯಾಂಗ. ನಮ್ಮೂರಾಗಿರೊ ಮೇಷ್ಟ್ರು ಜಕ್ಕಪ್ಪನ ಕೈಗ ಕೊಟ್ರಪಾಡು. ಸರ್ಕಾರದ ಮನುಷ್ಯ, ತಿಂಗಳ ತಿಂಗಳ ಸಂಬಳ ಬರತೈತಿ" ಮೇಷ್ಟ್ರು ಚೇಲ ಗಣಪೂನಾಯ್ಕ ಹೇಳಿದ. ಪುಗಸಟ್ಟೆ ದುಡ್ಡು, ಮೇಷ್ಟ್ರ ಕೈಗ ಬಂದ್ರ ತನಗೂ ಚೂರಪಾರು ಸಿಗತೈತಿ, ನಾಯಕ, ಕಾರಭಾರಿ ಕೈಗ ಹೋದ್ರಂತು ಊರದುಡ್ಡು ಆರಾಮದಿಂದ ಕೊಟ್ಟರಾತು ಅಂತ ಜ್ವಾಳಾಕ ಗೊಬ್ಬರ, ರಾಗಿಗ ಯೂರಿಯ, ಕಳೇವ ತಗಿಯೊರಿಗ, ಎಡೆಹರಗೋರಿಗೆಲ್ಲಾ ಕೊಟ್ಟು ಖಾಲಿಮಾಡಿ ಸುಗ್ಗಿಗ ಹಳೇತೂತುಗಳ ಮುಚ್ಕೋ ಅಷ್ಟು ಬೆಳಿಬಂದಿರತಾವ ಅದನ್ನ ದಲ್ಲಾಳಿ ಅಂಗಡಿಗ ಬಿಟ್ರ ಬಡ್ಡಿ, ಚಕ್ರಬಡ್ಡಿ ಜಡದು, ಬಿಟ್ಟಜ್ವಾಳಕ್ಕೆ ಅವನು ಹೇರ್ಕೊಂಡ ಬಂದಾಗ ಖರ್ಚಿಗಂತಿಸ್ಕೊಂಡ ಐವತ್ತು, ಟ್ರಾಕ್ಟರಿ ಬಾಡಗಿ ಅಂತ ಒಂದು ಐವತ್ತು, ರೇಟ ಸರಿಯಾಗಿಲ್ಲಾಂತ ವಾಪಾಸ್ಸು ಗೊಡಾನಿನೊಳಗ ಹಾಕಿ ಬಂದ್ರಂತು, ಗೊಡಾನಿನ ಬಾಡಗಿ, ಅದರೊಳಗ ಮೂರುಸಾರಿ ಅವನು ಅಡ್ಡಾಡಿದ್ದು ಸೇರಿ ಕೂಡ್ಸಿ ಕಳಿಯೊದ್ರಾಗ ಜ್ವಾಳ ವ್ಯಾಪಾರ ಆಗಿದ್ದು ಬರಿ ಸಾವುಕಾರನ ಅಸಲಿಗೆ, ಬಡ್ಡಿಗೆ ಬಡ್ಡಿ ಹಾಗೆ ಉಳ್ಕೊಂತೈತಿ ಅಸಲುಮಾತ್ರ ಮುಟ್ಟಿರತೈತಿ. ಪಟ್ಟಿಯಾಗಿಲ್ಲ ಆಮ್ಯಾಲ ಬಾ ಅಂತ ದಲ್ಲಾಳಿ ಅಂಗಡಿ ಸಾವುಕಾರ ಒಂದೆರಡು ಸಲ ಓಡಾಡಸ್ತಾನ ಅಷ್ಟೊತ್ತಿಗಾಗಲೆ ಹಳೆ ಬಾಕಿಗೆ ಹೊಸಸಾಲ ಜಮಾ ಆಗಿರತೈತಿ, ಇನ್ನೇನು ಕೊಟ್ಟಾನು ಗೂಳಿ ಹರಾಜಿನ ರೊಕ್ಕ. ಅಂತ ಗಣಪೂನಾಯಕನ ಲೆಕ್ಕಚಾರ ಆಗಿತ್ತು. ಮಾಸ್ತರನ್ನ ಮಂದಿ ನಂಬತಾರ ಊರಾಗ ಹದಿನೈದು ಎಕರಿ ಹೊಲಐತಿ, ಸುತ್ತಮುತ್ತಲು ದೊಡ್ಡ ದೊಡ್ಡ ಮಂದಿಗೆಲ್ಲಾ ಹತ್ತಿಪ್ಪತ್ತು

ಸಾವಿರದ ಮಟಾನು ಸಾಲ ಕೊಟ್ಟಾನ, ಆ ವಿಷಯ ಪ್ರತಿಯೊಬ್ಬನಿಗೂ ತಿಳಿದದ್ದೆ. ಆದ್ದಕ್ಕೆ ಮೇಷ್ಟ್ರ ಹತ್ರ ರೊಕ್ಕ ಕಟ್ಟಿಸಾಕ ಮಂದಿ ಎಲ್ಲಾ ಒಕ್ಕೊರಲಿಂದ ತಯಾರಾದರು. ನಾಳೆ ತಮಗೂ ಸಾಲಕೊಟ್ಟಾರಂತ. ಅವಾಗ ಚೊಕ್ಕನಾಯ್ಕನೆ ಬಹಳ ಕಾಳಜಿಯಿಂದ, ಗಣಪೂನಾಯ್ಕನ ಮಾತಿಗೆ ಅನುಮೋದನೆ ಸೂಚಿಸಿದ್ದ. ಈಗ ಮಾಸ್ತರ ರೊಕ್ಕಕೊಡಂಗಿಲ್ಲಾಂದ್ರ ಬಿಟ್ಟಾನ. "ಏನುಮೇಷ್ಟ್ರೆ ನಾನು ಯಾರ ದುಡ್ಡ ಮುಳಗಿಸೀನಿ ತೋರಸ್ರಿ ಆಟು" ಸಿಟ್ಟುಮಾಡ್ಕೊಂಡು ಕೇಳಿದ. "ನಿಮ್ಮ ಹತ್ರ ಊರಿನ ರೊಕ್ಕ ಕಟ್ಟಿಸಿದ್ದೆ ಯಾವಾಗಾರ ನನಗೂ ಸಾಲ ಕೊಟ್ಟಿರಂತ. ಆದ್ರ ನೀವು ನನಗೆ ಇಲ್ಲಾಂದು ಬಿಟ್ರಿ, "ಹಂಗಲ್ಲೋ ಚೊಕ್ಕ, ದುಡ್ಡಿದ್ರೆ ಯಾವಾಗ್ಯಾರು ನಾ ಹಿಂಗಂತೀನ, ನನ್ನ ಮಗನಿಗ ಓದಾಕ ಕಳಿಸಾಕೆ ನಾನು ಯಾರದಾರ ಹತ್ರ ಕೇಳಬೇಕಂತ ಅಂದ್ಕೊಂಡೀನಿ" ರಾಗ ಎಳದ. "ಯಾಕ ಮುಲಕಾಡ್ತೀರಿ ಮಾಸ್ತರ, ನೂರು ಇಲ್ಲಿಕ್ರ ಒಂದು ಐವತ್ತಾರು ಕೊಡ್ರಿ ಇವತ್ತು ನಾ ಏನ ಮೆಂಬರು ಆಕ್ಕೀನೊ ಇಲ್ಲೋ ಗೊತ್ತಾಗ ತೈತಿ, ಮೆಂಬರಾದ್ನಿ ಅಂದ್ರ ಇಂತ ನೂರು ಎಟುಕೇಳಿರಿ ಕೊಡ್ರಿ ಇತ್ಲಾಗ ಜಿಗಣೆಹಂಗ ಅಂಟ್ಕೊಂಡ. ಮೇಷ್ಟ್ರಿಗ ಪಜೀತಿಗ ಇಟ್ಕೊಂತು, ಈ ಮನುಷ್ಯ ಇಷ್ಟಕ್ಕೆ ಕೈ ಬಿಡಂಗಿಲ್ಲ ಅಂದವನೆ ಮನಿಯೊಳಗ ಹೋಗಿ ಐವತ್ತರದೊಂದು ನೋಟು ತಗೊಂಡು ಬಂದ ಕೊಟ್ಟ. "ಇಗೋಳಪ್ಪ ಏನಾರ ಆಗವಲ್ಯಾಕ ಭಾರಿ ಭಂಡ ನೀನು ಇಲ್ಲಂದ್ರ ನೀ ಮಾತು ಕೇಳೊನಲ್ಲ. ನನ್ನ ಸಂಗತಿನೆ ಬಿಡೋನಲ್ಲ ಹೌದು ಯಾವಾಗ ವಾಪಸ್ಸುಕೊಡ್ತಿ" ಅವನ ಕೈಗ ಕೊಟ್ಟು ಸಾಗಹಾಕಾಕ ನೋಡ್ದ. "ಕೊಡ್ತಿನಿ ಕೊಡ್ರಿ ನಿವೇನು ತಿಂದ ಸತ್ತ ಹೊಕ್ಕಿನೇನ ಅಂತ ತಿಳ್ಕೊಂಡಿರೊ ಹಂಗ್ಯೆತಿ, ಇನ್ನೊಂದು ಹದಿನೈದ್ದಿನ, ತಿಂಗಳ ಬಿಟ್ಟಕೊಡ್ತಿನಿ. ನಿಮಗೇನು ಮುವತ್ತು ದಿನ ಎಣಸಿದ್ರಸಾಕು ಮೂರುನಾಕು ನೂರು ರೂಪಾಯಿ ಪಗಾರ ಬರತೈತಿ. ಏನಮಾಡ್ತಿರಿ ಆ ದುಡ್ಡೆಲ್ಲಾ ಮನೆಯಾಗ ಹಗೇವ ಗಿಗೇವ ಏನಾರ ತಗಿಸೀರೇನ ಮತ್ತ" ಅವನ ಜಿಪುಣತನಕ್ಕೆ ಹೀಯಾಳಿಸೊ ರೀತಿಯಲ್ಲಿ ಅಂದವನೆ ಅಲ್ಲಿಂದ ಜಾಗ ಖಾಲಿಮಾಡಿದ.

ಸೌಳ ಮಣ್ಣಹಾಕಿ ಒಗದಿದ್ದ ಅಂಗಿ ಪಂಚಿ ಉಟ್ಕೊಂಡು ಸೋನ್ಯಾ, ಗಬಡು, ಚೆನ್ನಿಂಗ, ಬದಿಯಾ, ಸಕ್ರು, ಕಿಷುಣು, ಪೀರವ್ವನ ಚಾದಂಗಡಿ ಮುಂದ ಕಾಯಾಕ ಹತ್ತಿದ್ದರು. "ಏನೋ ಹುಡುಗ, ನೀ ಇಲ್ಲೆ ಅದಿ, ಗೊತ್ತಾನ ಬಂಡಿಹೋಗಿ ಎಟೊತ್ತಾತು ಏನ ಕತಿ? ಎಣಿಸೋ ಮುಂದ ನಮ್ಮ ಕಡಿಯೊರು ಒಬ್ಬ ಇರಬೇಕು. ಹೌದು ದುಡ್ಡಗಿಡ್ಡು ರಡಿಮಾಡ್ಕೊಂಡಿಯೊ ಹ್ಯಾಂಗ" ಅನುಮಾನದಿಂದಲೇ ಕೇಳಿದ. "ಏನ್ಮಾಡ್ತಿಯಣ್ಣ ದುಡ್ಡಿಂದೆ ದೊಡ್ಡ ತೊಂದ್ರಿ ಆತು, ಮೇಷ್ಟ್ರು ಹತ್ರ ಹೋಗಿ ಕಾಲಿಗ ಬಿದ್ದು ಒಂದು ಐವತ್ತುರೂಪಾಯಿ ತಂದೀನಿ, ನನ್ನ ಹೇಣ್ತಿ ಕೂಲಿಗ ಹೋಗಿದ್ದ ಒಂದು ಇಪ್ಪತ್ತು ತಂದಾಳ,

6

ಅದ್ರಾಗೆ ಆದಂಗ ಮಾಡ್ಕೊಂಡು ಬರಾನ ಬಿಡು" ತನ್ನ ಅಸಹಾಯಕತೆ ತೋಡಿಕೊಂಡ. "ಹ್ಯಾಂಗೊ ಲಾರಿಗಿರಿಗ ಹತ್ತಿ ಹೋಗಿ ಏನೊ ಒಂದು ಮಾಡ್ಕಾಂಡ ಬರಾನ ಬಿಡಯ್ಯ" ಅಂದ ಸಕ್ರು. ಊರು ಬಿಟ್ಟು ನಾಕ ಮೈಲಿದೂರದ ಚೆಲುವಾಪುರಕ್ಕೆ ಮುಟ್ಟೊದ್ಕೊ ಕಲ್ಲ ತುಂಬಾಕ ಹೊಂಟಿದ್ದ ಖಾಲಿಲಾರಿ ಬರೋದ್ಕು ಬರಾಬರಿಯಾತು. "ಓಡ್ರೋ ಜಲ್ದಿಹೋಗಿ ಹತ್ರಿ, ಜಲ್ದಿಹೋಗಿ ಬಿಡ್ತೀವಿ ಓಡ್ರಿ, ಓಡ್ರಿ" ಹಂದೋಣಿ ಶಂಕರಭಟ್ರ ಖಾಲಿದೋಸಿ ಹೊಟೇಲ ದೋಸಿ ತಿನ್ನೊ ಆಶಿಯಿಂದ ಸೋನ್ಯಾ ಎಲ್ಲರನ್ನೂ ಓಡಿಸಿದ. ಕೈಯಾಗ ಧೋತ್ರ ಹಿಡ್ಕೊಂಡವರೆ ಓಡತೊಡಗಿದ್ರು. ಆಳೆತ್ತರದ ಲಾರಿ ಬಾಡಿಹಿಡಿಯಾಕ ಆಗದೆ "ಎತ್ರೋ ಕೈ ಸಿಗಂಗಿಲ್ಲಾ" ಅಂತ ಅಂಗಲಾಚಿದ ಕುಳ್ಳ ಗಬಡು. ಅವನ ಸೊಂಟ ಹಿಡದು ಎತ್ತಿದ ಬದಿಯಾ, ಮೇಲಿಂದ ಕಿಷಣಾ ಕೈ ಕೊಟ್ಟು ಮ್ಯಾಲ ಎಳ್ಕೊಂಡ. ಲಾರಿ ತುಂಬ ಎಲ್ಲರೂ ಎಲೆಕ್ಷನ್ ಸುದ್ಧಿನೆ ಮಾತಾಡ್ತ ಹೊಂಟ್ರು. "ನೋಡಪ್ಪ ಚೊಕ್ಕನಾಯ್ಕ, ನೀ ಮೆಂಬರ ಆದ್ರ ಮದ್ಲು ನನ್ನ ಗುಡ್ಲು ಕಿತ್ತು ಮಂಗಳೂರು ಹಂಚಿನ ಮನಿ ಕಟ್ಟಿಸಬೇಕು" ಅಂತ ಸೋನ್ಯಾನಾಯ್ಕ ತನ್ನ ಡಿಮ್ಯಾಂಡು ಮುಂದಿಟ್ಟ. "ಬಂದ್ರೆ ಅಂತಿಯಲ್ಲೋ ಚೊಕ್ಕನೇ ಆರ್ಸಿಬರೋದು. ಆ ನನಮಗ ಗೊತ್ತನಿಗೆ ಯಾರು ಓಟು ಹಾಕ್ತಾರ" ಚೆನ್ನಿಂಗ ಭರವಸೆಯಿಂದ ಹೇಳಿದ. "ಆದ್ರ ಆ ಚೇರ್ಮನ್ನಿಂದಾಗಿ ಮಂದಿ ಅವನ ಕಡೀಗ ತಿರುಗ್ಯಾರ ಅನಿಸತೈತ್ರೋ" ಅನುಮಾನ ವ್ಯಕ್ತಪಡಿಸಿದ ಕಿಷುಣಾ. "ಹಂಗೇನು ಆಗಂಗಿಲ್ಲೋ ಮೇಗಳ ಓಣಿಯೊಳಗ ನಾವು ಹೇಳಿವಿ ಎಲ್ಲಾ ನಮಗೆ ಹಾಕಿರ್ತಾರ, ಕೆಳಗಿನ ಓಣಿ ನಮ್ದು, ಗೊತ್ತನಾಯ್ಕಗ ಒಂದು ಓಟು ಬಿದ್ದಿರಂಗಿಲ್ಲಾ, ಅವನ ಓಣಿ ಮಂದಿ ಒಬ್ರು ಅವನಿಗ ಹಾಕಿಲ್ಲಾ, ಇನ್ನೇನಾಗಬೇಕಪ್ಪ, ನೀನೆ ಕಣಯ್ಯ ಗೆಲ್ಲೋದು ಸಂಜಿ ಮಂದ ಸರಿಯಾಗಿ ಸಾರಾಯಿ ಕುಡಸಬೇಕ ನೋಡು" ಸಕ್ರು ಭವಿಷ್ಯನುಡದ.

ಎಣಿಕೆ ಜೋರ ನಡದಿತ್ತು. ಮೊದಲನೆಯ ಸುತ್ತು ಎಣಿಕೆಯಾದಾಗ ಚೊಕ್ಕ ಐದು ಓಟಿಂದ ಮುಂದಿದ್ದ. ಎರಡನೆಯ ಸುತ್ತಿಗೆ ಗೊತ್ತ, ಚೊಕ್ಕನ ಸರಿಗ ಬಂದ. ಮೂರು ನಾಕನೇ ಸುತ್ತಿಗೆ ಗೊತ್ತನಾಯ್ಕ ಐವತ್ತು ಓಟಿಂದ ಮುಂದಿದ್ದ. ಕೊನೆ ಸುತ್ತಿರುವಾಗಲೆ ಚೊಕ್ಕ ಹೊರಗ ಬಂದು "ನಡಿರಪ್ಪ, ಎಲ್ರೂ ಭಾರಿ ದೊಡ್ಡಮನುಷ್ಯರದೀರಿ, ನಿಮ್ಮನ್ನ ನಂಬಕೊಂಡು ನಾನು ಹಾಳಾದೆ. ಅವತ್ತೇ ನಾ ಬಡ್ಕೊಂಡೆ, ಬ್ಯಾಡ್ರಪ್ಪ ನನಗ್ಯಾಕ ಎಲೆಕ್ಷನ್ನು ಬ್ಯಾಡವೇ ಬ್ಯಾಡ ಅಂತ. ನನ್ನ ಮಾತ ಕೇಳಲಿಲ್ಲ, ಏನು ಹಂಗ, ಮಂದಿ ಎಲ್ಲಾ ನಿಮ್ಮ ಮಾತಿನ ಹಂಗ ಅದಾರೇನೊ ಅನ್ನೋ ಹಂಗ ಮಾತಾಡಿದ್ರಿ. ನನಗೊತ್ತಿತ್ತು ನಮ್ಮೂರ ಮಂದಿ, ಗಂಡಂದು ತಿಂದು ಮತ್ತೊಬ್ಬನ ಹೆಸರ ಹೇಳೊರಂತ, ಊರೊಳಗ


ಹ್ಯಾಂಗ ನನ್ನ ಮಾರಿತೋರಿಸಲಿ" ತಳಮಳಿಸತೊಡಗಿದ ಚೊಕ್ಕ. ಮೈತುಂಬ ಸಾಲ ಮಾಡ್ಕೊಂಡಿದ್ದ, ಭರವಸೆ ಇಟ್ಕೊಂಡು ನೂರೆಂಟ ಕನಸಗಳನ್ನ ಕಂಡಿದ್ದ. ಅದಕ್ಕಾಗಿ ಸಹಿಸಲಾರದಷ್ಟು ನೋವಾಗಿತ್ತು. ತಾನು ಗೆದ್ದೆ ಬಿಟ್ಟೆ ಎಂಬ ಭ್ರಮೆಯೊಳಗೆ ತೇಲಾಡುತ್ತಿದ್ದ. "ಛೆ; ಎಲ್ಲಾ ಉಲ್ಟಾ ಆಗಿ ಹೊತು, ಜನ ಮೋಸ ಮಾಡಿದ್ರು, ಐದುನೂರು ಓಟನೊಳಗೆ ನೂರೈವತ್ತುಕ್ಕೂ ಹೆಚ್ಚು ತಗೊಂಡು ಗೆದ್ದ ಗೊತ್ತನಾಯ್ಕ. ನಾವು ಹೋಗಿ ಹೇಳಿದಾಗ ಏನಂದ್ರು ಮಂದಿ, ನಾವೆಲ್ಲಾ ಊರವರು, ಅಂವ ಎಲ್ಲಿಂದಲೋ ಬಂದೋನು ಅಂತ ಅಂದೊರು, ಹಿಂಗ ಹೆಂಗಾತಂತ" ಸೋನ್ಯಾ ನಾಯ್ಕ ಚುನಾವಣೆ ನಂತರದ ವಿಶ್ಲೇಷಣೆ ಮಾಡತೊಡಗಿದ. ಗೊತ್ತಾನಾಯ್ಕ ಬಹುಮತದಿಂದ ಗೆದ್ದಿದ್ದ. ಮರಿಸಿದ್ದಯ್ಯನ ಬಲಗೈ ಬಂಟ ಅಂತೇಳಿ ಮಂದಿಮಾತಾಡ್ತಿದ್ರು. ಮರಿಸಿದ್ದಯ್ಯ ಮತ್ತೆ ಛೇರ್ಮನ ಆಗುವ ಅವಕಾಶವಿತ್ತು. ಅದಕ್ಕೆ ಗೊತ್ತಾನಾಯ್ಕ ಗೆದ್ದಿದ್ದು ಪಾಡಾತು. ಕಾರಬಾರಿ ಕುಲುಮು, ಹುಸೇನಿ, ಕೆಂಚೀರಯ್ಯ, ಕಾಯಕದ ಕಬುರಯ್ಯ ಮತ್ತು ದೊಡ್ಡಗುಂಪು ಖುಷಿಯೊಳಗ ಹಂದೋಣಿ ಬ್ಯಾಡರ ಗಲ್ಲಿಯೊಳಗಿದ್ದ ಹೆಂಡದಂಗಡಿಗೆ ಹೋದ್ರು. ಇಪ್ಪತ್ತೈದು ಮಂದಿಗೂ ಎರಡೆರಡ ಬಾಟ್ಲಿ ಹೆಂಡ ಕುಡಿಸಿದ. ಚೆನ್ನಪ್ಪನ ಮಟನ್ ಹೋಟೆಲಿಗ ಕರ್‍ಕೊಂಡ ಹೋಗಿ ಕುರಿಮಾಸದ ಸಾರು ಮುದ್ದಿ ಕೊಡಿಸಿ, ಚೆಲುವಾಪುರಕ್ಕೆ ಲಾರಿ ಹತ್ತಿಸಿದ. "ಈಗೇನಪ್ಪ ಗೊತ್ತಣ್ಣ ನಿನ್ನ ಹಿಡಿಯೋರೆ ಯಾರು ಇಲ್ಲಾ. ಇಡಿ ಊರಾಗ ಮಂದಿ ನೀ ಗೆಲ್ಲೊದಿಲ್ಲಾ ಅಂತೇಳಿ ಮಾತಾಡ್ಕೊಳ್ತಿದ್ರು ಆದ್ರೂ ನೀ ನೂರೈವತ್ತು ಓಟಗಳಿಂದ ಗೆದ್ದಿಯಾ" ಕುಲುಮು ಕುಡದ ಅಮಲಿನೊಳಗ ಕನಲಿದ. ಗೊತ್ತಾನಾಯ್ಕ ಮಾತ್ರ ತನ್ನ ಸಾಧನೆ ಬಗ್ಗೆ ಹಿಗ್ಗಲಿಲ್ಲ. ಅವರೆಲ್ಲರನ್ನು ಸುಧಾರಿಸಿಕೊಂಡು ಚೆಲುವಾಪುರಕ್ಕ ಬರೊಹೊತ್ತಿಗೆ ಸಾಕುಸಾಕಾ ಗಿಹೋಗಿತ್ತು.

ಕಾಕಪುರದಾಗ ಮಂದಿ ಹಂದೋಣೆಯಿಂದ ಬರೋದನ್ನೆ ಕಾಯಕ ಹತ್ತಿದ್ರು. ಅಂಗಡಿ ಹುಸೇನವ್ವ. ಚೆಂಪಿ, ಕಾಣು, ಹನುಮ, ಯಂಕಂಚಿ, ಯರಬು, ದಾರಿಯೊಳಗಿನ ದೊಡ್ಡ ಹುಣಸಿಮರದ ಕೆಳಗ ಕುತ್ಕೊಂಡು ಹೆಂಡದ ಅಮಲು ಇರೋಮಟಾನು ಮಾತಾಡ್ತಾನೆ ಇದ್ರು. ಮೊದಲನೆ ತಂಡ ಸೋನ್ಯನಾಯ್ಕಂದು ಬಂದಾಗ ಎಲ್ಲರು ಮಕದಮ್ಯಾಲ ಟವೇಲ ಮುಚ್ಕೊಂಡು ಊರ ಬಂದಟಿಗ ಗಪ್ಪಾಗಿ ತಮಗೇನು ಸಂಬಂಧಿಲ್ಲೊರಗತಿ ಹೊಂಟಿದ್ರು. ಯಂಕಂಚಿಗೆ ಕುತೂಹಲ ತಡಿಯಾಕಾಗದೆ. "ಯಾರ್‍ರಯ್ಯ ಅವರು, ಹಂದೋಣೆಗೆ ಹೋದೋರೇನು" ಕೇಳಿದ. ಹೊಂಟೋರ್‍ಯಾರು ಮಾತಾಡೊ ಗೋಜಿಗ ಹೋಗಲಿಲ್ಲಾ. ಅವನಿಗ ತಡಿಯಾಕ ಆಗಲೇ ಇಲ್ಲಾ. "ಏನಸೊಕ್ಕನ್ಯಾಗ ಅದಾರ, ಛೇ ಎಯ್ ಮಾತಾಡ್ರೊ

ಬಾಯಿಯೊಳಗ ಕಡಬು ಇಟ್ಕೊಂಡಿರೇನು" ಯಂಕಂಚಿ ಕೂಗಿದ. ಸುಮ್ನೆ ಹೊಂಟಿದ್ದ ಚೊಕ್ಕನ ತಲಿತಿರಗದಂಗಾತು, ಮದ್ಲೆ ಸೋತಿರೋದ ಒಂದು, ಅರೇ ಹುಚ್ಚ ಯಂಕಂಚಿ ಮಾತಾಡಿದ್ದನ್ನ ಕೇಳಿದವನೆ ಕೆಂಡಮಂಡಲಾದ.

"ಏನೋ ಮಗನೆ ಯಾರಿಗೇಳ್ತಿಯಾ, ಯಾರಂತ ಗೊತ್ತಿಲ್ವಾ ನಿನಗೆ ತೋರಸ್ತಿನಿ ಸುಮ್ಮಕ್ಕಿರು" ಅಂದವನೆ ಕೊಳಪಟ್ಟಿ ಹಿಡ್ಕೊಂಡು ಒದಿಯ ತೊಡಗಿದ. ಇಲ್ಲಣ್ಣ ಅಂದ್ರು, ಇಲ್ಲಪ್ಪ ಅಂದ್ರು ಬಿಡದಂಗೆ ಹಾಕ್ಕೊಂಡು ಮೈದಾಹಿಟ್ಟ ನಾದಂಗೆ ನಾದ ತೊಡಗಿದ. "ಎಪ್ಪಾ ಸತ್ನೊ ಯಾರಾರು ಬಿಡಸ್ಕೊಳ್ರಿ, ಸಾಯಿಸ್ತಾರ ನನ್ನ ಬರ್ರೋ" ಲಬಲಬ ಹೋಯ್ಕಂಡ. ಅಂಗಡಿ ಹುಸೇನವ್ವ ಎದ್ದಾಕಿನೆ, "ಇಸ್ಕಿ ಮಾಕಿ ಏಯ್, ಕಸೇನ್ರೇ ಚೊಕ್ಕ ಅವನ್ಯಾಕೆ ಹೊಡಿತೀಯಾ, ಏನ್‌ತೆಪ್ಪಮಾಡ್ದ ಅವನು, ಬಿಡೋ ಬೇವರ್ಸಿ ನನ ಮಗನೆ ನೆಟ್ಟಗೆ ತಿಂಡಿತಿಂದ ದುಡ್ಡ ಕೊಡೋದಿಲ್ಲಾ ಪಾಪ ಹುಚ್ಚ ಅವನು ಅವನ್ಮೇ ಮೇಲೆ ಕೈ ಮಾಡಾಕೆ ನಾಚಕಿ ಬರಾಂಗಿಲ್ಲಾ ನಿಂದುಕೆ" ಜಾಡಿಸಿದಳು. ಚೊಕ್ಕಗ ಹೆಂಗಸರ ಮುಂದ ಅವಮಾನ ಆದಂಗಾತು. "ನೀ ಸುಮ್ಕಿರು ಹುಸೇನವ್ವ, ಮಕ್ಕಳು, ನಂದ ತಿಂದ ಕುಡದು ಗೊತ್ತಾನಾಯ್ಕನಿಗ ಓಟಹಾಕಿ ಗೆಲ್ಸಿದಾರೆ" ಹೊಳ್ಳಿ ನೋಡದಂಗೆ ಅನ್ಕೊಂತ ಮಾಯಿಬಾಯಿ ತಿಪ್ಪಿದಾಟಿದ. ಅಲ್ಲಿ ನೆರದ ಮಂದಿಯೆಲ್ಲಾ ಗೊತ್ತ ಗೆದ್ದಾನಂತ ಕೇಳಿ ಖುಷಿಪಟ್ರು. "ಐ ಯವ್ವ, ಗೊತ್ತಣ್ಣ ಬಂದಿದ್ದೆ ಪಾಡಾತು ನೋಡ್ರಿ, ಈವನೇನಾರ ಬಂದಿದ್ರೆ ಇಡಿ ಊರನ್ನೆ ಆಟ ಆಡಿಸಿ ಬಿಡ್ತಿದ್ದ."

ಗೊತ್ತಾನಾಯ್ಕನ ಗಾಡಿಗಳು ಊರಮಟ್ಟಿದಾಗ ಆಗಲೆ ಏಳಗಂಟಿ ಸಂಜಿಯಾಗಿತ್ತು. ಹನ್ಮಂತದೇವರಿಗೆ, ತಾಂಡೆದುರ್ಗವ್ವ, ಸೇವಾಬಾಯಗ, ಕಾಯಿಕರ್ಪೂರ ಎರಿಸಿದ. ಅವನ ಬೆಂಬಲಿಗರೆಲ್ಲಾ ಸೆರ್ಕೊಂಡು ಮೇಷ್ಟ್ರ ಮನಿ ಮುಂದಿಂದ ಮೇಗಳೋಣಿ, ಕೆಳಗಿನೋಣಿ ಸುತ್ತ ಮೆರವಣಿಗೆ ಹೋಗೊ ಆಲೋಚನೆ ಮಾಡಿದ್ರು. ಛೇರ್ಮನ್ ಮರಿಸಿದ್ದಯ್ಯ ಮುಂಜಾಗ್ರತೆಯೊಳಗೆ ಹೇಳಿದ್ದ, "ನೋಡು ಗೊತ್ತನಾಯ್ಕ, ನಿನ್ನ ವಿರುದ್ಧ ಸೋತೋರು ಬೇಕಂತ್ಲೆ ಜಗಳ ತಗಿತಾರ, ನೀ ಸುಮ್ಮನಿದ್ದಬಿಡು ಇವತ್ತೊಂದು ರಾತ್ರಿ, ಆಮ್ಯಾಲ ನಾ ಎಲ್ಲ ನೊಡ್ಕೊಂತೀನಿ" ಅಂತ. ಗೊತ್ತಾನಾಯ್ಕ ಬಹಳ ತಾಳ್ಮೆಯಿಂದಲೆ ಇಡೀ ಮೆರವಣಿಗಿ ತುಂಬ ನೂರಾಎಂಟ ಟೀಕೆಗಳು ಬಂದ್ರು ಚಕಾರ ಎತ್ತದಂಗ ಮುಗಿಸಿದ. ಸೋನ್ಯಾ, ಕಿಷುಣು, ಚೊಕ್ಕ, ಯಾರೂ ಕಾಣಲಿಲ್ಲ. ಅವನ ಚೇಲಾಗಳೆ ಒಂದೀಟು ಟಸ್ ಪುಸ್ ಅಂದ್ರೇ ವಿನಃ ಮತ್ಯಾರು ಮಾತಾಡಲಿಲ್ಲಾ.



ಗೊತ್ತಾನಾಯ್ಕನ ಮನೆ ಗೋಡೆ ಬಿರುಕು

೧೯೭೩ ರ ಕರಾಳ ದಿನಗಳು ಗೊತ್ತಾನಾಯ್ಕನ ಕುಟುಂಬದ ಮೇಲೆ ಪರಿಣಾಮ ಬೀರದೆ ಇರಲಿಲ್ಲಾ. ಭಯಂಕರ ಬರಗಾಲ, ದನಕರಗಳ ಮಾತಿರಲಿ, ಮನುಷ್ಯರು ಬದಕೋದೇ ದುಸ್ತರ ಆಗಿ ಹೋತು. ಕಾಪೂರು, ಕಿಂದಳ್ಳಿ, ಕೋಗಿಲೆ ಕಾಸ್ನೂರು. ಚೆಲುವಾಪುರ ಸುತ್ತಿ ಕೂಲಿಗ ಹೊಂಟಿತ್ತು ಮಂದಿ. ನುಗ್ಲಾ, ಅವನ ಹೇಣ್ತಿ ಸಂಕ್ಲಿ. ಹನುಮ, ಪುತಳಿ, ಪಿಣು, ಪಾಂಗೋಶಿ, ಜಂಬಿ ಸಣ್ಣವರಾದ ಕುಮಾರಿ, ಚೆನ್ನಿಗಂನ್ನ ಮನಿಯಾಗ ಬಿಟ್ಟು ಅಚ್ಚೇರು, ಪಾವು ರಾಗಿಗ ಮಂದಿ ಊರಿಂದೂರಿಗೆ ಹೊಲದಿಂದ ಹೊಲಕ್ಕೆ, "ಅಪ್ಪಾರ ಕೆಲಸ ಐತೇನ್ರಿ, ಅವ್ವಾರ ಕೆಲ್ಸ ಐತೇನ್ರಿ, ಅಣ್ಣೋರ ಕೆಲ್ಸ ಐತೇನ್ರಿ," ಅಂತಂದು ಕೇಳಿ ಕೇಳಿ ಕೆಲ್ಸ ಮಾಡೊ ಸ್ಥಿತಿ ಬಂದಿತ್ತು. ಊರಾಗ ಕಾಲರ ಹರಡಿತ್ತು. ಐದಾರ ಸಣ್ಣಕೂಸಗಳು ಸತ್ತು ಹೋಗಿದ್ವು. ಗೊತ್ತನಾಯ್ಕನ ತಮ್ಮನ ಮಕ್ಕಳು ಮೂರ್ನಾಕು ಒಂದರ-ಹಿಂದ ಒಂದು ಕಣ್ಣ ಮುಚ್ಚಿದ್ವು. ಅಡಿವಿಯೊಳಗಿನ ಸಪ್ಪು ಸೆದಿ ತಂದು ಎತ್ತಗಳಿಗ ಮನುಷ್ಯರಿಗೆ ಬೇಯಿಸಿ ತಿನಸೊ ಕಾಲ ಬಂದಿತ್ತು. ಗೊತ್ತಾನಾಯ್ಕನ ಗಂಡು ಹುಡ್ರೊಳಗೆ ಎಳನೇಯವನಾದ ಕುಮಾರಿ ದನ ಕಾಯ್ತಿದ್ದ. ದನಕಾಯೊ ಹುಡುಗರ

ಜೊತಿಗ ಚೆಪ್ಪಲ ಚೆಂಡ ಹಣ್ಣಾನ್ನ ತಾವರಿಕಿ ತೊಪ್ಪಲಿಂದ ಜಾಡಿಸಿ ಅದ್ರ ಮೇಲಿನ ಸಣ್ಣ ಮುಳ್ಳಗಳನ್ನ ಕೊಡವಿ ತಿನ್ನೋದು, ಹಳ್ಳದಾಗ ಹಬ್ಬಿದ ಉಗಣಿ ಬಳ್ಳಿಯ ಕುಡಿಗಳು ಸಿಹಿಯಾಗಿದ್ದು ಹುಡ್ರೆಲ್ಲಾ ದನ ಬಿಟ್ಟು ಕುಡಿಗಳನ್ನ ಚಿವುಟಿ ದನಗಳ ಜೊತಿಗ ಅವರು ಬಳ್ಳಿ ಜಗಿಯೋದ ಮಾಡ್ತಿದ್ರು. ಅದಕ್ಕೂ ಹೊಟ್ಟಿ ತುಂಬದಿದ್ರ ಬನ್ನಿಪತ್ರಿಗಿಡದ ಕಾಯಿಗಳು ಸಿಹಿಯಾಗಿದ್ದಕ ಆಡುಗಳನ್ನು ಓಡಿಸಿ ಇವರೆ ಕಾಯಿಗಳನ್ನು ಆರಿಸ್ಕೊಂಡು ಕವಾ ಕವಾ ತಿಂದು ಹೊಟ್ಟಿ ತುಂಬಿಸಿಕೊಳ್ಳೂರು. ನೆಲದ ಮೇಲಿನ ಹುಲ್ಲೊಂದು ಬಿಟ್ಟು, ಕೋಲಾಣಿ ಸಪ್ಪನ್ನ ಬುಡಸಮೇತ ಕಿತ್ಕೊಂಡು ಬಂದು ಮೆಣಸಿನಕಾಯಿ ಇಲ್ಲದೆ ಬೇಯಿಸಿ ಉಂಡಿ ಕಟ್ಟಿ ಕಟ್ಟಿ ಅದನ್ನೆ ಗಬಗಬ ಅಂತ ತಿಂದು ಸಾಕಷ್ಟು ನೀರು ಕುಡದು ಮಲಗ್ತಿದ್ರು. ಹುಳ್ಳಿ ಕಾಳು ಹುಳಕಾಗಿ ಚಿಟ್ಟಿಹುಳ ಹಾರಾಡ್ತಿರೋದನ್ನ ತಂದು ಬೇಯಿಸಿ ಹುಳ್ಳಿಕಾಳ ಗುಗ್ರಿಗ ಹಾಕಾಕ ಉಪ್ಪಿಲ್ದಕ್ಕ ಕೆರಿ ಅಂಗಳದ ಹತ್ರ ಜೋಕಟ್ಟಿಯಿಂದ ತಂದ ಸವಳ ಮಣ್ಣಾನ್ನ ಹಾಕಿ ಬೇಯಿಸಿ ತಿನ್ನೊಹಂಗಾಗಿತ್ತು. ಇನ್ನೂ ಕೆಲಮನಿಗಳೊಳಗ ಒಲಿಯಾನ ಬೂದಿನ ರಾಗಿ ಅಂಬ್ಲಿಗ ಸೇರ್ಸಿ ಗಟಗಟಾಂತ ಕುಡದು ಬಿಡೋರು. ಗೊತ್ತಾನಾಯ್ಕನ ಎಲ್ಡನೆ ಮಗ ಬೆಂಗಳೂರಾಗ ಅದೇನೋ ಓದ್ತಿದ್ದ. ಅವನಿಗ ದುಡ್ಡ ಕೊಡಾಕ ಆಗದೆ ಬಹಳ ಕಷ್ಟಪಡತೊಡಗಿದ್ದ. ಹಿಂದಕ್ಕ ಬಾಣವ್ವ ಬುತ್ತಿಗಂಟೆನೊಳಗ ಐದುರೂಪಾಯಿ ನೋಟನ್ನ ತುರಕಿ ಕಳಸ್ತಿದ್ಲು. ಈಗ ಪರಿಸ್ಥಿತಿ ಹಿಂಗಾಗಿರೊದ್ಕೆ ಬುತ್ತಿ ಕಳಸೋದೆ ಜಡ ಆಗಿಹೋಗಿತ್ತು. ಊರಾಗ ಮಂದಿ ಮಳಿ ಬರ್ಲಿ ಅಂತಂದು ಕಟ್ಟಿ ಭಜನಿ ಸುರುಹಚ್ಕೊಂಡ್ರು. ಒಂದಿನ ಹನ್ಮಪ್ಪನ ಗುಡಿಮುಂದ, ಮತ್ತೊಂದು ದಿನ ಸೇವಾಬಾಯನ ಮಟ್ಟಿನೊಳಗ ಭಜನಿ ಸುರುಹಚ್ಚಿದ್ರು. ಮೈತೊಳಕ್ಕೊಂಡು ಒಳಗ ಬಂದೋರು ಕಾಲಮಡಿಯಾಕ ಹ್ವಾದ್ರು, ಮತ್ತೆ ನೀರಲ್ಲಿ ಮುಳುಗಿ ಬರ್ಲೆ ಬೇಕಿತ್ತು. ಬೀಡಿಸೆದಾಕಂತ ಹೋದವರೆಲ್ಲಾ ಹಂಗೆ ಮಾಡ್ತಿದ್ರು. ಮೂರ್ನಾಕ ದಿನದಿಂದ ಭಜನಿ, ಸಂಜೆ ಬಿಟ್ಟು ಬಿಡದಂಗ ಆರಂಭವಾಗಿತ್ತು. ಮುಗಲ ನೋಡಿ ನೋಡಿ ಕಣ್ಣಾಗ ಗೊಂಬಿ ಕುಂತಂಗ ಆಗಿತ್ತು. ಮುಗಲ ಒಡಲ ಕಟ್ಟಲಿಲ್ಲಾ ಮಳಿಯಾಗಿ ಭೂಮಿಗ ಬೀಳಲಿಲ್ಲಾ. ದಿನಕ್ಕದಿನಕ್ಕೂ ಮಂದಿ ಸ್ಥಿತಿ ಮುಷ್ಠಿಯೊಳಗ ಉಸುಕು ಬಿಗಿ ಹಿಡ್ಕೊಂಡಂಗಾಗಿತ್ತು.

ಗೊತ್ತಾ-ಬಾಣವ್ವ ಹಗಲು ರಾತ್ರಿ ಒಂದು ಮಾಡಿ ದುಡದು ಮಕ್ಕಳ ಸಾಕೊ ಹೊಣಿ ಹೊತ್ತಿದ್ರು. ಮನಿಯಾಗೆಲ್ಲಾ ಉಣ್ಣೋಕೆ ಸಾಲ್ದಕ್ಕೆ ಹಿರಿಮಗ ನುಗ್ಲಾನಾಯ್ಕನಿಗೆ ಮೂರುಗಂಡು ಮೂರಹೆಣ್ಣೂ ಆಗಿ ಸಂಸಾರದ ಗೂಡು ವಿಸ್ತಾರವಾಗಿತ್ತು. ಬಾಣವ್ವ ಎಷ್ಟೆಲ್ಲಾ ಕಷ್ಟಪಟ್ಟು ತಿಣಕಾಡಿ ಮನಿ ನಡಸ್ತಿದ್ಲು. ಕುಂತುತಿನ್ನೊ ಎಂಟು ಹುಡುಗರು

ದುಡಿಯೊ ಹನ್ನೆಲ್ಡ ಮಂದಿಗ ಒಪ್ಪತ್ತಿನ ಕೂಳು ಜೋಡಸೋದು ದುಸ್ತರ ಆಗಿತ್ತು. ಸುತ್ತ ಮೂರರಿಂದ ಆರುಮೈಲಿ ದೂರದಮಟಾನು ನಡದು ಹೋಗಿ ಕೆಲಸ ಹುಡುಕಿ ಮಾಡಿ ಸಂಜಿಗ ಬರೊಮುಂದ ಅವರ ಕೊಟ್ಟ ಬರಿ ಮಣ್ಣು ಕಲ್ಲಿರೊ ರಾಗಿಯನ್ನ ಹಸಮಾಡಿ ಗಿರಣಿಗ ಹಾಕಿಸಿಕೊಂಡೆ ಹೋಗಬೇಕಿತ್ತು. ಪಾವು ರಾಗಿ ಕಾಳ ಕೊಟ್ರ ಅರ್ಪಾವು ಮಣ್ಣ ಹೊಕಿತ್ತು. ಗೊತ್ತಾನಾಯ್ಕ ಕೂಲಿಕಾಳು ಸಾಕಾಗೋದಿಲ್ಲ ಎಲ್ಲಿಂದಲಾದ್ರು ವಾತದಿಂದ ರಾಗಿನಾರು ತಂದರಾತು ಅಂತೇಳಿ ಕಾಸ್ನೂರು ಶ್ರೀಮಂತ ಮುದ್ದನಾಯ್ಕನ ಹತ್ರ ಹ್ವಾದ್ರ ಮದ್ಲು ಅವನ ಭೆಟ್ಟಿಯಾಗಾಕ ಒಂದು ಬಾಟಲು ಹೆಂಡ ಒಯ್ಯಬೇಕು, ಅವನು ಕುಡದಾದ ಮೇಲೆ "ಹೌದಪ್ಪ ನಾ ಏನೋ ಹೂಂ ಅಂದೇನು ಅಂತ ತಿಳ್ಕೊ, ನನ್ನ ತಮ್ಮ ಬದು ಅದಾನಲ್ಲ ಅವನೇನಂದಾನಂತ. ಹೋಗಿ ಒಂದು ಬಾಟಲ ಹೆಂಡ ಅವನಿಗೂ ಹೊಡಸ ಬಾರದ" ಅರ್ಧ ಚೀಲರಾಗಿ ಕೊಟ್ರ ಕಾಲಭಾಗ ಮಣ್ಣು ಕಲ್ಲು ಸೇರಿಸಿ ಸರಿಯಾಗಿ ಮಾಡಿ ಕೊಡ್ತಿದ್ದ ಅವನಿಗ ಕುಡಿಸಿದ್ದು, ಒಯ್ಯೋದು ಎಲ್ಲಾ ಸೇರ್ಸಿದ್ರ ಅವನ ರಾಗಿ ಸವಾಸನೆ ಬ್ಯಾಡ ಅನಿಸಿ ಬಿಡ್ತಿತ್ತು. ಆದ್ರ ಹೊಟ್ಟಿ ಅನ್ನೋದು ಕೇಳಬೇಕಲ್ಲ.

ಅದಕ್ಕೆ ಮಂದಿ ಬಂಡಿಕಟ್ಕೊಂಡು ಬಂದು ಎರಡು ಮೂರು ದಿನ ಕಾದು, ಕುಡಿಸಿ ತಿನ್ನಿಸಿ ಕಾಳು ಕಡ ಒಯ್ಯುತ್ತಿದ್ರು. ಬಂದೋರೆಲ್ಲಾ ಹಿಡಿ ಶಾಪ ಹಾಕಿ ಹೊಕಿದ್ರು. ಅವನೂ ಮದ್ಲು ಕೂಲಿಮಾಡ್ತಿದ್ದೋನೆ. ತಾಡಾಪುರ ತಾಂಡಕ್ಕೆ ಕೊಟ್ಟಿದ್ದ ಅವನ ತಂಗಿ ಮಾದೇವಿ ಅನ್ನಾಕಿ ಒಂದು ಮುಂಗಾರಿನ್ಯಾಗ ದೊಡ್ಡಜ್ವಾಳದ ಹೊಲ್ದಾಗ ಕಳೆ ತಗಿತಿದ್ಲು, ಅವರ ಹೊಲದ ಚೌಡಿಗುಡಿ ಮುಂದಿನ ಹುತ್ತದ ಹತ್ರ ಅಕಿ ಕುರ್ಚಗಿ ತಗೊಂಡು ಹುಲ್ಲು ಮೇಲಕ್ಕ ಎಬ್ಬಿದಂಗೆಲ್ಲಾ ಬಂಗಾರದ ಗಟ್ಟಿ ಬರತೊಡಗಿದವು. ಅಕಿ ಪುಣ್ಯಕ್ಕ ಆಳುಗಳೆಲ್ಲಾ ಮಾರು ದೂರದಾಗಿದ್ರು. ಎಬ್ಬಿ ಎಬ್ಬಿ ಉಡಿಯಾಗ ತುಂಬಿದಾಕೀನೆ ಬುತ್ತಿ ಗಂಟಿನ ಅರವಿಯೊಳಗ ಗಂಟುಕಟ್ಟಿ ರಾತ್ರೋರಾತ್ರಿ ತಾಡಾಪುರ ಬಿಟ್ಟ ಕಾಸ್ನೂರು ತಲುಪಿದ್ಲು. ಗಂಡನ ಮನೀಗೆ ಸೇರಬೇಕಿದ್ದ ಬಂಗಾರನಾ ಒಯ್ದು ತನ್ನ ಅಣ್ಣಂದಿರಿಗ ಕೊಟ್ಲು. ಅಕಿ ದೊಡ್ಡಣ್ಣ ಉಪಾಯದಿಂದ ಗಿಲೀಟು ಮಾತುಗಳನ್ನಾಡಿ ತಂಗಿ ಹತ್ರದ ಬಂಗಾರನೆಲ್ಲಾ ಇಸ್ಕೊಂಡು ಅಕೀನ ಸಾಗ ಹಾಕಿದ. ಮಾದೇವಿ ಹೊಳ್ಳಿ ಗಂಡನ ಮನಿಗ ಬಂದ್ಲು. ತಿರಗಿ ಮತ್ತೊಮ್ಮೆ ತೌರಿಗೆ ಬರೋದ್ರಾಗ ಅವಳಣ್ಣ ಮುದ್ದನಾಯ್ಕ ದೊಡ್ಡ ಶ್ರೀಮಂತನಾಗಿದ್ದ. ಮಾದೇವಿ ಬಂದಾಗ ಕೃತಕವಾಗಿ ಪ್ರೀತಿ ನಾಟಕ ಮಾಡಿದ. ಅದನ್ನ ಗಮನಿಸಿದ ಮಾದೇವಿಗ ತಾನು ಮಾಡಿದ ತಪ್ಪು ಅರಿವಾತು. "ಅಯ್ಯೋ ನನ್ನ ಹಣೆಬರಹವೇ, ನನ್ನಣ್ಣನಾನು ಒಂದೇ ಹೊಟ್ಟೆಯೊಳಗ ಹುಟ್ಟಿದೋರು. ಅವನ ಎಂಜಲು ಮಲಿ ಕುಡದ ಬೆಳದಾಕಿ

ನಾನು, ಅವನು ಪಾಡಾಗೆ ಇರ್ಲಿ ಅಂತಂದು ಬಯಸಿದೆ. ನಾಳೆ ನನ್ನ ಸರಿಗ ನೋಡಿಕೊಂಡಾನ ಅಂತಂದು ನನ್ನ ಗಂಡನ ಹೊಲ್ಲಾಗ ಸಿಕ್ಕ ಬಂಗಾರ ತಗೊಂಡು ಹೋಗಿ ಕೊಟ್ಟಬಿಟ್ಟೆ, ನನ್ನಣ್ಣ ದೊಡ್ಡ ಮೋಸಗಾರ ಆಗಿಬಿಟ್ನಲ್ಲ" ಅಂತಾ ಕೈ ಕೈ ಹಿಚಿಕೊಂಡ್ಲು. ಅದೇ ಕೊನೆ, ಅಕಿ ಮನಿಯೊಳಗ ಉಪಾಸವಿದ್ರು ಹೊಳ್ಳಿ ಅವಳಣ್ಣನ ಮನಿಗ ಹೋಗಲಿಲ್ಲಾ. ಮುದ್ದನಾಯ್ಕ ಸುತ್ತೆಲ್ಲಾ ಊರಗಳಿಗೆ ದೊಡ್ಡ ಶ್ರೀಮಂತನಾದ. ಮಾದೇವಿ ಮಾತ್ರ ಊರೂರುಗಳಿಗ ಸುತ್ತಿ ಕಟಗಿ ಮಾರಾಟ ಮಾಡಿ ಜೀವನ ಮಾಡತೊಡಗಿದಳು. ಮುದ್ದನಾಯ್ಕ ತಂಗಿ ಬಂಗಾರದ ಶ್ರೀಮಂತಿಕಿ ಬಲದಿಂದ ಅವನ ಹತ್ರ ಕಾಳು, ದುಡ್ಡಿಗಂತ ಬರೊ ಬಡವರಿಗೆ ಹಿಂಸೆ, ಅನ್ಯಾಯ ಮಾಡ್ತಾ, ಅವರದೆ ಕುಡದು, ಅವರ್ದೆ ತಿಂದು ಕೊಬ್ಬಿದ್ದ. ಜನರಿಗೆ ಅವನು ಮೋಸಮಾಡ್ತಿರೋದು ಗೊತ್ತಿದ್ದು ಅನಿವಾರ್ಯವಾಗಿ ಅವನ ಹತ್ರ ಹೋಗಬೇಕಾಗಿ ಬರ್ತಿದ್ದರಿಂದ ಹೋಗುತಿದ್ರು. ಬರಗಾಲದಾಗಂತು ದೊಡ್ಡದಾನಿ ಅನ್ನಿಸಿಕೊಂಡಿದ್ದಲ್ಲದೆ ಲಾಭಾನು ಮಾಡಿಕೊಂಡಿದ್ದ. ಗೊತ್ತಾನಾಯ್ಕ ಎರಡು ಚೀಲ ರಾಗಿ ಕೇಳಿದ್ದ. ಎರಡು ಬಾಟಲು ಹೆಂಡನೂ ಕುಡಿಸಿದ್ದ. ಅವನ ಕಿಸೆದಾಗಿದ್ದ ರೊಕ್ಕ ಖರ್ಚಾಗಿ ಹೋಗಿತ್ತು. ಮುಂಜಾನೆ ನಸುಕಿನೊಳಗೆ ಬಂದೋನು ಎತ್ತಗಳನ್ನು ಉಪಾಸಕಟ್ಟಿ, ಖಾಲಿ ಸೀಂಗಲ್ ಚಹಕುಡದು ಮುದ್ದನಾಯ್ಕನ ಮರ್ಜಿ ಕಾಯತೊಡಗಿದ. "ನಂದೇನ್ ಆಯ್ತು, ನನ್ನ ತಮ್ಮನ ಕಡೀಗ ಆಟ ನೋಡ್ರಿ" ತಮ್ಮನ ಪರವಹಿಸಿದ. ಕಿಸೆದಾಗಿದ್ದ ಕಾಸೆಲ್ಲ ಕೊಡವಿ, ಒಂದೆ ಬಾಟಲಿಗೆ ಆಗೋ ಅಷ್ಟು ದುಡ್ಡ ಕೊಟ್ಟು, ಒಂದು ಬಾಟಲು ತಂದಿದ್ದು ಆಯ್ತು. ಮುದ್ದನಾಯ್ಕನ ತಮ್ಮ ಬದು, "ಅಣ್ಣ ಒಂದು ಮಾತು ಹೇಳ್ತಿನಿ ಸಿಟ್ಟಾಗ ಬ್ಯಾಡ, ಮುದುಕಿ ಒಬ್ಬಾಕೀನೆ ಉಳ್ಕೊಂಡಾಳ, ಆಕೀಗ ಒಂದು ತಂದಿದ್ರ ಪಾಡಿತ್ತು ಅಂದ." ಬದು, ಮುಂಜಾನಿಂದ ಐದಾರ ಮಂದಿದು ಐದಾರು ಬಾಟಲು ಹೆಂಡ ಕುಡದು ಅಮಲಿನಲ್ಲೇ ತೇಲಾಡ್ತಿದ್ದ, ಜೊತೆಗೆ ಸಾಹುಕಾರಕಿಯ ಡೌಲಿನಾಗ ಹೆಂಡ ತರುವಂತೆ ಒತ್ತಾಯ ಮಾಡಿದ ಬದು. "ತಂದಿದ್ದ ದುಡ್ಡು ಮುದ್ದಣ್ಣಗ ಎಲ್ಡ ಬಾಟ್ಲು, ತಮಗೊಂದು ಕೊಡೋದ್ರಾಗ ಖಾಲಿಯಾತು" ಅಂದ ಗೊತ್ತಾನಾಯ್ಕ ಅವನ ಬಾಯಾನ ಮಾತು ಮುಗಿಯಾಕ ಮಂಚೆ, "ಇಲ್ಲೇನ ಪುಗಸಟ್ಟೆ ಕಾಳಕೊಡಾಕ ಕುಂತಿವೇನು? ಎಲ್ಲಿಯುವನೊ ನೀನು? ಯಾವೂರು? ಏನಮಾತಾಡ್ತಿಯಪ್ಪ, ತಿಳಿಯೋದಿಲ್ಲಾ ನಿನಗ, ಏನಿಲ್ಲಾ, ನಮ್ಮಣ್ಣಗ, ನನಗ ನೀನೆ ದಿನಾ ಹೆಂಡ ಕುಡಸೋದು. ಇಲ್ಲ ನಡಿ ಕಾಳು ಕೊಡಂಗಿಲ್ಲಂದ್ರ ಕೊಡಂಗಿಲ್ಲಾ, ನೀ ಯಾವಾನ್ನ ಬೇಕಾರ ಕರ್ಕೊಂಡ ಬಾ" ಅಂತಾ ಹಡಪ ಹತ್ತಿರೊ ನಾಯಿನ ಗದರಸೊ ಹಂಗ ಗದರಿಸಿದ. ಗೊತ್ತನಾಯ್ಕಗ

ಅಳು ಬಂದಿತ್ತು. ಪ್ರತಿದಿನ ಮನಿಯಾಗ ಸಣ್ಣಮಕ್ಕಳು ಉಪಾಸ ಇದ್ದು ಇದ್ದು ಸಾಯತಿರೋದು ಕಣ್ಣಮುಂದ ಕಟ್ಟಿದಂಗಾಗಿ "ಹಂಗಲ್ಲಣ್ಣಾ ನನ್ನ ಮಾತಾರು ಕೇಳ ಆಟು" ಅಂತಾ ಗೊಗರದ. "ಇಲ್ಲಾ ನೀ ಮದ್ದು ಬಂಡಿಕಟ್ಟು" ಬಾಯಿ ಜೋರಮಾಡಿದ. ಅವನು ಬಾಯಿ ಮಾಡೋದು ಕೇಳಿ ಊಟಕ ಕುಂದ್ರಾಕ ಹೋಗಿದ್ದ ಮುದುಕಿ "ಮಗ ಬದು ಏನೋ ಅದು, ಯಾರಕೂಡ ಜಗಳ ಆಡಾಕಹತ್ತಿ" ಅಂದ್ಕೊಂತ ಹೊರಗೆ ಬಂದೆ ಬಿಟ್ಲು. "ಏನಿಲ್ಲವ್ವ ನೀಯಾಕ ಬಂದೆ ಒಳಗ ನಡಿ" ಅಂತೇಳ್ತಾ ಬದು ತನ್ನ ತಪ್ಪ ಮುಚ್ಕೊಳ್ಳೊ ಪ್ರಯತ್ನ ಮಾಡ್ದ. ಗೊತ್ತಾನಾಯ್ಕ ಧೈನ್ಯದಿಂದ ಅವರನ್ನೇ ನೋಡ್ತಾ ನಿಂತಿರೋದನ್ನ ಗಮನಿಸಿದ ಮುದುಕಿ ಕರುಳು ಚುರ್ ಅಂತು. "ಯಾರಮಗ ನೀನು? ಯಾವೂರು. ಯಾಕ ಬಂದಿಯಾ? ಏನಾಯ್ತು ನನಮಗ ಯಾಕೆ ಗಲಾಟೆ ಮಾಡ್ತಿದ್ದ" ಒಂದೆ ಉಸುರಲ್ಲಿ ಕೇಳಿದ್ಲು. "ಇನ್ಯಾಕೆ ಕಾಳಿಗ ಬಂದಾನ" ತಿರಸ್ಕಾರದಿಂದ ಅವನನ್ನ ನೋಡಿ ಹೇಳಿದ ಬದು. ಮಗ ಹೇಳಿದ್ದ ಕೇಳಿ ಮುದಕಿ ಮನಸಿಗ ನೋವಾತು. ತನ್ನಿಬ್ಬರು ಮಕ್ಕಳು ಮಾಡ್ತಿರೊ ಮೋಸ ಗೊತ್ತಿತ್ತು. ಆದ್ರು ಹಳೆಮರ ಇವತ್ತಲ್ಲ ನಾಳೆ ಉರಳಿ ಬೀಳೋದು ತನ್ನ ಮಾತಿಗ ಯಾರು ಬೆಲಿ ಕೊಟ್ಟಾರು ಅಂತ ಮನಸ್ಸಿನೊಳಗಿನ ಮಾತಗಳನ್ನೆಲ್ಲಾ ಹುಗದ ಬಿಟ್ಟಿದ್ಲು ಮುದುಕಿ. ತನ್ನ ಮಗಳು ಮಾದೇವಿ ದೆಸಿಯಿಂದ ದೌಲತ್ತು ಮಾಡ್ತಿರೊ ಮುಂಡೆ ಮಕ್ಕಳು ಹುಟ್ಟಿದಾಗ ತಿನ್ನಾಕ ಕೂಳಿಲ್ಲದ ಭಿಕಾರಿಗಳಾಗಿದ್ರು. ತನ್ನ ಗಂಡ ತಾನು ಇವರನ್ನ ಸಾಕಾಕ ಏನೇನು ಮಾಡಿಲ್ಲ. ಆತ ಬದಕಿದ್ರ ಇವತ್ತು ಪರಿಸ್ಥಿತಿ ಹಿಂಗ ಆಕ್ಕಿತ್ತ. ಅಂತಾ ಯೋಚನೆ ಮಾಡ್ತಾ ನಿಂತ್ಲು. ಇವತ್ತಲ್ಲ ನಾಳೆ ಇವರು ಸರಿಯಾದ ಪಾಠ ಕಲ್ತೆ ಕಲಿತಾರ. ಏನ ಆಲೋಚನೆ ಬಂತೊ "ಬದು ಈ ಅಣ್ಣಾಗ ಎಷ್ಟುಕಾಳ ಬೇಕು ಅಷ್ಟನ್ನ ಕೊಟ್ಟ ಕಳುಹಿಸು" ಅಂದಾಕಿನ ಒಳಗ ಹೋಗಾಕ ಮುಂದಾದ್ಲು, "ಅವ್ವ ಅದು" ಏನೋ ಹೇಳಾಕ ಹೋದ. ಗೊತ್ತಾನಾಯ್ಕ ಎಲ್ಲಿ ಇಲ್ಲಾ ಅಂತಾನೊ ಅನ್ನೊ ನಿರಾಶೆಯಿಂದ ಮುದುಕಿ ಕಡೀಗ ನೋಡ್ತಾ. "ನಾನು ಹೇಳಾಕ ಹತ್ತೀನಿ, ಆತಗ ಕಾಳ ಕೊಟ್ಟುಕಳಸು" ತಾಕತ್ತ ಮಾಡಿದ್ಲು. ಬದು ಮಾತಾಡದಂಗೆ ಎರಡ ಚೀಲರಾಗಿ ಆಳಗಳ ಕುಟಾಗ ಹೊರಿಸಿ ಗೊತ್ತಾನಾಯ್ಕನ ಚಕ್ಕಡಿಯೊಳಗ ಹಾಕ್ಸಿದ. "ಅಣ್ಣಾ ನಿನ್ನ ಪುಣ್ಯನೆಟ್ಟಗೈತಿ ಹೋಗು ಹೆಂಗೂ ನಮ್ಮವ್ವಗ ಗೊತ್ತಾಗಿ ಹೊರಗ ಬಂದ್ಲು, ಮುಂದಿನ ವರ್ಷ ಕೊಡ್ಲಿಲ್ಲಾಂದ್ರೆ ಎರಡ ಚೀಲಕ್ಕೆ ಆರು ಚೀಲ ಕೊಡಬೇಕು ನೆಪ್ಪಿರಲಿ" ತಿಳಿಸಿ ಹೇಳಿದ. ಗೊತ್ತನಾಯ್ಕ ತಲೆ ಅಲ್ಲಾಡಿಸಿದವನೆ ಎತ್ತಗಳಿಗ ನೀರಕುಡಿಸಿ ಕೌವಳಾಗಕ ಮುಂಚೆ ಕಾಕಾಪುರ ಸೇರೊ ತವಕದಾಗ ಬಂಡಿಕಟ್ಟಿದ.

ಗೊತ್ತಾನಾಯ್ಕನ ಎಲ್ಡನೇ ಮಗ ಗೊಂದಾನಾಯ್ಕ ಏನೋ ಓದೋದು ಮುಗಿತಂತ ಊರಸೇರಿದ. ಬಾಣವ್ವಗ ಬಹಳ ಖುಷಿಯಾತು. ಹತ್ತು ಹನ್ನೊಂದು ವರ್ಷದವನಿದ್ದಾಗಿಂದ ಏನೇನೊ ಓದಿಪಾಸಾಗಿ ಮನಿಸೇರಿದ ಮಗ ಒಳ್ಳೆಯ ಪ್ರಾಯಕ ಬಂದಿದ್ದ. ಊರಿಗ ಬಂದಾಗ ಅಂವ ಧರ್ಮಸ್ಥಳಕ್ಕ ಹೋಗಾಕಂತ ತಲಿಕೂದ್ಲು, ದಾಡಿ, ಮೀಸಿ ಹಂಗೆ ಬಿಟ್ಕೊಂಡಿದ್ದ. ಬಂದವನೆ ಮನಿ ಪರಿಸ್ಥಿತಿ ನೋಡಿ ಬಹಳ ನೊಂದುಕೊಂಡ. ಏನಾರ ಒಂದು ವ್ಯವಸ್ಥೆ ಮಾಡಾಕ ಬೇಕಂತ ಆಲೋಚನೆ ಮಾಡಿಕೊಂಡ. ಆದ್ರ ಅವನ ಮುಂಗೋಪಿತನಕ್ಕ ಮನಿಮಂದಿ ಕುಟಾಗ ಹೊಂದಿಕೊಳ್ಳಾಕ ಆಗದೆ ಒದ್ದಾಡತೊಡಗಿದ. ಗೊತ್ತಾನಾಯ್ಕನು ಸಿಡುಕ, ಗೊಂದಾನು ಸಿಡುಕ. ಇಬ್ಬರ ನಡುವೆ ಬಾಣವ್ವ ಅಡ್ಕೊತ್ತಿನಲ್ಲಿ ಅಡಕಿಸಿಕ್ಕೊಂಡಂಗೆ ಸಿಕ್ಕೊಂಡಿದ್ಲು. ಇದ್ದಕ್ಕಿದ್ದಂಗೆ ಯಾರದೊಕುಟಾಗ ಜಗಳತಕ್ಕೊಂಡು ಹೊಡದಾಡಿದ್ದ. ಹೊಲಮನಿ ಕಡೀಗ ಮನಸಕೊಟ್ಟು ದುಡಿಯಬೇಕನ್ನೊ ಛಲ ಇದ್ದಿದ್ಕ ಜ್ವಾಳ ಘನವಾಗಿ ಬೆಳಿತು, ಊರ ಮುಂದಿನ ಹೊಲಗಳಲ್ಲಿ ರಾಗಿನು ಎದಿಮಟ ಬೆಳದಿತ್ತು. ಇಡಿ ಶೆಟ್ಟಿ ಹೊಲದಾಗ ಜ್ವಾಳ ಒಂದೇ ಸಮನಾಗಿ ಕಬ್ಬುನಿಂತಂಗ ನಿಂತಿತ್ತು. ಏಳುವರಿ ಎಕ್ಕರಿ ಹೊಲದಾಗ ಎಲ್ಲೆಲ್ಲೂ ಒಂದು ಬೀಜ ಹುಸಿ ಹೋಗದಂಗೆ ಮಳುದ್ದ ತೆನಿಗಳು ತೂಗಾಡ್ತಿದ್ವು. ಗೊತ್ತಾನಾಯ್ಕ ಬಹಳ ಆನಂದಪಟ್ಟಿದ್ದ. ಮಗ ಓದಿಕೊಂಡು ಬಂದ್ರು ವ್ಯವಸಾಯ ಮಾಡೋರ ಹಂಗೆ ನಡಬಗ್ಗಿಸಿ ದುಡಿಯೋದ ಕಂಡು. ಸುತ್ತ ಹಳ್ಳಿಮಂದಿ ಗೊತ್ತನಾಯ್ಕನ ಜ್ವಾಳನೋಡಿ ದಂಗಾಗಿದ್ರು. "ಛೇ ಇದೇನು ಕೇಡಿಗ ಬೆಳದೈತೊ, ಒಂದು ನೂರಾ ಐವತ್ತು ಚೀಲದ ಮ್ಯಾಲ ಆಗತೈತಿ" ಅಂತ ಅಂದುಕೊಳ್ಳ ತೊಡಗಿದರು. ಅಕ್ಟೋಬರ ತಿಂಗಳಾಗ ಮಳಿ ಕಮ್ಮಿ ಆದೆಟಿಗೆ ಕೊಯ್ಯಾಕ ಸುರುಮಾಡಿಸಿದ. ಕಣದಾಗ ಸೆದಿಸುಡಿಸಿ, ಹುಲ್ಲೆಲ್ಲಾಕಿತ್ತು ನೀರಹಾಕಿ ರೋಣಗಲ್ಲಿಲೆ ತಿರುವಿ, ಆ ಮ್ಯಾಲ ಎತ್ತಗಳಿಂದ ನೆಲತುಳಿಸಿ ಸಗಣಿಸಾರಿಸಿ ಕಣ ತಯಾರಮಾಡಿ ಒಂದು ವಾರದ ಮಟಾನು ಜ್ವಾಳದ ತೆನಿ ಕೊಯ್ಯೋದಾತು. ಎರಡ ಬಂಡಿಗಳು ಬಿಟ್ಟ ಬಿಡದೆ ಹೆರಿದ್ವು. "ಇವರ್ಷ ಏನ ಒಂದೆರಡನೂರ ಚೀಲ ಜ್ವಾಳ ಆದಾವಪ್ಪ" ಕೂಲಿ ಆಳು ಕೆಂದನಾಯ್ಕ ಹೇಳಿದ. "ಅಷ್ಟೇನು ಆಗಾಕಿಲ್ಲ ಬಿಡು ಮೈದನ, ಒಂದು ನೂರು ಚೀಲ ಆದಾವು" ಅವ್ವಿಬಾಯಿ ಹೇಳಿದ್ಲು. "ಜೋಳ ಒಕ್ಕಿದಾಗ ಎಲ್ಲಾ ಗೊತ್ತಾಗತೈತಿ ಅಕ್ಕ ನೀ ಸುಮ್ಮನೆ ತೆನಿ ಕೊಯ್ಯಿ" ಜೋರಮಾಡಿದ ಗೊಂದಾನಾಯ್ಕ. ಐದು ಬಿಸಲ ಒಣಗಿಸಿ ಮೂರುರೋಣಗಲ್ಲ ಕಟ್ಟಿ ಜ್ವಾಳ ತುಳಿಸಿ ಕಂಕಿ ತಗದು ರಾಶಿಮಾಡಿದ್ರ, ದೆವ್ವದಂತ ರಾಶಿ ಕಣದ ತಂಬ ತುಂಬಿಕೊಂಡಿತ್ತು. ಗೊತ್ತನಾಯ್ಕನಿಗೆ ತನ್ನಮಗ ಗೊಂದಾನ ಮೇಲೆ ಬಹಳ ನಂಬಿಕೆ

ಇತ್ತು, ತಾನು ಯಾವತ್ತು ಕನಸುಕಾಣದಂತ ಕೆಲಸ ಮಗ ಮಾಡಿದ್ಕಂಡು ಒಳಗೊಳಗೆ ಹೆಮ್ಮೆಪಟ್ಟ. ಸಣ್ಣವನಿರಲಿ ದೊಡ್ಡವನಿರಲಿ, ಯಾವಾನಾರು ಕೆಲ್ಸಮಾಡ್ಲಿಲಾಂದ್ರೆ ಹಾಕ್ಕೊಂಡು ಹಣಿತಿದ್ದ. ಬೋಯ್ದು, ಹೊಡದು ಒಳ್ಳೆ ಕೆಲಸ ಮಾಡಿದ. "ಓದಿಬಂದೋನೆನು ಯಾರು ಮಾಡದಂತ ಕೆಲಸಮಾಡಿದ್ನಲ್ಲಾ, ಈಗ ಯಾರಿಗೂ ಬಗ್ಗೊದಿಲ್ಲಾ ಬಿಡು ಸೋನ್ಯಾ ಹೆಂಡದ ಬಾಟಲಿ ಮಡಕಿಗ ಸುರಿತಾ ಹೇಳಿದ. "ಅದನ್ನ ಹೇಳಾಕಂತ್ಲೆ ಹೊಲದ ಕಡೀಗ ಬಂದಿದ್ದೆ ಆಟ್ರಾಗ ನೀನು ಎತ್ತಗಳನ್ನ ಹಿಡ್ಕೊಂಡು ಮನಿಕಡೀಗ ಹೊಂಟಿದ್ದೆ" ಸಹಿಸಿಕೊಳ್ಳಲಾಗದೆ ಬೆಂಕಿ ಉಗಳೊಹಂಗೆ ಹೇಳಿದ ಚೊಕ್ಕ. "ಇಲ್ಲೋ, ಊರಬಿಟ್ಟು ಊರಿಗ ಬಂದ್ರೆ ದೆಸಿತಿರಗುತ್ತಂತೆ" ಸುತ್ತಿ ಬಳಸಿ ಹೇಳಿದ ಸೋನ್ಯಾನಾಯ್ಕ. ಒಳಗೊಳಗೆ ಬೆಂಕಿಕಾರ್ತಾ ಅವನಿಗೇನು ಮಾಡಾಕ ತಮ್ಮಿಂದ ಆಗಲಿಲ್ಲಾಂತ ತಲಿತಲಿ ಚೆಚ್ಕೊಳ್ತಿದ್ರು, ಮೈಪರಚಿಕೊಳ್ತಿದ್ರು. ಗೊತ್ತನಾಯ್ಕ ಮಾತ್ರ ನೂರಾ ಇಪತ್ತೈದು ಚೀಲ ಜ್ವಾಳದ ದೊಡ್ಡರಾಶಿ ಕಣ್ಣಾಗ ಹಾಕ್ಕೊಂಡು ಕಾಯ್ತಿದ್ದ. ದಿನಕ್ಕ ದಿನಕ್ಕೆ ಸಂಸಾರ ದೊಡ್ಡದಾಗತ್ತಿದ್ದಂಗೆ ದುಡಿಮೆನು ಪಾಡಾಗೆ ನಡದು ಮತ್ತೊಂದು ಐದುವರಿ ಎಕ್ಕರಿ ಎರಿಜಮೀನ ತಗೊಂಡ. ಸೋನ್ಯಾನಾಯ್ಕನ ಸೊಂಟದ ನರ ಛಳ್ ಅಂದಿತ್ತು. ದಿನೆ ದಿನೆ ಗೊತ್ತನಾಯ್ಕ ಪ್ರಗತಿಯನ್ನ ಸಹಿಸಾಕ ಆಗದೆ ಕಾಕಪುರದ ಎತ್ತಿನ ದಲ್ಲಾಳಿ ದಿಂಡುಸಾಬನಿಗೆ ಗೊತ್ತನಾಯ್ಕನಷ್ಟೆ ದೊಡ್ಡ ಸಂಸಾರ, ಎರಡಕು ಸರಿಗ ಜಟಾಪಟಿ ಬೀಳಲಿ ಅಂತ, ದಿಂಡು ಸಾಬನ ಮಗಳು ಮೌಲಿಗೂ ಗೊತ್ತನಾಯ್ಕನಮಗ ಗೊಂದಾಗು ಸಂಬಂಧ ಇರುವುದಾಗಿ ಅವರಿಬ್ಬರು ಪ್ರತಿದಿನ ಕೋಡಿಸರದಾಗ ಸೇರುವುದಾಗಿಯೂ, ಸುಳ್ಳು ಹೇಳಿದ. ವಾರಕ್ಕ ಮೂರದಿನ ಹಂಪಾಪುರ ಹಂದಿಗನೂರ ಅಂತಂದು ತಿರಗಾಡೊ ದಿಂಡುಸಾಬಿ ಸಾರಸಗಟು ಯೋಚನೆ ಮಾಡದೆ ಅವನ ಸೈನ್ಯಕ್ಕೆ ಹೇಳಿದ. "ಗೊತ್ತಾನಾಯ್ಕನ ಮಗ ನಮ್ಮ ಮೌಲಿಗ ಹಿಡದ್ನಂತ" ಹತ್ತು ಜನಕ್ಕೆ ಸುದ್ಧಿಮುಟ್ಟಿದ್ದೆ ಕಣಗ, ಕುಂಟಿಮೆಳಿ ಕಾಯಿಗೋಲ ತಗೊಂಡು ಕಂಚ್ಚಿಕಟ್ಟಿ ಜಗಳಕ್ಕ ನಿಂತೆ ಬಿಟ್ರು.

"ಅಲ್ಲಾ ದಾದ, ಏನ ವಿಷಯ ಅಂತ ಹೇಳದೆ ಏನು ಇದು" ಕೇಳಿದ ಗೊಂದ, "ಸೂವರಕೆ ಬಚ್ಚೆ, ನಮ್ದುಕೆ ಮೌಲಿಗೆ ನೋಡ್ತಿ ಏನೊ ನೀನು, ನಿನ್ನ ಕೊಂದ ಹಾಕ್ತಾರೆ" ದಿಂಡು ಸಾಭಿಮಗ ಮೌಲಾಲಿ ಕೈಯಾಗಿದ್ದ ಕುಂಟಿ ಮೆಳಿಯಿಂದ ದುಬ್ಬಕ್ಕ ಹೇರಿದ. ಮದ್ಲೆ ತಲಿತಿರಕ ಗೊಂದಾ ಕೇಳಿಯ, ಕಣ್ಣ ಮುಚ್ಚಿ ಕಣ್ಣು ತೆಗಿಯೋದ್ರಾಗ ದಿಂಡಸಾಬನ ಮಕ್ಕಳೆಲ್ಲಾ ದಿಕ್ಕೊಪಾಲ ಆಗಿ ಹೋಗೊ ಹಂಗೆ ಹೊಡದ ಓಡ್ಸಿದ್ದ. ಊರನಡುವಿನ ಬೇವಿನಮರದ ಕಟ್ಟಿಮ್ಯಾಲ ಕುತ್ಕೊಂಡು ದಿಂಡ ಸಾಬಿಹುಡ್ರು, ದೆವ್ವ ನಂತೋರು ಅವರಿಗ

ಈ ಗೊತ್ತಾನಾಯ್ಕನ ಮಕ್ಕಳೆಲ್ಲಿ ಇಡಾಗ ಬೇಕಂತ ಟವೆಲಹಾಕ್ಕೊಂಡು, "ಇದೇಂತ ಅನಾಹುತ ಅಂತ, ಇವರು ತಾಂಡದಾಗ ಯಾರಿಗೂ ಬಗ್ಗೋದೆ ಇಲ್ಲವಲ್ಲ. ಇವರ ಸೊಕ್ಕ ಇಳಸೋದಾದ್ರು ಹ್ಯಾಂಗೆ" ಅಂತಾ ಆಲೋಚನೆ ಮಾಡ್ತಾ ಸೋನ್ಯಾ ದ್ಯಾವಗನ ಹೆಂಡದಂಗಡಿ ಕಡೀಗ ಹೊಂಟ. ಜಗಳ ನಿಂತಿರಲಿಲ್ಲಾ ದಿಂಡು ಸಾಬಿ ಹೆಂಗಸರು ಮಕ್ಕಲು ತಮ್ಮ ಮನಿತಾಗ ನಿಂತು ಬೋಯ್ಯುತ್ತಿದ್ರು. ಗೊತ್ತಾನಾಯ್ಕನ ಮನಿಯೋರು ತಮ್ಮ ಬಾಗಲ್ದಾಗ ನಿಂತು ಜಡಿತ್ತಿದ್ರು. ಮತ್ಯಾವಾಗ ಸುರು ಆಗತೈತೊ ಅಂತ ಕಾಕಾಪುರದ ಮಂದಿ ಪುಕ್ಕಟೆ ಮನರಂಜನೆ ಪುಡ್ಕೊಳ್ಳಾಕ ಕಾದು ಅಲ್ಲಲ್ಲೆ ಗುಂಪು ಗುಂಪಾಗಿ ನಿಂತ್ಕೊಂಡಿದ್ರು. ಚೆಲುವಾಪುರಕ್ಕೆ ಹೋಗಿದ ಗೊತ್ತಾನಾಯ್ಕ ಅರ್ಧದಾರಿಯೊಳಗ ಸುದ್ಧಿ ಕೇಳಿ ಓಡಿ ಬಂದಿದ್ದ. "ಎ, ಏನ್ರೋ ಸಮಾಚಾರ ಅದು, ಯಾಕೆ ಜಗಳ ಆಡಾಕಹತ್ತಿರಿ, ಏನಾತು" ಉಸರ ಬಿಡದಂಗೆ ಕೇಳಿದ. ಗೊಂದ, ಬಿದ್ದಿರೋ ಪೆಟ್ಟಿಗೆ ಸೀಮೇಣ್ಣಿ ಹಚ್ಚುತ್ತಿದ್ದ, "ದಲ್ಲಾಳಿ ಅಷ್ಟೊಂದು ಬಲತಾನ ಮಗ, ಏಯ್ ತತ್ತಾರಲೆ ನನ್ನ ಗಂಡಗುದ್ದಿ ಇವನವ್ವನ ಒಬ್ಬನ್ನಾರು ಕೊಂದು ಜೈಲಿಗ ಹೊಕ್ಕೀನಿ" ಇಡೀಮನಿತುಂಬ ಹುಡುಕಾಡಿದ. ಬಾಣವ್ವಗ ಗಂಡನ ಸಿಟ್ಟ ಗೊತ್ತಿದಿದ್ಕ ಅದನ್ನ ಒಯ್ದು ಯಾವುದೊ ಒಂದು ಮೂಲಿಯೊಳಗ ಬಚ್ಚಿಟ್ಟಿದ್ಲು. "ಈಗ ಸುಮ್ಮನಾಗು, ವಿಷಯ ಏನಂತ ತಿಳಿಯಾನ, ಯಾಕ ಜಗಳ ಮಾಡಿದ್ರು ಅಂತ ಕೇಳಾನ, ಯಾಕೆ ಅಂತ ಕೇಳಿ ಕೇಸಕೊಡಾನ" ಬಾಣವ್ವ ಸಮಾಧಾನ ಪಡಿಸಾಕ ನೋಡಿದ್ಲು. "ಏ, ಆ ಮಗ ಏಕಾಏಕಿ ಯಾಕ ಹೊಡಿಯಾಕ ಬಂದ. ನುಗ್ಗರಲೇ ಮನಿ ಎತ್ಕೊಂಡ ಬರ್ರಿ ಅವನ ಮಗಳು ಮತ್ತ ಸೊಸಿಯಂದಿರನ್ನ" - ನುಗ್ಗಾ ವಿವೇಚನೆ ಇಲ್ಲದೆ ಕೂಗಿದ. ಸಣ್ಣೋವು ದೊಡ್ಡೋವು ಕಿಚೋ ಅಂತ ಕಿರಚಿದ್ದೆ ಓಡಿ ಹೋಗಾಕ ಸುರು ಹಚ್ಚಿದವು. "ಸುಮ್ಮನಾಗ್ರೋ ಯಾಕ ಓಡ್ತಿರಾ, ಒಂದು ಹೋಗಿ ಇನ್ನೊಂದಾದೀತು ನಾಳೆ ಪಂಚಾತಿ ಸೇರ್ಸಿ ತೀರ್ಮಾನ ಮಾಡಾನ" ಬಾಣವ್ವ, ಸಂಕಟ ತಾಳಲಾರದೆ ಸಮಾಧಾನ ಪಡಿಸಿದ್ಲು, ಎಷ್ಟೇ ಆದ್ರು ತನ್ನ ಮಕ್ಕಳು, ತನ್ನ ಕಣ್ಣೆದುರಿಗೆ ಹೊಡದಾಡೋದು; ಹೊಡಿಯೋದು ರಕ್ತಪಾತ ನೋಡಿ ಸಹಿಸಾಕ ಆಗದೆ ಒಳಗೊಳಗೆ "ನಾನು ಯಾಕಾರು ಈ ಹಾಳ ಸೈನ್ಯಕ್ಕ ಜನ್ಮಕೊಟ್ಟೆ, ಒಂದೆರಡಿದಿದ್ರ, ತಮ್ಮ ಬಲಕಡಿಮಿ ಅನ್ನೊ ಅಂಜಿಕಿನಾರು ಇರ್ತಿತ್ತು. ಆದ್ರ ನಾವು ಹತ್ತ ಜನ ಅನ್ನೋ ಧೈರ್ಯ ಅವರ ಎದಿಯಾಗ ಅಚ್ಚು ಒತ್ತಿರೋದ್ರಿಂದ್ಲೆ ಯಾರು ಬಂದ್ರು ಗುರ್ ಅನ್ನೋದು." ಅಂತಾ ಎಲ್ಲರನ್ನೊ ಹೊಡದು ಬಡದು ಸುಮ್ಮನಾಗಿಸಿದ್ಲು. ಧಿಂಡುಸಾಬಿ, ಒಬ್ಬನೆ ಕುಂತು "ಹೌದು, ಸೋನ್ಯಾ ಅಂದದ್ದು ಸರಿನಾ" ಅಂತ ಯೋಚ್ನೆಮಾಡಿ ಕಡೀಗ ಮಗಳು ಮೌಲಿನ ಕರದು, "ಹೇಳೆ

ಗೊತ್ತಾನಾಯ್ಕನ ಗೊಂದಾನ ಜೊತಿಗ ಏನು ಚಕ್ಕರ್ ನಡಸೀಯಾ ಹೇಳ್ತಿಇಲ್ಲಾ" ಗದರಿಸಿದ. "ಏನಪ್ಪ ಅವನ್ಯಾರಂತ ಗೊತ್ತೆ ಇಲ್ಲಾ, ನೀ ಏನ ಹೇಳಾಕಹತ್ತಿ" ಅಂತ ಸುರುಮಾಡಿದ್ಲು. ಸೋನ್ಯಾನ ಹಕೀಕತ್ತು ತಿಳಿದಂಗಾಗಿ ಸಿದಾ, ಗೊತ್ತಾನಾಯ್ಕನ ಮನಿಕಡೀಗ ಬಂದ, "ಗೊತ್ತಾನಾಯ್ಕ, ಎಲ್ಲಿ ಪತ್ತೇನೆ ಇಲ್ಲಾ". ಕರದ ದಿಂಡುಸಾಬಿ, "ಏನ ದಿಂಡಣ್ಣ ಯಾವುದ ಜಗಳ" ಗೊತ್ತಾನಾಯ್ಕ ವಿಚಾರಿಸಿದ. "ಅದು ಚೋಡ್ ಮಾರಾಯ, ಅದೆಲ್ಲಾ ಆ ಬೇವರ್ಸಿ ನನ್ನಮಗ ಹೈನಾ ಆ ಸೋನ್ಯಾ ಅವಂದುಕೆ ಕೆಲ್ಸಾ, ನಂದು ತೆಪ್ಪಾಯ್ತು, ನಿನ್ನ ಮಕ್ಕಳಿಗೆಲ್ಲಾ ಬೋಲ್ ಬಿಡು" ನಿಲ್ಲಾಕ ಆಗದೆ ಸಿದಾ ಮನಿಕಡೀಗ ಹೊಂಟಬಿಟ್ಟ. ಗೊತ್ತಾನಾಯ್ಕಗ ಗೊತ್ತಿತ್ತು ಇದು ಯಾರದೊ ಕಡ್ಡಿನೆ ಅಂತ. ಹುಡ್ರನೆಲ್ಲಾ ಕರದು ನಡದವಿಷಯ ಹೇಳಿ ಸಮಾಧಾನ ಮಾಡ್ದ.

ಅಕ್ಟೋಬರ್ ತಿಂಗಳಾಗ ದೀಪಾವಳಿ ಮುಗದ್ರುನುವೆ ಸ್ವಾತಿ ವಿಷಾತಿ ಮಳಿ ಹಿಡ್ಕೊಂಡಿದ್ವು, ಕೆರಿ ಅಂಗಳ ಎಲ್ಲಾ ಹುದ್ಲಾಗಿತ್ತು. ಊರಮುಂದಿನ ಅಡವಿಯೊಳಗ ಹೋಗಾಕ ಜಾಡು ಸರಿ ಇಲ್ದೆ ಮಂದಿ ಗೋಕಟ್ಟಿಯೊಳಗಿಂದ ಹೊಡಿಯಾಕ ಆಗದೆ ಗೋಕಟ್ಟಿ ಬಿಟ್ಟು ಮ್ಯಾಲೆ, ನಿಚ್ಚ, ಪಿಚ್ಚ ಅಣ್ಣ ತಮ್ಮಂದಿರ ಹೊಲ್ದಾಗಿಂದ ಬಂಡಿ ಹೊಡ್ಕೊಂಡು ಹೋಗಿ ಹುಲ್ಲುಹೇರಬೇಕಾಗಿತ್ತು. ಮುಂದಿನ ಹಾಸಗಿ ಎಲ್ಲಾ ಜನರದು ಅದೇ ಗೋಳು. ಕಡೇ ಕಾರ್ತಿಕ ಮುಗದು ಗುರೆಳ್ಳ ಕಟಾವ ಆಗಿ ಒಕ್ಕಿ, ಮಾರಿ ಆದ ಮ್ಯಾಲ ತಗರಿ ಒಳ್ಳೆ ಹೂ ಹೀಚು ಬಿಟ್ಟ ಸಮಯದಾಗ ಒಳ್ಳೆ ಮಾಗಿಕಾಲ. ಕಾಕಾಪುರದ ಬಂಡಿಗಳೂ ರಾಗಿ ಹುಲ್ಲಹೇರ್ತಾವ. ಮುಂಜಾನಿ ಛಳಿಯಾಗ ಬೀಡಿ ಸೆದ್ಕೋರಹಂಗೆ ಬಾಯಿಂದ ಬರೊ ಹೋಗಿಯನ್ನ ಬಸಾ ಬಸಾಂತ ಉಗಳ್ತಾ ಎತ್ತಗಳನ್ನ ಗದರಿಸಿ ಈಚಲೊಳಗೆ ಇರಬಹುದಾದ ದೆವ್ವಗಳನ್ನ ನೆನಪಿಸಿಕೊಂಡು ಹೆದರ್ತಾ ಬಂಡಿ ಹೊಡಿಯೋದು ಒಂದು ಮೋಜಾಗಿತ್ತು.

ಬಂಡಿಗಳೂ ಹುಲ್ಲ ಹೇರಾಕ ಮಂಗಳವಾರ ಮುಂಜಾನೆ ನಸುಕಿನಾಗೆ ಆರಂಭಮಾಡಿದ್ವು. ಹನೆಲ್ಡುಗಂಟೆಗಾಗಲೆ ಐದುಹೇರ ಹೇರ್ಕೊಂಡು ಬಂದು ಉಲ್ಡಿಸಿಯಾಗಿತ್ತು. ಆರನೇ ಹೇರು ತರೋ ಮುಂದ. ನಿಚ್ಚಾನಾಯ್ಕ "ಏನ್ರೋ ನಿಮ್ಮವ್ವನ, ಈ ದಾರಿನೇನು ಗೌರ್ಮೆಂಟಿಂದು ಅಂತ ಅದ್ಕೊಂಡಿರಾ ಮಕ್ಕಳ್ರಾ, ದಾರಿ ಇರೋದು ಗೋಕಟ್ಟಿಯೊಳಗೆ ಹೋಗ್ರಿ ಅತ್ಲಾಗೆ ಇಲ್ಲಿ ಯಾಕ ತರಾಕ ಹತ್ತಿರಿ" ಅಂದವನೆ ಎತ್ತುಗಳ ಮೂಗುದಾಣ ಹಿಡ್ಕೊಂಡು ಚಕ್ಕಡಿ ಬಂಡಿ ನಿಲ್ಲಿಸಿದ. ಹೇರು ಹೆಚ್ಚಾಗಿತ್ತು ನಿಚ್ಚಾ ನಿಲ್ಲಿಸಿದ ರಭಸಕ್ಕೆ ಹೇರ ಮೇಲಿನ ಹುಲ್ಲು ಕೆಳಗ ಬಿತ್ತು. ನುಗ್ಲಾಗ, ಎಲ್ಲಿತ್ತೊ ಸಿಟ್ಟು ಬಂಡಿ

ಹಿಂದ ಇದ್ದೋನು ಓಡಿಬಂದ. "ನಂದೊಬ್ಬನದೆ ಬಂಡಿಯಾಕ ನಿಲ್ಲಿಸ್ತಿಯೋ ನೀನು ಇಡಿ ಜಗತ್ತೆ ಇಲ್ಲಿ ಹೊಡಿತಿರೋದು ಕಾಣ್ತಿಲ್ಲಾ. ನಾವೇನು ಮಾಡೀವಿ" ಕೇಳಿದ. "ನನ್ನ ಹೊಲ್ದಾಗ ಸಾವರ ಮಂದಿ ಅಡ್ಡಾಡ್ಲಿ, ನೀ ಅಡ್ಡಾಡೋದು ಬ್ಯಾಡಲ ಮಗನೆ" ಏರುಧನಿಯಿಂದ ಗದರಿಸಿದ. ಬಂಡಿ ಹೊಡಿತ್ತಿದ್ದ ಹನುಮ, ಎತ್ತುಗಳನ್ನ ಏಳದು ಮೋಕಿಗ ಹಗ್ಗ ಬಿಗದವನೆ ಬಾರುಕೋಲು ಸಡಲ ಬಿಟ್ಟ, ಭಡ್ ಅಂತ ಜಾಡಿಸಿದ. "ನಾವೇನು ಮಾಡಿದಿವೊ ಮಗನೆ" ಬಿದ್ದ ಹೊಡ್ತಕ್ಕ ಪದರ ಗುಟ್ಟಿದ ನಿಚ್ಚ. "ಎಪ್ಪಾ ಸತ್ನೊ ಪಿಚ್ಚಣ್ಣಾ, ಸಕ್ರುವಾವ ಓಡಬರ್ರಿ" ಅಂತಂದು ಬೇಕಂತ್ಲೆ ನೆಲದ ಮೇಲೆ ಸತ್ತೋರಗತಿ ಉಲ್ಡಾಡತೊಡಗಿದ. ಅವರ ಹೊಲ್ದಾಗ ಹಿಂದೆ ಹಾಕಿದ್ದ ರಾಗಿ ಕೋಯ್ತಿದ್ದ ಪಿಚ್ಚ, ಸಕ್ರು, "ಏನಾಯ್ತೋ, ಸಾಯಿಸಿದ್ರೋ ನನ್ನ ತಮ್ಮನ್ನ ನಿಮ್ಮವ್ವನ" ಒಂದೇ ಉಸರಿಗ ಓಡಿ ಬಂದವರೆ ನುಗ್ಲನ್ನ ಹನುಮನ್ನ ಹಿಡ್ಕೊಂಡು ಚೆನ್ನಾಗಿ ನಾದಿದ್ರು. ಅಕ್ಕಪಕ್ಕದ ಹೊಲದ ಜನ ಓಡಿಬಂದು ತಮಾಸೆನೋಡ್ತಾ ನಿಂತ ಬಿಟ್ರು, ನುಗ್ಲಾ, ಹನುಮ ಇಬ್ಬರೆ, ಅವರಗಡ್ಡಿ ಹದಿನೈದು ಇಪ್ಪತ್ತಮಂದಿನು ಸೇರಿ ಚೆನ್ನಾಗಿ ಹೊಡದ್ರು, ಸಕ್ರು "ಬಿಡ್ರೋ ಯಾಕ ಹೊಡಿತೀರಿ" ಅನ್ನೋನು ಹಿಂದಿಂದ ಅವರಿಗ ಕಾಣದಂಗ ಜಾಡಿಸಿ ಓದಿಯೋನು. ಸುದ್ಧಿ ಕೇಳಿದ ಗೊಂದ, ಗೊತ್ತಾನಾಯ್ಕ ಎದ್ನೊ ಬಿದ್ನೊ ಅಂತ ಓಡಿಬಂದ್ರು. ಅಷ್ಟೊತ್ತಿಗಾಗ್ಲೆ ಜಗಳ ನಿಂತಿತ್ತು. ಇವರಿಬ್ಬರನ್ನು ಕರ್ಕೊಂಡು ಬಂಡಿಹೊಡ್ಕೊಂಡು ಗೊತ್ತಾನಾಯ್ಕ ಮನಿಗ ಬಂದ, ನಡದ ವಿಷಯ ಸವಿಸ್ತರವಾಗಿ ಹೇಳಿದ ನುಗ್ಲಾ, ಗೊತ್ತಾನಾಯ್ಕನ ರಕ್ತ ಕುದಿಯ ತೊಡಗಿತು. ಸಂಜಿಯಾಗೋದನ್ನೆ ಕಾದ್ಕೊಂಡು ಕುಂತ.

ದ್ಯಾವಗನ ಹೆಂಡದಂಗಡಿಯಿಂದಲೇ ಸುರುಮಾಡಿದ, ಯಾರು ತುಟಿಪಿಟಕ್ ಅನ್ನಲಿಲ್ಲಾ. ಅವನು ಮನಿಗ ಬರೊದ್ರಾಗ ಮುವತ್ತು ನಲವತ್ತು ಜನ ಅವರ ಗಡ್ಡಿಯವರೆ ಸೇರಿ, ಗೊತ್ತಾನಾಯ್ಕನ ಮನಿ ನುಗ್ಗಿ ಹೆಂಗಸರು ಮಕ್ಕಳನ್ನ ಹೊಡಿಯೊ ಯೋಜನೆ ಹಾಕ್ಕೊಂಡು ತಾಂಡೆ ದುರಗವ್ವನ ಗುಡಿಮುಂದ ಗುಂಪು ಸೇರಿದ್ರು. ನಿಚ್ಚ, ಪಿಚ್ಚ, ಸಕ್ರು, ಸಿಕ್ರ ಹೆಣ ಎತ್ತ ಬೇಕಂತ ಕೈಯಾಗ ಖಾರಪುಡಿ-ಕುಂಟಿಮೇಳಿ ಹಿಡ್ಕೊಂಡು ಸಣ್ಣೋರು ದೊಡ್ಡೋರು ಸಜ್ಜಾಗೆ ಇದ್ರು. ಜಗಳ ದೊಡ್ಡ ಪ್ರಮಾಣದಾಗೆ ಆರಂಭ ಆತು. ಮಂದಿ ಅವರ ಕಡೀಗ ಜನಾಜಾತ್ರಿ. ಅದನ್ನ ಕಂಡು ಗೊತ್ತಾನಾಯ್ಕನ ತಮ್ಮ ಕಟುವಾ ತನ್ನ ದ್ವೇಷ ಮರತು ಅಣ್ಣನ ಕಡೀಗ ಓಡಿ ಬಂದಿದ್ದ. ಅವನ ಹಿರಿ ಹೆಂಡತಿ ಚಾಂವಿ ಅಗಸಿಬಾಗಲಿಗ ಹಾಕೊ ದೊಡ್ಡದೊಂದು ಮುಳ್ಳಿನ ಕಂಟಿನ ಎತ್ತಿ, "ಬರ್ರೋ ನನಮಕ್ಕಳ್ರ ಯಾವನು ಗಂಡಸು ಬರೋನು ಬರ್ರೋ ಮಕ್ಕಳ್ರಾ" ಒಂದು ಸಲ ಆವಾಜ ಹಾಕಿದ್ಲು.

ಜನಸಂದಣಿಯೊಳಗ ನೂಕಾಟ ತಿಕ್ಕಾಟ ಸುರು ಆತು. ಗೊತ್ತಾನಾಯ್ಕನಿಗೆ ಪರಿಸ್ಥಿತಿ ಅರಿವಾಯ್ತು. ಮಕ್ಕಳನ್ನೆಲ್ಲಾ ಮನಿಯೊಳಗ ಹಾಕಿದ. ಇವರವ್ವರ, ನನ್ನ ಕೊನೆಮಗನ್ನ ನಾನೆ ಕಡದು ಎಲ್ಲರನ್ನ ಜೈಲಿಗ ಎಳಸಲೇನು ಅಂದ್ಕೊಂತ ಚಿಕ್ಕೋನಾದ ಚೆನ್ನಿಂಗನ್ನ ಹುಡುಕಿದ, ಅವನಪ್ಪನ ಮಾತುಕೇಳಿ ಉಚ್ಚಿ ಹೋಯ್ಕೊಂಡು ಅವನವ್ವನ ಸೀರಿಯೊಳಗ ಹೊಕ್ಕೊಂಡ.

ಹೊರಗ ಗಲಾಟೆ ಜೋರಾಗ್ತಿದಂಗೆ ಗೊತ್ತನ ರಕ್ತ ಕುದಿಯ ತೊಡಗಿತು. ಆದ್ರೂ ಸಹಸಿಕೊಂಡು, ರಾತ್ರಿ ಒಂದುಗಂಟಿಗ ಗುಂಪೆಲ್ಲಾ ಚದುರಿದ ಮೇಲೆ ಬಾಣವ್ವನ ಕರ್ಕೊಂಡು ಚೆಲುವಾಪುರಕ್ಕೆ ಹೊರಟ. ಹಟ್ಟಿಹಿರಿಯನ ಕಣದಮೂಲ್ಯಾಗ ಅವರಿಗ ದಾರಿ ಬಿಡಬಾರದಂತೆಳಿ ಸೋನ್ಯಾ, ಗಬಡು, ಚೆನ್ನಿಂಗ, ಬದಿಯಾ, ಸಕ್ರು, ಚೊಕ್ಕ, ಕಿಷುಣಾ, ನಿಚ್ಚ, ಪಿಚ್ಚ ಸಾಲಿಗ ಕುಂತಿದ್ರು. ಗೊತ್ತಾನಾಯ್ಕ ಬಾಣವ್ವ ಅವರ ಮೇಲಿಂದ ದಾಟಿ ಹೋದ್ರು ತುಟಿಪಿಟಕ್ ಅನ್ನಲಿಲ್ಲಾ, ಕೋಡಿಸರಕ ಹೋದಾಗ, "ಒಂದು ಚೂರು ದಾರಿಗ ಅಡ್ಡ ಗಟ್ಟಬೇಕಿತ್ತು ಕಾಲಾಗಿರೊ ಮೂಗಹರಕದಿಂದಲೇ ಹೊಡಿಬೇಕಂತ ಮನಸ್ಸಿನೊಳಗಿತ್ತು." ಬಾಣವ್ವ ಸಿಟ್ಟಿಂದ ಕೆಂಪಾಗಿದ್ಲು. ಚೆಲುವಾಪುರದಾಗ ಮಂದಿ ನಿದ್ದಿ ಮಾಡ್ತಿದ್ರು. ಗೊತ್ತ ಬಾಣವ್ವ ಮನಿತನ ಕಟ್ಟಾಕ ಹತ್ತಿದಾಗಿಂದ ಕಾಕಾಪುರದ ಜನ ನಾನಾ ನಮೂನಿ ತೊಂದರೆ ಕೊಡ್ತಾನೆ ಬಂದಿದ್ರು. ಬಹಳ ಸಣ್ಣಬುದ್ದಿಯ ನೀಚಜನ, ಒಬ್ಬನೇನಾರು ಒಂದು ಖಂಡಗ ಕಾಳ ಬೆಳದ್ನಂದ್ರ, "ಏಯ್ ಅವನದು ಒಂದು ಖಂಡಗ ಕಾಳು ಬೆಳಿತಂತಲ್ಲೋ" ಅಂತ ಮಾತಾಡಿ ಕೊಳ್ಳೋದು, ಹೊಲ ತಗೊಂಡ್ರು ಕಷ್ಟ, ಬೀಳ ಬಿಟ್ಟರು ಕಷ್ಟ, ಸಣ್ಣ ಊರಾಗ ಒಬ್ಬರನ್ನ ನೋಡಿ ಒಬ್ಬರು ಹೊಟ್ಟಿ ಉರಿಯಿಂದ ದುಡಿಯೋದನ್ನ ಬಿಟ್ಟು ಬರಿ ಕಾಲ ಎಳಿಯೊ ಜನಾನೆ ತುಂಬಿಕೊಂಡಿದ್ದರು. ಅವೆಲ್ಲವನ್ನು ದಾಟಿ ಬೆಳಿತಿದ್ದ ಗೊತ್ತನ ಬದುಕು ಮುಳ್ಳಿನ ಮೇಲಿನ ನಡಿಗೆಯಾಗಿತ್ತು. ದಲ್ಲಾಳಿ ದಂಡುಸಾಬಿ ಕುಟಾಗ ಗಲಾಟಿಯಾಗಿ ಹದಿನೈದು ದಿನ ಆಗಿಲ್ಲಾ ಮತ್ತೊಂದು ಜಗಳ ಸುರು ಆಗೇ ಬಿಟ್ಟಿತ್ತು. ಏನಾದ್ರು ಮಾಡಿ ಅವನ ಮನಿಮುರಿಬೇಕು ಅವನನ್ನು ನಮ್ಮ ಲೀಸ್ಟಿನೊಳಗೆ ಸೇರಿಸಿಕೊಳ್ಳಬೇಕು ಅನ್ನೋ ಕೆಟ್ಟಮಂದಿ ಸಮ್ಮ ಸುಮ್ಮನೆ ಆಟ ಆಡ್ತಿದ್ರು. ಹಂದೋಣಿಗ ಹೋಗಿ ಸರ್ಕಲ್ ಇನ್ಸ್‌ಪೆಕ್ಟರಿಗ ಬೆಟ್ಟಿಯಾಗೋದೊ ಇಲ್ಲಾ ಚೆಲುವಾಪುರದಾಗೆ ಪಂಚಾತಿ ಹಾಕ್ಸಿ ನ್ಯಾಯ ತಿರ್ಮಾನ ಮಾಡೋದೊ ಅನ್ನೊ ಗೊಂದಲದಾಗಿದ್ದ ಗೊತ್ತನಾಯ್ಕ. "ಏನಾರ ಆಗ್ಲಿ, ಕೇಸುಕೊಟ್ಟುಬಿಡಾನ ನಡಿರಿ ಬೇವರ್ಸಿಗಳು ಪದೇ ಪದೇ ಹಿಂಗ ತೊಂದ್ರಿಕೊಡ್ತಾರೆ" ಬಾಣವ್ವ ಮನದಾಗಿನ ಮಾತು

ಹೇಳಿದ್ನು. "ಕೇಸುಮಾಡಿದ್ರೆ ಸುಕಾಸುಮ್ಮನೆ ಪೋಲಿಸರಿಂದ ಹಿಡದು ವಕೀಲರವರಿಗೆ ದುಡ್ಡು ಕೊಡಬೇಕಾಗತ್ತೈತಿ, ಇಲ್ಲೆ ಚೆಲುವಾಪುರದ ದೊಡ್ಡ ದೊಡ್ಡ ಜನರಿಗ ಹೇಳಿ ಪಂಚಾಯ್ತಿ ಕೊಡಿಸಿ ಒಂದಷ್ಟು ಛೀಮಾರಿ ಹಾಕ್ಸಿ ಬಿಡಾನ, ನಾಳೆ ಮತ್ಯಾಏಾಗಲಾರು ಹಿಂಗೆ ಮುಂದುವರದ್ರ ನೋಡಾನಂತ" ಅಂತಂದು ಗೊತ್ತಾನಾಯ್ಕ ಹಿಂಜರದ. ಅವನು ತಮ್ಮ ಕಟುವಾನ ಕೇಸಿನಿಂದ ದೊಡ್ಡಪಾಠ ಕಲ್ತಿದ್ದ. ಸುಮ್ಮನೆ ಹೋಗೋದು ಕೋರ್ಟಿಗ ಹಾಜರಾಗೋದು, ವಕೀಲಗ ದುಡ್ಡ ತಿನ್ನಿಸೋದು ಕೇಸ ಮುಂದಕ ಹಾಕಿಸೋದು ಬರೋದು. ಐದುವರ್ಷ ಬದುಕು, ದುಡ್ಡು, ಶಕ್ತಿ ಕಳ್ಕೊಂಡಮ್ಯಾಲ ಊರಾಗೆ ಇಬ್ಬರು ಒಂದಾಗಿ ಕೋರ್ಟಿನ್ಯಾಗ ರಾಜಿಯಾಗಿ ತಗಿಸಿಕೊಂಡದ್ದು ನೆನಪಾಗಿ ಹೆದರಿದ. ಎರಡುಗಂಟೆ ರಾತ್ರಿ ಯಾರಮನಿಗ ಹೊಗೋದು, ಯಾರನ್ನ ಬೆಟ್ಟಿಯಾಗಬೇಕು ಅಂತೇಳಿ ಯೋಚನೆ ಮಾಡ್ತಿದ್ದಂಗೆ ಹೊಟೇಲ ಶಿವನಂಜ ತಂಬಗಿ ತಗೊಂಡ ಹೋಗಿ ವಾಪಾಸುಬಂದ, ತನ್ನ ಹೊಟೇಲ ಮಂದೆ ಇಬ್ಬರು ವ್ಯಕ್ತಿಗಳು ಕುಂತಿರೋದನ್ನ ಕಂಡವನೆ, ಕಳ್ಳರೆ ಇರಬೇಕು ಅಂತ ಅನುಮಾನಿಸುತ್ತ, "ಏಯ್ ಯಾರದು" ಅಂಕ ಕೂಗಿದ. "ನಾವೋ ಶಿವನಂಜ ಕಾಕಾಪುರದ ಗೊತ್ತಾನಾಯ್ಕ" ಅಂದ. "ಯಾಕಪ್ಪ ಗೊತ್ತಪ್ಪ ಇಷ್ಟೊತ್ತಿನ್ಯಾಗ ಇಲ್ಲಿ, ಏನಾರ ಗಲಾಟಿ ಆತೇನು ಊರಾಗ, ಇಲ್ಲಾ ಊರಿಗ ಹೊಂಟೀರ ಈ ಹೊತ್ತಿನ್ಯಾಗ?" ಕೇಳಿದ. "ನಿಮ್ಮ ಅಣ್ಣ ಗುಂಡೆಸಾಮಿ ಎಲ್ಲಿ ಮಲಗ್ಯಾನ ತಮ್ಮ ಆಟು ಎಬ್ಬಸು" ಬಾಣವ್ವ ಕೇಳಿದಳು. "ಯಾಕವ್ವ ಹಂಗ ಕೇಳ್ತೀಯಾ ಏನಾತು ಹೇಳಬಾರದ, ನಮ್ಮ ಹೊಸ ಮನಿಯಾಗ ಮಕ್ಕೊಂಡಾನ" ಶಿವನಂಜ ಅವರಿಬ್ಬರ ಮಾರಿ ನೋಡಿದ. "ಏನಿಲ್ಲ ಶಿವನಂಜ, ಹಾಳೂರಾಗ ಏನ ಇರಾಕ ಸಾಧ್ಯಹೇಳು, ಹಲ್ಕಟ ಸೂಳಿಮಕ್ಕಳು ಪಿಚ್ಚ-ನಿಚ್ಚ ಅದಾರಲ್ಲ ನಮ್ಮೂರಾಗ, ಅವರ ಹೊಲ್ದಾಗ ಬಂಡಿ ಹೊಡದಿದ್ಕ ಇಡೀ ಊರಮಂದಿ ನಮ್ಮ ಮ್ಯಾಲ ಜಗಳಕ ಬಂದಿದ್ರು, ನನ್ನ ಹಿರಿಮಗ ನುಗ್ಗಾ, ಕಾಣು ಮತ್ತು ನಾಲ್ಕನೇಯ ಹನುಮನ್ನ ಹಿಡ್ಕೊಂಡು ಹೊಡದಾರ, ಹಂದೋಣಿಗ ಹೋಗಿ ಕೇಸಕೊಟ್ಟು ಬರಾನಂತ ಹೊಂಟಿದ್ವಿ, ನಿಮ್ಮಣ್ಣನಿಗೆ ಆಟು ಬೆಟ್ಟಿಯಾಗಿ, ವಿಷಯ ಹೇಳಿ ಹೋಗಾನಂತ". ಹೇಳುತ್ತಾ ನಡದ ವಿಷಯನೆಲ್ಲಾ ಹೇಳಿದ. "ಇನ್ನೇನ ನಾಕುವರಿಯಾಗಿರಬೇಕು ಬೆಳ್ಳಿಚುಕ್ಕಿ ಮೂಡೈತಿ, ಎದ್ದು ಬರ್‍ತಾನ, ಮಕತೊಳಿರಿ ಚಾ ಕುಡದು ಮಾತಾಡಿಸಿಕೊಂಡೆ ಹೋಗ್ರಿ." ಅವನ ಕೆಲಸ ಮಾಡಾಕ ಒಳಗ ಹೋದ. "ನೀರತಂದು ಮಾರಿತೊಳ್ಕೊ ಹೋಗು, ಚಹಕುಡದು, ಗುಂಡೆಸಾಮೀಗ ಒಂದು ಮಾತನ ಹೇಳಿ ಮುಂದಕ ಹ್ವಾದ್ರಾತು" ಅಂತಂದು ಗೊತ್ತಾನಾಯ್ಕ ನೀರತಂದು ಮಾರಿಮ್ಯಾಲ ಗೊಜ್ಜಿಕೊಂಡ, ಬಾಯಾಗ ನೀರುಹಾಕಿ

ಮುಕ್ಕಳಿಸಿ ಪೂರ್ವದಿಕ್ಕಿಗೆ ಮಕಮಾಡಿ, "ಶಿವಶಿವ ಕಾಪಾಡಪ್ಪ" ಅಂತ ಒಂದು ಸಲ ಅಂದವನೆ ಚರಗಿ ಒಳಗಿಟ್ಟ. ಶಿವನಂಜ, ವಡಿ ಮೆಣಸಿನಕಾಯಿ ಹಾಕಾಕ ಹಿಟ್ಟ ಕಲಿಸಿಟ್ಟ. ಒಲಿಯಾನ ಬೂದಿತಗದು ಎರಡು ಹೊಳುಕಟಗಿ ಇಟ್ಟು ಒಂದು ಬೂಚ ಸೀಮೆಣ್ಣಿ ಸುರಿದು ಬೆಂಕಿಗಿರಿದ, ಅದರಮ್ಯಾಲ ಒಂದು ಪಾತ್ರೆ ಇಟ್ಟು ನಾಕ ಚಂಬಿನ ತುಂಬ ನೀರು ಸುರವಿ ಐದಾರು ಚಮಚದಾಟ ಒಳ್ಳೆಪುಡಿ ಒಂದು ಐದಾರು ಚಮಚದಾಟ ಹಿಂದೆ ಮಾಡಿದ್ದನ್ನ ಒಣಗಿಸಿ ಇಟ್ಟಿದ್ದು ಹಾಕಿ ಒಂದೀಟು ಸಕ್ಕರೆ ಸುರದು ಕತಕತ ಕುದಿಸಿದ, ಡಿಕಾಕ್ಷನಿಗೆ ಒಂದೀಟು ಹಾಲುಸುರದು ಸೋಸಿ ಗೊತ್ತನಾಯಕ್ಕನಿಗ ಒಂದು, ಬಾಣವ್ವಗ ಒಂದುಗ್ಲಾಸ ಕೊಟ್ಟ. ಚಹಕುಡ್ಕೊಂತ ಮನಿಯೊಳಗ ಏನಾತೊ ಅನ್ನೊ ಚಿಂತೆ ಮಾಡತೊಡಗಿದರು. "ಹುಡುಗರನ್ನ ಏನಾರು ತಡವಿ ಜಗಳ ಮಾಡಿಗಿಡ್ಯಾರೇನೋ ಯಾಕೊ ನನಗ ಹೆದರಿಕಿ ಆಗಾಕ ಹತ್ಯತಿ" ಬಾಣವ್ವ ಗಂಡನ ಮುಂದ ತನ್ನ ಆತಂಕ ತೋಡಿಕೊಂಡ್ಲು.

ಚೆಲುವಾಪುರದ ಬಸವಣ್ಣ ದೇವರ ಗುಡಿಯಾಗ, ಪುಟ್ಟಪ್ಪ ಮಾಸ್ತರ, ಕಡಿಮನಿ ನಿಂಗಜ್ಜ, ಮೇದರ ಬಸಜ್ಜ, ಸಾವುಕಾರ ಸೋಮಣ್ಣ, ಗುಂಡೆಸೋಮಣ್ಣ, ಗುಂಡೆಸಾಮಿ, ಕೆಪ್ಪಅಂದಭಟ್ರು ಕಾಕಾಪುರದ ಹದಿನೈದು ಇಪ್ಪತ್ತು ಮಂದಿ ಪಂಚಾತಿ ಸೇರದ್ರು. ಕೆಂಚೀರಯ್ಯಗ ಗೊತ್ತಾನಾಯ್ಕನ ಬಗ್ಗೆ ವಿಶೇಷ ಕಾಳಜಿ ಇತ್ತು. ಕಾಕಾಪುರಕ್ಕೆ ಬಂದಾಗಿನಿಂದ ಅವನ ದುಡಮಿ, ವ್ಯವಹಾರ-ಮಾತುಕತಿ ಎಲ್ಲವೂ ಪ್ರಾಮಾಣಿಕವಾಗಿದ್ವು. ಅನ್ಯಾಯ ಮಾಡಿದೋನಲ್ಲ, ಪಾಪಿಗಳ ಜೊತಿಗ ಸೇರಿದವನೇ ಅಲ್ಲ, ಕಾಕಾಪುರದ ಮಂದಿ ಅವನ ಬಗ್ಗೆ ಅದೋಮಾತನ್ನ ಬಹಳ ಸಲ ಕೇಳಿದ್ದ. ಅದಕ್ಕೆ ಅವನು ಗೊತ್ತಾನಾಯ್ಕನಿಗೆ ಹುರಿದುಂಬಿಸ್ತಿದ್ದ. ಪಂಚಾತಿ ಕಟ್ಟಿಮೇಲೆ ಮೊದಲು ಆರಂಭಮಾಡಿದೋನೆ ಅವನು. "ನೋಡ್ರಿಸ್ವಾಮಿ, ಗೊತ್ತ ಒಳ್ಳೆಮನುಷ್ಯ, ಪ್ರಾಮಾಣಿಕ, ಯಾರಿಗೂ ಅನ್ಯಾಯ ಮಾಡೋನಲ್ಲ ಅನ್ಯಾಯನ ಸಹಿಸೋನಲ್ಲ, ನಮ್ಮೂರು ಎಂಥದ್ದಾಂತ ನನಗ ಗೊತ್ತೈತಿ" ಅಂದವನೆ ಸುಮ್ಮನಾದ. "ಕೆಂಚೀರಜ್ಜ ನೀ ಗಪ್ಪಾಗು, ಒಬ್ಬ ಮನುಷ್ಯನ ಒಂದೇ ಮಕ ನೀ ಹೇಳಾಕ ಹತ್ತಿರೋದು ಇನ್ನೊಂದು ಮಕದ ಪರಿಚಯ ನಿನಗಿಲ್ಲ ಅದಕ್ಕ ನೀ ಸುಮ್ಮನಿರು". ಚೊಕ್ಕನಾಯ್ಕ ಒದರಿದ. ಕಡಿಮನಿ ನಿಂಗಜ್ಜ, ಕೆಪ್ಪಅಂದಭಟ್ರಿಗೆ ಗೊತ್ತಾನಾಯ್ಕ ಸಂಪೂರ್ಣ ಗೊತ್ತಿದಿದ್ಕ ಪಂಚಾಯ್ತಿಯೊಳಗ ಖಂಡತುಂಡಾಗೆ ಮಾತಾಡಿದ್ರು. "ಏನ್ರಲೇ ನಿಮ್ಮ ಲಮಾಣಿ ಬುದ್ಧಿಯನ್ನ ಬಿಟ್ಟೆ ಇಲ್ಲಾ ನೋಡ್ರಿ. ಒಂದೂರಿನಿಂದ ಇನ್ನೊಂದೂರಿಗ ಎತ್ತಿನಮ್ಯಾಲ ಸವಾರಿ ಮಾಡೋದು, ಅಲ್ಲೊಬ್ಬ ಯ್ಯಾವಾನಾರ ದುಡದು ತಿನ್ನೊ ತಾಕತ್ತ ಬೆಳಸಿಕೊಂಡನಂದ್ರ ಅವನ್ನ

7

ಮುಗಿಸೋದು, ಅಂವ ಮತ್ತೊಂದುರಿಗೆ ಪಲಾಯನ ಮಾಡೋದು, ಏನೈತಿ ನಿಮ್ಮ ತಾವ ದುಡಿತೀರಿ ಕತ್ತಿದುಡದಂಗೆ ಅದನ್ನ ಒಯ್ದು ಹೆಂಡದಂಗಡಿಯವನಿಗೆ ವಂತಿಗಿಕಟ್ಟೊಹಂಗ ಪ್ರತಿದಿನ ಕೊಡ್ತಿರಿ, ಹೆಂಗಸರು ದುಡ್ಕೊಂಡು ಬಂದಿದ್ರಾಗ ನೀವು ಮಜ ಮಾಡ್ತಿರ, ಆಟೇಯು ಇನ್ನೇನ ನಿಮ್ಮ ಜೀವನ, ಗೊತ್ತನಾಯ್ಕ ನಿಯತ್ತಿನ ಮನುಷ್ಯ. ಗಂಧತೇಯೊಹಂಗ ಮೈಯನ್ನ ಭೂಮಿತಾಯಿ ಮ್ಯಾಲ ತೇಯಿತಾನ ಫಸಲತಗಿತಾನ ಮುಂದುವರಿತಾನ. ಅವನ್ನ ನೋಡಿ ಕಲಿಯೋದು ಬಿಟ್ಟು, ಹೊಟ್ಟಿಕಿಚ್ಚಪಟ್ಟು ಅಡ್ಡಗಾಲಹಾಕ್ತಿರಲ್ಲ ಒಂದುಚೂರಾರು ಮಾನ ಮರ್ಯಾದಿ ಐತೇನ ನಿಮಗ."

ಅಂದಭಟ್ಟ ಸರಿಯಾಗೆ ತಗೊಂಡಿದ್ದು ಕಾಕಾಪುರದಿಂದ ಬಂದಿದ್ದ, ಪೂಜಾರಿ ಪಾಪುಗ, ಸೋನ್ಯಾನಾಯ್ಕ, ಕಿಷುಣಾ, ಗಬಡು, ಬದಿಯಾ, ಸಕ್ರು ಮಾರಿಮ್ಯಾಲ ಎತ್ಲಿಲ್ಲಾ. ಕಡೆಮನಿ ನಿಂಗಜ್ಜಗ, ಸಿಟ್ಟ ಬಂತು. "ದುಡಿಯೋನ ಕಂಡು ಹರಸಪಡ್ರಲೇ, ಯಾ ಜಾತಿಯಾದ್ರೇನು? ಯಾ ಕುಲವಾದ್ರೇನು? ಯಾ ಊರಾದ್ರೇನಂತೆ? ಅವನು ದುಡಿಮಿಗಾರ, ಅದನ್ನ ನೋಡಬೇಕ್ರೋ ಹುಚ್ಚರಾ, ಇವತ್ತು ಭೂಮಿಮ್ಯಾಲ ದುಡಿಯೋರ ಸಂಖಿ ಕಮ್ಮಿಯಾಗಾಕ ಹತ್ಯತಿ, ಬರಿ ಒಣಹರಟಿ ಹೊಡ್ಕೊಂತ ಅಂಗಡಿಯೊಳಗ ದ್ವಾಸಿ ಬಜ್ಜಿ ತಿನ್ಕೊಂತ ತಿರಗೋರು ಹೆಚ್ಚಾಗ್ಯಾರ, ಅಂತಾದ್ರಾಗ ಒಬ್ಬರಿಬ್ಬರು ದುಡಿಯೋರಿದ್ರ ದುಡಿಯದೆ ಚಾದಂಗಡಿಕಟ್ಟಿಗ ಅಂಡೂರ್‍ದೋರು, ಅವನನ್ನು ತಮ್ಮ ಜೊತಿಗಿ ಸೇರಿಸ್ಕೊ ಬೇಕಂತ ಇಲ್ಲಾ ಬಾರದ ಪ್ರಯತ್ನ ಮಾಡಿ, ಇದ್ದೊಬ್ಬನನ್ನು ಹಾಳುಮಾಡಾಕ ಇಳದಾರ" ತಡಿಯಲಾಗದೆ ಹೇಳಿದ. "ಇಲ್ಲ ನಿಂಗಜ್ಜ ಅವನ ಮಕ್ಕಳ ಉಪಟಳ ಜಾಸ್ತಿ ಆಗೈತಿ, ಊರಾಗ ಒಬ್ಬ ಹುಡುಗಿಯರು ಉಳಿಯಂಗಿಲ್ಲ, ಹೆಂಗಸರು ಅಡ್ಡಾಡಂಗಿಲ್ಲಾ. ಒದ್ದು ಬುದ್ಧಿ ಹೇಳೊರಿಲ್ಲದೆ ಹದ್ದು ಮೀರ್‍ಯಾರ ಬಿಡು" ಅವನ ತೆಪ್ಪ ತಗಿಯಾಕ ನೋಡಿದ ಸೋನ್ಯಾ. "ಅ, ಬಿಡಲೇ, ನೀ ಅಂದಿದ್ದೆಲ್ಲಾ ಖರೆ ಇರಂಗಿಲ್ಲಾ, ಅಲ್ಲಲ್ಲೇ, ಮುಂಜಾನಿ ಹೊಲಕ ಹ್ವಾದ್ರ ಬರೋದ ಸಂಜೀಕ, ಅಂತದ್ರಾಗ ಉಸಾಬರಿ ಮಾಡಾಕ ಅವರೇನು ನಿನ್ನಂಗ ಪಂಚಾತಿಕಟ್ಟಿ ಹಿಡಿಯೋರಂತ ತಿಳದಿ ಏನು?" ಅವನ ಮಾತನ್ನ ಅಲ್ಲೇ ಖಂಡಿಸಿದ ನಿಂಗಜ್ಜ. "ರಾತ್ರಿನೆ ಹಂದೋಣೇಗ ಹೋಗೊ ತಯಾರಿಯೊಳಗಿದ್ದೋನ್ನ ಪೊಲೀಸ ಕೇಸ ಯಾಕ ಗೊತ್ತಪ್ಪ, ನಾವೆ ನಾಕು ಜನಕುಂತು ಇತ್ಯರ್ಥಮಾಡ್ತೀವಿ ಯಾಕ ಸುಮ್ನೆ ಒಂದೇ ಊರನವರಾಗಿ ವೈಷಮ್ಯ ಬೆಳಸ್ಕೊಂತ ಹೊಕ್ಕೀರಿ, ನಾಳೆ ಕೋರ್ಟು ಕಛೇರಿ ಅಂತ ಅಲಿಯೋದರಿಂದ ಯಾರಿಗೂ ಒಳ್ಳೇದಾಗಂಗಿಲ್ಲಾ, ಕೆಲಸ ಹಾಳು, ದುಡ್ಡುಹಾಳು, ಯಾಕ ಬೇಕು ತಲಿನೋವು ನಾವೆಲ್ಲ ಹೇಳ್ತೀವಿ. ಹಂಗೇನಾರು

ಮುಂದವರದ್ರ ನಾವೆ ಬಂದು ಪೋಲಿಸರಿಗ ಹೇಳಿ ಒಳಗಹಾಕಸ್ತೀವಿ ಅಂತಂದು ತಡದೀವಿ" ಗುಂಡೆಸಾಮಿ ಅವರಿಗೆಲ್ಲಾ ತಿಳಿಸಿಹೇಳಿದ. ಎಲ್ಲರೂ ಹೇಳೊ ಆಟ ಹೇಳಿ ಒಂದು ಹಂತಕ್ಕ ತಂದ್ರು. ಇನ್ನು ಮುಂದೆ ಹಿಂಗಾಗದಂಗ ನೋಡ್ಕೊಳ್ತೀವಿ ಅಂತ ಎಲ್ಲರೂ ಒಪ್ಕೊಂಡಾದ ಮೇಲೆ, ಗೊತ್ತಾನಾಯ್ಕನ ಊರಿಗ ಕಳಿಸಿದ್ರು.

ರಾಗಿ ಒಕ್ಕಲಿ ಸುರು ಆಗಿ ಮುಗಿಯಾಕ ಬಂದಿತ್ತು. ರಾಶಿ ತೂರಾಕಂತ ತಯಾರಿ ನಡಿಬೇಕು, ಕಣ ಬಳಿಯಾಕ ಬರ್ರಿ ಎಲ್ಲಾ ಅಂತ ಗೊಂದಾ ಕರದು ಬಂದಿದ್ದ. ಅಡಗಿ ಮಾಡೋರು ಮಾಡುತ್ತಿದ್ದರು. "ಏನಪ್ಪ ಬಾಜಿರಾಯ, ಎಲ್ಲಿ ನಿನ್ನ ಹೆಂಡತಿ ಬರ್ಲಿಲ್ಲಾ, ಏನ್ಮಾಡ್ತಾಳ ಮನಿಯಾಗ,ಗುಡ್ಡ ಅಗಿಯಾಕ ಬಿಟ್ಟು ಬಂದಿಯೇನೊ, ಏನು ಕೆಲಸ ಮಾಡಿಮಾಡಿ ದಣದು ಬಿಟ್ಟಾಳ ಮನಿಯಾಗ, ಕಾಲಮ್ಯಾಲ ಕಾಲ ಹಾಕ್ಕೊಂಡು ಕುಂತಿರಬೇಕು" ಗೊಂದಾನಾಯ್ಕ ಸಿಟ್ಟಿಂದ ಹೇಳಿದ. ನುಗ್ಗಾ ಮಾತಾಡಾಕ ಹೋಗಲಿಲ್ಲಾ, ಸಗಣಿ ಕಲಸಿ ರಾಡಿ ಸವರತೊಡಗಿದ. ಕೆರಿಯಿಂದ ನೀರತಂದು ಸುರಿಯೋರು ಸುರಿತಿದ್ರು. ದೊಡ್ಡ ಕಣ ಆಗಿದ್ರಿಂದ ನಾಕೈದು ಗಂಟೆವರಿಗ ಸತತವಾಗೆ ನೀರ ಹೊರೋರು, ರಾಡಿಸವರೋರು ಕೆಲಸ ಮಾಡ್ತಾನೆ ಇದ್ರು, ಯಾರೊಬ್ಬರು ತುಟಿಪಿಟಕ್ ಅನ್ನಲಿಲ್ಲಾ. ಗೋರಿಯಿಂದ ತೌಡು ಎಳದ ಎಳದು ರಾಶಿ ಹಾಕ್ತಿದ್ದ ಗೊಂದ, ಎಲ್ಲಾ ಆದಮ್ಯಾಲ ಕೈ ಬಿಸ್ಕೊಂಡ ಬರ್ತಿದ್ದ ನುಗ್ಗಾನ ಹೇಣ್ತಿ ಸುಕ್ಲಿಬಾಯಿನ್ನ ದೂರದಿಂದ ನೋಡಿದ್ದೆ ಗುರಗುಟ್ಟಿದ. "ಇನ್ನೂ ಆಗಲಿಲೇನ್ರಿ ಬಳಿಯೋದು, ಎಷ್ಟೊತ್ತ ಆತು ನೀವು ಬಂದ ಬಳಿತಿರೋದು" ಸಾವುಕಾರ ಬಂದು ಆಳಿಗ ಕೇಳ್ದಂಗ ಕೇಳಿದ್ಲು. ಎಲ್ಲಿತ್ತೊ ಸಿಟ್ಟು, ಬಂದವನೆ, "ಇಲ್ಲಿ ಕೆಲ್ಸಕ ಬಾ ಅಂದ್ರ ಅಲ್ಲೇನ ಕಡಿತ್ತಿದ್ದೆ" ಅಂತ ಹೊಡಿಯಾಕ ಹೋದ. "ಏಯ್, ನೀನು ದೂರದಿಂದಲೇ ಮಾತಾಡು, ನೀನೇನು ನಿನ್ನ ಹೇಣ್ತಿಗ ಹೊಡಿಯಾಕ ಬರೊಹಂಗ ನನ್ನ ಮ್ಯಾಲ ಕೈ ಮಾಡಾಕ ಬರ್ತಿಯಲ್ಲ" ಜೋರಾಗೆ ಬಾಯಿಮಾಡಿದ್ಲು ಸುಕ್ಲಿ. "ನೀನು ವಟವಟಾಂತ ಬಾಯಿ ಜೋರ ಮಾಡಿ ಮಾತಾಡಕ ಹೋಗ ಬೇಡ. ನನ್ನ ತಾವ ನಿನ್ನಾಟ ನಡಿಯಂಗಿಲ್ಲಾ" ಗೊಂದಾ ಬಾಯಿ ಜೋರಮಾಡಿದ. "ನಾ ಏನು ನಿನ್ನ ಹೆಣ್ತಿ ಏನೊ ಮಗನೆ ಏಕವಚನದಿಂದ್ಲೆ ಮಾತಾಡ್ತಿ ಹೇಣ್ತಿಗ ಮಾತಾಡ್ದಂಗೆ, ಅಲ್ನೋಡು, ಕೈಲಾಗದೋನು ಎಲ್ಲಾ ಕೇಳಿಸಿಕೊಂಡ್ರು ಬಾಯಿಯೊಳಗಿಂದ ಒಂದು ಮಾತಾದ್ರು ತಗಿತಾನೇನು" ಗಂಡನ ಕಡೀಗ ನೋಡಿದಳು. ಕೈಗ ಸಿಕ್ಕ ಕಟಗಿ ತಗೊಂಡು ಓಡಿಬಂದ ಗೊಂದ ಬೆನ್ನಿನ ಮ್ಯಾಲ ರಪ್ ಅಂತ ಬಿಗದು, "ಸುಮ್ಮನೆ ಕೇಳ್ತಾರ ಅಂತ ಬಾಯಿ ಹಗರಬಿಟ್ಟು ಮಾತಾಡ್ತೀಯ" ಅಂದವನೆ ಮತ್ತೊಂದ ಬಿಗದ. "ಯವ್ವ ಸತ್ನೆ,

ಎ ಬಿಡಸಬಾರೊ ನಿನ್ನ ಔಸಡಗ, ನೀ ಏನು ಕೈಲಾಗದ ಹೇಡಿ ಏನು? ನಿನ್ನ ಹೆಸರಡಗಿ ಹೋಗಲಿ, ನಿನಗೆ ಒಂದು ಘಳಗಿ ಹಾವು ಕಚ್ಚಿ ಸತ್ತಾರು ಹೋಗಬಾರದ, ನನಗ ಹೊಡಿತಿ ಏನೊ ಹೊಡಿಯೊ ಮಗನೆ ಎಟು ಹೊಡತೀಯ, ನೀನು ಹೊಡಿಬೇಕು ನಾನು ಸಾಯಿಬೇಕು ಅಂತೇಳಿ ಕುಂತಿನಿ ಹೊಡಿಯೋ" ಗೊಂದಾನ ಪಂಚಿ ಹಿಡ್ಕೊಂಡು ಕುಂತ್ಲು. ಮತ್ತೊಂದು ಸಲ ಜಾಡಿಸಿ ಒದ್ದು, "ಬಿಡೆ, ಬಿಡ್ತಿಯಾ ಇಲ್ಲಾ" ಅಂತ ಗದರಿಸಿದ. ರಾಡಿ ಹೊಡಿತ್ತಿದ್ದ ಕಸಬರಗಿ ಬಿಸಾಕಿದ ನುಗ್ಲಾ ಓಡಿಬಂದವನೆ, ಗೊಂದನಾ ಎಳದು ಬಿಸಾಕಿದ, "ಯಾಕೊ ಮಗನೆ ನನ್ನ ಹೇಣ್ತಿಗ ಹೊಡತೀಯ, ನಿನ್ನ ಕೊಂದು ಬಿಡ್ತಿನಿ" ಅಂದವನೆ ಪಕ್ಕದಾಗ ಬಿದ್ದಿದ್ದ ಜಂತಕುಂಟಿ ತಗೊಂಡವನೆ ಮೇಲಕೆತ್ತಿ ಹೊಡಿಯಾಕ ಹೋದ. ಗೊಂದಾ ಎದ್ದವನೆ ಜಂತಕುಂಟಿ ಕಸ್ಕೊಂಡು ಬೆನ್ನಿಗ ದಬದಬ ಹೇರಿದ. ಇಬ್ಬರು ಸಗಣಿರಾಡಿ ಯೊಳಗ ಉಲ್ಡಾಡಿದ್ರು. ಹನುಮ ಅವನಪ್ಪನ ಕರಿಯಾಕ ಓಡಿದ. ಸುತ್ತ ನಿಂತಿದ್ದ ಮಂದಿ ಸಾಯಿಲಿ "ಇವರವ್ವನ, ಭಾರಿ ಸೊಕ್ಕಿನ್ಯಾಗದಾರ, ಯಾವನು ಬಿಡಸಾಕ ಹೊಕ್ಕಾನೊ ಅವನು ಹೊಡ್ತತಿನ್ನಬೇಕು" ಅಂತಾ ಮಾತಾಡ್ಕೊಂಡ್ರು. "ಯಪ್ಪ ಯಾರಾದ್ರು ಬಿಡಸ್ರೋ ನನ್ನ ಗಂಡನ್ನ ಕೊಂದು ಹಾಕ್ತಾನ" ಬಾಯಿ ಬಾಯಿ ಬಡ್ಕೊಂಡು ಅಳತೊಡಗಿದ್ಲು. ಗೊಂದ, ನುಗ್ಲಾನ ಎದಿಮ್ಯಾಲ ಕುತ್ಕೊಂಡು ಗ್ವಾಮಾಳಕ ಕೈಹಾಕಿದ್ದ. "ನಡಿರಲೆ, ಸತ್ರ ನಮ್ಮ ಮ್ಯಾಲ ಬಂದೀತು" ಮಂದಿ ಜಾಗ ಖಾಲಿಮಾಡಿದ್ರು. ಗೊತ್ತಾನಾಯ್ಕ ಒಂದೇ ಉಸುರಿಗೆ ಓಡಿಬಂದವನೆ. "ಏಯ್ ನಿಮ್ಮವ್ವನ ನನ್ನ ಮಕ್ಕಳ್ರ, ರೊಟ್ಟಿ ಹೆಚ್ಚಾಗ್ಯತೇನ್ರೋ ನಾಕು ಬುಲ್ಡಿಜ್ವಾಳ ಬೆಳದಿದ್ದೆ ಏನು ದಿಮಾಕ ಬಂತು ನೊಡ್ರೊ ಇವರವ್ವ ಗೊತ್ತಾನ ಮಕ್ಕಳಿಗಂತ ಜನ ಹೇಳಬೇಕಲ್ಲ" ಗೊತ್ತನಾಯ್ಕ ಇಬ್ಬರನ್ನು ಎಳದು ಬಿಸಾಡಿದ. "ಅಲ್ಲಪ್ಪ ಆ ಹೆಂಗಸು ಒಂದು ತಾಸು ತಡವಾಗಿ ಬಂದ್ಲು, ಇವನ್ದೇನ ಗಂಟುಹೋತು ಕೆಲಸಮಾಡೋರು ಮಾಡ್ತಿದ್ವಿ ಅಷ್ಟಕ್ಕೆ ನನ್ನ ಹೇಣ್ತಿನ ಹಿಡ್ಕೊಂಡು ನನ್ನೆದ್ರಿಗೆ ಹೊಡದ್ರ ಹ್ಯಾಂಗಂತ." ನುಗ್ಲಾ ವರದಿ ಒಪ್ಪಸಿದ. "ತಂದಿತಾಯಿ ಮನಿಯಾಗ ಕಟಗಿ ಹೊತ್ಕೊಂಡು ಮಾರಾಕ ಹೋಗ್ತಿದ್ಲಲ್ಲಾ ಆ ದಿನಗಳನ್ನ ಮರ್ತಬಿಟ್ಟಾಳ ಇಲ್ಲಿಬಂದು, ಯಾರೂ ಹೇಳಾರು ಕೇಳಾರು ಇಲ್ಲಲ್ಲಾ ಜೀವ ಸುಖದ ಪ್ಲುಪ್ಪತ್ತಿಗೆ ಬಯಸಾಕ ಹತ್ಯತಿ, ಪ್ರತಿಯೊಬ್ಬರು ದುಡಿದ್ರೆ ಆಗತ್ತೈತಪ್ಪ, ನೀ ಅಂದಂಗ ಕುಂತೋರು ಕುಂತ್ರೆ, ಆಟ ಆಡೋರು ಆಟ ಆಡಿದ್ರ ಆಯ್ತು ಕೆಲಸ" ಗೊಂದಾ ಸುಕ್ಲಿ ಮಾಡೊ ಕಳ್ಳಾಟ ಅವರಪ್ಪನ ಮುಂದೆ ಹೇಳಿದ. ಗೊತ್ತಾನಾಯ್ಕನಿಗೆ ಸೊಸಿ ಮಾಡೊಕಳ್ಳಾಟ ಯಾವಾಗಲೋ ತಿಳದಿತ್ತು. ಗೊಂದಾ ಸರಿಯಾಗೆ ಪಾಠ ಕಲಿಸಿದ. ಬಾಯಿಸತ್ತ ಹಿರೇಮಗ

ಹೇಣ್ತಿ ಹೇಳ್ದಂಗೆ ಕುಣಿತಾನ. ಈಗಾಗಲೆ ಹತ್ತುಸಲ ಹೊರಗ ಹೋಗಿ ಒಳಗ ಬಂದಾನ, ನಾವು ಮನಿಹಾಳಾಗಿ ಹೊಕೈತಂತ ಅವರಿವರ ಮಾತಕೇಳಿ ಸಾಮಾನೆಲ್ಲಾ ತಗೊಂಡು ಬ್ಯಾರೆ ಹೋಗಿದ್ದೋನ ಕೂಡಿಸಿಕೊಂಡ್ವಿ ಈಗ ಏನುಮಾಡ್ತಾನೊ. "ಮಾವ, ನಮ್ಮದೇನಿದೆ ಒಂದು ಅಕ್ಕಡಿ ಹೊಲಬರ್ವಲ್ಯಾಕೆ ನಮಗೆ ಕೊಟ್ಟ ಬಿಡಬೇಕು. ನಾವು ಮನಿಯೊಳಗ ಇರೊದಿಲ್ಲಾಂದ್ರ ಇರೋದಿಲ್ಲ. ದುಡದ ತಿನ್ನೋರಿಗೇನು ಉದ್ದ ಅಗಲ ಜಗತ್ತು ಐತಿ, ಹೊಕ್ಕೀವಿ ಕಾಫಿ ಸಿಮೀಗ, ದುಡದು ಉಣ್ತೇವಿ" ಖಡಾಖಂಡಿತವಾಗಿ ಹೇಳಿದ್ಲು. ಅಕಿ ಧ್ವನಿಯೊಳಗ ನಿರ್ಧಾರವಿತ್ತು. "ಇಲ್ಲೇನ ನಿಮ್ಮಪ್ಪ ದುಡದ ಇಟ್ಟಾನ, ಹೋಗ, ಹೋಗು... ಕಾಫಿಸೀಮಿಗಾರ ಹೋಗು ಜೋಗಕ್ಕಾರ ದುಡಿಯಾಕ ಹೋಗು. ಯಾ ಮಗ ಬ್ಯಾಡಂತ ನಿಲ್ಲಿಸ್ತಾನ ನಿಮಗ" ತನ್ನ ನಿರ್ಧಾರ ತಿಳಿಸಿದ ಗೊತ್ತನಾಯ್ಕ. ಇಬ್ಬರು ಹಠಮಾರಿಗಳು, ಅಕೀನು ಗಂಡ ಮಾವ ಮೈದುನನ್ನ ನೇರವಾಗೆ ಎದುರಿಸೋ ಹೆಣ್ಣು, ಯಾವನಿಗೂ ಹೆದರಲೇ ಇಲ್ಲ, ತನಗ ತಿಳಿದಿದ್ದನ್ನ ಮಾಡಿದ್ಲು.

ಕುಲ್ಡ ಡೆಂಗನಾಯ್ಕ ಹಗರಿ ಎಸ್ಟೇಟಿಗೆ ಜನರನ ಒಯ್ಯಾಕ ತಯಾರಿನಡೆಸಿದ್ದ. ಸುಕ್ಲಿ, ಯಾರದೊ ಹತ್ರದಿಂದ ಐದುಗಿದ್ನ ಜ್ವಾಳ, ಮೆಣಸಿನ ಪುಡಿ ಅವಳಪ್ಪ ಕೊಟ್ಟಿದ್ದ ದೊಡ್ಡ ಪೆಟ್ಟಿಗೆ ತುಂಬ ರೆಷನ್‌ಸಾಮಾಮಾನು ಬಟ್ಟೆ ತುರುಕಿ, ಹಗ್ಗಕಟ್ಟಿ ಚೆಲುವಾಪುರದ ಮಟ ಇಬ್ಬರು ಗಂಡ ಹೇಣ್ತಿ ಅರ್ಧ ಹೊತ್ಕೊಂಡು ಬಂದ್ರು. ಅವರ ಹಿಂದೆ ಎಲ್ಲಾ ಮಕ್ಕಳು ಹೊಂಟಿದ್ರು. "ಬೇಡ, ನನ್ನಮಾತು ಕೇಳೆ, ಸುಮ್ಮನಾಗು ನಿನಗ ಗೊತ್ತಾಗಂಗಿಲ್ಲಾ ಯಾಕಸುಮ್ಮನೆ ಹಾಳಾಗ್ತಿಯ". ಸುಕ್ಲಿ ಅತ್ತಿ ಬಾಣವ್ವ ಪರಿಪರಿಯಾಗಿ ಹೇಳಿದ್ಲು. ಸುಕ್ಲಿ ಕೇಳಲಿಲ್ಲಾ. ಸೋನ್ಯಾನ ಹೆಂಡತಿ ಜೋಪಿ, ಚೊಕ್ಕನ ಹೆಂಡತಿ ಸಾಮಣಿ ಕುಂದ್ರಿಸಿ ಸರಿಯಾಗೆ ತಲಿತಿಕ್ಕಿದ್ರು. "ಅಯ್ಯೋ, ರಂಡಿ, ಹೇಲು ಉಚ್ಚಿ ಬಳದು ನಿನ್ನ ಮಕ್ಕಳಂಗಿರೊ ಮೈದನರನ್ನ ಸಾಕ್ತಿದ್ದೀಯ, ನಾಳೆ ನೋಡಿದಾಳ ನಮ್ಮ ಅತ್ತಿಗಿ ಅಂತಂದು ಒಂದು ಅರ್ಧ ಎಕ್ಕರಿ ಹೊಲ ಏನಾರ ಹೆಚ್ಚಗಿ ಕೊಟ್ಟಾರೇನೆ" ಅಂದ್ಲು ಜೋಪಿ. "ಯಾರು ಬಿಡಂಗಿಲ್ಲವ್ವ ನೋಡಿದ್ರ ನೀ ನೋಡಿಯಾ, ನಮ್ಮವ್ವ ಬದುಕಿದ್ಲು ಅಂತಂದು ಹಿಂದಕ್ಕ ತಿರಗ್ತಾರ" ಸಾಮಣಿ ಚುಚ್ಚಿದ್ಲು. ಸುಕ್ಲಿಗ ಒಂದು ರೀತಿಂದ ಸರಿ ಅನಿಸಿಬಿಡ್ತು. ಅವತ್ತೆ ಕೆಲಸಮಾಡದೆ ನಾಟಕ ಮಾಡಬೇಕು ಅನಿಸಿ ಸೋಮಾರಿಯಾಗಿ ಕೆಲಸ ಮಾಡ್ದಂಗೆ ಅಡ್ಡಾಡಿದ್ಲು. ಹತ್ತು ಸರ್ತಿಹೊರಗ ಹೋಗಿ ತಾನೆ ಮಾಂಸದ ಸಾರಿನ ಪಾತ್ರಿಹಿಡದು ತನ್ನ ಐದಮಕ್ಕಳಿಗ ಒಂದೊಂದ ತುಂಡ ಮಾಸ ಉದರಿಸಿ ಗಂಡಗ ಒಂದೆರಡ ತುಂಡಹಾಕಿ ಉಳದಿದ್ದನ್ನ ತಟ್ಟಿತುಂಬ ಹಾಕ್ಕೊಂಡು ತಿಂದು ಬಾಯಿ ರುಚಿ ಕಟ್ಟಿತ್ತು. ಇಡೀವಾರ

ಕೂಲಿಮಾಡಿದ್ದ ರೊಕ್ಕ ಸಿಕ್ಕಮ್ಯಾಲ ಹಂಪೂರ ಸಂತಿಗ ಹೋಗಿ ಮಾಂಸತರಾಕ ಆಗದಿದ್ರೂ ಹೊಟ್ಟಿಯೊಳಗಿನ ಕುರಿ ಕಳ್ಳು, ಪಚ್ಚಿ, ಪುಪ್ಪಸ, ಜಠರ, ದೊಡ್ಡಕಳ್ಳು ತಂದು, ಸರಿಯಾಗಿ ಕೋಯ್ದು ಬೀಸಿನೀರ ಹಾಕಿ ಚೆನ್ನಾಗಿ ತೊಳದು ಉಪ್ಪಹಾಕಿ ಅರ್ಧಗಂಟೆ ಇಟ್ಟು ಪಾತ್ರಿಗ ಒಂದ ತೊಟಕು ಒಳ್ಳೆಣ್ಣೆ ಹನಕಿಸಿ ಚೊಂಯಂತ ವಗ್ಗರಣೆಕೊಟ್ಟು ಕಳ್ಳು. ಪಚ್ಚಿನ ಸರಿಯಾಗಿ ಬೇಸಿದ ಮ್ಯಾಲ ತುಂಡಹೆಪ್ಪಗಟ್ಟಿದ ಕುರಿ ರಕ್ತಾನ ಒಂದು ಹಿಡಿ ಹಿಟ್ಟಿಗ ಕಲಿಸಿ ಕುದಿಯೊಸಾರಿಗ ಹಾಕಿ ಮತ್ತೊಂದಿಷ್ಟೊತ್ತು ಕುದಸಿ ತಿಂದ ನ್ಯಾಲಗಿ ರುಚಿಯನ್ನ ಬಯಸ್ತಿತ್ತು. ದೊಡ್ಡ ಕುಟುಂಬದಾಗ ಯಾರಿಗೆ ಒಳ್ಳೆದು ಸಿಕ್ಕೀತು. ಒಂದುಪಾಲ ಮಾಂಸತಗೊಂಡ್ರ ಮುದಿಯಗ ಒಂದು ಎಲಬು, ಇಪ್ಪತ್ತೈದು ಮೂವತ್ತ ಮಂದಿಗ ಒಂದೊಂದು ತುಂಡು ಬರ್ತಿರಲಿಲ್ಲಾ. ಕಡೀಗ ಊಟಮಾಡೊ ಹೆಂಗಸರಿಗ ಸಾರು ಸಿಗ್ತಿರಲಿಲ್ಲಾ, ಅದ್ರಾಗೆ ಮತ್ತೊಂದಿಷ್ಟು ಬಿಸಿನೀರು ಸುರ್ಕೊಂಡು ಊಟದ ಶಾಸ್ತ್ರ ಮುಗಿಸ್ತಿದ್ರು. ಇಲ್ಲಿಕ್ರ ಮನಿಯೊಳಗಿಂದ ಕೆಂಪಿಂಡಿತಂದು ಉಂಡೆಳೋರು. ಅದನ್ನೆಲ್ಲಾ ಕಂಡಿದ್ದ ಸುಕ್ಲಿ ಇದೊಳ್ಳೆ ಅವಕಾಶ ಇದನ್ನ ಬಿಡಬಾರದು ಅಂತ ನಿಶ್ಚಯಿಸಿದ್ಲು. ಕಾಫಿಸೀಮಿಗ ಹ್ಯಾದ್ರ ಬೀಜಹರದು, ಹಾಜರಿಮೇಲೆ ಹರದ್ರ ಕೈಕಾಸ ಸಿಗತೈತಿ, ಐದು ಗಿದ್ನ ಜ್ವಾಳ ಒಂದ ಹತ್ತುಕೇಜಿ, ಅಕ್ಕಿಕಣಕಿ ಕೊಂಡ್ಕೊಂಡ್ರ ಒಂದು ಹದಿನೈದುವಾರ ಹೆಂಗಾರು ಕಳಿಬಹುದು ಆ ಮ್ಯಾಲ ಮತ್ತೇನಾರ ಮಾಡಬಹುದು ಅನ್ನೊ ಆಲೋಚನೆ ಬಂತು. ವಾರಕೊಮ್ಮೆ ಕೊಪ್ಪದ ಸಂತಿ, ಸಂತಿಯೊಳಗ ಬೂತಾಯಿಮೀನು, ಒಣಬಾಂಗಡ, ಸಾರಾಯಿ, ಹೆಂಡ ಎಲ್ಲಾ ಸಿಗತೈತಿ, ಇಲ್ಲೇನೈತಿ ಅನ್ನೊ ಭಾವನೆ ಬಂದಿದ್ದೆ. ಮನಿ ನರಕ ಅನಿಸಿತು.

ಸುಕ್ಲಿ ಅಕಿಗಂಡ ನುಗ್ಲ ಹಂಪಾಪುರಕ ಬಂದಾಗ ಹೊಟ್ಟಿಹಸದಿತ್ತು ಮೇಸ್ತ್ರಿ ಕುಲ್ಡ ಡೆಂಗನಾಯ್ಕ ದೊಡ್ಡ ಬಸಸ್ಟಾಂಡಿನೊಳಗೆ ಬಿಟ್ಟವನೆ ಕುಡ್ಕೊಂಡು ಬರಾಕ ಓಡಿದ. "ಅಕ್ಕ ನೀವೆಲ್ಲಾ ಗಂಟಬಿಚ್ಚಿ ರೊಟ್ಟಿತಗೀರಿ, ಕಾಕಾ ಹೋಟಲಿಂದ ಸೇರ್ವಾತರ್ತೀವಿ ನಾವು" ಎರಡು ಚರಗಿ ತಗೊಂಡು ನುಗ್ಲನ, ಪಾಂಡೇವನಾಯ್ಕನ ಎಳ್ಕಂಡು ಸಾರಾಯಿ ಅಂಗಡಿ ಕಡೀಗ ಹೊಂಟ. "ಏನೈತೋ ನಮ್ಮ ಜೀವನ್ದಾಗ ತಿಂದುಂಡು ಮಜಾಮಾಡಬೇಕು ನುಗ್ಲ ನೀ ತಿಳ್ಕೊಂಡಿರಬಹುದು ಮನಿತುಂಬ ಹತ್ತುಜನ ಅಣ್ಣತಮ್ಮಂದಿರು, ತಂಗಿಯರು ಅದಾರು ನನಗಂತ, ನಾಳೆ ಯಾರು ನೋಡಂಗಿಲ್ಲ. ದುಡಿ, ನಿಂಗೂವೆ ನಾಕ ಗಂಡು, ಎಲ್ಡು ಹೆಣ್ಣ ಅದಾವ ದುಡದು ನಿನ್ನ ತಾಬಾದಾಗ ಇಟ್ಕೊ. ನಾಳೆ ಯಾವುದಕ್ಕಾರು ಬಂದೀತು. ಒಂದ ಹತ್ತ ಸಂತಿ ಮಾಡಿದ್ರ ಒಳ್ಳೆದುಡ್ಡಮಾಡ್ಕೊಂತಿಯ ವಾಪಾಸ ಊರಿಗ

ಹೊದಿಂದೆ ಯಾರಾದರೊಬ್ಬರು ಕರ್‍ಕೊಂಡು ಹೋಗಿ ಮತ್ತೆ ನಿಮ್ಮನಿಯಾಗ ಸೇರಿಸ್ತಾರ ಇನ್ನೊಂದೇನಪ್ಪ ಅಂದ್ರೆ, ನಿಮ್ಮವ್ವ ಅದಾಳಲ್ಲ ನಮ್ಮವ್ವ ನನ್ನ ತಾಯಿ ದೇವರು ಕಣಯ್ಯ, ಬಿತ್ತಿದ್ರ ಹಂಗೆ ಹುಟ್ಕೊಂತಾಳ ನೋಡು" ಹೆಂಡ ಸರಾಯಿ ಕಾಕಟೇಲ ತಲಿಗಾ ಏರ್ತಿದ್ದಂಗೆ ಮಾತುಗಳು ಜೋರಾದ್ವು ಮೇಸ್ತ್ರಿವು. ನುಗ್ಲಾ ಒಂದ ಬಾಟಲಹೆಂಡ ಖಾಲಿಮಾಡಿ, ಒಂದುಪಾವು ಸರಾಯಿ ಕೊಂಡಿದ್ದ. ಒಂದು ಗುಟಕ ಹಾಕ್ದವನೆ "ನಮ್ಮವ್ವ ಹೇಳಿದ್ಲು, ಮಗ ಯಾರು ಇಲ್ಲ ಆಟುದೂರ ನಿನಗೆ ಹಕ್ಕಿಹಂಗೆ ಯಾಕ ಆ ಕಾಫಿಸೀಮಿಗ ಹೊಕ್ಕೀಯ ನೀ ಬೇಕಾದ್ರ ಬ್ಯಾರೆ ಹೋಗು ನನ್ನ ಕಣ್ಣಮುಂದಿರು" ತಾಯಿ ತನ್ನ ಸಹಜ ಪ್ರೀತಿಯನ್ನ ತೋಡಿಕೊಂಡಿದ್ಲು. ನೆನಪಾಗಿದ್ದೆ ನುಗ್ಲ ಹೆಂಡದಮಲಿನಲ್ಲಿ ಜೋರಾಗಿ ಅಳತೊಡಗಿದ. ಮುಖದಮ್ಯಾಲ ಟವೇಲ ಹಾಕ್ಕೊಂಡು. "ಅವ್ವ ನಾ ಏನ ಮಾಡ್ಲಿ" ಅಳು ಜೋರಾತು. ಅಲ್ಲೆ ಕುಂತ್ರ ನುಗ್ಲ ಅಳೋದು ನಿಲ್ಸಗಿಲ್ಲಾಂತ, "ಏಳ್ರೋ ನಿಮ್ಮಾಪ್ರ, ಸೈನ್‌ಬಸ್ಸು ಗಡಾನೆ ಬರತೈತಿ ಹೋಗಾನೇಳ್ರಿ" ಮೇಸ್ತ್ರಿ ಕುಲ್ಡಡೆಂಗನಾಯ್ಕ ಬಾಂಗಡಿಮೀನಿನ ಮುಳ್ಳನ ಕಚಕಚ ಜಗದು ನುಂಗಿದ. ಅವನು ಮುಳ್ಳು ಜಗದು ನುಂಗೋದನ್ನೆ ನೋಡ್ತಿದ್ದ ಕಾಕಾಪುರದ ಕೂಲಿ ಆಳುಗಳು "ಇವ್ನವ್ವನ, ಇವನೇನು ನಾಯಿನೋ ಹ್ಯಾಂಗಂತ, ಹಸಿಮುಳ್ಳಗಳನ್ನ ಜಗದು ನುಂಗಿದ" ಆಶ್ಚರ್ಯದಿಂದ ಮೇಸ್ತ್ರಿನ ಒಂದು ಗಂಟೆಮಟ ನೋಡಿದ್ರು. "ನಡಿರೋ, ಕಾಕಾಹೊಟೇಲಿಂದ ಸೇರ್‍ವಾ ತಗೊಂಡಹೋಗಬೇಕು ಹೆಂಗಸರು ದಾರಿ ಕಾಯ್ತಿರಬಹುದು" ನುಗ್ಲ ಅನ್ಕೊಂತ್ಲೆ ಮುಂದನಡದ. ರಸ್ತಿಪಕ್ಕದಾಗಿದ್ದ ಕೇರಳದ ಮುಸಲ್ಮಾನರ ಹೊಟೇಲೊಂದರಿಂದ ಹತ್ತು ರೂಪಾಯಿದು ಮಟನ್ ಸೇರ್‍ವತಗೊಂಡು ಹೋಗಿ ಕಡಕಲು ರೊಟ್ಟಿಗಳನ್ನ ಮುಳಗಿಸಿಟ್ಟು ತಿಂದರಾತು ಅಂತ, ಹಿಡಕೊಂಡಿದ ಚೆರಗಿಯೊಳಗ ಹತ್ತುರೂಪಾಯಿ ಸೇರ್‍ವಾತಗೊಂಡ.

ಇಡಿ ಬಸ್ಟ್ಯಾಂಡಿನ್ಯಾಗ ನಾನಾ ನಮೂನಿ ಮಂದಿ ಸೇರಿತ್ತು. ಮಂದಿ ಅಡ್ಡಾಡಿ ಕಸದ ರಾಶಿಬಿದ್ದಿತ್ತು. ರದ್ದಿಪೇಪರು, ಪ್ಲಾಸ್ಟಿಕ್‌ರಾಶಿ, ಹುಚ್ಚರು, ಕಳ್ಳರು, ಭಿಕ್ಷುಕರು, ನೂರಾಎಂಟು ನಮೂನಿ ರೋಗ ಬಂದು ಮನಿಬಿಟ್ಟಬಂದೋರು ಕುಂದ್ರಾಕ ಹಾಕಿರೊ ಬೆಂಚಿನ ಕೆಳಗೆ, ಅವುಗಳ ಮ್ಯಾಲೆ ಮಕ್ಕೊಂಡಿದ್ರು, ಕುಂತ್ಕೊಳಾಕು ಮನಸೊಪ್ಪದ ಗಲೀಜು ಜಾಗದಾಗ ಕಾಫಿಸೀಮಿಗ ಹೊಂಟಿದ್ದ ಮಂದಿ ಬುತ್ತಿಗಂಟು ಬಿಚ್ಕೊಂಡ್ರು. ಎಲಿಅಡಕಿ ತಿಂದು ಅಲ್ಲೆ ಉಗಳ್ತಿದ್ರು, ರೋಗಿಗಳು ಪಕ್ಕದಾಗೆ ಎಲ್ಲಾನು ಮಾಡ್ತಿದ್ರು, ಅದ್ಯಾವುದರ ಪರಿವೆ ಇಲ್ದಂಗೆ ರೊಟ್ಟಿ ಕೈಯಾಗ ಹಿಡ್ಕೊಂಡು ಖಾರಪುಡಿ, ಸೇರ್‍ವಾಕಲಿಸಿ ಐದಾರು ರೊಟ್ಟಿತಿಂದು ಪಕ್ಕದಾಗ ಇದ್ದ ನಲ್ಲಿ ನೀರು ಕುಡ್ಕೊಂಡು ಸೈನ್ ಬಸ್ಬರೋದನ್ನೆ

ಕಾಯ್ಕೊಂಡು ಕಾಫಿಸೀಮಿ ಮಾತು, ತಾವು ಬಿಟ್ಟಬಂದ ಊರಸುದ್ದಿ ಮಾತಾಡ್ಕೊಳಾಕಹತ್ರು. ಕುಲ್ಡಮೇಸ್ತ್ರಿ ಹನ್ನೆಲ್ಡಗಂಟಿಗ ಸರಿಯಾಗಿ ಅವಸರವಾಗೆ ಓಡಿಬಂದ, "ಎಳ್ರೀ, ಬಸ್ ಬಂದೈತಿ, ಸೀಟಸಿಗೋದಿಲ್ಲ" ಅಂದವನೆ ಕೈಗ ಸಿಕ್ಕ ಸಾಮಾನಗಳನ್ನ ಎತ್ಕೊಂಡು ಓಡಿದ. ನುಗ್ಲಾ ಪೆಟಾರಿ ಹೊತ್ಕೊಂಡ ಸುಕ್ಲಿ ಎರಡು ಕೂಸುಗಳನ್ನ ಕಂಕಳಲ್ಲಿಟ್ಕೊಂಡು ಒಂದು ಗಂಟನ್ನ ತಲಿಮ್ಯಾಲ ಹೊತ್ಕಂಡ್ಲು. ನೂಕುನುಗ್ಗಲಾಗ ಜುಕ್ಕಜುಲ್ಮಿಯಿಂದ ಮುಂದಕ ಸಾಗಿದ್ಲು. ನುಗ್ಲ ಮೇಲಹತ್ತಿ ಪೆಟಾರಿ ಇಟ್ಟು ಹಗ್ಗದಿಂದ ಕಟ್ಟಿದ. ಸುಕ್ಲಿ ಒಂದೊಂದಾಗೆ ಕೂಸಗಳನ್ನ ಎತ್ತೆತ್ತಿ ಒಳಗನೂಕಿದ್ಲು. ಒಂದು ಸೀಟಿನ ಮೇಲೆ ಮೂರ್‍ನಾಕ ಹುಡ್ರನ್ನ ಕುಂದ್ರಿಸಿಕೊಂಡು ಸೀಟಿನ ಕೆಳಗ ಎರಡನ್ನ ದೂಕಿ, ಇದ್ದ ಜಾಗದಾಗೆ ಕಷ್ಟಪಟ್ಟು ಕುಂತು ಮಧ್ಯಾಹ್ನದವರೆಗ ಪ್ರಯಾಣಿಸಬೇಕಾದ್ದನ ನೆನಪಮಾಡ್ಕೊಂಡು ಹಳಹಳಿಸಿದರು.

ಬಸ್ಸು ಜೈಪುರ ದಾಟಿ ಕೊಪ್ಪಕ ಬರೋದ್ರಾಗ ಒಂದುಗಂಟಿಯಾಗಿತ್ತು. ಅಲ್ಲಿಂದ ಮೂರುವರಿ ಮೈಲು ಹಕ್ಲಿಖಾನ, "ನೀವೆಲ್ಲಾ ಇರ್ರಿ ನಾನು ನುಗ್ಲಾ ಹೋಗಿ ಸಾವುಕಾರರಿಗ ಹೇಳಿ ಜೀಪ ತರ್‍ತಿವಿ" ಮೇಸ್ತ್ರಿ ನುಗ್ಲನ್ನ ಕರ್‍ಕೊಂಡು ಹಕ್ಲಿ ಎಸ್ಟೇಟಿಗ ನಡದ. ಕೊಂಗಾಟಿ ಮೇಸ್ತ್ರಿ "ಏನ್ ಮೇಸ್ತ್ರಿ ಎಷ್ಟುಮಂದಿ ಕರ್‍ಕೊಂಡ ಬಂದಿಯಾ" ಕೇಳಿದ, "ಒಂದು ಇಪ್ಪತ್ತೈದು ಸೀಟದಾವ ಮೇಸ್ತ್ರಿ, ಆಂಟಿನಿ ಮ್ಯಾನೇಜರ ಅದಾರ ಜೀಪ ಒಯ್ಯಬೇಕು ಆಳಗಳನ್ನ ಕರ್‍ಕೊಂಬರಾಕ" ಅವನ ಪ್ರತಿಕ್ರಿಯೆಗೂ ಕಾಯದೆ, "ಆಂಟಿನಿ ಸಾರ್ ಆಂಟಿನಿ ಸಾರ್" ಅಂತಾ ಕೂಗ್ತಾ ಒಳಗ ನುಗ್ಗಿದ. "ಏನ್ಲೆ ಮೇಸ್ತ್ರಿ, ಏನುಸಮಾಚಾರ, ಬಂದ್ರ ನಮ್ಮ ಆಳು, " "ಹೂಂ ಸಾ, ಜೀಪ್‌ಕಳಸ್ರೀ ಲಗೇಜೈತೆ" ಅಂತ ತಲಿಕೆರ್‍ಕೊಂಡ. ಹಕ್ಲಿ ಎಸ್ಟೇಟು ಸುಮಾರ ಐದಾರು ಗುಡ್ಡಗಳಿಂದ ಸುತ್ತಲ್ಪಟ್ಟಿತ್ತು, ಕಾಫಿಬೀಜ ಹರಿಯೋರು ಗುಡ್ಡದ ಮ್ಯಾಲ ಹತ್ತೆ ಹರಿಬೇಕಿತ್ತು. ಅಕಸ್ಮಾತ ಕಾಲಜಾರಿ ಬಿದ್ರೋ ಮುಗಿತವರ ಕತಿ, ಸೀದಾ ಪ್ರಪಾತಕ್ಕ ಉರಳೋದೆ. ಬ್ರಿಟೀಷರು ಹೊಗೋಕಾಲಕ್ಕೆ ಕ್ರಿಸ್ತಾನ ಧರ್ಮಕ್ಕ ಸೇರಿದ್ದ ಜೋಸೆಫ್ ಅನ್ನೊ ಅಡಗಿಯವನಿಗ ಕೊಟ್ಟುಹೋಗಿದ್ರಂತೆ. ಅವಾಗ ಬರಿ ಮುವತ್ತೆಕ್ಕರೆ ಇದ್ದಿದ್ದತ್ವಾಟನ ಜೋಸೆಫ್ ಚೂರುಪಾರು ಇಂಗ್ಲಿಷ್ ಕಲ್ಕೊಂಡು ಹದಿನೈದಸಾವರ ಎಕ್ಕರೆಯಷ್ಟು ಕಾಡನ್ನ ಅತಿಕ್ರಮಿಸಿಕೊಂಡು ತನ್ನದೆ ಆದ ದೊಡ್ಡದೊಂದು ಸಾಮ್ರಾಜ್ಯವನ್ನೆ ಸ್ಥಾಪಿಸಿಕೊಂಡಿದ್ದ. ಕಾಫಿತ್ವಾಟಕ ಹೋಗೊ ಕೂಲಿಗಳಿಗ ಕೊಡೊ ಹಿಂಸೆ ಮತ್ಯಾರಿಗೂ ಕೊಡ್ತಿರಲಿಲ್ಲಾ. ಮುಂಜಾನೆ ಏಳುಗಂಟಿಗೆ ಸರಿಯಾಗಿ ಹಾಜರಿಗ ನಿಲ್ಲಬೇಕು, ಐದು ನಿಮಿಷ ಯಾಕೆ ಒಂದು ನಿಮಿಷ ಲೇಟಾದ್ರು ತಾಯಿ-ಹೆಂಡ್ರು ಅಂತ ಬಾಯಿಗ ಬಂದಂಗೆ ಬೋಯಿಸಿಕೋ ಬೇಕು. ಇಲ್ಲಾಂದ್ರೆ ಕೆಲಸ ಬಿಟ್ಟ ಮನಿಯಾಗಿರಬೇಕು.

ಮೇಸ್ತ್ರಿ ಮ್ಯಾಲ ರೈಟ, ರೈಟನ ಮ್ಯಾಲ ಮ್ಯಾನೇಜರ ಎಲ್ಲರೂ ಬಾಯಿಹರಕರೆ, ಜೀತಕ್ಕ ಇರೋಹಂಗ ನಡೆಸಿಕೊಳ್ತಿದ್ರು. ಕಾಫಿ ಸೀಮಿ ಸಾವುಕಾರ್ರುಗಳೆ ಧಿಮಾಕಿನೋರು. ಜಮೀನ್ದಾರಕಿ ಅಮಲಿನ್ಯಾಗೆ ತಾವು ಮಾಡಿದ್ದೆ ಕಾರಬಾರು ಅಂತ ತಿಳ್ಕೊಂಡು ಜನರನ್ನ ಸುಲಿಗೆ ಮಾಡ್ತಿದ್ರು. ಸರಿಯಾಗಿ ಕೂಲಿ ಕೊಡದ ಮುಂಜಾನಿಂದ ಸಂಜಿಮಟಾನು ಕಷ್ಟದ ಕೆಲಸ ಮಾಡಿಸಿಕೊಳ್ತಿದ್ರು.

ನುಗ್ಲನ ಆರುಮಕ್ಕಳು ಕಾಫಿತ್ವಾಟದ ಚಳಿಯಾಗ ಪದರಿಗುಟ್ಟಿ ಹೋಗಿದ್ರು. ಒಬ್ಬನ ಮೂಗಿನ್ಯಾಗಿಂದ ಸಿಂಬಳ ನದಿಹಂಗೆ ಹರಿತಿತ್ತು. ಶೀತ ಹೆಚ್ಚಾಗಿ ಒಬ್ಬನ ಕಿವಿಯೊಡೆದು ಸೋರ್ತಿತ್ತು. ಮತ್ತೊಬ್ಬನ ಕಾಲುಕೈಗಳು ಊದ್ಕೊಂಡಿದ್ವು ಮತ್ತೊಂದು ಹುಡುಗಿ ಸರಿಯಾಗಿ ಊಟಮಾಡ್ದೆ ಹಾಸಗಿ ಹಿಡದಿತ್ತು. ಅವೆಲ್ಲದರ ನಡುವೆ ಗಂಡಹೇಣ್ತಿ ಕೆಲ್ಸಮಾಡಬೇಕು. ಹಿರೇ ಹುಡುಗಿ ಇದ್ದಿದ್ರಾಗೆ ಹುಷಾರಿದ್ಲು. ಅಕೀನ ಬಿಟ್ಟು ಇಬ್ಬರು ನಡಕ ಚೀಲಕಟ್ಟಿ ಬೀಜಹರಿಯಾಕ ಹೋಗ್ತಿದ್ರು. ವಾರದ ದಿನ ಗಂಡನಿಗಿಂತ ಮದ್ಲು ಹೇಣ್ತಿ ಆಮ್ಯಾಲಗಂಡ ಹುಡ್ರನ್ನ ಲೆಕ್ಕಿಸದೆ ಸಂತಿಗ ನಡದುಬಿಡೋರು. ಅವನ ಕೈಗ ಬಂದಿದ್ದು ಅವನು, ಅಕೀ ಕೈಗ ಬಂದಿದ್ದು ಅಕಿ ಮನಸಾನಿಚ್ಚೆ ವ್ಯವಹಾರ ಮಾಡ್ತಾ. ಹೆಂಡಕುಡ್ದು ಬೂತಾಯಿ ಮೀನು ತಿನ್ನೋದು ಮಾಡಿದ್ರು. ಭೂತಾಯಿ ಮೀನು ಅದೇನ ಮಾಡ್ತೊ ಕಾಲು ಬಾತ್ಕೊಂಡಿದ್ದ ಹುಡುಗ ರಾತ್ರಿ ಊಟ ಮಾಡ್ದೋನು ಮುಂಜಾನಿ ಮ್ಯಾಕ ಎಳಲೇ ಇಲ್ಲಾ. ನುಗ್ಲ, ಸುಕ್ಲಿ, ಲಬ್ ಲಬ್ ಬಾಯಿ ಬಡ್ಕೊಂಡು ಅತ್ರು. ಮಗನ್ನ ಒಯ್ದು ತ್ವಾಟದ ಹೊರಗ ಮಣ್ಣು ಮಾಡಿ ಯಾವ ರೀತಿಯ ನೋವನ್ನ ಇಟ್ಕೊಳ್ಳದೆ ತಮ್ಮ ಪಾಡಿಗ ತಾವು ಕೆಲ್ಸಕ ಸೇರಿಕೊಂಡ್ರು. ನುಗ್ಲಮಾತ್ರ ಅವಾಗವಾಗ ಊರಾಗ ತನ್ನವ್ವ ಅಪ್ಪ ಬಡ್ಕೊಂಡ್ರು ಅವರ ಮನಸು ನೋಯಿಸದ್ಕೆ ನನ್ನ ಮಗ ತೀರಕೊಂಡ ಅಂದ್ಕೊಂತ ಅವರಿಗ ಮಕ ತೋರಿಸೋದಾದ್ರು ಹ್ಯಾಂಗಂತ ಚಿಂತೆ ಮಾಡತೊಡಗಿದ. ಸತ್ತೋವು ಶಿವನಿಗೆ ಉಳದೋವ ನಮಗೆ ಅನ್ನೊ ನಿರ್ಧಾರಕ್ಕ ಬಂದಿದ್ದ ಸುಕ್ಲಿ, ಹೆಣ್ಣು ಹುಲಿ ಮರಿಹಾಕಿದ ತಕ್ಷಣ ಮರಿಯನ್ನ ತಿನ್ನೊದಿಲ್ವೆ. ಅವನ ಹಣೆಬಾರದಾಗ ಬರದಿದ್ದೆ ಆಟುದಿನ, ನಾಯಾಕ ಕಾಳಜಿಮಾಡಬೇಕಂತ, ಸತ್ತ ಮಗನ ಚಿಂತಿಬಿಟ್ಟು ದುಡಿಯ ತೊಡಗಿದ್ಲು. ಕಾಕಾಪುರದಾಗ ತನ್ನ ಅತ್ತಿಮಾವಗ ಸುದ್ಧಿ ತಿಳಿತಂದ್ರ ನನ್ನ ಜೀವಸಹಿತ ಹುಗಿತಾರ ಅನಿಸದೆ ಇರಲಿಲ್ಲಾ. ಮನಿತುಂಬ ಹತ್ತಹನ್ನೊಂದು ಮಕ್ಕಳಿದ್ರು ಹೂವಿನಂಗೆ ನೋಡ್ಕೊಂಡು ಬಂದಿದ್ದ ಬಾಣವ್ವಗೆ ಮೊಮ್ಮಕ್ಕಳಂದ್ರ ಪಂಚಪ್ರಾಣ. ಮೊನ್ನೆ ಸತ್ತ ಗಜ್ಜುಗನ ಮ್ಯಾಲ ಮುದುಕಿಗೆ ಬಹಳ ಪ್ರೀತಿ ಇತ್ತು. ತಾಕಲಾಟ

ಕಕ್ಕುಲಾತಿಯೊಳಗೆ ಉಗಾದಿ ಬಂದಿದ್ದೆ ಗೊತ್ತಾಗಲಿಲ್ಲಾ. ಹೊಳಿ ಹಬ್ಬಕ್ಕೆ ಸಿಕ್ಕಂಗ ಕುಡದು, ಕುರಿಕೋಯ್ದು ಪಾಲುಹಾಕಿ ಉಂಡಾದ ಮೇಲೆ ಬಂದೇ ಬಿಟ್ಟಿತು ಉಗಾದಿ. ಮಂದಿ ಕುಲ್ಡಾಮೇಸ್ತ್ರಿನ ಹಿಡ್ಕೊಂಡವರೆ ತಮ್ಮ ತಮ್ಮ ಲೆಕ್ಕಚುಕ್ತ ಮಾಡಿಸಿಕೊಂಡಿದ್ರು. ನುಗ್ಲ ಮಾತ್ರ ವಾಪಾಸ ಹೋಗೋದೊ ಇಲ್ಲ ಪಟ್ಟಿಮ್ಯಾಲ ಸೆರ್ಕೊಂಡು ಉಳಿಯೋದು ಅನ್ನೊ ವಿಚಾರದಲ್ಲಿದ್ದ. ಇಲ್ಲೆ ಇದ್ರೆ ಮಳಿಗಾಲದ ಝುಡಿಯೊಳಗೆ ಎಲ್ಲಾ ಮಕ್ಕಳು ಉದುರಿ ಹೊಕ್ಕಾವ ಅನ್ನೋದು ಖಾತ್ರಿಯಾಗಿದ್ದೆ ಜಾಗ ಖಾಲಿಮಾಡಕ ನೋಡಿದ.

ವೊಮ್ಮಗ ತೀರ್ಕೊಂಡ ಸುದ್ಧಿ ತಿಳಿದ ಗೊತ್ತನಾಯ್ಕ ಬಾಣವ್ವ ಜೋರಾಗೆ ಅಳತೊಡಗಿದರು. "ತಿಂದುಬಿಟ್ಟೆಯಲ್ಲೆ ರಂಡಿ ನನಸೌತಿ ಒಬ್ಬ ಮಗನ್ನ ನನಗೆ ಗೊತ್ತಿತ್ತೇ ನಮ್ಮವ್ವ, ಈ ರಂಡಿ ಏನಾದ್ರು ಒಂದು ಅನಾಹುತ ಮಾಡ್ಕೊಂಡು ಬಂದೆ ಬರ್‍ತಾಳಂತ ನನಗ ಗೊತ್ತಿತ್ತು. ಅದಕ್ಕೆ ತಿಳಿಸಿ ಹೇಳ್ದೆ ನನಮಾತ ಕೇಳ್ಲಿಲ್ಲಾ" ಬಾರಾಡಿ ಅಳತೊಡಗಿದ್ಲು. ಇಡೀಮನಿಗ ಮನಿನೆ ಕಿಚೋ ಅಂತ ಅಳ್ತಿದ್ರು. ಯಾರ‍್ಯಾರೊ ನುಗ್ಲನ್ನ ಬೋಯ್ಕು, ಮತ್ತಿನ್ಯಾರೊ ಸುಕ್ಲಿನ ಬೋಯ್ತಿದ್ರು. ವಾತಾವರಣ ತಿಳಿಯಾಗೊ ಮಟಾನು ಇಬ್ರು ತುಟಿಪಿಟಕನ್ನಲಿಲ್ಲಾ. ಹನ್ಮಂತದೇವರ ಗುಡಿಹತ್ರನೆ ಪೆಟಾರಿ ಇಟ್ಕೊಂಡು ಕುಂತ್ರು. ಬಾಣವ್ವನೆ ಗಂಡನಿಗ ಗೊತ್ತಾಗದಂಗೆ ರೊಟ್ಟಿ-ಪಲ್ಯ ತಂದು ಕೊಡ್ತಿದ್ಲು.

ಗೊಂದಾಗ ಯಾವುದೋ ಆಫಿಸಿನೊಳಗ ಕ್ಲಾರ್ಕ್ ನೌಕರಿಸಿಕ್ಕಿದ್ಕ ಅವನ ಒಂಬತ್ತನೆಯ ತಮ್ಮ ಕುಮಾರಿಯನ್ನ "ಎಲ್ಲರೂ ಹಾಳಾಗಿ ಹೋದ್ರು ಇವ ಒಬ್ಬನಾರು ಕಲೀಲಿ" ಅಂತ ಊರ ಸಾಲಿಗ ಸೇರ್‍ಸಿದ. ಊರಿಗ ಬರ್‍ತಿದ್ದ ಚೆಲುವಾಪುರದ ಗುಂಡಾಜೋಷಿ ಮೇಷ್ಟ್ರು ವಾರಕ ಒಂದು ದಿನ ಬಂದ್ರೆ ಆರುದಿನ ಪಂಚಾತಿಮೆಂಬರಗಳ ಕೂಟಾಗ ಹಂಪಾಪುರ, ಹನುಮಾಪುರ ಅಡ್ಡಾಡ್ತಿದ್ದ. ಅದಕ್ಕೆ ಬ್ಯಾಸತ್ತು ಕಾಕಾಪುರದ ಜಕಣು, ಅವನ ತಮ್ಮ ಸೀಂಗೇಶಿ, ಅವನ ಚಿಕ್ಕಪ್ಪನ ಮಗ ಕುದ್ರಿ ಊರಸಾಲಿ ಬಿಟ್ಟ ಚೆಲುವಾಪುರದ ಹೈಯರ್ ಪ್ರೇಮರಿಸಾಲಿಗ ಸೇರ್ಕೊಂಡಿದ್ರು, ಚೆಲುವಾಪುರಕ್ಕ ಕುಮಾರಿನೂ ಸೇರಿಸಬೇಕಂತ ಗೊತ್ತಾನಾಯ್ಕ ಯೋಚನೆ ಮಾಡ್ತಿರುವಾಗ್ಲೆ ಗೊಂದಾಗ ಚೆಲುವಾಪುರದಾಗ ಪಂಚಾತಿ ಆಫೀಸು ಸೂಪರಿಡೆಂಟ್ ಸಾಕನಾಯ್ಕನ ಮಗಳ ಕೊಡಾಕಂತ ನಿರ್ಧಾರ ಆಗಿತ್ತು. ಸಾಕನಾಯ್ಕನ ಹೆಂತ್ತಿ ಜಾನಿಬಾಯಿ ಅದೇ ಸಾಲಿಯೊಳಗಿದದ್ಕ ಪಾಡಾಗಿ ಕಲಿತಾನ ಕುಮಾರಿ ಅಂತ ಹಾಕಿದ. ಗೊಂದಾನ ಮದ್ವಿಯಾದಿಂದ ಹನುಮಾಪುರಕ್ಕೆ ತನ್ನ ತಮ್ಮನ್ನ ಕರ್ಕೊಂಡು ಹ್ವಾದ.

ಗೊತ್ತಾನಾಯ್ಕ ವರ್ಷಕ ಒಂದು ಹೊಲ, ಒಬ್ಬ ಹುಡುಗ - ಹುಡುಗಿಯಂತ

ಎಲ್ಲರದೂ ಮದ್ವಿಮಾಡಿಸಿದ. ಉಳದ ನಾಕ ಮಂದಿ ಆಗೋ ಮಟಾನು ಯಾವಾನಿಗೂ ಪೈಸದಷ್ಟು ಹೊಲ ಕೊಡಂಗಿಲ್ಲ ಅಂತ ಸ್ಪಷ್ಟಪಡಿಸಿದ. ಗೊಂದಾನ ಮದ್ವಿ ದಿನ ತಂದಿತಾಯಿ ಕೈಮಾಲ ಕೈಇಟ್ಟು ಎಲ್ಲರ ಮದ್ವಿಯಾಗೊ ಮಟಾನು ತಾವ್ಯಾರು ಬ್ಯಾರೆ ಹೊಗಂಗಿಲ್ಲಾಂತ ಪ್ರಮಾಣ ಮಾಡಿದ್ರು. ಅವನ ಪಾಡಿಗ ಅವನು ಹನುಮಪುರದಾಗ ಬಾಡಗಿ ಮನಿ ತಗೊಂಡು ವಾಸಮಾಡ್ತಿದ್ದ. ಅವನ ಹೇಣ್ತಿ ರುಕ್ಕಿಗು ಅವನಿಗು ಯಾವುದ್ಯಾವದೋ ವಿಷಯಕ್ಕೆ ಜಗಳ ಆಗ್ತಾನೆ ಇರ್ತಿತ್ತು. ಅವನನ್ನ ಹದ್ದುಬಸ್ತಿನಲ್ಲಿ ಇಡಾಕಂತ ಪಿ.ಯು.ಸಿ. ಮುಗಿಸಿದ ರುಕ್ಕಿ ಪಣತೊಟ್ರು. ಅಕೀ ನಾ ಹೇಳ್ದಂಗ ಕೇಳಾಕಂತ ಬಿ.ಎ. ಓದಿದ್ದ ಗೊಂದ ಸಾಧಿಸ್ತಿದ್ದ. ಇಬ್ಬರು ತಾಳಮೇಳಿಲ್ಲದೆ ಗುದ್ದಾಡಿ ಅಂವ ಆಫೀಸಿಗೆ ಹೊಕ್ಕಿದ್ದ ಅಕಿ ಅಡಗಿ ಮಾಡ್ದಂಗೆ ಮಕ್ಕೊಂಡು ಬಿಡ್ತಿದ್ಲು. ಕುಮಾರಿ ಅಕ್ಕಪಕ್ಕದ ಮಂದಿ ಉಣ್ಣಾಕ ಕರಿತಾರೆನಂತ ಹಸ್ಕೊಂಡು ಮಕ ಈಟೆ ಮಾಡ್ಕೊಂಡು ಕಾಯ್ತಿದ್ದ. ಒಂದೊಂದು ಸಲ ಪಕ್ಕದ ಮನಿ ಪಾರಮ್ಮ ಹುಡುಗನ್ನ ಕರದು ಉಣ್ಣಾಕ ಇಕ್ತಿದ್ಲು, ಒಂದೊಂದು ದಿನ ಮುಂಜಾನಿಂದ ಗೊಂದ ರುಕ್ಕಿ ಒಂದಾಗೊ ಮಟಾನು ಉಪಾಸ ಇರ್ತಿದ್ದ. ಈ ಸುದ್ದಿ ತಿಳಿದ ಕುಮಾರಿಯ ಸೋದರಮಾವ ಚೆಮಾನಾಯ್ಕ ಕರ್‍ಕೊಂಡು ಹೋಗಿ ಅವನ ಹೋಟಲಿನ್ಯಾಗ ಮಾಂಸದ ಸಾರು, ಚಪಾತಿ ಕೊಡ್ತಿದ್ದ, ಇಲ್ಲಿಕ್ರ ಪಕ್ಕದ ಅಂಗಡಿಯಿಂದ ಏನಾರ ತಿನ್ನಾಕ ಕೊಡಸ್ತಿದ್ದ.

ಒಂದುದಿನ ಗೊಂದಾ ಅವನ ಹೇಣ್ತಿ ರುಕ್ಕಿಗ ಕರದು, "ಹುಡುಗನ ಕೈಗೆ ಇಪ್ಪತ್ತ ರೂಪಾಯಿಕೊಟ್ಟು ಅಂಗಡಿಗ ಕಳಿಸಿ ಜ್ವಾಳ ಅಕ್ಕಿ ತರಸು" ಅಂತಾ ಹೇಳಿದ. ರುಕ್ಕಿ, "ಕುಮಾರಿ ಬಾರೊ, ಇಕ್ಕ ಇಪ್ಪತ್ರುಪಾಯಿ, ಮೂರುಕೇಜಿ ಜ್ವಾಳ. ಎಲ್ಡುಮೂರು ಕೇಜಿ ಅಕ್ಕಿ ತಗೊಂಡು ಬಾ, ಉಳದ ರೊಕ್ಕದಾಗ ಮೈದಾ ಮತ್ತು ಬೆಲ್ಲಾ ತಾ" ಅಂತಾ ಇಪ್ಪತ್ತರ ನೋಟು ಕೊಟ್ಟಳು. ಕುಮಾರಿ ಹನಕನಳ್ಳಿ ಅಂಗಡಿಗ ಹೋಗಿ ಸೋವಿರೇಟಿನ ಜ್ವಾಳ, ಅಕ್ಕಿ, ಮೈದಾ, ಬೆಲ್ಲ ತಗೊಂಡು ಉಳದ ರೊಕ್ಕದಾಗ ಸಂತಿ ಪ್ಯಾಟಿಯೊಳಗಿದ್ದ ಡಬ್ಬ ಅಂಗಡಿಯಲ್ಲಿ ಮಂಡಕ್ಕಿ, ಮಿರ್ಚಿ ತಿಂದು ಬಾಯಿ ಒರಿಸಿಕೊಂಡು ಮನಿಗ ಹ್ವಾದ. ನುಸಿತಿಂದ ಜ್ವಾಳ ಮೂಲಿಯೊಳಗಿಟ್ಟು, ಒಯ್ದಿದ್ದ ಮೈದಾಹಿಟ್ಟು ಬೆಲ್ಲಾ ತಕ್ಕೊಂಡು ಒಳಗ ಹೋಗಾಕ ಮುಂಚೆ, ರುಕ್ಕಿ "ಎ ಕುಮಾರಿ, ಹೋಗೊ ನಿನ್ನ ಮಾಮ ಚೆಮಾನ ಹೊಟೇಲ ಕಡೀಗ ಹೋಗು, ಒಂದುಗಂಟಿ ಬಿಟ್ಟು ಬಾ, ನಿಮ್ಮಣ್ಣನ ಮುಂದ ಬೆಲ್ಲಾ ಮೈದಾ ತಂದಿದ್ದು ಹೇಳಾಕ ಹೋಗಬೇಡಾ" ಅಂತಾ ಎಚ್ಚರಿಸಿದ್ಲು. ಅವನು ಹೊರಗ


ದಾಟ್ತಿದ್ದಂಗೆ ಬಾಗಲ ಮುಚ್ಕೊಂಡು ಮೈದಾಹಿಟ್ಟಿಂದ ಗಾರ್ಗಿ ಮಾಡ್ಕೊಂಡು ಇಡಿ ಅರ್ಧಕೇಜಿ ಹಿಟ್ಟಿನ ಗಾರ್ಗಿಯನ್ನ ಒಂದು ಉಳಿಸದಂಗೆ ಒಲಿಮುಂದ ಕುತ್ಕೊಂಡು ಮಾಡ್ತಾ ಮಾಡ್ತಾನೆ ತಿಂತಾಹೋದ್ನು. ಕುಮಾರಿ ಅಕಿ ಹೇಳಿದಂಗೆ ಒಂದು ತಾಸಿನಮಟ ಅವನ ಮಾವನ ಹೊಟೇಲಿನಾಗ ಕುತ್ಕೊಂಡು ಮಂದಿ ಮಾಂಸ ತಿನ್ನೋದನ್ನ ನೋಡ್ತಾ ಬಾಯಿಯೊಳಗ ಬರೊ ನೀರನ್ನ ಗುಳುಂ ಅಂತ ನುಂಗಿ, "ಸಿಕ್ಕಬಿಟ್ರೆ, ಹೊಟ್ಟೆತುಂಬ ಎಂತ ಪಾಡು ತಿಂದು ಬಿಟ್ಟೇನಲ್ಲ" ಅಂತಾ ಆಶಿಮಾಡ್ಕೊಂತ ಕುಂತಿದ್ದ. ಚೆಮಾನಾಯ್ಕ ಬಾಣಿಯ ಕೊನಿ ತಮ್ಮ ಬಾಣವ್ವನ ಅವ್ವ ಚೆಮಾ ನಾಕು ತಿಂಗಳೋನು ಇದ್ದಾಗ್ಲೆ ಸತ್ತು ಹೋಗಿದ್ಲು. ಆಕಳ ಹಾಲು ಕುಡಿಸಿ ಹೆಂಗೊ ಮಾಡಿ ಅವನನ್ನ ಮೂಕನಾಯ್ಕ ಸಾಕಿದ್ದ. ಅವಾಗಾಗ್ಲೆ ಬಾಣವ್ವನ ಮದ್ವಿಯಾಗಿತ್ತು. ಅನಾಥನಾಗೆ ಬೆಳ್ಕೊಂಡ ಚೆಮಾ, ಪೊಲಿಯೋ ತಾಗಿ ಒಂದು ಕಾಲ ಕುಂಟನಾಗಿ ಬೆಳದ. ಅವನನ್ನ ಕುಂಟ ಅಂತ ಮಂದಿ ಕರಿಯೋದ್ಕ ಸಿಟ್ಟಾಗಿ ಹತ್ತವರ್ಷದವನಿದ್ದಾಗ್ಲೆ ತಾಡಪುರ ಬಿಟ್ಟು ಹನುಮಾಪುರದ ಫಯಾಜ ಮಾಸದ ಹೊಟೇಲಿನ ಮಾಲಿಕ ಶಬ್ಬೀರಸಾಬಿ ಹತ್ರ ಚಪಾತಿ, ಮಾಂಸದ ಸಾರು ಮಾಡಾಕ ಸೆರ್ಕೊಂಡ. ಅದೇ ಕೊನೆ ತಾಡಪುರಕ್ಕೆ ಅಂವ ಹೋಗಿದ್ದೆ ಅವನಪ್ಪ ಮೂಕನಾಯ್ಕ ತೀರ್ಕೊಂಡಾಗ. ದುಡದಿದ್ದನ್ನೆಲ್ಲಾ ಕುಡಿಯಾಕ, ಷೋಕಿ ಮಾಡಾಕ ಸುರಿತಿದ್ದ. ವರ್ಷಕ್ಕೆ ಒಂದೆರಡುಸಾರಿ ಕಾಕಾಪುರಕ್ಕೆ ಹೋಗೆ ಹೋಗುತ್ತಿದ್ದ. ದುಡ್ಡು ಇರೋವರಿಗೂ ಅವನ ಅಕ್ಕ ಬಾಣಿಗೆ ಒಂದೆರಡುಬಾಟಲು ಹೆಂಡ, ಅವನ ಭಾವ ಗೊತ್ತನಿಗೆ ಎರಡು ಬಾಟಲು-ಒಂದ ಪಾಕೀಟು ಸಾರಾಯಿ ಕುಡಿಸಿ, ತಾನು ಮುಕ್ಕಾರೆ ಕುಡದು, "ಏ ಮಾವ, ಏನೋ ನಿನ್ನ ಮಗನಿಗೆ ನಾನು ಕೂಳು ಹಾಕಿದೆ, ನೀ ನನಗ ಏನ್‌ಮಾಡ್ದೆ" ಅಂತಾ ಹಚ್ಕೊಂಡು ಬಿಡ್ತಿದ್ದ. "ನಿಂದು ಭಾರಿ ಆತೊ ಹುಡುಗ ಊಟಮಾಡು ರೊಟ್ಟಿ ಸಾರು ತಣ್ಣಗ ಆಗಾಕ ಹತ್ಯತಿ. ಬೆಳಗ್ಗೆ ಮಾತಾಡನಂತೆ ಸುಮ್ನೆ ಊಟಮಾಡು" ಅಂತಾ ಸಮಜಾಯಿಸೋದಕ್ಕೆ ನೋಡುತ್ತಿದ್ದ. ಕುಂಟಚೆಮಾ, ಮೀಟ್ಕೊಂತ್ಲೆ, "ಏ ಮಗನೆ ಸುಮ್ಮನಿರು ಅನ್ನೋದ್ಕೆ ನೀ ಯಾರೋ, ನಾ ಮಾತಾಡ್ತೀನಿನೋಡು ಏನ್ಮಾಡ್ತಿಯ" ಅಂತಾ ಎಡವಟನಂಗೆ ಬಾಯಿ ಜೋರಮಾಡುತ್ತಿದ್ದ. ಹಿಂಗೇ ಕುಂಟಚೆಮಾ ಯಾವಾಗ ಬಂದ್ರು ಏನಾರ ಒಂದು ಎಡವಟ್ಟು ಮಾಡ್ಕೊಂಡೆ ಹೋಗುತ್ತಿದ್ದ. ಮತ್ತೆ ಅದೆಲ್ಲ ಮರ್ತು ಒಂದವರ್ಷಕ ಒಂದು ಸರ್ತಿ ಅಕ್ಕನ್ನ ನೋಡಾಕ ಇಸ್ತ್ರಿಮಾಡಿದ ಅಂಗಿ ಮಕಮಲ್ಲ ಪಂಜಿ ಉಟ್ಕೊಂಡು ಖರಾಪಿಗೆ ಎಣ್ಣೆ ಹಾಕ್ಕೊಂಡು ನೀಟಾಗೆ ಕಾಕಾಪುರಕ್ಕೆ ಬರ್ತಿದ್ದ. ಗೊತ್ತನಾಯ್ಕನ ಕೊನಿ ಮಗಳು, ಪಾಂಗೋಶಿಯನ್ನಾರು ಕೊಟ್ಟು, ಮದ್ವಿ ಮಾಡ್ಯಾರನ್ನೋ ಭ್ರಮೆಯೊಳಗೆ ಬದುಕಿದ್ದ,

ಕೊಡೊದಿಲ್ಲಾಂತ ಗೊತ್ತಾದಿಂದ ಕುಂಟನಾದ ನನಗೆ ಹೆಣ್ಣು ಯಾರು ಕೊಟ್ಟಾರಂತ ಕೇಳಾಕ ಹೋಗದೆ ಹೋಟ್ಲೆ ತನ್ನ ಸರ್ವಸ್ವ ಅಂದ್ಕೊಂಡು ಬಿಟ್ಟ. ತಾಡಪುರದಾಗ ಇದ್ದ ಐದೆಕರೆ ಜಮೀನಿನ ಸಂಬಂಧ ಅವನ ತಮ್ಮ ಕಲ್ಲು ಬಡದಾಡ್ತಿದ್ದ ಹೊರತು ಅವನು ನಮ್ಮಂಗೆ ಮನಿಮಾಡ್ಕೊಳ್ಳಿ ಸಂಸಾರ ಮಾಡ್ಲಿ ಅಂತಂದು ಯಾರೊಬ್ಬರು ಯೋಚನೆ ಮಾಡಲೇಇಲ್ಲ. ಹುಟ್ಟಿನಾಕು ದಿನದಾಗ ತಾಯಿ ಕಳ್ಕೊಂಡಿದ್ದ. ಅವನಪ್ಪ ಅಡಗಿ ಮಾಡಿಹಾಕಾಕಂತ ಮತ್ತೊಬ್ಬಾಕೀನ ಮದ್ವಿಯಾದ. ಅವನಪ್ಪ ಚೆಮಾಗೆ ಸಹಾಯ ಮಾಡಲೇ ಇಲ್ಲ ನಡಕ್ಕೆ ಕೈಬಿಟ್ಟು ಹ್ವಾದ. ಅಣ್ಣಂದಿರಿಗೇನು ಆಗಬೇಕು. "ಚೆಮಾಗ ಮದ್ವಿಮಾಡದಿದ್ರೆ ನಮಗೆ ಲಾಭ, ಅವನ ಐದು ಎಕ್ಕರಿ ನಮ್ಮ ಕಡೀಗ ಉಳಿತೈತಿ ಮದ್ವಿ ಮಾಡಿದ್ವಿ ಅಂದ್ರೆ ಅವನಿಗೆ ಮಕ್ಕಳು ಹೆಂಡತಿ ಆದ್ರೆ ನಮಗೆ ತೊಂದರೆ" ಅಂತಾ ಮಾತಾಡ್ಕೊಳ್ತಿದ್ನ ಕೇಳಿಸಿಕೊಂಡ ಚೆಮಾನಾಯ್ಕ ಅವತ್ತಿಂದ ಮತ್ತೆಂದೆಂದು ತಾಡಪುರದ ಕಡೀಗ ತಲಿಹಾಕಿ ಮಲಗಲಿಲ್ಲಾ.

"ಕುಮಾರಿ ಏನ್ ಮಾಡ್ತಿಯಾ ಚೆಮ ಕೇಳಿದ." "ಏನಿಲ್ಲ ಮಾವ ರುಕ್ಕಿ ನನ್ನ ಕುಟಾಗ ಹಿಟ್ಟು ಬೆಲ್ಲ ತರ್ಸೊಕೊಂಡು ನನಗ ಈ ಕಡೀಗ ಕಳಿಸಿ ಏನೊ ಮಾಡ್ಕೊಂಡು ತಿಂತಾಳ" ಕುಮಾರಿ ನಡದದ್ದನ್ನ ಹೇಳಿದ. "ಹಿಂಗೊ ವಿಷಯ ಆ ಹೆಂಗಸನ್ನ ನೋಡಿಯೇ ಅಂದ್ಕೊಂಡಿದ್ದೆ ಒಂದ ನಮೂನಿ ಒಂಟಿ ಇದ್ದಂಗ ಅದಾಳ ಅವನಿಗ ಗೊತ್ತಿಲ್ಲಾ ಹೇಣ್ತಿ ಸೆರಗು ಹಿಡ್ಕೊಂಡು ಅಡ್ಡಾಡೋನಿಗೆ" ಚೆಮಾ ರುಕ್ಕಿ ಕುರಿತು ಹೇಳಿದ. ಒಬ್ಬಾಕಿನೆ ಪ್ಯಾಟಿಯೊಳಗ ಯಾರ್ಯಾರೊ ಗಂಡಸರ ಕುಟಾಗ ಅಡ್ಡಾಡೋದು ಒಂದೆಲ್ಡ ಸಲ ಅವನ ಹೊಟೇಲಗು ಬಂದಿದ್ದನ್ನ ಕಂಡಿದ್ದ. ತಲೆ ಹಾಳಾಗಿರಬೇಕು ಅಂತ ಸುಮ್ಮನಾಗಿದ್ದ. ಕುಮಾರಿ ಮನಿಗ ಹೋದಾಗ ಅವನಣ್ಣ ಅವನಿಗಾಗೆ ಕಾಯ್ತಿದ್ದ "ಎಲ್ಲಿಗ ಹೋಗಿದ್ದೆ ಬಾಜಿರಾಯ" ಕೇಳಿದ ಗೊಂದಾ, "ಜ್ವಾಳ ಎಷ್ಟುರೂಪಾಯಿದು ತಂದಿಯ" ಎರಡನೇ ಪ್ರಶ್ನೆ "ನಾಕ ಕೇಜಿ ತಂದೀನಿ" ಅಷ್ಟೇ ಸ್ಪಷ್ಟ ಉತ್ತರ. "ಹ್ಯಾಂಗ ಕೇಜಿ" ಮತ್ತೆ ಕೇಳಿದ. "ಒಂದೂ ವರಿ ರೂಪಾಯಿಗ ಒಂದಕೇಜಿ ಹಾಕಿರಾಕು" ಕುಮಾರಿ ಉತ್ತರಿಸಿದ. "ಹೋಗು ಹೋಗಿ ವಾಪಾಸ್ಸ್ ಕೊಟ್ಟಬಾ ಜ್ವಾಳ ಸರಿಯಿಲ್ಲ" ಹೊರಗಡೆ ನೋಡ್ತಿದ್ದ ಕುಮಾರಿಗೆ ಪೇಚಿಗೆ ಇಟ್ಕೊಂಡಿತ್ತು. ಒಂದಿಷ್ಟು ರೊಕ್ಕ ತಗೊಂಡೋಗಿ ಮಂಡಕ್ಕಿ ಮೆಣಸಿನಕಾಯಿ ತಿಂದಿದ್ದ, ಒಂದಿಷ್ಟು ದುಡ್ಡಿಂದ ಹಿಟ್ಟು ಬೆಲ್ಲ ಖರೀದಿ ಮಾಡಿದ್ದ. ಲೆಕ್ಕಕೇಳಿದ್ರ ಎಲ್ಲಿಂದ ತರ್ಲಿ? ಯೋಚನೆ ಮಾಡ್ತಾ ಬಾಗಲಿಗ ಓರಗಿ ಕೊಂಡುನಿಂತ "ನಿನಗೆ ಹೇಳ್ತಾ ಅದೀನಿ ಜ್ವಾಳ ಎತ್ತಿ ಹೊರಗ ಬಿಸಾಕೊ ಮದ್ಲು ಒಯ್ದು ಕೊಟ್ಟಬಾ ಇಲ್ಲಾಂದ್ರ ನಿನ್ನ ಫಜೀತಿ

ಏನಾಗತೈತಿ ಅನ್ನೋದ ನೋಡ್ತಾ ಇರು" ಗಟ್ಟಿಯಾಗೆ ಒದರಿದ. ಕುಮಾರಿ ಗಡಗಡ ನಡುಗಿ ಹೋದ. ಜೋಳ ಅಕ್ಕಿ ವಾಪಾಸ ತಂದು ಹನಕನಳ್ಳಿಯೋರ ಅಂಗಡಿ ಮುಂದೆ ನಿಂತ. ಎರಡುತಾಸ ಆದ್ರುನುವೆ ಅವನೊಗಿನ ತಾಕಲಾಟ ಕಮ್ಮಿ ಯಾಗಲಿಲ್ಲಾ, ಮನಿಗ ಹ್ವಾದ್ರ ಒದಿ ಬೀಳ್ತಾವ ಅಂತ ಸುಮಾರು ಹೊತ್ತ ನಿಂತ. ಅವನ ಕ್ಲಾಸ ಹುಡುಗಿ ತೆಳ್ಳಗೆ ಬೆಳ್ಳಗೆ ಇರೋ ಪ್ರೀತಿ ಅನ್ನಾಕಿ ಅವನ್ನ ನೋಡಿ ಒಮ್ಮೆ ಹಲ್ಲ ಕಿರದ್ಲು, ಅವನು ವಿಚಿತ್ರವಾಗೆ ಪ್ರತಿಕ್ರಯಿಸಿ, ಆದದ್ದಾಗಲಿ ಮನಿಗ ಹೋಗಾನ ಅಂತ ಅಲ್ಲೆ ಆರೇರ ಗಲ್ಲಿಯೊಳಗಿದ್ದ ಅವನಣ್ಣನ ಬಾಡಗಿ ಮನಿಗ ಹೊಂಟ. "ಅಂಗಡಿ ಬಾಗಲುಹಾಕ್ಯಾರ" ಹೆಗಲಮೇಲಿನ ಚೀಲ ಇಳಿಸಿದ. "ನನ್ನ ಮುಂದೆ ಸುಳ್ಳ ಬೊಗಳ್ತಿ ಏನೊ" ಹಿಡ್ಕೊಂಡು ನಾಕು ಬಾರಿಸಿದ. "ನಾನೇನು ಮಾಡಿಲ್ಲಣ್ಣ ರುಕ್ಕೀನೆ ಬೆಲ್ಲ ಮೈದಾ ತರಿಸಿದ್ಲು ಅದಕ್ಕೆ ಕಮ್ಮಿರೇಟಿನ ಜ್ವಾಳ ತಂದೆ" ನಿಜ ಹೇಳಿದ. ಒಲಿಯಾಗ ಕಟ್ಟಿಗೆ ಚಾಚಿ ಅನ್ನಕಿಟ್ಟಿದ್ದ ರುಕ್ಕಿಗ ಸಿಟ್ಟನ್ನೋದು ಬೆಂಕಿಯಂಗ ಹತ್ಕೊಂಡಿದ್ದೆ. "ಸುಳ್ಳ ಬಗಳ್ತಿಏನೊ ಇಟದಿ ಬೇವರ್ಸಿ" ಕೈಯಾಗಿದ್ದ ಬೆಂಕಿ ಹತ್ತಿರೊ ಹೊಳಕಟ್ಟಿಗಿ ಯಿಂದಲೆ ಕೆನ್ನೆ ಸುಟ್ಟಬಿಟ್ಲು. ಮೂರು ಇಂಚು ಚರ್ಮ ಉದ್ದಕ ಹಂಗೆ ಸುಟ್ಟು ಹೊರಗ ಬಂತು. ಉರಿತಾಳಲಾರದೆ ಕುಮಾರಿ ಲಬಲಬ ಬಾಯಿ ಬಡ್ಕೊಂಡ ಅವನಣ್ಣ ಗೊಂದಾ ತಣ್ಣಗಾದ, ಹೇಣ್ತಿಮಾಡೊ ಸಣ್ಣತನಕ್ಕೆ ತನ್ನ ತಮ್ಮ ಬಲಿಯಾಗ್ತಿರೋದನ್ನ ಗಮನಿಸಲೇ ಇಲ್ಲಾ. ಮುಂದ ಅವನಿಗೊಂದು ಹೆಣ್ಣ ಕೂಸ ಹುಟ್ತು. ಕುಮಾರಿ ವಿಷಯ ಇಡಿ ಊರಿಂದೂರಿಗೆ ತಿಳಿತು. ಮಕ್ಕಳಂದ್ರ ಒಂಚೂರೂ ಝುಳತಾಕ ದಂಗೆ ಸಾಕಿದ್ದ ಗೊತ್ತ-ಬಾಣವ್ವಗ ಯಾಕೊ ಸರಿ ಅನಿಸಲಿಲ್ಲಾ. ಕುಮಾರಿನ ತಗೊಂಡೋಗಿ ಅವರೂರಿನ ಹುಡುಗರಿದ್ದ ಹಾಸ್ಟೇಲಿಗೆ ಸೇರಿಸಿದ್ರು. ಗೊಂದಾ ಹನುಮಾಪುರದಾಗೆ ಸ್ವಂತದ ಮನಿಕಟ್ಟಿದ. ಕುಮಾರಿ ದೊಡ್ಡೊನಾಗಿ ಪಿ.ಯು.ಸಿ. ಫೇಲಾದ. ಅವನೇನೊ ಡಾಕ್ಟರ ಆಗಬೇಕಂದು ಕೊಂಡಿದ್ದ, ಮನಿಯಾಗ ದುಡ್ಡಕೊಡೊರಿಲ್ಲ ಹುರಿದುಂಬಿಸೋರಿಲ್ಲದಕ್ಕೆ ಫೇಲಾದ. ಕಡೆ ಹುಡುಗ ಚೆನ್ನಿಂಗ ಎಸ್ಸಲ್ಸಿಯೊಳಗ ಹದನೈದು ಸಲ ದಂಡಯಾತ್ರೆ ಮುಗಿಸಿ ಊರಾಗ ಕೆಲ್ಸಮಾಡಾಕ ಆಗದೆ ಓಡಿಹೋದ. ಕುಮಾರಿ ಮಾತ್ರ ಪ್ರಯತ್ನ ಮಾಡಿ ಪಿ.ಯು.ಸಿ. ಮುಗಿಸಿ ಬಿ.ಎ. ಮಾಡಿ ಎಂ.ಎ. ಮಟ ಓದಿದ. ಓಡಿ ಹೋಗಿದ್ದ ಅವನ ತಮ್ಮ ಎಲ್ಲೆಲ್ಲೊ ಸುತ್ತಾಡಿ ಅವನಪ್ಪನ ಐದಾರು ಸಾವಿರ ರೂಪಾಯಿ ಯಾರ್‍ಯಾರಿಗೊ ತಿನ್ನಿಸಿ ಎಲ್ಲೊ ಒಂದತ್ರ ಕೆಲ್ಸಕಿದ್ನೋನು ಹೇಳ್ದಕೇಳ್ದೆ ರಾತ್ರೋರಾತ್ರಿ ಓಡಿಬಂದು ಊರು ಸೇರ್‍ಕೊಂಡ. ಯಾರದೋ ಸಹಾಯದಿಂದ ಇಪ್ಪತ್ತನೆ ಛಾನ್ಸಿಗೆ ಪಾಸೂ ಆದ.

ಗೊತ್ತಾನಾಯ್ಕಗ ಜವಾಬ್ದಾರಿ ಬಿಟ್ಟಕೊಡೊ ವಯಸ್ಸೇನು ಆಗಿರಲಿಲ್ಲ. ಆದರೂ ಅವನ ಮಗ ಪಿಣುಗ ಜವಾಬ್ದಾರಿ ಕೊಟ್ಟು ನೋಡಿದ. ಆ ವರ್ಷ ಬೆಳಿ ಚೆನ್ನಾಗಿ ಬಂತು. ಪಿಣು ಯಾವ್ಯಾವದೊ ವ್ಯವಹಾರ ಮಾಡಿ ದುಡ್ಡ ಖರ್ಚಮಾಡಿದ್ದು ಗೊತ್ತನಿಗ ಸರಿಬರಲಿಲ್ಲಾ. ಪಿಣುನ ಹೇಣ್ತಿ ದೊಡ್ಡವನಾದ ನುಗ್ಲಾನ ಹೇಣ್ತಿ ಸುಕ್ಲಿ ಇಬ್ಬರು ಒಂದ ಕಡಿಗಾಗಿ ಉಳಿದ, ಹನಮ, ಜಂಬನ ಹೆಂಡ್ರಿಗ ಸೇರದೆ ಮನಿಯಾಗ ದಿನ ಜಗಳ ಸುರು ಆತು. ವಾರ ಒಪತ್ತಿಗೆ ಮನಿಗಂತ ಬರ್ತಿದ್ದ ಗೊಂದಾಗ ಪಿಣುನ ವ್ಯವಹಾರ ಹಿಡಿಸಲಿಲ್ಲಾ. ಇಲ್ಲಾ ತಾನು ಓದಿದೋನು ವ್ಯವಹಾರ ಮಾಡೋನು ಏನು ಬರದ ಪೀಣು ಅಂತ ಕೀಳಿರಮೆ ಉಂಟಾತೊ ಗೊತ್ತಾನಾಯ್ಕನಿಗೆ ಬಾಟಲ ಹೆಂಡ ಕುಡಿಸಿ ಮನಿಯಾಗ ನಡಿತಿರೊ ಸುದ್ಧಿಗಳನ್ನ ಬಿಟ್ಟು ಬಿಡದೆ ಒಪ್ಪಿಸತೊಡಗಿದ. ಬಾಣವ್ವಗ ಗೊತ್ತಾನಾಯ್ಕ ಒಂದು ಬಾಟಲಿ ಹೆಂಡ ತರೋದ್ರಾಗ ಮನಿಯೊಳಗಿಂದ ಕೈಗ ಏನು ಸಿಗತ್ತೈತೊ ಅದನೆಲ್ಲಾ ಮಾರಿ ಎರಡು ಬಾಟಲಿ ಕುಡುದಿರುತ್ತಿದ್ದು. ಮೂರನೆ ಬಾಟಲಿ ಬಿದ್ದತಕ್ಷಣ ಬಾಯಿಗ ಬಂದಂಗೆ ಜಗಳ ಆರಂಭ ಆಗತಿತ್ತು. ಮನಿಮಂದಿಯೆಲ್ಲಾ ರೋಸಿಹೋಗಿದ್ರು. ಕಮಾರಿ, ಚೆನ್ನಿಂಗ ಅಪರೂಪಕ್ಕೊಮ್ಮೆ ಮನಿಗ ಬಂದ್ರ ತಲಿ ಹಾಳಾಗಿ ಹೊಕ್ಕಿತ್ತು. "ಎನೋ ಹುಡುಗ ಇದು, ಇವ್ವವ್ವನ, ದಿನಾನು ಹಿಂಗ ಗಲಾಟಿ ಮಾಡ್ತಾರ, ಕುಡಿತಾರ ಜಗಳ ಆಡ್ತಾರ" ಬೇಸರಿಸಿಕೊಂಡದ್ದ ಕುಮಾರಿ. "ದಿನ ಇದ್ದಿದೆ ಇದು, ಏನು ಮಾಡಾಕ ಆಗಂಗಿಲ್ಲಾ, ಈ ಮನಿಯೊಳಗ ಇರಬೇಕು ಅಂದ್ರೆ ಸಹಿಸಿಕೊಂಡು ಇರಬೇಕು" ಚೆನ್ನಿಂಗ ಸಮರ್ಥಿಸಿದ. ಅಸಮಾನದ ಹೊಗೆ ಒಳಗೊಳಗೆ ಆವರಿಸಿಕೊಂಡಿತ್ತು. ಯಾರೊಬ್ಬರು ಧನಿ ಎತ್ತಿದರು ಎಲ್ಲರೂ ಹೊರಗ ಹೋಗೊ ತಯಾರಿ ನಡೆಸಿದ್ದರು.



ವಿರೋಧದ ಅಲೆ ಎಬ್ಬಿಸಿದವರು

ಹಂಪಾಪುರ ಹನಮಾಪುರ ಹಂದೋಣಿ ಎಲ್ಲಾ ಕಡೀಗ ಲಮಾಣಿ ಹುಡುಗರು ಕಾಲೇಜ ಕಲೀತ್ತಿದ್ದರು. ಕೆಲವರು ನೌಕರಿಮಾಡ್ತಿದ್ದರು. ಹೋಳಿ ಹುಣಿಮಿ ದಿವಸ ಲಮಾಣಿ ಹೆಂಗಸರು ಬಿಡೆ ಬಿಟ್ಟು ವಯಸ್ಸಿನ ಮಿತಿ ಇಲ್ದೆ ಸಿಟಿಯೊಳಗ ತಿರುಗಿ, ಹೋಳಿ ಖುಷಿ ಅಂತ ರೊಕ್ಕ ವಸೂಲಿ ಮಾಡೋರು. ಇನ್ನೂ ಕೆಲವರು ಕವಳಿಹಣ್ಣು, ಬಾರಿ ಹಣು ಪುಟ್ಟಿಯೊಳಗ ಹೊತ್ಕೊಂಡು "ಕೌಳಿಹಣ್ಣವ್ವ" ಅಂತ ಒದರಿ ಒದರಿ ಕರದು ಮಾರಾಟ ಮಾಡ್ತಿದ್ರು. ಕಟ್ಟಿಗಿ ಮಾರೋರು ಮನಿಮನಿಗ ತಿರುಗಾಡಿ ಗಂಡಸರು ಸಿಕ್ಕರಂದ್ರ ಪುಸಲಾಯಿಸಿ ಮಾರಾಟ ಮಾಡ್ರಿದ್ರು. ಆ ಸಲಿಗಿಯಿಂಧ ಹರೆಯದ ಹುಡುಗಿರನ್ನ ಅಡ್ಡದಾರಿಗ ಎಳಿತಿದ್ರು ಪ್ಯಾಟಿಮಂದಿ, ಇದೆಲ್ಲ ಮನದಟ್ಟು ಮಾಡ್ಕೊಂಡ ಸಾಲಿಕಲ್ತ ಹುಡ್ರೆಲ್ಲಾ ಸೇರ್ಕೊಂಡು "ಈ ಹೆಂಗಸರೆಲ್ಲಾ ಸೇರ್ಕಂಡ್ರು ಅಂದ್ರ ಮುಗೀತು. ನಾವ ಇವರನ್ನ ಹಿಂಗೆ ಬಿಡಬಾರ್ದು. ಹಿಂಗ ಬಿಟ್ರ ನಾವು ಕಾಲೇಜಿನೊಳಗ

ಓದೋದು ಆಗೋದಿಲ್ಲಾ. ಲಿಂಗಾಯಿತರು, ಬ್ರಾಂಬ್ರು, ಕುರುಬರ ಹುಡ್ರೆಲ್ಲಾ ಎ ಲಮಾಣಿ ಅಂತ ಕರಿತಾರ, ಒಂದು ಪೈಸದ ಮರ್ಯಾದಿ ಸಿಗೊದಿಲ್ಲ. ಹುಡುಗಿಯರ ಮುಂದಂತು ನಮ್ಮ ಮರ್ಯಾದಿ ಕಾಸಿಗ ಪಂಚೇರ ಆಗೋದು ಖಾತ್ರಿ ಅಂತಾ ದೊಡ್ಡ ಚರ್ಚೆಯನ್ನೆ ಸುರುಮಾಡಿದ್ರು. ಕಾಕಾಪುರದಾಗ ರಾತ್ರಿ ಒಂದಗಂಟೆ. ಮಟಾನು ಚರ್ಚೆನಡೆದಿತ್ತು. ಮೂರ್ತಿನಾಯ್ಕ ಪಾಪನಾಯ್ಕ ಮುಖಂಡರಾದ್ರು. "ನೋಡ್ರೋ, ಈ ಪೀಢೆಯಿಂದ ಬಿಡುಗಡೆ ಪಡಿಬೇಕಂದ್ರ ಒಂದು ಕೆಲ್ಸಮಾಡಬೇಕು" ಮೂರ್ತಿನಾಯ್ಕ ಮಾತಾಡತೊಡಗಿದ. ಅದರಂತೆ ಮಾರನೇ ದಿನ ಪ್ರತಿಯೊಬ್ಬರು ಗುಂಪು ಕಟ್ಕೊಂಡು ಎಲ್ಲಿ ತಮ್ಮ ಜಾತಿ ಹೆಂಗಸರು ಗುಂಪು ಕಟ್ಕೊಂಡು ಹೋಳಿ ಚಂದಾ ಎತ್ತಾಕ ನಿಂತಿರ್ತಾರೊ ಅಲ್ಲಿ ಹೋಗಿ ಅವರನ್ನ ಓಡಿಸತೊಡಗಿದ್ರು. ಹರೆಯದ ಹುಡುಗಿರು ಮುದುಕಿರು ಸೇರ್ಕೊಂಡು "ಕೊಡ್ರೆಯಪ್ಪ, ಹೋಳಿದು ಖುಷಿ" - ಅಂತ ದಾರಿಗ ಅಡ್ಡಗಟ್ಟಿ ನಿಲ್ತಿದ್ರು. ಅದ್ರಾಗ ಯಾವದಾರು ಪಾಡಿರೊ ಹರೇದ ಹುಡುಗಿ ಇದ್ಲಂದ್ರ ಆಕೀನ ಮುಂದ ಮಾಡಿ ಮುದುಕಿರೆಲ್ಲಾ ಹಿಂದಿರ್ತಿದ್ರು. ಅವನು ಏಕವಚನದಿಂದ ದುಡ್ಡಕೊಡ್ತೀನಿ ಅನ್ನೊ ದಿಮಾಕಿಂದ, "ಏಯ್, ಸರಿಯೇ ದಾರಿಬಿಡು" ಅಂತಾ ಹೆಂಡತಿಗ ಕರಿಯೊಹಂಗೆ ಮಾತಾಡ್ತಿದ್ದ. ಅಲ್ಲಿಯೇ ಸೆಟಪ್ ಆತಂದ್ರ ಆಕಿನ ಕರ್ಕೊಂಡು ಎರಡ ಮೂರಗಂಟಿತನಕ ಮಾಯವಾಗಿ ಬಿಡ್ತಿದ್ದ. ಖುದ್ಧ ಹುಡಗಿ ತಾಯಿಯೇ ಹಣಕ್ಕ ತಲಿಹಿಡಿತಿದ್ಲು. ಈ ಪೀಡೆ ಸಹಿಸದ ಹಡ್ರು ಗುಂಪುಗುಂಪಾಗಿ ಸೇರಿ "ಏಯ್, ಹೋಗ್ರಬೇ ದುಡದ ತಿನ್ರಿ ಹಿಂಗ್ಯಾಕ ಮರ್ಯಾದಿ ಇಲ್ದೆ ಮೈ ಮಾರ್ಕೊಂಡ ಬದಕ್ತೀರಿ ಹೋಗ್ರಿ" ನಾಯಿಗ ಗದರಿಸಿದಂಗೆ ಗದರಿಸಿ ಓಡಿಸಿದ್ರು. "ಕಾಲ ಬದಲಾಗಿದೆ, ಈ ರೀತಿ ತೊಂಡ್ಲ ಎಲ್ಲಾ ತಗದ ಬಿಸಾಕ್ರಿ" ಒತ್ತಾಯ ಪೂರ್ವಕವಾಗಿ ತೆಗಸಾಕ ನೋಡಿದ್ರು. ಲಂಬಾಣಿ ಉಡುಗೆಯಲ್ಲಿ ಹೆಂಗಸರು ಹೋಳಿ ಹಪ್ತಾ ಕೇಳೋದೇನಾರು ಕಾಣ್ತಂದ್ರ ಹುಡುಗರು ಬೆನ್ನಹತ್ತಿ ಒಡಸಿಬಿಡ್ತಿದ್ರು. ಅದಕ ಹೆಂಗಸರು ಹೆದರಿಕೊಂಡು ಮಾರನೆ ವರ್ಷದಿಂದ ಬರೋದನ್ನೆ ಬಿಟ್ರು. ಮದುವೆಯೊಳಗ ಲಂಬಾಣಿ ಬಟ್ಟೆಗಳು ಕಮ್ಮಿ ಯಾದವು. ಸ್ವಾತಂತ್ರ ಬಂದನಂತರ ಅರಸು ಸರ್ಕಾರ ಬಂದು ಜನಸುಭಿಕ್ಷೆಪಡದ ಕಾಲದಾಗ ಸಿಕ್ಕ ಸವಲತ್ತಿಂದ ಹೆಚ್ಚೆಚ್ಚು ಮಂದಿ ವಿದ್ಯಾವಂತರಾದರು. ತಮ್ಮ ಪರಂಪರೆಯಾಕೊ ಬೇಡವೆನಿಸಿತು. ಹೊಸರಕ್ತ ಬಹಳ ಬೇಗನೆ ಬದಲಾವಣೆ ಬಯಸಿತ್ತು. ಸಮಾಜದೊಳಗೆ ಸ್ಥಾಪಿತಗೊಂಡ ಹಿತಾಸಕ್ತಿಗಳನ್ನ ಕಿತ್ತೊಗೆಯಲು ಪ್ರಯತ್ನಿಸತೊಡಗಿದರು. ಪ್ರತಿಯೊಬ್ಬವಿದ್ಯಾವಂತ ಪಟ್ಟಣದಾಗ ಲಂಬಾಣಿ ಉಡುಗೆಯ ತನ್ನ ತಾಯಿಯ ಜೊತೆಗೆ ಅಡ್ಡಾಡಲು

8

ಹಿಂಜರಿಯುತ್ತಿದ್ದ. ಎಲ್ಲಾದ್ರು ನನ್ನ ಸ್ನೇಹಿತ ನೋಡಿದ್ರೆ ನನ್ನ ತರಗತಿ ಹುಡುಗಿ ಭೆಟ್ಟಿಯಾದರೆ? ಏನೊ ಒಂದು ಕೀಳಿರಮೆ ಕಾಡತೊಡಗಿತು. ಯುವಜನಾಂಗ ಸ್ಥಾಪಿತ ಹಿತಾಸಕ್ತಿಯ ಜೊತೆಗೆ ಶೀತಲ ಸಮರ ಹೂಡಿತ್ತು. ಇದರ ನೇತಾರರಾದ ಮೂರ್ತಿನಾಯ್ಕ ನಮಗೆ ಸಿಕ್ಕಿರೊ ಸವಲತ್ತಿಂದ ನಾಕ ಅಕ್ಷರ ಕಲಿಯಾನಂದ್ರ ಈ ಹೆಂಗಸರದು ದೊಡ್ಡ ಕಾಟ ನಮಗ. ಅಂತೇಳಿ ಜಿಲ್ಲಾಮಟ್ಟದಾಗ ರಾಜ್ಯಮಟ್ಟದಾಗ ಸಂಘಟನೆ ಮಾಡಿ ಇಡೀ ಲಂಬಾಣಿ ಸಮುದಾಯದ ಬದುಕೆ ಸುಧಾರಿಸೊಹಂಗೆ ಗದಾ ಪ್ರಹಾರ ಮಾಡಿದ್ದ.

ಎಷ್ಟೋ ಶತಮಾನಗಳಿಂದ ಉಳಿಸಿಕೊಂಡು ಬಂದಿದ್ದ ಬುಡಕಟ್ಟು ವೇಷಭೂಷಣಕಂಡ್ರೆ ಅದೇ ಜನರಿಗೆ ಮೈ ಪರಿಚಿಕೊಳ್ಳುವಂತಾಗತಿತ್ತು. ಬ್ರಿಟೀಷ್ ಶಿಕ್ಷಣ ಬಂದು ಸಂಸ್ಕೃತಿಯನ್ನ ಕೊಂದುಹಾಕಿತ್ತು.

ಕುಮಾರಿಗೂ ಅವನ ತಾಯಿ ಏನಾರು ಹಂಪಾಪುರದಲ್ಲಿ ಸಿಕ್ಕರೆ ಮಂದಿಏನಂದ ಕೊಂಡರೆಂಬ ಹಿಂಸೆ ಅನಿಸದೆ ಇರ್ಲಿಲ್ಲಾ. "ಛೇ, ಅನವ್ವನ ಪರಿಸ್ಥಿತಿ, ಒಂದಕಡೀಗ ಜಾತಿ, ಮತ್ತೊಂದ ಕಡೀಗ ನನ್ನ ಸ್ವಾಭಿಮಾನ, ನಾನು ಚಿಕ್ಕೋನಿದ್ದಾಗ ಹಿಂಗೇನು ಇರ್ಲಿಲ್ಲಾ ಅನಿಸಿತ್ತು. ಈಗ ನಾನು ದೊಡ್ಡೋನು ಆಗೀನಿ. ನಮ್ಮ ಜಾತಿ ಹಾಳಾದ್ದು ಹೆಂಗಸರು ಉಟ್ಕೊಳ್ಳೊ ಕೆಂಪಲಂಗದ ಮೇಲೆ ಕಂಡ ಹಿಡದು ಮಂದಿ ಹಿಯಾಳಿಸ್ತಾರ" ತನ್ನೊಳಗೆ ಜೊಡ್ಡುಗಟ್ಟಿದ ಎಷ್ಟೋ ವರ್ಷಗಳ ಅಪಮಾನ ಅವಮಾನದ ಕಟ್ಟೆ ಒಡೆದಿತ್ತು. ಜಾತಿ ಅನ್ನೋದು ಅವಿದ್ಯಾವಂತ ಕೂಲಿಗಳಿಗೇನು ಅಷ್ಟಾಗಿ ಕಾಡ್ತಿರಲಿಲ್ಲಾ, ಯಾಕಂದ್ರ ಅವರು ಕೆಲ್ಸಕ ಹೋದಲ್ಲೆಲ್ಲಾ. ಏಕವಚನ ಒಂದೆ. ಇಲ್ಲಾ ಜಾತಿಹೆಸರ ಹಿಡದೆ ಕರಿತಿದ್ದದ್ದು "ಲೇ ಲಮಾಣ್ಯ, ಲಮಾಣಿ, ಸುಕಾಲ್ಯ" ಇತ್ಯಾದಿ ಶಬ್ಧಗಳನ್ನು ಉದ್ದೇಶ ಪೂರ್ವಕವಾಗೆ ತಮ್ಮ ದರ್ಪವನ್ನ ತೋರಿಸಕೊಳ್ಳಲು, ತಾವು ಅವರಿಗಿಂತ ಹೇಗೆ ಭಿನ್ನ ಅನ್ನೋ ಸತ್ಯವನ್ನ ಹೊರಹಾಕಲು ಮಂದಿ ಬಳಿಸತ್ತಿದ್ದ ಶಬ್ಧಗಳೆ ಇವು. ತಿಳುವಳಿಕೆ ಬಂದಮೇಲೆನೂ ಇಂತಹ ಶಬ್ಧಕೇಳೋದು, ಹೋಳಿಯಲ್ಲಿ ಹೆಂಗಸರು ದಾರಿಮೇಲೆ ಗಂಡಸರನ್ನ ತಡೆದು ದುಡ್ಡು ಕೆಳೋದು ಸಾಂಸ್ಕೃತಿಕ ದಿವಾಳಿತನವೇ ಅಂದ್ಕೊಂಡ ಅವರು ಒಟ್ಟೋಟಿಗೆ ಈ ಎಲ್ಲಾ ಕಾರ್ಯಗಳನ್ನ ಹಮ್ಮಿಕೊಂಡು ಸಾಂಸ್ಕೃತಿಕವಾಗಿ ತಮ್ಮನ್ನ ಅಧಃಪತನ ಕೊಯ್ಯುತ್ತಿರೋರ ವಿರುದ್ಧ ಸಮರ ಸಾರಿದರು. ತಮ್ಮ ಮನೆಗಳಲ್ಲಿ ಮದುವೆಯಾದಲ್ಲಿ ಖಡಾಖಂಡಿತವಾಗಿ ಕೆಂಪುಲಂಗ ತಮ್ಮ ಜಾತಿಯ ಕಾಜಿನ ಮೇಲುಡುಗೆಯನ್ನು ವಿರೋಧಿಸುವುದು ಅವರ ಅಜೆಂಡದಲ್ಲಿ ಸೇರಿಕೊಂಡಿತ್ತು. ಸುಲಭವಾಗೆ ಕೈಗೆ ಸಿಗುತ್ತಿದ್ದ ದಾರ, ಕಾಜು, ನಾಣ್ಯಗಳು ಗುಂಡಿಗಳು ಕ್ರಮೇಣ

ದುಬಾರಿಯಾಗ ತೊಡಗಿದವು. ಕುಮಾರಿತಾಯಿ ಒಂದ ಪುಟ್ಟಿತುಂಬ ಶೇಂಗ ಹುರದು ತುಂಬ್ಕೊಂಡು, ಒಂದಿಷ್ಟು ಕಾರಿಹಣ್ಣು, ಬಾರಿಹಣ್ಣು ಇಟ್ಕೊಂಡ ರಂಗಾರ‍್ಯರ ಓಣಿಯೊಳಗ ತಿರಗಾಡಿ ಹಿಡಿ ಶೇಂಗಕ್ಕೆ ಬೆಣ್ಣಿಮಾರಿ ಆಟ ಕಾಜು ಗುಂಡಿಗಳನ್ನ ಖರಿದಿಸಿಕೊಂಡು ಬರ‍್ತಿದ್ಲು. ವರ್ಷಾನಗಟ್ಟಲೆ, ಲಾವಣ, ಕಾಚೆ, ಗುಂಡಿಲೇಪೊ ಮುಂತಾದವುಗಳನ್ನು ಸೂಕ್ಷ್ಮವಾಗಿ ತಯಾರ ಮಾಡೋದಕ್ಕೆ ಒಂದ ವರ್ಷಹಿಡಿತಿತ್ತು. ಹೊಲದಾಗ ದುಡ್ಕೊಂಡ ಬಂದು ಉಣ್ಣೋಮಂದಿ, ದುಡಿಯಾಕ ಹ್ವಾದಹತ್ರ ಸೂಜಿಯಿಂದ ಕಸೂತಿ ಕೆಲ್ಸ ಮಾಡಾಕ ಹ್ವಾದ್ರ ಯಾವಮಾಲಿಕನಾರ ಕೆಳ್ಯಾನ. ಒದ್ದು ಹೊರಗ ಹಾಕ್ತಾನ. ಅದಕ್ಕೆ ಹೊತ್ತಸಿಕ್ಕಾಗೆಲ್ಲಾ ಹೊಲಗಿ ಕೆಲ್ಸಮಾಡ್ಕೊಳ್ತಿದ್ರು. ಬರ‍್ತಾ ಬರ‍್ತಾ ಕೈ ಮಗ್ಗಗಳೆಲ್ಲಾ ಒಂದೇ ಸರ್ತಿಗ ಮೂಲಿಸೇರಿದ್ವು. ಬ್ರಿಟೀಷ್‌ರ ಕಾಲದಿಂದಲೇ ಬಟ್ಟೆತಯಾರಿಸೊಯಂತ್ರಗಳು ದಾಳಿಮಾಡಿಂದ ಕೈಲೆ ದಾರತಗಿಯೋರ ಕೆಲ್ಸಹೋಗಿತ್ತು. ಟರ‍್ಲಿನ, ಟೆರಿಕಾಟ್, ಅರವಿಗಳ ಆಕ್ರಮಣದ ಕಾಲದೊಳಗ ನೂಲತಗದ ಖದ್ದರನಂತ ಅರವಿಗ್ಯಾರ ಮನಸು ಮಾಡ್ಯಾರು? ಒಂದಕೊಂದ ಪೂರಕಾಗ್ತ ಬಹಳ ಸುಲಭದಾಗ ಸಿಗೊ ಸೀರೆಗಳು ಹೆಣ್ಣಮಕ್ಕಳಿಗ ಹೆಚ್ಚು ಪ್ರೀತಿ ಅನಿಸತೊಡಗಿದ್ವು. ತಮ್ಮ ಪದ್ಧತಿ ಸೀರೆಯೊಳಗೆ ಘುಂಗೊ ಬಿಟ್ಟಿರೋದು ಸಿಕ್ಕಿಸಕೊಂಡಿರದಿದ್ದರೆ ಮರ್ಯಾದಿ ಪ್ರಶ್ನೆ, ಒಂದೊ, ಎರಡು ಹರಕು ಫೇಟಿಯಾಗಳನ್ನ ಹೊಂದಿರೋದೆ ದುಸ್ತರವಾಗಿರುತ್ತಿದ್ವು, ಅದು ಅಲ್ಲದೆ ಅತ್ಯಂತ ಭಾರವು, ಯಾವ ಸಂದರ್ಭದಾಗ ನಡಕ್ಕೆ ಕಟ್ಟಿದದಾರ ಹರ‍್ಕೊಂಡು ಪೂರ್ಣಬೆತ್ತಲಾಗುತ್ತೇವೆಯೊ ಎಂಬ ಹೆದರಿಕೆ ಎಲ್ಲಾ ಆತಂಕಗಳಿಂದ ಮುಕ್ತಿಕಾಣಲು ಕೆಲವರು ಪ್ರಯತ್ನ ಪಡ್ತಿದ್ರು. ಅದಕ್ಕೆ ಪೂರಕವಾಗೆ ಹುಡುಗರು ಹೋರಾಟ ಆರಂಭಿಸಿದ್ದರಿಂದ ಹೊಸ ಪೀಳಿಗೆಯ ಯುವತಿಯರು ಅದನ್ನ ವಿರೋಧಿಸಾಕ ಹೋಗಲಿಲ್ಲಾ. ಕೆಲವರು ತಮ್ಮ ಮಕ್ಕಳ ಸಲುವಾಗಿ ಬದಲಾವಣೆ ಮಾಡಿಕೊಂಡರು ಚಳುವಳಿಗಾರರು ಹೇಳಿದ್ದು, ಅಕ್ಷರಶಃ ನಿಜ ಅನಿಸಿತ್ತು.

ಕುಮಾರಿ ಕಾಕಾಪುರದಾಗ ಮತ್ತೊಂದು ಚಳುವಳಿಯನ್ನೆ ಮಾಡಬೇಕಂತ, ಬಿದರ, ಹನಮು, ಕೌದಿ, ಪರಮು, ಪಾಂಡು, ಫಸಲರನ್ನ ಸೇರಿಸಿದ. "ನೋಡ್ರೋ ನಾವು ಹಾಳಗ್ತಿರೋದೆ ಎರಡರಿಂದ: ಒಂದ ಹೆಂಗಸರಿಂದ. ಮತ್ತೊಂದು ಹೆಂಡಸರಾಯಯಿಂದ. ಎಷ್ಟ ಜನ ತಂದಿ-ತಾಯಂದಿರು ಕುಡಿಯೋದನ್ನ ಬಿಟ್ಟು, ತಮ್ಮ ಮಕ್ಕಳು ಚೆನ್ನಾಗಿರಬೇಕು ಅಂತ ಅವರಿಗೆ ಏನಾದ್ರು ಒಂದಿಷ್ಟು ಮಾಡಬೇಕು. ಅಂತ ದುಡಿತಿದ್ದಾರೆ ಏನು ಇಲ್ಲಾ. ನಾನೆ ಹಗಲು ರಾತ್ರಿ ದುಡದು ಇಷ್ಟಾದ್ರು ಮಾಡೀನಿ, ಅವರಿಗ ದುಡಿಯಾಕ ಬಂದಾರ

ಮಾಡ್ಕೊಳ್ಳಿ, ನಮ್ಮಪ್ಪ ಏನ ನನಗೆ ಹದಿನೈದ ಎಕ್ಕರಿ ಎರಿ ಜಮೀನ ಬಿಟ್ಟಹೋಗಿದ್ನ ಇಲ್ಲಾ. ಅಂತಂದು, ತಿಂದುಂಡು ಸತ್ತಹೊಕ್ಕಾರ, ಹಿಂದಿನವರ ಕೈಗೆ ಚಿಪುಕೊಟ್ಟ ಹೊಕ್ಕಾರ" ತನ್ನ ಕಾಲೇಜು ಭಾಷಣದ ಶೈಲಿಯೊಳಗ ಭಾಷಣ ಮಾಡಿದ್ದ. ಅರೇ ಬರೆ ತಿಳಿದವರು, ಅರ್ಧಕ್ಕೆ ಸಾಲಿಬಿಟ್ಟು ಊರಸೇರಿದೊರು ಸೇರ್ಕೊಂಡಿದ್ಕ ಕುಮಾರಿ ಹೇಳಿದ್ರಾಗ ಅರ್ಧಬರ್ದ ತಿಳಿದಿತ್ತು. "ಹೌದಪ್ಪ, ಕುಡಿಯೋದ ತಗಸೋದ ಏನ ನಮ್ಮ ಕೈಯಾಗ ಐತಿ ಸರ್ಕಾರದ ಸರಾಯಿ, ಬಡವರು ಕುಡದಾರ ಕುಡೀಲಿ, ಸತ್ತಾರಸಾಯ್ಲಿ ದುಡ್ಡ ಬಂದ್ರೆ ಸಾಕು. ಅಂತ ದುಡ್ಡಿಗಾಗೆ ಮಾಡಿದ್ದ ಇದು. ಅದು ಅಲ್ಲದೆ ಎಷ್ಟೋ ವರ್ಷಗಳಿಂದ ಕುಡಿದೆ ಬದಕಿರೋರು ನಮ್ಮ ಮಾತ ಕೇಳ ಬಿಡ್ತಾರ" ಕೌದಿ ತನ್ನ ನೇರ ವಿರೋಧವನ್ನ ವ್ಯಕ್ತಪಡಿಸಿದ. "ಇವತ್ತ ತಾಂಡದೊಳಗೆ ಏನೇನ ಆಗ್ತಾ ಇದೆಯಂತ ನಿಮಗ ಗೊತ್ತೈತಿ, ಹುಡುಗರು ಹಾಳಾಗಾಕ ಹತ್ಯಾರ. ಹೆಂಗಸರಂತು ಮನಿಯೊಳಗ ತಮ್ಮ ಕೈಗ ಅದೇನ ಸಿಗತೈತೊ ಅದನ ತಗೊಂಡ ಹೋಗಿ ಮಾರಾಕಹತ್ರು, ನಿನ್ನೆ ಮನ್ನೆವು ಚೋಟುದ್ದ ಅದಾವ ಮೂರ ಮೂರ ಪಾಕೀಟ ಕುಡಿತಾವ" ಕುಮಾರಿ ನೇರವಾಗಿ ತನ್ನ ಹಿಂದಿದ್ದ ಹುಡ್ರಿಗೆ ಹೇಳಿದಂಗ ಹೇಳಿದ. ಸ್ಕೂಲ, ಕಾಲೇಜು ಬಿಟ್ಟೋರು ಕಾಕಾಪುರ ತಾಂಡದಾಗ ಎಲ್ಲಾ ಅನೈತಿಕ ಕೆಲ್ಸಕ್ಕೆ ನಿಂತ್ಕೊಂಡಿದ್ರು. ದೀಪಾವಳಿ ಹಬ್ಬದಾಗ ಕುಣಿಯಾಕ ಬಂದ ಹುಡುಗಿಯರು ತಮಗ ಬೇಕಾದ ಹುಡುಗನ ಕೂಡ ಸರ್ವೋತಿನ ಮಟ ಮಾಯಆಗ ಬಿಡೋದು ಗುಲ್ಲೇದ್ದು, ಕುಣತಕ್ಕ ಕಳೆನ ಹೋಗಿತ್ತು. ಮರ್ಯಾದಸ್ತರು. "ಹಾಳಾಗಿರೋರ ಜೊತಿಗ ನಮ್ಮ ಮಕ್ಕಳೂಹಾಳಾದ್ರ ಮಂದಿ ಏನಂತಾರ, ಎಲ್ರೋ ಅಂತೋರೆ ಹಾಳಾದೋರು ಅಂತ. ಯಾರಿಗಬೇಕು ನಮ್ಮ ಮನಿ ಊಟ ಉಂಡು ನಮ್ಮ ಮನಿ ನೀರಕುಡದು ಮತ್ತೊಬ್ಬ ಮಗನ ಕಡಿಂದ ಒಂದ ಮಾತ ಹೇಳಿಸ್ಕೊಳೋದು ನಾಳೆ ಕೊಡತಗೊಳೊ ಮಕ್ಕಳ ಹೌದು ತಾಂಡ ಹಾಳ ಆಗ್ಯತಿ. ಯಾವಾಗ ಒಂದಿಷ್ಟು , ಹುಡ್ರು ಸ್ಕೂಲ ಬಿಟ್ಟು ಕಾಲೇಜ ಬಿಟ್ಟ ಬಂದ್ರೊ ಮುಗದಹೋತು" ತಮ್ಮ ಮನಸ್ಸಿನಾಳದ ಮಾತನ್ನ ಹೊರಗ ಹಾಕದೆ ಒಳಗ ಇಟ್ಕೊಳಾಕು ಆಗದ ಬೇಗುದಿಯೊಳಗ ಸಿಗಾಕ ಕೊಂಡಿದ್ರು.

ಏನೆಲ್ಲಾ ನಡದಿತ್ತು ತಾಂಡದಾಗ ಯಾರಾದ್ರು ಹಿರಿಯರು ಒಂದ ನಿರ್ಣಯ ಹೇಳಿದ್ರ ಓದಿರೋರು ಅದನ್ನ ವಿರೋಧಿಸುತ್ತಿದ್ದರು. "ಹಿಂಗಹ್ಯಾಂಗ, ಸಾಧ್ಯವಿಲ್ಲ ಹಿಂದ ನೀವು ಏನೋ ಪಂಚಾಯ್ತಿ ಸೇರಿಸಿದ್ರ ಮುಗೀತು. ಈಗ ಕಾಲ ಬದಲಾಗೈತಿ" ಅಂತ ಬಾಯಿಗ ಬಂದಂಗ ಮಾತಾಡಿ, ದೊಡ್ಡೋರು -ಸಣ್ಣೋರು, ಇವರಿಗ ಮರ್ಯಾದಿ ಕೊಡಾಕು

ಅನ್ನೊ ಭಾವನೆನೆ ಇಲದೆ ನಡ್ಕೊಳ್ಳಾಕ ಹತ್ತಿಂದ ಯಜಮಾನ್ರುಗಳು ಪಂಚಾಯ್ತಿಗಳಿಗ ಹೋಗಾಕು ಹಿಂಜರಿತಿದ್ರು. ಊರ ಮುಂದಿನ ಗಾರಿಕಟ್ಟಿ ಈಗ ಇಸ್ಪೀಟ ಆಡೋರಿಗ, ಚಾವಿ ಆಡೋರ ಪಾಲಾಗಿತ್ತು. ಹೆಂಗಸರೆಲ್ಲಾ ಕೂಲಿನಾಲಿ ಮಾಡ್ಕೊಂತ ದುಡಿತಿದ್ರ ಗಂಡಸರು ಗಾರಿಕಟ್ಟಿ, ಇಸ್ಕೂಲಸಾಲಿ, ಚಾದಂಗಡಿ, ಬಾವಿ ಕಟ್ಟಿ, ಸೇವಭಾಯನ ಗುಡಿ ಮುಂದ ಮುಕ್ಕಳಿಊರಿದ್ರ ಸಂಜಿಗ ಮಾಳಿಕಡಿಂದ ದನಗಳು ಬಂದಾಗ್ಲೆ ಮೇಲೆದ್ದು ಆಟದಾಗ ಕಳ್ಕೊಂಡಿದ್ದ ಸಾಲದು ಅನ್ನೊಹಂಗ "ಹೂಂ, ಸಾವುಕಾರ ಕೊಟ್ನೇನು ಕೊಡೆ" ಅಧಿಕಾರದಿಂದ ಕೇಳ್ತಿದ್ರು. "ತಂದೀನಿ ಬಾರೊನಾಗಣ್ಣ, ತಗೊಂಡಹೋಗಿ ಕುಡಿ, ನನ್ನ ಮಕ್ಕಳಬಾಯಾಗ ಮಣ್ಣಹಾಕ್ತೀನಿ" ಅಷ್ಟೇ ರಭಸವಾದ ಪ್ರತಿರೋಧ ಬಂದೊಡನೆ ಜಗಳ ಆರಂಭ. "ನಾನು ನಿನ್ನ ಗಂಡ ಮನಿಯಾಗ ಹೇಳಿದಂಗೆ ನಡಿಬೇಕು. ಮರ್ಯಾದಿಯಿಂದ ಏಟತಂದೀಯ ಕೊಟ್ಟಬಿಡು. ಎಲ್ಡಸೇರ ಜ್ವಾಳ ತರ್ತೀನಿ ಬಾಕೀದ ನನ್ನ ಖರ್ಚಿಗೆ" ಆಕಿ ದುಡಿಮೆ ತನ್ನ ಹಕ್ಕೆಂಬಂತೆ ಗಂಡಸರು ತಮ್ಮ ಶ್ರೇಷ್ಠತೆಯನ್ನ ತೋರಿಸಿಕೊಳ್ಳಾಕ ಹವಣಿಸುತ್ತಿದ್ರು. "ತಲಿಗ ಎಣ್ಣಿ ಇಲ್ಲಾ ಮೈ ತೊಕ್ಕೊಂಡು ತಿಂಗಳಾಗೈತಿ, ಎಣ್ಣಿಗ ಸೋಪಿಗ ರೊಕ್ಕ ಬೇಕು ಕೊಡಂಗಿಲ್ಲಾಂದ್ರೆ ಕೊಂಡಂಗಿಲ್ಲಾ" ಅಸಹಾಯಕಳಾಗಿಯೇ ಅವಳು ವಿರೋಧಿಸುತ್ತಾಳೆ. ಅವಳ ಧನಿಯೊಳಗಿನ ಅಸಹಾಯಕತೆಯು ಎಳೆಯನ್ನ ಗುರುತಿಸಿಕೊಂಡವನೆ ತಲೆಕೂದಲು ಹಿಡಿದು ಎಳೆದು ನಾಕುಗುದ್ದಿ ರಂಪಮಾಡಿಂದ ದಿನ ಹೊಡ್ತಾ ತಿಂದು ಮೈ ಮೂಳಿ ಮುರಿಸಿಕೊಳ್ಳೋದ್ಯಾಕಂತ "ನಾಮರ್ದ ಹಾಳಾಗಿ ಹೋಗ ಅತ್ಲಾಗ, ಯಾವಾಗ ಸತ್ತ ಹೋಗ್ತಿಯೊ ಯಾವಾಗ ನಾನು ರಂಡಿಯಾದೇನು ಅನಿಸಿಬಿಟೈತಿ" ಸೊಂಟದಾಗಿಂದ ರೊಕ್ಕ ತಗದು ಅವನ ಮಾರಿಮ್ಯಾಲ ಬಿಸಾಕಿ ಎದಿಯಾಗ ಮಡುಗಟ್ಟಿದ ನೋವನ್ನು ಕಣ್ಣೊಳಗಿಂದ ಹರಿಸಿ ನೆಮ್ಮದಿಪಡ್ಕೊಳ್ಳಾಕ ಹವಣಿಸುತ್ತಿದ್ಲು. ಇದು ತಾಂಡದಾಗಿನ ಒಂದೇ ಮನಿ ಕತಿಯಲ್ಲ ಗಬಡು, ಚೆನ್ನಿಂಗ, ಬದಿಯಾ, ಬಾಣು, ಬಸ್ಸು, ಜಿಂಗಾಲು, ಡೆಬರ, ಎಲ್ಲಾರ ಮನಿಯೊಳಗು ನಡದದ್ದೆ. ಕುಡ್ಕೊಂಡ ಬಂದು ಅಕಿ ಮೈ ಸಂಬಂಧ ಹಪಿಹಪಿಸೋದು. ಅವನ ವರ್ತನೆ ಮೈಮ್ಯಾಲೆ ಬಾರಿ ಮುಳ್ಳಗಳು ಚುಚ್ಚುತ್ತಿರೊ ಹಂಗೆ ಅನಿಸಿದ್ರು ಬಿಕ್ಕಳಿಸ್ತಾ ಮೌನವಾಗೆ ಸಹಿಸಿಕೊಳ್ಳುತ್ತಿದ್ಲು. ಎಷ್ಟೋ ಇಷ್ಟವಿಲ್ಲದ ಇರುಳುಗಳು ಹೆಣ್ಣುಗಳ ಜೀವನದಾಗ ಜಾರಿಹೋಗಿದ್ವು. ಅದಕ್ಕೆ ಪಿಚ್ಚಾನಾಯ್ಕನ ಹೇಣ್ತಿ ಸೇವಂತಿ, ಖಾಯಂ ಕೆಲ್ಸ ಮಾಡ್ತಿದ್ದ ಕುಕ್ಕಂಬಳ್ಳಿ ಸಾಧುಸಾಮಿನ ಇಟ್ಕೊಂಡಿದ್ಲು. ಅಂವ ಮನಸಿಗ ಒಪ್ಪೊಅಂತ ಮಾತಾದ್ರು ಆಡ್ತಿದ್ದ. ಆಕಿ ಮನಸಿಗ ಹಿಡ್ಸೊ ಅಂತ ಸೀರಿ, ರವಿಕಿ, ಹೂ, ಬಳಿ, ಕುಂಕುಮ ತಂದಕೊಡ್ತಿದ್ದ. ಮನಿಯಾಗ

ಸ್ವಾಮಿ, ಹೇಣ್ತಿಗ ಬೇಕಾರ ಗದರಿಸಿರಬಹುದು ಸೇವಂತಿಗ ಯಾವತ್ತಮಾತಾಡಿರಲಿಲ್ಲಾ. ಸಾಧುಸಾಮಿ ಕಾಕಾಪುರದಾಗ ಮನಿಮಾತಾಗಿದ್ದ. ಹದಿನೈದ ಎಕ್ಕರಿ ಭತ್ತ ವರ್ಷಕ್ಕೆ ಸಾವಿರ ಚೀಲ ಬೆಳಿತಿದ್ದ. ವರ್ಷದ ಹನೆಲ್ಡ ತಿಂಗಳು ಕೆಲ್ಸ ಚಾಲು ಇರ್ತಿತ್ತು. ಅಂಗೇಯ ಅವನ ಚಟಾನು. ಮದಮದ್ಲು ಎಳೆ ಎಳೆ ಹುಡುಗಿಯರನ್ನ ನೋಡ್ತಿದ್ದ. ಡಬ್ಬಿ ಪೌಡರ ಕೊಡಿಸಿ, ಇಲ್ಲಾ ಹಂಪಾಪುರಕ್ಕೆ ಕರ್ಕೊಂಡ ಹೋಗಿ ಒಂದ ಸಿನೀಮಾ ತೋರಿಸಿ ಬೆಣ್ಣಿದೋಸಿ ಹೊಟೇಲಿನೊಳಗ ಒಂದ ದ್ವಾಸಿ ತಿನ್ನಿಸಿ ಮಳ್ಳಮಾಡಿ ತನ್ನ ಕೆಲ್ಸಮಾಡ್ಕೊಂಡ ಬಿಡ್ತಿದ್ದ. ವಯಸ್ಸಾದಂಗೆಲ್ಲ ಎಳೆ ಹುಡುಗಿಯರ ಆಕರ್ಷಣೆ ಕಮ್ಮಿಯಾತು. ಸೇವಂತಿ ಬೆನ್ನಹಿಂದ ಬಿದ್ದ. ಯಾವಾಗ ಅಕಿಮ್ಯಾಲ ಮನಸ್ಸುತಗಿಯಾಕ ನೋಡಾಕ ಹತ್ಯಾನಂತ ಸೇವಂತಿಗ ಅನಿಸಿತೊ, ಮಾರನೇ ದಿನಾನೆ ಅವಳ ಹಿರಿಮಗಳು ಸಂದವ್ವನ್ನ ಬಿಟ್ಲು. ಅವಾಗತಾನೆ ಮೈನೆರತು ಅಳ್ಳೊಹೂವಿನಂಗ ನಳನಳಿಸ್ತಿದ್ದ ಸಂದವ್ವನ ಮೈರುಚಿನೋಡಿ ಕಮರಿಸಿಬಿಟ್ಟ. ಭಾವನೆಗಳೆ ಅರಳದ ದಿನಗಳಲ್ಲಿ ಸಂದವ್ವ ಯಾವ ವಿಧದಲ್ಲಿ ಸ್ಪಂಧಿಸಿಯಾಳು, ಮದ್ವಿಯಾತು ಗಂಡನ ಕೂಡ ಊರಿಗೆ ಹ್ವಾದ್ಲು. ಮುದಿಯ ಸಾಧುಸಾಮಿ ನೆನಪು ಕಾಡ ತೊಡಗಿತು. ಗಂಡ ಬೇಡವಾದ ಇದ್ದ ಮೂರ ಮಕ್ಕಳು ಬೇಡವಾದರು, ಸೀದಾ ಕಾಕಾಪುರಕ್ಕೆ ಕೈಕೂಸನ್ನ ಎತ್ಕೊಂಡ ಓಡಿಬಂದ್ಲು. ಗಂಡ ಹತ್ತಸಲಬಂದು ರಾಜಿಮಾಡ್ಕೊಳ್ಳಾಕ ನೋಡಿದ. ಸಾಮಿಯ ನೆನಪಿನಾಳಕ್ಕೆ ಇಳದಿದ್ದ ಸಂದವ್ವ ಹೋಗಲೇ ಇಲ್ಲಾ. ಕಾಕಾಪುರದ ತೌರ ಮನಿಯೊಳಗ ಠಿಕಾಣಿ ಹೂಡಿ ಸ್ವಾಮಿಮ್ಯಾಲೆ ಬಲಿಬೀಸಾಕ ನೋಡಿದ್ಲು. ಸ್ವಾಮಿಯಾಗಲೆ ಮತ್ತೊಂದು ಎಳೆ ಹೂ ಮೂಸಿಯಾಗಿತ್ತು. ಅಕಿ ಬೇರೆಯಾರು ಅಲ್ಲ ಸಂದವ್ವನ ತಂಗಿ ಪೀಟಿ, ಎಲ್ಲಾನು ಕಳ್ಕೊಂಡ ಸಂದವ್ವ ಸಿಕ್ಕವರ ಜೊತಿಗ ಸೋಮವಾರ ಕಳಿಯಾಕ ಹತ್ಲು. ಕಡೀಗೊಮ್ಮೆ ಅರ್ಧಕಲ್ತು ಬಿಟ್ಟ ಬಂದೋನು ಒಬ್ಬ ಖಾಯಂ ಆಗೆ ಗಂಟ ಬಿದ್ದ. ಈ ಎಲ್ಲಾ ಕತಿಯ ಎಳೆಗಳು ಒಂದ ಕಡೀಗ ಎಲ್ಲೊ ಗಂಟ ಕಟ್ಟಿಕೊಂಡಿದ್ವು. ಮೂರನ್ನು ಬಿಟ್ಟವರು ಮುಳಗಿದ್ರು ಸಾಯೋದಿಲ್ಲ ಅನ್ನೊಹಂಗೆ, ಸದಾ ಅಮರರಾಗಿದ್ದ ಹುಡ್ರು. ಒಂದ ಚಟ ಬಿಡ್ದಂಗೆ ಮಾಡೋರು. ಯಾವನೊ ಬೀಡಿ ಸೇದೊದು, ತಂಬಾಕ ಹಾಕೋದು, ಗುಟಕಾ, ಪಾನ್‌ಪರಾಗ್, ತಂಬಾಕು ಅಗಿಯೋದು, ರೊಕ್ಕಸಿಗದಾಗ ಹತ್ತಿ, ಮೆಣಸಿನ ಕಾಯಿ, ರಾಗಿಸಿವುಡು, ಜ್ವಾಳ ಕೈಗವಿನಸಿಗತೈತಿ ಅದನ್ನೆಲ್ಲಾ ಕದ್ದುಮಾರಿ ದುಡ್ಡ ಮಾಡ್ಕೊಂಡು ಚಟಕ್ಕೆ ಸುರಿತಿದ್ರು. ಒಂದ ದಿನವಂತು ಕೌದಿ, ಹನುಮ್ಯ, ಪಸಲ, ಪಿಂಚ ಮುಕ್ಕಾರೆ ಕುಡದು ಊರಹಿಂದಿನ ಕಣದಾಗಿದ್ದ ಚೆನ್ನಿಂಗನ ಹೇಣ್ತಿ ಸಹವಾಸಮಾಡಾಕಂತ ಕತ್ತಲೊಳಗ ಗೊತ್ತಿಲ್ದಂಗೆ ಒಬ್ಬನು ಎಮ್ಮಿಹಿಂದ, ಮತ್ತೊಬ್ಬನು ಗೊಂದ್ಲಿಯೊಳಗ

ಇನ್ನೊಬ್ಬ ಬಣವಿ ಸಂದಿಯೊಳಗ ಅಡಗಿಕುತ್ಕೊಂಡಿದ್ರು. ಅವತ್ತು ಮುಂಜಾನಿ ಹಂಪಾಪುರಕ್ಕೆ ಹೋಗಿದ್ದ ಚೆನ್ನಿಂಗ ಬಂದಬಿಟ್ಟ. ಕತ್ಲಾಗ ಯಾರೊ ತೆವಳ್ತಾ ತನ್ನ ಮನಿಯಾಗ ಹೋಗ್ತಿರೊ ಹಂಗ ಅನಿಸಿ, "ಯಾವನ್ಲೆ ಅವನು ಸೂಳಿಮಕ್ಕಳ್ರ. ನನ್ನ ಮನಿಯಾಗ ಹೊಕ್ಕಿರೇನ್ರಲೇ" ಜೋರಬಾಯಿ ಮಾಡಿದ. ಕುಡದ ಅಮಲಿನ್ಯಾಗ ಮುಂದ ಏನಿತ್ತೋ ಕಾಣದೇ "ಯವ್ವಸತ್ನೆ" ಅಂದವರೆ ಮುಗ್ಗರಿಸಿ ಬಿದ್ದು, ಸಿಕ್ರ ಮಾನ ಹರಾಜ ಆಗೋದ ಗ್ಯಾರಂಟ ಅಂದವರೆ ಗಡಬಡಿಸಿ ಎದ್ದು ಓಡಿದರು. ನಿಶೆದಾಗ ಕಣದ ಬೇಲಿ ಅದೆಂಗ ಜಿಗದ್ರೂ ಗೊತ್ತಿಲ್ಲಾ ಡಬ್ಬಜಾಲಿ ಮುಳ್ಳ ನಾಟಿದ್ವು. ಚೆನ್ನಿಂಗಮನಿಯಾಗ ಯಾರಾರ ಇರಬಹುದು ನಂದೆ ಮರ್ಯಾದಿ ಕಾಸಿನಪಂಚರ್ರಾಗೋದು ಅಂದ್ಕೊಂಡವನೆ. "ಇವರವ್ವರ ನನ್ದ ಸಲಗಿ ಹಿಡ್ಕೊಂಡರ, ನನ್ನ ನೋಡಿಲ್ಲ, ತಲಿಕೆಟ್ಟನಿಂತನಂದ್ರ ಜೈಲಿಗ ಹ್ವಾದ್ರು ಪರವಾಗಿಲ್ಲ ಒಂದಿಬ್ಬರನ್ನ ತಗದೆ ಬಿಡ್ತಿನಿ ಬೇಕಂತ್ಲೆ ಊರ ಕಡೀಗ ಮಾರಿಮಾಡ್ಕೊಂಡಿದ್ದ ಮನಿಯೊಳಗಿಂದ್ಲೆ ಕೇಳಿಕೊಳ್ತಿದ್ದ ಮೇಸ್ತ್ರಿ ಮಂಗುಪನಾಯ್ಕ ಒತ್ತರಿಸಿ ಬಂದ ಉಚ್ಚಿ ತಡ್ಕೊಂಡು ಒಂದೊಂದೆ ಕಳ್ಳ ಹೆಜ್ಜೆ ಇಡ್ತಾ ಮನಿಸ್ಸಿನೊಳಗ ತನ್ನಮನಿ ದೇವರು ಠಕರಿಭನಕಿ ನೆನಪಿಸಿಕೊಂಡು ಸದ್ದಿಲ್ದಂಗೆ ಮನಿಹಿಂದೆ ಸರದ ಇದೆಲ್ಲವನ್ನು ಗಮನಿಸುತ್ತಿದ್ದ ಚೆನ್ನಿಂಗ. "ಥು, ಇವನವ್ವನ ರಂಡಿ ಹೆಂಗಸು ಅದೆಂಥ ಹಾಳ ಮನಸ್ನೋ ಅಕೀದು, ಬಾಯಿ ಬಿಟ್ರ ಬಣ್ಣಗೇಡು" ಅಂದ್ಕೊಂತ್ಲೆ, "ದೀಪತಾರೆ ಇತ್ಲಾಗ" ತನ್ನ ಹುಸಿಪೌರುಷತೋರ್ಸಾಕ ಒದರಿದ. ಅಕೀನೂ, ಅವನ ಬಾಯಿಗ ಹೆದರೋಹಂಗೆ ಓಡಿ ಬಂದು ದೀಪ ಇಟ್ಟು ಏನೂ ನಡದೇ ಇಲ್ಲಾ ಅನ್ನೋರಹಂಗೆ ನೆಲಾ ನೋಡ್ತಾ ನಿಂತ್ಲು. "ಹಂಗ್ಯಾಕ ನಿಂತಿ ನೀರಪಾರ ತಂದ ಕೊಡಹೋಗೆ ನಿನ್ನಮ್ಮನ ಕೆಟ್ಟಜಾತಿಯೊಳೆ" ತಾನೊಬ್ಬ ಗಡಸುಮನುಷ್ಯ ಬಾರಿ ಕಟ್ಟುನಿಟ್ಟು ಅನ್ನೋದನ್ನ ಸಾಬಿತು ಪಡಿಸಾಕ ನೋಡಿದ. ಅವಳು ಒಳಗ ಓಡಿಓಗಿ ನೀರತಂದು ಮುಂದ ಹಿಡದ್ಲು. "ಎಲ್ಲೆ, ಹುಡ್ರು" ಕೇಳಿದ. ಊರಾಗೆಲ್ಲೋ ಆಟಾಡಾಕ ಹೋಗ್ಯಾವ " ಮಳ್ಳಿಯಂಗೆ ಹೇಳಿದ್ಲು. "ಅವು ಊರಾಗ ಆಟ ಆಡ್ತಾವ, ನೀನು ಮನಿಯಾಗ ಕಣ್ಣು ಮುಚ್ಚಾಲೆ ಆಡ್ತೀಯ ನಾನು ಹಂಪಾಪುರ ಹನುಪುರ ಅಂತ ಸುತ್ತತೀನಿ"ಮಾತು ಹೊರಗ ಬರ್ಲಿಲ್ಲಾ, ಅಕೀನು ಅದಕ್ಕೆ ಪ್ರತ್ಯುತ್ತರ ಕೊಡಾಕ ಹೋಗಲಿಲ್ಲಾ. ಅವನ ಮನಸ್ಸಿನೊಳಗ ಮಾತ್ರ ಅಲ್ಲೋಲ ಕಲ್ಲೋಲ ಆಗಿತ್ತು. ಎಷ್ಟೇ ಸಮಾಧಾನ ಹೇಳ್ಕೊಂಡ್ರು ಸಾಧ್ಯನೇ ಆಗಲಿಲ್ಲಾ. ಅವನ ಬರಾಕ ಮಂಚೆ ಅವನ ಮನಿಯೊಳಗಿದ್ದ ಮಂಗುಪ. "ಬರಾಕೊ ಚೆನ್ನಿಂಗ ಸರಾಯಿಕುಡದ ಬರಾನ" ಒಳಗ ಇಣುಕಿದ. ಅಕಿ ನಾಚಿಕೆ ಇಲ್ಲದೆ ಬಗ್ಗಿದ್ಲು. ಹೆಚ್ಚೊತ್ತ ಕುಂತಿದ್ರ ಹುಚ್ಚ


ಹಿಡಿಯೋದು ಗ್ಯಾರಂಟಿ ಅಂದ್ಕೊಂಡ ಚೆನ್ನಿಂಗ ಎದ್ದು "ನಡಿಯಪ್ಪ ಅತ್ಲಾಗ ಹಾಳಾಗಹೋಗವಲ್ಲ್ಯಾಕ" ಅಂದ್ಕೊಂತ್ಲೆ ಎದ್ದ. ಮಂಗುಪ ಚೆನ್ನಿಂಗನಿಗ ನಿದ್ದಿ ಬರೋ ಮಟ ಕುಡಿಸಿದ. ಇನ್ನೇನು ಐದಾರಗಂಟಿ ಎಳಂಗಿಲ್ಲಾ ಅಂತ ಖಾತ್ರಿಮಾಡ್ಕೊಂಡ ಅಲ್ಲೇ ಇದ್ದ ಮುಂಗೋಳಿ ಕುಗೊದ್ರಾಗ ಜಾಗ ಖಾಲಿಮಾಡಿದ. ಕುಮಾರಿಗ ಬಹಳ ಕೆಟ್ಟ ಅನಿಸಿತು. ಇದೆಲ್ಲಾ ರಿಪೇರಿಮಾಡಾಕ ಆಗದ ಸರ್ಕಾರಿ ರಸ್ತೆಗಳಿದ್ದಹಾಗೆ ಅನಿಸಿತು ಅವನಿಗೆ. ಈ ವರ್ಷ ಇರೋ ತೂತುಗಳಿಗೆ ಡಾಂಬರ ಸುರಿಯೋದು ಮೇಲ ಮೇಲೆ ಕಲ್ಲಹಾಕೋದು. ಮಳಿಗಾಲಕ ಮಣ್ಣ ಕೊಚ್ಕೊಂಡು ಹೋಗಿ ಇದಿದ್ದ ಇದ್ದಂಗೆ ಇರತೈತಿ ಮತ್ತೆ ರಿಪೇರಿಗ ಹಣ ಸುರಿಯೋದು. ಹಂಗೆ ಊರಾಗು ಪರಿಸ್ಥಿತಿ ನಿರ್ಮಾಣ ಆಗಿದೆ. ಇದನ್ನ ಸರಿಮಾಡೋದು ಈ ಜನ್ಮದಾಗ ಸಾಧ್ಯನೆ ಇಲ್ಲ ಅನಿಸಿತು. ಸರಾಯಿ ಬಿಡಿಸಿದ್ರೆ ಪರಿಸ್ಥಿತಿ ಒಂದ ಹಂತಕ್ಕಾದ್ರು ಬಂದೀತು ಅಂದ್ಕೊಂಡವನೆ ಹುಡ್ರನ ಒಟ್ಟ ಮಾಡಿದ. ಸರಾಯಿ ಜೀಪ ಬಂದಾಗ ಸರಾಯಿ ಹೆಂಡ ಇಳಿಸದಂಗೆ ಹಾಗೆ ವಾಪಾಸು ಕಳಿಸೋದಂತ ಮಾತಾಡಿಕೊಂಡ್ರು.

ಹನ್ನೆರಡ್ಡಗಂಟಿಗ ಸರಿಯಾಗಿ ಜೀಪ ಬಂತು, ಮಂದಿಗ ಅಂಜಿಸ ಬೇಕಂತ ಇಬ್ಬರ ಮೂವರು ಗೂಂಡಾಗಳು ಜೀಪಿನೊಳಗ ಸತತವಾಗೆ ಇರ್ತಿದ್ರು. ಸರಾಯಿ ತರಾಕ ಹೋದ ರಾಮಗನನ್ನ, "ನೀ ಸರಾಯಿ ತಗೋಳ್ಳೋದ ಬೇಡಪ್ಪ, ತಾಂಡದಾಗ ಸರಾಯಿ ಮಾರೋದ ಬ್ಯಾಡ" ಕುಮಾರಿ ಮತ್ತೊಂದಿಷ್ಟಮಂದಿ ಅವನನ್ನ ಅಡ್ಡಗಟ್ಟಿದ್ರು. "ನಿವ್ಯಾರ್‍ರೋ ನನ್ನ ತಡಿಯೋರು ತಾಂಡದಾಗ ಕುಡಿಯೋರ ಅದಾರ ಅವರು ಸೈ ನಾನ ಸೈ ನಿವ್ಯಾರು ನಡಕ್ಕಂತ" ರಾಮಗ ಎಗರಾಡಿದ. "ನಾವ್ಯಾರ ತೋರ್ಸಿತೀವಿ ಇರು" ಅವನ ಸರಾಯಿ ಅಂಗಡಿ ಗಳಾ ಗೂಟಾನೆಲ್ಲಾ ಕಿತ್ತ ಬಿಸಾಡಿದ್ರು. ಸರಾಯಿ ಜೀಪಿನೊಳಗಿದ್ದ ಗೂಂಡಾಗಳು ಓಡಿಬಂದು. "ಎನ್ರಲೇ, ಯಾಕ ಹಿಂಗ ಮಾಡಾಕ ಹತ್ತಿರಿ ನಿಮ್ಮೂರ ಗುಡಿಗೆ ನಲ್ವತ್ತಸಾವಿರ ರೂಪಾಯಿ ಕೊಟ್ಟವಿ, ಸೊಕ್ಕೇನ ಮೈಯಾಗ" ಅಂದ್ರು. ಬಹಳದಿನಗಳಿಂದ ಸರಾಯಿ ಜೀಪಿನವನ ಉಪಟಳ ಸಹಿಸಿಕೊಂಡೆಬಂದಿದ್ದ ಕೌದಿ, ಹನಮು, ಪರಮು, "ಎತ್ರಲೇ ಬಂಡಿಕಣಗ ದೇವರಕ್ಯಾಣಕ್ಕ ಹೊಡಿಯೋಹಂಗ ಹೊಡೀರಿ, ತಾಂಡದ ಜನರು ಅಂದ್ರ ಎನೋ ಕೀಳಂತ ತಿಳ್ಕೊಂಡಾನ" ಕೌದಿ ಕಣಗ ಹಿಡ್ಕೊಂಡವನೆ ಓಡಿದ. ಅವನ ಹಿಂದಿಂದ ಹನಮು, ಪರಮು ಓಡಿದ್ರು. ಬರಿ ಆಳಬ್ರವಾಗಿದ್ದ ಮೀಸಿ ಓಡಿಬರ್ತಿರೋದನ್ನ ಕಂಡವನೆ ಗಾಬರಿಯಿಂದ ಜೀಪಿನೊಳಗ ನುಸುಳಿದ. "ಡ್ರೈವರ ಲಫ್ಡಾ ಆಗೋ ಹಂಗೆ ಕಾಣತೈತಿ ಚಾಲುಮಾಡ" ಅವರ ಕಡೀಗ ನೋಡದ. "ಏಯ್......... ನಿಲ್ಸೊ" ಓಡಿ ಬರೋದ್ರಾಗ

ಜೀಪು ಕರಗಲ್ಲು ದಾಟಿ ಹೋಗಿತ್ತು. ಕುಮಾರಿಗ ಏನೋ ಗೆದ್ದಕೊಂಡಷ್ಟು ಖುಷಿಯಾಗಿತ್ತು. "ಇವತ್ತಿಂದ ನಾವೆಲ್ಲಾ ಒಗ್ಗಟ್ಟಿಂದ ಇದ್ವಿ ಅಂದ್ರ ತಾಂಡದಾಗ ಯಾರು ಮಾತಾಡಲ್ಲಾ ನೀವೆಲ್ಲ ಪಾಡಾಗಿರ್‍ರಿ" ಅವನ ಮನಸ್ಸಿನೊಳಗೆ ತನ್ನತಾಂಡದ ಕುರಿತು ಇದ್ದ ಒಳ್ಳೆತನ ಹೊರಹಾಕಿದ. ದಿನಾ ಸಂಜಿಗ ಹೆಂಡ ಸರಾಯಿ ಕುಡಿತಿದ್ದ ಗಂಡಸರು ಹೆಂಗಸರು ಯತವತ್ತಾಗಿ ರಾಮಗನ ಅಂಗಡಿಗ ಸರಾಯಿ ಕೇಳಾಕ ಹೋದ್ರು. "ಅಯ್ಯೋ ಅಣ್ಣಾನಿಂಗೊತ್ತಿಲ್ವಾ ಸುದ್ಧಿ. ಊರ ಉದ್ಧಾರ ಮಾಡಾಕ ಗೊತ್ತಾನಾಯ್ಕ ಮಗ ಕುಮಾರಿ ಅನ್ನೋನು ಭಗವಂತನ ಮನಿಯಿಂದ ಬಂದ ಬಿಟ್ಟಾನ. ಅವನ ಹಿಂದ ಒಂದ ನಾಕೈದ ಮಂದಿ ಕುಡ್ಕೊಂಡಾರ ನೋಡಬಾರದು. ಅವರ ಡೌಲು. ಯಾಕಾದ್ರು ಹಂಗ ಹೊಲಸಮಾಡಾಕ ಹತ್ಯಾರೊ" ಬಂದ ಬಂದೋರ ಮಂದ ಅದೇ ಪ್ಲೇಟ ಹಾಕ್ಕೊಂಡು ಹೇಳ್ತಿದ್ದ. ಹೆಂಗಸರಿಗೆ, ಗಂಡಸರಿಗೆ, ಮುದುಕರಿಗೆ, ಸಾರಾಯಿಕೇಳಾಕ ಬರೋ ಸಣ್ಣ ಹುಡುಗರ ಮುಂದ ಅವೇ ಮಾತಗಳು. ಸಂಜಿ ಮುಂದ ಒಂದೆರಡ ಪಾಕೀಟ ಸರಾಯಿ ಕುಡಿದಿದ್ರ ಮಂಕಕವದಂಗೆ ತಲಿನೆ ಓಡ್ದಂಗ ಅಕ್ಕಿತ್ತು ಸೋನ್ಯಾ, ಗಬಡು, ಪೂಜಾರಿಪಾಪಗನಿಗೆ, ವಿಚಾರಗಳೆಲ್ಲ ತಲಿಯೊಳಗೆ ಉಲ್ಟಾಹೊಡಿತ್ತಿದ್ವು. ಹೆಚ್ಚಮಾತಾಡಬೇಕು ಅನಿಸುತ್ತಿರಲಿಲ್ಲಾ, ಊಟದಾಗ, ಕೆಲಸದಾಗ ಆಸಕ್ತಿನೆ ಇಲ್ದಂಗ ಅಕ್ಕೀತ್ತು. "ಛೇ, ಇದೇನ ಫಜೀತಿನೊ ಸೋನ್ಯಣ್ಣ. ತಾಂಡದಾಗಿನ ಹುಡ್ರು ದಿನದಿನಕ್ಕೆ ಹದಗೆಡ್ತಾಹೊಂಟಾರ, ಹೌದು ಆ ಸರಾಯಿಯೋನು, ಗುಡಿ ಕಟ್ಟಿಸಾಕ ನಲ್ವತ್ತಸಾವರ ಕೊಟ್ಟೀವಿ ಅನ್ನೋ ಸುದ್ದಿ ಹೊರಗ ಬಿದ್ದೈತಂತೆ" ಅನುಮಾನದ ಹುಳನ ಸೋನ್ಯಾನ ತಲಿಯೊಳಗ ಬಿಟ್ಟ. ಸರಾಯಿ ಇಲ್ದೆ ಅರ್ಧಕೆಟ್ಟಿದ್ದ ಅವನತಲಿ ಪೂರ್ತಿನೆ ಕೆಡ್ತು. "ಯಾವನ್ಲೆ ಮಗ ಹಂಗಂದೋನು ಕರ್‍ಕೊಂಬಾ ಇತ್ಲಾಗ, ಯಾವನಕೈಯಾಗ ಕ್ಟೊಟ್ಟಾನಂತ ನಲ್ವತ್ತಸಾವಿರ ಬರ್‍ಲೇಳು ಕೇಳಾಕ ನೋಡಾನಂತ" ಸಿಟ್ಟು ತಂದ್ಕೊಂಡು ಒದರಿದ. ಮಂದಿ ಖಾಲಿ ಬರ್‍ತಿರೋದನ್ನ ದೂರದಿಂದ್ಲೆ ಗಮನಿಸಿದ ಸರಾಯಿ ಕುಡಿಯೊ ಚೆಂಪಿ, ಚೆನ್ನಕ್ಕ ಜವುಗಿ, "ಏನ್ರೇ ಇಲ್ಲಂತ ಛೇ," ಅಂತ ಲೊಚಗುಡುತ್ತ, "ಕೈಲಾಗದವರು, ಸರಾಯಿ ಬಂದ ಮಾಡಿಸಿ ಏನಮಾಡ್ತಿದ್ದಾರು ಅಂತ ಅಲ್ಲಕ್ಕ ಕುಡಿಯೋರು ನಮ್ಮೂರಾಗ ಸಿಗದಿದ್ರ. ಎಲ್ಲ ಸಿಗತೈತೊ ಅಲ್ಲಿಂದ ತಂದ ಕುಡ್ದೆ ಕುಡಿತಾರ ಹೌದಲ್ಲ. ಅದನ್ನ ಬಿಟ್ಟು ಯಾರ ಬಂದಮಾಡ್ಸಾಕ ಹತ್ಯಾರೊ ಅವರ ಮನಿಮಂದೀಗ ಕುಡಿಯೋದ ಬಿಡ್ಸಿದ್ರ ಒಳ್ಳೇದು ಏನಂತೀಯ, ಅದನ್ನ ಬಿಟು ಎಲ್ಲಾರ ಬಾಯಿಗ ಗಡ್ಡಿ ಹಾಕಿದ್ರ ಹ್ಯಾಂಗಂತ" ಹಿಡಿಶಾಪಹಾಕ್ತ ತವ್ಮೊಳಗಿನ ತಳಮಳ ತೋಡಿಕೊಳ್ಳ ತೊಡಗಿದ್ರು. ಹೊತ್ತ

ಇಳಿತಿರೊಹಂಗೆಲ್ಲಾ ಚಡಪಡಿಸೋದು ಹೆಚ್ಚಾಗ ತೊಡಗಿತು. ದೇವರ ಮೇಲೆ ಪತ್ರಿ ತಪ್ಪಿದ್ರು ಅವರ ಮಾತ್ರ ಕುಡಿಯೋದನ್ನ ತಪ್ಪಿಸ್ತಾನೆ ಇರ್ಲಿಲ್ಲಾ. ಒಂದ ಭಾನವಾರಿಲ್ಲ, ಶನಿವಾರ ಅನ್ನೋದಿಲ್ಲ, ಹಬ್ಬ ಹರಿದಿನ ಬೇಕಾದಿರಲಿ ಹೆಂಡ ಸರಾಯಿ ಇರಾಕಬೇಕು.

ಸರಾಯಿ ಎಷ್ಟುಮಟ್ಟಿಗ ಪ್ರಭಾವಬೀರಿತ್ತಂದ್ರ, ಸರಾಯಿ ಇಲ್ಲದೆ ಕಾಕಾಪುರದ ಮಂದಿಗ ಬದಕಾಕ ಆಗೋದೆ ಇಲ್ಲಾ ಅಂತ ತಿಳ್ಕೊಂಡಂಗಿತ್ತು. ಹೆಂಗಸರ ಸ್ಥಿತಿ ಹೇಳತೀರದು. ನೀರಿಂದ ಮೀನ ತಗದು ನೆಲದಮ್ಯಾಲ ಬಿಸಾಡಿದಂಗಾಗಿತ್ತು. ಒಂದಿಷ್ಟು ಹೆಂಗಸರು ತಮ್ಮ ಮನಿಹುಡುಗರನ್ನ ಪಕ್ಕದ ಜೋಗಿಹಳ್ಳಿಗ ಸರಾಯಿ ತರಾಕ ಓಡಿಸಿದ್ರು. ಒಂದೇಕೆರೆ ಏರಿದಾಟಿದ್ರ ಬರೋದೆ ಜೋಗಿಹಳ್ಳಿ. ಹುಡುಗರ ಗುಂಪು ಇರವಿಸಾಲಿನ ಹಂಗೆ ಕಾಣ್ತಿತ್ತು. ಹೊಗೋರು ಬರೋರು ಕುಮಾರಿಗ ಹಿಡಿಶಾಪಹಾಕ್ತಿದ್ರು. "ಅವನೇನ ಊರಾಗ ಇದ್ದು ಬಾಳೇವ ಮಾಡೋನಂತ ಸರಾಯಿ ಬಂದಮಾಡ್ಸ್ಯಾನಂತ. ಇದೆಲ್ಲಾ ನಾಕದಿನದಮಟ್ಟಿಗ ನಡಿಯೋದು ಆಟೇಯ, ಆ ಮೇಲೆಲ್ಲಾ ಮಾಮೂಲು" ಮಂದಿ ಮಾತಾಡ ಕೊಳ್ಳತೊಡಗಿದರು. ಅಂತು ಕುಮಾರಿ ಎಲ್ಲರ ಬಾಯೊಳಗ ಪ್ರಚಲಿತನಾಗಿದ್ದ, ಬಾಣವ್ವಗ ಮಗಮಾಡ್ತಿದಿದ್ದು ಒಂಚೂರು ಹಿಡಿಸಲಿಲ್ಲಾ. "ನಿಮ್ಮಪ್ಪನ ಗಂಟೇನ ಹೊಕ್ಕಿತಂತ ಕುಡಿಯೊ ಮಗ ಕುಡಿತಾನ. ಹಾಳಾಗೋನು ಹಾಳಾಗ್ತಾನ ನಿಂದೇನಿತ್ತು ಅಂತ" ಸಿಟ್ಟಾಗಿದ್ಲು. ಅದೇನ ಮಗನ ಮೇಲಿನ ನಿಜವಾದ ಮಮತೆಯಿಂದ ಬಂದ ಸಿಟ್ನೋ ಇಲ್ಲಾ ಸರಾಯಿ ಇಲ್ಲದೆ ಬದುಕಿಲ್ಲಾ ಅನ್ನೋ ಹಂಗ ವ್ಯಸನಿಗಳಾಗಿರೊ ಹೆಂಗಸರ ಗುಂಪಿಗ ಸೇರಿರೊ ಬಾಣವ್ವಗ ಸರಾಯಿ ಇಲ್ದಂಗ ಆತಲ್ಲ, ಅದು ತನ್ನ ಮಗನಿಂದಲೇ ಅನ್ನೋ ಸಂಕಟದಿಂದ ಅಂತ ಗೊತ್ತಾಗಲೇ ಇಲ್ಲಾ. ಅವನಪ್ಪ ಗೊತ್ತನಾಯ್ಕ ಮಾತ್ರ "ಒಳ್ಳೇದ ಮಾಡಿದ್ರು. ಊರಾನ ಹೆಂಗಸರಿಗೆ ಒಂದೊಳ್ಳೆ ಪಾಠ ಕಲಿಸಿದಂಗಾತು. ಮನಿಯಾಗ ಒಂದಕಾಳು -ಕಡಿ ಅನ್ನದೆ ಅಂಗಡಿಗ ತಗೊಂದ ಹೋಗಿ ಬಾಯಿಗ ಬಂದಾಟು ರೇಟಿಗ ಹಾಕ್ತಿದ್ವು, ಊರಾರು ಉದ್ಧಾರ ಆದೀತು" ಅಂದ್ಕೊಂತ್ಲೆ ಒಳಗಿನ ಅಸಮಾಧಾನ ಮುಚ್ಕೊಂಡಿದ್ದ. ಜನರಿಗ ಸಂಜಿ ಕಳಿಯೋದು ದುಸ್ತರ ಅನಿಸಿತು. ರಾಮುಗನ ಮನಿಮುಂದ ದೊಡ್ಡದಂಡೆ ಮೀಟಿಂಗ ಸೇರಿತ್ತು. "ನಾಳೆ ನೀನು ಸರಾಯಿ ಇಳಸ್ಕೊ, ಯಾ ನನಮಗ ನಿನ್ನ ತಡಿತಾನ ನಾವು ನೋಡೆ ಬಿಡ್ತಿವಿ" ಹೆಂಡತಿ ರೊಕ್ಕದ ಮ್ಯಾಲ ಮಜಮಾಡೊ ಮಂದಿ ರಂಗೇರಿದ್ರು. ಅಕಿ ಹೆಂಗಾನ ದುಡದು ತರ್ಲಿ ಕೂಲಿನಾರಮಾಡ್ಲಿ ಮೈನಾರ ಮಾರ್ಲಿ ರೊಕ್ಕ ಸರಾಯಿಗ ಬೇಕೆ ಬೇಕು. ಅಂತಹರದ್ದೆ ಗುಂಪು. ಹೌದು, ಹುಡುಗರು ಮಾಡ್ತಿರೋದು ಒಳ್ಳೆಯದೆ ನಮ್ಮ ಮುಂದ ನಮ್ಮ ಮಕ್ಕಳ ಭವಿಷ್ಯ ಏತಿ ಅನ್ನೊ ಖಬರಿಲ್ಲದೆ ಹುಚ್ಚರಾಗಿ ಕುಮಾರಿಯನ್ನ ಬೋಯ್ಯುತ್ತ ಅಡ್ಡಾಡಿದರು.



ಸಾವಿನಲ್ಲೂ ಸೆರೆ ಕುಡಿಯುವವರು

ಕುಮಾರಿಯ ಆಂದೋಲನ ಬಹಳ ದಿನಗಳ ಕಾಲ ನಡಿಯಲಿಲ್ಲಾ. ಅವನ ಜೊತಿಗಿದ್ದ ಕೌದಿ, ಬಂಗೋಜಿ, ಪಿಂಜ, ಸಾಣು ಇವರೆ ಇವನ ಕಡೀಗ ಒಂದು, ಜನರ ಹತ್ರ ಮತ್ತೊಂದು ಚಾಡಿಮಾತಾಡಿ ಒಂದು ಬಿಗುವಿನೊಳಗೆ ಹೊಂಟಿದ್ದ ಸಂಘರ್ಷಕೆ ಇತಿ ಶ್ರೀ ಹಾಡಿದರು. ಕುಮಾರಿಗ ಬ್ಯಾಸರಾತು, "ಥು, ನಿಮ್ಮ ಹಾಳಾಗಿ ಹೋಗ್ರಿ ನಮ್ಮಪ್ಪನ ಗಂಟೆನ ಹೊಂಟೈತಿ" ನಿರ್ಲಿಪ್ತನಾದ. ಬದಲಾವಣೆ ಮಾಡಬಿಡ್ತೀನಿ, ಸುಧಾರಣೆ ಆಯ್ತು ಅನ್ನೋ ಹುರುಪು ಒಮ್ಮೊಮ್ಮೆ ಮನುಷ್ಯನನ್ನ ಈ ಮಟ್ಟಕ್ಕೆ ತಂದು ಮುಟ್ಟಿಸೋದು ಸಹಜ ಅನಿಸಿತು. ಕಾಕಾಪುರದಾಗ ಜನ ಸುಖವಾಗಿರಬೇಕು. ಸಣ್ಣ ಹುಡ್ರು ಹತ್ತಿಹಲ್ಬಿಗಳ ನಡುವೆ ಮೈ ಪರಚಿಸಿಕೊಂಡು ಪಡ್ತಿರೋ ಅವತಾರನೋಡಿದ್ದ. ಬದುಕನ್ನ ಅರ್ಥೈಸಿಕೊಳ್ಳದ ವಯಸ್ಸಿನೊಳಗೆ ನಡಬಗ್ಗಿಸಿ ಕಳೆತಗಿಯೋದು, ಇಡೀ ದಿನ ದನ ಮೇಯಿಸೋದು ಮಾಡ್ತಿರೊ ಚಿಕ್ಕ ಪುಟಾಣಿಗಳೆಲ್ಲಾ ತಮ್ಮ ತಂದೆಯ ಚಟಕ್ಕೆ ಹುಟ್ಟಿದೊರು. ಯಾವಭಾವನೆಯೇ ಇಲ್ಲ, ಎಲ್ಲಾ ಕೃತಕ ಅನಿಸತೊಡಗಿತು. ಜೀತಕ್ಕಿದ್ದ ಬದಿಯಾನಮಗ ತಂಗಳದು ತಿಂದು,

ಅದೇನಾಗಿ ಸತ್ತೋ ಸಾವುಕಾರಕೊಟ್ಟ ಎಲ್ಡ ಸಾವರ ರೂಪಾಯಿ ಕೈಗೆಸಿಕ್ಕಿಂದ ಚಕಾರ ಎತ್ತಿಲ್ಲಾ, ಸತ್ತೋನ ಜಾಗಕ್ಕ ಅವನ ತಮ್ಮನ್ನ ಒಯ್ದು ಸೇರ್ಸಿ ಡಬ್ಬಲ್ ಅಡ್ವಾನ್ಸ್ ತಂದು ಹೆಂಡಕುಡಿಯೋದು ಕೋಳಿ ತಿನ್ನೋದು, ಮುಗದಮ್ಯಾಲ ಈ ಬದುಕಿಗೆ ಏನಾದರು ಅರ್ಥವಿದೆಯೇ? ಕುಮಾರಿ ಅದರಾಳಕ್ಕೆ ಇಳದಿದ್ದ ದೂರ, ಬಹಳದೂರದವರಿಗೆ ಪಾತಾಳದವರಿಗ ಇಳದಿದ್ದ, ಗಬಡು, ಸಕ್ರು, ಕಿಷುಣಾ, ಚೊಕ್ಕ ಊರಿನ ಇನ್ನೂರು ಮನಿಗಳು ಅಲ್ಲಿ ಬದುಕಿರಬಹುದಾದ ಜನರು ಮಾತಾಡೊ ಕಲ್ಲು ಬಂಡೆಗಳಂತೆ ಗೋಚರಿಸತೊಡಗಿದ್ರು. ಯಾಂತ್ರಿಕ ಕ್ರೀಯೆ. ಮುಂಜಾನೆ ನಸುಕಿನೊಳಗೆ ಏಳೋದು, ಕೈಯಾಗ ರೊಟ್ಟಿಹಿಡ್ಕೊಂಡು ಕೂಲಿಗ ಹೊಗೋದು, ಸಂಜಿ ಮನಿಗ ಬಂದಾಗ ರಾತ್ರಿ ಕಳೆಯೋದೆ ಚಿಂತೆ ಸಿಕ್ಕ ಕೂಲಿರೊಕ್ಕದಾಗ ಅರ್ಧಕುಡಿಯೋದು, ಮಗ, ಮಗಳು ಅಪ್ಪ-ಅವ್ವ ಎಲ್ಲವೂ ಗೌಣ. ಚಾಂದಿ ಅನ್ನೊ ಗಂಡ ಸತ್ತೋಳಿಗ ಮಾತ್ರ ಬದುಕೊಂದು ಸವಾಲು. ಪ್ರತಿದಿನ ಹದಿನೈದು ರೂಪಾಯಿ ದುಡ್ಕೊಂಡ ಬಂದ್ರೇನೆ ಜೀವನ. ಮನಿಯಾಗಿರೊ ಮೂವರು ಮಕ್ಕಳು, ರೊಟ್ಟಿನೋ ಮುದ್ದಿ ಸಂಜೀಗ ಆಗಬೇಕಾದ್ರ ಒಲಿ ಹತ್ತಬೇಕಾದ್ರ ಪ್ರತಿದಿನ ಬಿಟ್ಟು ಬಿಡದೆ ಅಕಿ ಕೂಲಿಮಾಡಲೇ ಬೇಕು. ಇನ್ನು ಕುಡಿಯೋದ ಯಾವಾಗ ? ಅವನ ಎದುರಿಗೆ ಬದುಕಿನ ವೈಪರಿತ್ಯ ಒಂದು ಸವಾಲಾಗಿ ನಿಲ್ಲುತಿತ್ತು. ಒಂದಕಡೀಗ, ತಿಂದುಂಡು ತೇಗುವ ಸಾವುಕಾರ್‍ರು. ಕಾರುಗಳಲ್ಲಿ ನಾಯಿಗಳನ್ನ ಕುಂದ್ರಿಸಿಕೊಂಡು ಮಂದಿ ಮುಂದ ತೋರಿಕೆಗಾಗಿ ಬದುಕಿರೊ ಜನರ ಬದುಕಿಗೂ ಚಾಂದಿ ಅನ್ನೊ ವಿಧವೆ ಬದುಕಿಗೂ ಎಳ್ಳ ಕಾಳಿನಷ್ಟು ಸ್ವಾಮ್ಯವಿಲ್ಲ. "ಏನ ಬದುಕು ಅಂತ, ಇದ್ರಾಗ ಯಾರದು ನಿಜವಾದ ಬದುಕು?" ಗೊಂದಲದಾಗ ಬಿದ್ದ. "ಇದಕ್ಕೇನು ಪರಿಹಾರವೆ ಇಲ್ಲಾ" ಸುಮ್ಮನೆ ಕಾಲರಾಯನ ಕ್ರೀಯೆ ಹಂಗೆ ಹೊಗ್ತಾ ಇರೋದೆ. ಬದುಕನ್ನ ಆರಿಸುವವರು ಕಲ್ಲು, ಮುಳ್ಳು, ಗಾಜಿನ ಒಡಕು ಚೂರುಗಳ ನಡುವೆ ಸೂಕ್ಷ್ಮವಾಗೆ ಆರಿಸಿಕೊಳ್ತಾರ ಅವರ್‍ದು ಅದೇ ಕೆಲ್ಸ ಆರಿಸೋದು. ಮತ್ತೆ ಕೆಲವರು ಗಾಳಿಬೆಳಕಿಲ್ಲದ ಅರಮನೆಯೊಳಗ ಬದುಕನ್ನ ಮಜಮಾಡ್ತಾರ, ಅವರು ಅದನ್ನೆ ಮಾಡ್ತಿರ್‍ತಾರ. "ಈ ಬದುಕಿನ ಬಗ್ಗೆ ಜಾಸ್ತಿಯೋಚ್ನೆ ಮಾಡಬಾರ್‍ದು ಮಾಡಿದ್ರೆ ಯೋಚ್ನೆಮಾಡೋನು ಹತಾಶನಾಗ್ತಾನ ಜೀವನದ ಮೇಲಿನ ಆಶಿನೆ ಹೊಂಟಹೋಗತೈತಿ". ಒಂದಕ್ಷಣ ಬುದ್ದನಂತೆ ಮೌನವಾಗೆ ಕುಂತ ಜ್ಞಾನೋದಯವಾಗಲಿಲ್ಲ. ಎದ್ದವನೆ ವಾಪಾಸು ತಾನಿದ್ದ ಸಾಂಬೂರಿಗೆ ಹೋಗಬೇಕನ್ನೊ ನಿರ್ಧಾರ ಮಾಡಿದ. ನಪಾಸಾಗಿ ಊರಿಗ ಊರನ್ನೆ ಹಾಳಮಾಡಕ ಹತ್ತಿರೊ ಯುವಕರ ಬದುಕನ್ನ ಹೊಸದೊಂದು ದಿಕ್ಕಿಗೆ ಒಯ್ಯುಕಂತ

ನಿರ್ಧರಿಸಿದ್ದ. "ಯಾಕಹಿಂಗ ಹಾಳಾಗಿದ್ದಿರೋ ಒಂದ ಸಂಘ ಮಾಡ್ಕೊಳ್ರಿ ಒಳ್ಳೊಳ್ಳೆ ಕೆಲ್ಸಮಾಡಿ ಇಡಿದೇಶದಾಗ ಹೆಸರಮಾಡ್ರಿ" ಯೋಚನಾ ಲಹರಿಯನ್ನ ಹರವಿದ್ದ. ಯಾವತ್ತು ನಾಕಹುಡ್ರು ಸೇರಲಿಲ್ಲಾ ಚರ್ಚೆಮಾಡಲಿಲ್ಲಾ ಸಂಘ ಕಟ್ಟಲೇ ಇಲ್ಲಾ.

ಯಥಾ ಪ್ರಕಾರ ಬದಕ ಸಾಗಿತ್ತು. ಕಾಕಾಪುರದಾಗ ಕುಡಿಯೋದು ಉಣ್ಣೋದು, ಹೊಡದಾಡೋದು. ಅದ್ರಾಗ, ಬದಿಯಾನ ಮನಿಗೂ ಅವನ ಅಣ್ಣತಮ್ಮಂದಿರಿಗೂ ನಡದ ಜಗಳ ಭಯಾನಕವಾದದ್ದು, ಬದಿಯಾನಾಯ್ಕ, ಪಾಂಡೇಶಿ, ಪಿತಾಂಬರಿ ಒಂದ ತಾಯಿಮಕ್ಕಳು ಗಣಪುನಾಯ್ಕ, ಹನ್ಮಂತಿ ಅವರ ಮತ್ತೊಬ್ಬ ಅಜ್ಜನ ಮಕ್ಕಳು, ಬದಿಯಾನ ಅಣ್ಣ ಪಾಂಡೇಶಿ ನಾಯ್ಕನ ಹೇಣ್ತಿ ಚೌಲಿ ಎಲ್ಡಹೆಣ್ಣು ಒಂದ ಗಂಡ ಹುಡ್ರನ್ನ ಬಿಟ್ಟ ಸತ್ತಹೋಗಿದ್ಲು. ಪಾಂಡೇಶಿ ಎಲ್ಡೂ ಹುಡ್ರನ್ನ ತಗೊಂಡು ಗಣಪುನಾಯ್ಕನ ಮನಿಯಾಗ ಇರತೊಡಗಿದ. ಅಲ್ಲೇಉಂಡು ಅವರದೇ ಕೆಲ್ಸಮಾಡ್ಕೊಂತ ಹುಡ್ರನ ಸಾಕಿದ. ಗಣಪು ಹಂಪಾಪುರ ಹನುಮಾಪುರ ಅಂತ ತಿರಗಾಡಿ, ಕುರಿ-ಕೋಳಿ, ಎತ್ತು, ಎಮ್ಮಿಕರಗಳನ್ನ ಖರೀದಿಸಿ ವ್ಯಾಪಾರ ಮಾಡ್ತಾ ಕಾಕಾಪುರಕ್ಕ ಬರೋದೆ ಅಪರೂಪ ಆಯ್ತು. ಅದಕ್ಕೆ ಅವನ ಹೇಣ್ತಿ ಪಾಚಿ ಪಾಂಡೇಶಿ ಕೂಡ ಸಲಗಿ ಬೆಳಸ್ಕೊಂಡ್ಲು. ಅವತ್ತ ಅದನ್ನ ಅರ್ಥಮಾಡ್ಕೊಳ್ಳದ ಪಾಂಡೇಶಿ ಅಕಿ ಹೇಳ್ದಂಗ ಕೇಳ್ಕೊಂಡು ಒಬ್ಬನೇ ಮಗ ಡಿಂಗನಾಯ್ಕನಿಗೆ ಅನ್ಯಾಯಮಾಡಿದ್ದ. ಗಣಪೂನಾಯ್ಕನ ಎಂಟಜನ ಗಂಡಮಕ್ಕಳು ಪಾಂಡೇಶಿಯ ಹತ್ತ ಎಕ್ಕರಿ ಹೊಲ ತಮಗ ಸೇರಬೇಕಾದ್ದು ಅಂತ ಜಗಳಕ ನಿಂತ್ರು. ಡಿಂಗ ಅನಾಥನಾದ, ಅವನ ಕಕ್ಕಂದಿರು ಡಿಂಗನ ಪರವಾಗೆ ಜಗಳಮಾಡಿದ್ರು. ಕದನ ನಡದೆ ಇತ್ತು ಎಲ್ಲಿ ಮಟನಡೀತಂದ್ರ ಗಣಪುನ ಮಕ್ಕಳೆಲ್ಲಾ ಸೇರ್ಕೊಂಡು ಪಾಂಡೇಶಿನ ಕೊಚ್ಚಿಹಾಕಿ ಜೈಲಸೇರಿದ್ರು. ಇಡಿ ಕಾಕಾಪುರ ತಲ್ಲಣಿಸಿ ಹೋತು. ಒಂದ ಕಪ್ಪುಚುಕ್ಕೆಯಾಗೆ ಉಳ್ಕೊಂಡಬಿಡ್ತು. ಅದನ್ನ ಬಿಟ್ರ ಊಳದೊವೆಲ್ಲಾ ಸಹಜ ಸಾವುಗಳೆ.

ಕಾಕಾಪುರದ ಜೋಡ ಹನ್ಮಂತ ದೇವರ ಮೂರ್ತಿಗಳ ಬಗ್ಗೆ ಕಾಕಾಪುರದ ಹೆಂಗಸರ ಪ್ರತಿರೋಧವಿತ್ತು. ಜೋಡಿ ಮುರಿತಾನ ಹನ್ಮಪ್ಪ ಅಂತಂದು. ಆತ ಗುಡಿಯಾಗ ಕುಂತ್ಕೊಂಡಿರೋನು ಅವನ್ಯಾಕ ಮುರಿಯಾಕ ಹೋದಾನು. ತಮ್ಮ ಚಟಕ್ಕ ಹಗಲು ಹನ್ನೊಂದ ತಾಸು ಕುಡ್ಕೊಂತ್ಲೆ ತಿರಿಗಾಡೊ ಗಂಡಸರ ಕಳ್ಳು ಪುಪ್ಪಸನಾರು ಏನಾಗಬ್ಯಾಡ. ಗಂಡಸರು ಕುಡ್ಕೊಂಡ ಬಂದು ಅಂಡಮ್ಯಾಲಮಾಡಿ ಬಿದ್ಕೊಂಡ್ರ ಎಟದಿನಾಂತ ಹೆಂಗಸರು ನಿದ್ದೆ ಬಾರದ ರಾತ್ರಿಗಳನ್ನ ಕಳದಾರು? ಸುಖವಿಲ್ಲದ ತಂಪನೆ ಇರಳು ಬಿಸಿಯಾಗಿ ಮೈಕಾವೇರಿಸಿ ಬಿಡುತಿತ್ತು. ಇಡಿರಾತ್ರಿಯ ಮುಲಕಾಟ, ಬಿಡಿಸಿಕೊಂಡು ಹೊರಬರಲು

ಕದತೆಕ್ಕೊಂಡು ಹೊರಗೆ ಬಂದಾಗ ಹೋರಬಿಟ್ಟು ಹೊರಗ ಬಂದ ಏಡಿಯನ್ನ ಕಾಯ್ತಿರೊ ಕಾಗೆಗಳಂಗೆ ಕಾಯ್ತಿರೊ ಹರೆಯದ ಹುಡುಗರ ಸಹವಾಸ ಅದನ್ನ ಕಂಡು ಮತ್ತೊಂದಿಷ್ಟು ಜಿಗುಪ್ಸೆಗೊಂಡ ಅವರ ಗಂಡಂದಿರು ಹೆಚ್ಚೆಚ್ಚು ಕುಡಿಯುತ್ತಿದ್ದರು. ಗೊತ್ತಿನಾಯ್ಕನ ಮನಿಮಂದಿ ಮಾತ್ರ ಎಚ್ಚರಾಗಿದ್ರು. ಇಡಿ ಊರಿಗ ಊರೆ ಮಕ್ಕೊಂಡಿತ್ತು, ಈಶಾನ್ಯ ಮೂಲಿಯಿಂದ ಯಾರೋ ಹೆಂಗಸರು ಕಿಚೋ ಅಂತ ಕೂಗಿಕೊಂಡಂಗಾಗಿ ನುಗ್ಲ ಓಡಿದ. ಗೊತ್ತಾನಾಯ್ಕನ ಮನಿಯಾಗ ಮಾತಾಡ್ಕೊಂಡ್ರು. "ಏನಾತಂತೆ, ನಮ್ಮ ರಂಬೂಜಿ ಮನಿಕಡಿಂದ ಆವಾಜ ಬಂದಂಗೈತಿ ಸುಮ್ಮೆನೆಕೇಳ್ರಿ" ಗೊತ್ತನಾಯ್ಕ ಗದರಿಸಿದ. ಹುಡ್ರೆಲ್ಲಾ ಗಪ್ಪಾಗಿ ಧನಿ ಬಂದಕಡಿಗ ಗಮನ ಕೊಟ್ಟಕೇಳ್ತಿದ್ರು. ರಂಬೂಜಿ ಹೆಂತಿ ಲಕ್ಷ್ಮಿ ಧನಿ ಜೋರ ಜೋರಾಗಿ ಕೇಳ್ತಿತ್ತು. "ಈಗ ಪಾಡಿದ್ಯಲ್ಲೋ ಹೂಂ, ಬ್ಯಾಡಂದ್ರು ಜೋಡಿಹಳ್ಳಿಗ ಹೋಗಿದ್ನೆಯವ್ವಾ..... ಈಗ ಯಾರಿಗ ಗಂಡಲನ್ನಿ" ಅಕಿ ಧನಿಯಾಗ" ದುಃಖ ಇತ್ತು. ರಂಬೂಜಿ ಕುಡಿತಿದದ್ದು ಮದ್ಲುಹೆಂಡ, ಅದಾದ ಮೇಲ ಸರಾಯಿ, ಅದಾದಮ್ಯಾಲ ಮತ್ತ ಹೆಂಡ. ಹಿಂಗ ತರಾವರಿಯಾಗಿ ಕುಡಿತಿದ್ದ, ಕುಡಿತಾನೆ ಇರ್ತಿದ್ದ. ಇರೋ ನಾಕ ಎಕ್ಕರಿಹೊಲ್ದಾಗ ಬೆಳದಿದ್ದನೆಲ್ಲಾ ಮಾರ್ತಿದ್ದ, ಹೆಂತಿ ದುಡಿಬೇಕು ಗಂಜಿಕಾಸಬೇಕು, ಹಿರೆಮಗ ಫಕ್ರು ಕೂಲಿಗ ಹೊಕ್ಕಿದ್ದ. ಚಿಕ್ಕೋರ ಒಂದಿಬ್ಬರನ್ನ ಎರಸೀಮಿ ದ್ಯಾಬೆಗೌಡನ ತಾವ ಜೀತಕ ಇಟ್ಟಿದ್ದ. ದುಡ್ಡ ಕೈಯಾಗ ಇದ್ದ ದಿನವಂತು ಮುಖತೊಳ್ಕೊಂಡು ನೀರ ಕುಡಿಯಾಕ ಮದ್ಲು ಸರಾಯಿ ಕುಡಿತ್ತಿದ್ದ. ಉಣ್ಣಾಕ ಮನಿಗ ಬರ್ತಾನೆ ಇರ್ಲಿಲ್ಲಾ. ಅಲ್ಲೆ ಅಂಗಡಿಯೊಳಗ ಖಾರಮಂಡಕ್ಕಿ, ಬಜ್ಜಿ ತಿಂದು ಮತ್ತೆ ರೊಕ್ಕ ಮುಗಿಯೋ ಮಟ ಕುಡಿತ್ತಿದ್ದ. ಅವತ್ತು ದೀಪಾವಳಿ ಅಮೂಸಿ ಬೆಳಕರಿಹೊತ್ತಿಗೆ ರಕ್ತದಾಗ ಕೈ ಬೆಳ್ಳ ಅದ್ದಿದವನೆ ಸಿದಾ ರಾಮುಗನ ಅಂಗಡಿಗ ಹೋಗಿ ಮೂರಪಾಕೀಟಸರಾಯಿನ ಹಲ್ಲಿಲೆ ಕಡಿದು ಸುರ್ಕೊಂಡು ಕುಡದ. ಅದು ಸಾಲದಾಗಾನ ಹಿಂದ್ಲೂರಿನ ದ್ಯಾಮುಗನ ಹೆಂಡದಂಗಡಿಗ ಹೋಗಿ ಎರಡಬಾಟಲ ಹೆಂಡಕುಡದ. ಸಂಗೂರಿನ ಅವನ ತಂಗಿಗಂಡ ತಿಪಗ ಸಿಕ್ಕ ಅಂತ ರಂಬೂಜಿ, ತೊದಲುತ್ಲೆ, "ಏನೋ ಮಾವ, ಮುಂದಿನ ದೀಪಾಳಿಗ ಯಾರ ಬದಕ್ತಾರೋ ಯಾರಸಾಯಿತಾರೊ ಯಾಂವ ಬಲ್ಲ, ನಾವೇನ ಕಂಡೀವ ಇರೊವರಿಗ ತಿಂದುಂಡು ಸಾಯೊದೋ ಏನಂತಿಯಾ" ಖುಷಿಯಿಂದ ತೆಲಾಡ್ತಾ ಹೇಳಿದ. ದ್ಯಾಮಗನ ಕಡಿ ತಿರುಗಿ "ಏಯ್ ಹಾಕೊ ದ್ಯಾಮ, ಎಲ್ಡೆಲ್ಡ ಬಾಟ್ಲಿ ಸುರಿ ಬೊಗಾಣಿ ಯೊಳಗ" ಉಪ್ಪಿಗಾಗಿ ಹುಡಕಾಡಿದ. "ಹಂಗಲ ರಂಬೂಜಿ, ಮುಂಜಾನಿ ಮುಂಜಾನಿಗೆ ಏನಿದು" ತಿಪಗ ಪ್ರಶ್ನಿ ಮಾಡ್ದ. "ನೀ ಸುಮ್ಮಿರಪ್ಪ, ನೀನನ್ನ ಮಾವ ಹೌದು. ನನ್ನ ತಂಗೀನ

ಕೊಟ್ಟೇನಿ, ಬಹಳ ದಿನಕ್ಕೆ ಬೇಟ್ಟಿಯಾಗೀವಿ, ಅದ್ರಾಗೂ ದೀಪಾಳಿಹಬ್ಬದಾಗೆ ಅದೂ ಅಲ್ದೆ ನಮ್ಮ ಲಂಬಾಣಿ ಜನಾಂಗದ ರೀತಿ ರಿವಾಜೆ ಇದಲ್ವೆ" ಅವನ ಬಾಯಿ ಮುಚ್ಚಿಸಿದ. "ಏನಾರ ಯಾಕಾಗವಲ್ದು ನೀ ಮನಿಗ ಹೋಗಿ ರೊಟ್ಟಿ ತಿನ್ನು ಆಮ್ಯಾಲ ಏಟ ಬೇಕಾದ್ರು ಕುಡಿ" ತಿಪಗ ತಿಳಿಸಿಹೇಳಿದ. "ಏಯ್ ದ್ಯಾವ ಮತ್ತೊಂದೊಂದು ಸುರಿಯೋ ಇತ್ಲಾಗ" ತನ್ನ ಕಡಿಯಿಂದ ಒಂದೊಂದು ಬಾಟಲು ಹಾಕ್ಸಿದ ತಿಪಗ, "ನಾನಕೊಡ್ತಿನಿ ಬಿಡು" ರಂಬೂಜಿ ಒತ್ತಾಯ ಮಾಡ್ತ. ತಿಪಗ ದುಡ್ಡ ಕೊಟ್ಟವನೆ ಜುಕ್ಕ ಜುಲ್ಮಿಯಿಂದ ಎಬ್ಬಿಸಿಕೊಂಡ ಹೊಂಟ್ಟ. ಕೆರಿಏರಿ ಹತ್ತಾಕ ಆಗದೆ ಮೂರಸಲ ಅರ್ಧಕ ಹತ್ತಿ ಇಳದು ಹತ್ತೋದ್ರಾಗ ತಿಪಗಗ ಕುಡಿದಿದ್ದಾಟು ಇಳದಹೋತು. ಖಾಲಿ ಹೊಟ್ಟೆಲೆ ಕುಡದಿದ್ದ ರಂಬೂಜಿಗ ಕಣ್ಣ ಬಿಡಾಕ ಆಗ್ತಿರಲಿಲ್ಲಾ. ದಿಬ್ಬ ಹತ್ತಿ ಹುಣಸಿ ಮರದ ನೆಳ್ಳಾಗ ಕುಂದ್ರಿಸಿದ. ರಂಬೂಜಿಗ ಕಣ್ಣ ಬಿಡಾಕ ಆಗ್ತಿರಲಿಲ್ಲಾ. ಅವನು ಸಂಕಟ ಪಡ್ತಿರೋದನ ನೋಡಿದ ತಿಪಗ "ಇವ್ನವ್ವನ ಇದೊಳ್ಳೆ ಫಜೀತಿ, ಸತ್ತಗಿತ್ತ ಹ್ವಾದಾನು ನನ್ನ ಮ್ಯಾಲ ಬಂದೀತೊ ಮರಾಯ, ಇದೊಳ್ಳೆ ಮುಸಿಬತನ್ನ ಮೈಮ್ಯಾಲ ಹಾಕ್ಕೊಂಡಂಗಾತಲ್ಲ ತಗಿ ಅತ್ಲಾಗ ಮನಿಗ ಹೋಗಿ ಲಕ್ಮಿಗಾದ್ರು ಹೇಳಾನ" ಮಣಕಾಲಮಟ ನೀರಾಗೆ ದಾಟಿದ ರಂಬೂಜಿ ಜುಕ್ಕ ಜುಲ್ಮಿಯಿಂದ ಕಣ್ಣ ಬಿಟ್ಟ ತಾನು ಅಭಿನಯಿಸಿದ ಹೇಮರೆಡ್ಡಿ ಮಲ್ಲಮ್ಮನ ನಾಟಕದ ಹಳೆ ಹಾಡನ ನಾಲಿಗ ತಡವರಿಸ್ಕೊಂತ್ಲೆ ಹಾಡಿದ. ನನ .... ಮೇ ..... ಲೆ ಸ ಸೌತಿ ತ ರ ತೀನಂದ ..... ಮನಿಯಾಗ.... ಇಡತೀನಂದ ತಂದಾರ .... ತರ ..... ತರಲೆಂದೆ.... ಒಂದ ನಿಮಿಷ ಕಣ್ಣು ಮುಚ್ಚಿದ. ಎದ್ದವನೆ ಕೆರಿ ಏರಿ ಹಿಡ್ಕೊಂಡು ಸೀದಾ ಜೋಡಿಹಳ್ಳಿ ಕಡೀಗ ಹೊಂಟ. ಮುಂದ್ಲೂರಿಗ ಹೋಗಿ ಲಕ್ಮೀಗ ಸುದ್ಧಿ ಮುಟ್ಟಸಬೇಕಂದ್ಕೊಂಡಿದ್ದ ತಿಪಗ ಹೆದರಿ ತನ್ನ ಮೂರನೆ ಅಳಿಯ ಜಂಬನ ಮನಿಗ ಹೋಗಿ ಉಂಡ ಮಕ್ಕೊಂಬಿಟ್ಟ. ರಂಬೂಜಿ ಜೋಡಿಹಳ್ಳಿಯೊಳಗ ಸರಾಯಿ, ಸೆಂದಿ ಬ್ರಾಂದಿ, ಮೂರನ್ನು ಕುಡ್ಕೊಂಡು ಹೆಂಗೆಂಗೊ ತೆವಳ್ತಾ ತೆವಳ್ತಾ ರಾತ್ರಿ ಏಳೆಂಟ ಗಂಟಿ ಸುಮಾರಕ್ಕ ಕಾಕಾಪುರ ಸೇರಿದ. ಮನಿ ಮಂದಿ ಎಲ್ಲಾ ಹುಡಕಾಡಿದ್ದೆ ಹುಡಕಾಡಿದ್ದು, ಸಣ್ಣಹುಡುಗರಿಗೆಲ್ಲಾ ಮಾಂಸದ ಸಾರಿಂದ ಊಟಕ ಹಾಕಿದ ಲಕ್ಮಿ ಗಂಡಗ ಊಟಕ ಇಕ್ಕಾಕ ಕಾಯ್ತ ಕುಂತಿದ್ಲು. ಎಲ್ಲಾ ಹೆಂಡದಂಗಡಿ, ಸರಾಯಿ ಅಂಗಡಿ, ಚಾಂದಗಡಿಗಳನ್ನ ಸುತ್ತಿ ನೊಡ್ಕೊಂಡ ಬಂದ ಅವನ ಹಿರಿಮಗ, "ಎಲ್ಲಿ ಹಾಳಾಗ ಹೋಗ್ಯಾನೊ ನಡಿಬೇ ಹೊಟ್ಟಿಹಸದೈತಿ ಉಣಾಕ ಇಕ್ಕು. ಒಂದಿನ ಎರಡದಿನದ್ದಲ್ಲಾ. ಇವತ್ತ ಹಬ್ಬ ಐತಿ ಅನ್ನೊ ಖಬರಾದ್ರು ಬ್ಯಾಡವಾ, ಮನಿಯಾಗ ಮಕ್ಕಳು ಕಾಯಾಕ ಹತ್ತಿರಬೇಕು ಅನ್ನೊ ಪರಿವಾದ್ರು

ಇದಿದ್ರೆ" ಜೋರಮಾಡಿದ. "ಮಗನೆ ಉಣ್ಣುವಿಯಂತೆ ಗುಡ್ಡಕಾಕನ ಮನಿಗ ಹೋಗಿ ನೊಡ್ಕೊಂಡ ಬಂದಬಿಡು" ಕಳಿಸಿದ್ಲು. "ಗುಡ್ಡಾಕಾಕ, ಎಯ್ ಗುಡ್ಡಕಾಕ, ಊಟಮಾಡಾಕ ಹತ್ತಿಯೇನ ಮತ್ತ" ಹೊರಗಿಂದ್ಲೆ ಕೂಗಿದ. "ಯಾರವರು" ಗುಡ್ಡನ ಹೆಣ್ತಿ ಕೇಳಿದ್ಲು. "ನಾನಬೇ ನಿನ್ನವ್ವನ" "ಯಾಕೊ ಮಗ ಇಷ್ಟೊತ್ತಿನ್ಯಾಗ ಬಂದಿಯಾ ಎನ್ಸಮಾಚಾರ, ಏನಾತು" ಕೇಳಿದ್ಲು ಗುಡ್ಡನ ಹೆಣ್ತಿ. "ನಮ್ಮಪ್ಪ ಏನಾರ ಬಂದಿದ್ನೇನಂತ ಬಂದೆ" ಅಂದವನೆ ನಿಲ್ಲದಂಗ ವಾಪಾಸಾದ. ಒಂದ ಘಳಗಿ ಆಕಡೀಗ ಈ ಕಡೀಗ ನೋಡಿದವನೆ ಕಾಲ್ಮಡಿಯಾಕಂತ ತಮ್ಮ ಕಣದ ಕಡೀಗ ನಡದ. ಸೊಪ್ಪಿ ಬಣವಿ ಪಕ್ಕದಾಗ ಬಿಟ್ಟಿದ್ದ ಜಾಲಿ ಮುಳ್ಳಿನ ಪಾಯಿ ಮ್ಯಾಲ ಯಾರೊ ಬಿದ್ದಂಗ ಕಂಡು "ಅರೆ ಇವ್ನವ್ವನ ಯಾವನೊ ಕುಡದು ಮುಳ್ಳಿನ ಪಾಯಿಮ್ಯಾಲೆ ಬಿದ್ದಾನಲ್ಲ" ಅಂದ್ಕೊಂತ ಹತ್ರಕ ಹ್ವಾದ. ಇನ್ನೂ ಉಸರಾಡ್ತಿದ್ದ ಒಂದಸಲ ಗಕ್‌ಗಕ್ ಂದವನೆ ಮೌನವಾದ. ಹೆದರಿದ ಹುಡುಗ ಬಗ್ಗಿನೋಡ್ದ, ಅವನಪ್ಪ, ಕ್ಷಣಕಾಲ ಕಾಲು ಕೈ ಆಡದಂಗಾದ್ದು. ಮನಿಗ ಓಡೋದೊ ಹೆಣ ಎತ್ತೊದೊ ಬ್ಯಾಡೊ ಅಂತ ನಿರ್ಣಯಮಾಡಾಕ ಆಗದೆ ಸುಮ್ನೆ ನಿಂತ, ಸ್ವಲ್ಪಹೊತ್ತು ಸುಧಾರಿಸಿಕೊಂಡವನೆ ಮನಿಗ ಓಡಿಹೋಗಿ ಸುದ್ಧತಿಳಿಸಿದ.

ರಂಬೂಜಿ ದೆವ್ವ ಆಗಿ ಬಂದ ಹರೆಯದ ಅವನ ತಮ್ಮ ಕೆಂಚನಾಯ್ಕನ ತಗೊಂಡಹ್ವಾದ ಅಂತ ಮಾತಾಡ್ಕೊಳ್ಳ ತೊಡಗಿದ್ರು. ಅವನು ಅವನ ಅಣ್ಣನ ಹಾಗೆ ಹಗಲು ರಾತ್ರಿ ಕುಡದು ಸೆಟ್ಕೊಂಡು ಹ್ವಾದ ಸತ್ಯ ಬಹಳ ಮಂದಿಗ ತಿಳಿಲೆ ಇಲ್ಲಾ. ಅವನ ಸತ್ತಮ್ಯಾಲ ಅವನ ಮನಿಮುಂದಿನ ಸಾಲಿನ ಐದನೆ ಮನಿಯ ಕುಲ್ಡಕುರ್ಮಾನಾಯ್ಕ ಕುಡದು ನೆಲಕ್ಕ ಬಿದ್ದೋನು ಮ್ಯಾಲ ಎಳಲೇ ಇಲ್ಲಾ. ಅವನ ಸತ್ತ ಒಂದವಾರದಾಗ ಅವನ ಹಿಂದಿನ ಮನಿ ಹುಸೇನಿ ಕುಡದ ಸತ್ತಹ್ವಾದ. ಕಾಯಕದ ಕಬರಯ್ಯನ ಅಳಿಯ ಚಾಮಯ್ಯ ಕುಡ್ಕೊಂಡ ಬಂದು ಬಿದ್ದೋನು ಮ್ಯಾಲ ಎಳಲೇ ಇಲ್ಲಾ. ಇಪ್ಪತ್ತೈದು ಮಂದಿ ಗಂಡಸರು ಬರಿ ಕುಡದ ಕುಡದೆ ಸತ್ತ ಹ್ವಾದ್ರು. ಅವರ ಹೆಂಡತಿಯರೆಲ್ಲಾ ಎಳೆವಯಸ್ಸಿನೊಳಗೆ ವಿಧವೆಯರಾಗಿ ಹನ್ಮಪ್ಪಗ ಹಿಡಿಶಾಪ ಹಾಕಾಕ ಹತ್ಯಾರ ಸಾಯೋರ ಲೀಸ್ಟಿನೊಳಗಿದ್ದ ಲಂಬೂಕಾಮನಾಯ್ಕ, ಗಿಡ್ಡ ಸೀತಾನಾಯ್ಕ ಹ್ಯಾಂಗ ಎಚ್ಚತ್ಕೊಂಡ್ರೊ ಕುಡಿಯೋದನೆ ಬಿಟ್ಟ, ಬಿಟ್ಟು ವರ್ಷಕ್ಕ ಒಂದ ಸಲನೊ ಎರಡಸಲ ಕುಡಿಯೋದನ್ನ ರೂಢಿ ಮಾಡ್ಕೊಂಡ್ರು. ಆದ್ರ ಕಾಕಾಪುರದ ಹೆಂಗಸರು ಬುದ್ದಿವಂತೆಯರು, ಉಣ್ಣಾಕ ಮುಂಚೆ ಕುಡದ್ರು ಉಪಾಸ ಮಕ್ಕೊಂತಿರಲಿಲ್ಲಾ ಅಮಲಿನ್ಯಾಗ ಉಳದಿದ್ದ ಪಳದಿದ್ದೆಲ್ಲಾನು ಬಾಚಿ ಸ್ವಚ್ಛಗೊಳಿಸಿಕೊಂಡ ತಿಂದ ಮಲಗ್ತಿದ್ರು. ಅವಕ್ಯಾವ ಕಾಯಿಲೇನು ಬರ್ತಿರಲಿಲ್ಲಾ.

ಎಷ್ಟಕುಡದರು ಒಬ್ಬಾಕಿನುಸಾಯೋ ಸ್ವಲೆತ್ತಲಿಲ್ಲಾ. ಸತ್ತೂರ ಮ್ಯಾಲನಾಕ ಕಣ್ಣೀರ ಸುರಸಿ ಕುಡಿಬಾರ್ದಂತ ಮನಸ್ಸಿನ್ಯಾಗ ಸಂಕಲ್ಪ ಮಾಡ್ಕೊಂಡು ಸಂಜಿ ಮುಂದ, "ಸಾಯೋದು ಒಂದದಿನ, ಹುಟ್ಟೋದ ಒಂದದಿನ, ಈ ಎಲ್ಲಾ ಪಾಪಗಳನ್ನ ನೋಡಾಕಿಂತ ಸಾಯೋದೆ ಪಾಡು ತತ್ವಜ್ಞಾನಿಗಳಂಗೆ ಗಂಡಸರಮುಂದ ಒಪ್ಪಿಸಿ ಶಭಾಶ್‌ಗಿರಿ ಪಡ್ಕೊಂಡ ಮರೆಯಾಗ್ತಿದ್ರು.

ಕುಡಿಯೋರು ಕುಡಸೋರು-ತಲಿಕೆಡಸೋರೇನ ಕಮ್ಮಿಯಾಗಲಿಲ್ಲಾ ಊರಾಗೀಗ ಮೂರಸರಾಯಿ ಅಂಗಡಿ, ನಾಕ ಬ್ರಾಂದಿ ಕಳುವಿಲೆ ಮಾರೊ ಅಂಗಡಿಗಳು, ಒಂದ ಸೆಂದಿ ಅಂಗಡಿಯಾಗಿ ಜನರ ಮನದ ದಣಿವಿನ ತಾಣಗಳಾಗಿದ್ವು, ಗೊತ್ತಾನಾಯ್ಕ ಆತನ ಹೇಣ್ತಿ ಬಾಣವ್ವ ದೀಪಾವಳಿ ಅಮಾಸಿ ದಿವಸ ಮಾಂಸದ ಸಾರಿನ ಜೊತಿಗೆ ಆರೇಳು ಮಕ್ಕಳ ಸೊಸಿಂದಿರಿಗ, ಕುಡಿಯೋದನ್ನ ಕುಂತ್ಕೊಂಡೆ ಹಂಚುತ್ತಿದ್ರು. ಸೊಸೆಯಂದಿರು ವರ್ಷಕ್ಕ ಒಂದದಪ ಸಿಗೋದನ್ನ ತೀರ್ಥ ಅಂತ ತಿಳ್ಕಂಡ ಒಂದೇ ಗುಟಕಿಗೆ ಕುಡದು "ಥು ಏನ ಘಾಟ್ಯೆತೆ ನಮ್ಮವ್ವ. ದಿನಾ ಕುಡಿಯೋರು ಹೆಂಗ ಕುಡಿತಿದ್ದಾರು" ಕಣ್ಣು ಮುಚ್ಚಿ ಮಕ ಸಿಂಡರಿಸುತ್ತಿದ್ರು. ಗಂಡಸರು ಮಾತ್ರ ಒಂದೇ ಗುಟುಕಿಗೆ ಗಂಟಲೊಳಗ ಹನಿಸಿ ಕೊಂಡಿದ್ದೆ. ಮತ್ತೊಂದ ಟ್ರಿಪ್ ಬಂದೀತಂತ ಆಶಿಗಣ್ಣಿಂದ ನೋಡ್ತಾ ತಟ್ಟಿಯೊಳಗೆ ಜುಲ್ಮಿಯಿಂದ ಕೈ ಇಡ್ತಿತಿದ್ರು. ಬ್ಯಾರೇರ ಮನಿಯಾಗ ಗೊತ್ತಾನಾಯ್ಕನ ಮಕ್ಕಳ ಒರಿಗೆಯವರೆಲ್ಲಾ ಒಂದೊಂದು ಬ್ಯಾರೆ ಮನಿಕಟ್ಕೊಂಡು ತಮ್ಮಮನಸ್ಸಿಗೆ ಬಂದಂಗ ಬದಕಾಕ ಹೊರಗ ಹೋಗಿದ್ರು. ಇಡಿ ಊರಾನ ಮಂದಿ ತುಂಬಿದ ಮನಿಮುರಿಯಾಕ ನಾನಾನಮೂನಿ ಯೋಚನೆ ಮಾಡಿದ್ರು ಯಶಸ್ವಿಯಾಗಲೇ ಇಲ್ಲಾ. ಗೊತ್ತಾನಾಯ್ಕನಿಗೆ ಮಣ್ಣಿನ ಕೂಡ ಒಳ್ಳೆ ಒಡನಾಟವಿತ್ತು. ಹುಮ್ಮಸ್ಸಿತು, ಕನಸಗಳಿದ್ವು, ಎಲ್ಲಾಕ್ಕಿಂತ ಮುಖ್ಯವಾಗಿ ಆತ್ಮವಿಶ್ವಾಸವಿತ್ತು. ಇಡಿ ಕಾಕಾಪುರದಾಗ ಬ್ಯಾರೆ ಎಲ್ಲಿಂದಲೋ ಬಂದು ಮನಿಕಟ್ಟಿದ ಬುದ್ಧನಾಯ್ಕನ ವಂಶವನ್ನ ಬೆಳಸಬೇಕು ಅನ್ನೋ ಛಲ ಇತ್ತು. ಯಾವತ್ತು ಸೋಕಿಮಾಡಿದೋನೆ ಅಲ್ಲ, ಮಂದಿ ನಾಕಕಾಸ ಬಂದ್ರ ಕೈಗೊಂದ ವಾಚು, ಬೆಳ್ಳಿಗೋಂದು ಉಂಗರ ಇಟ್ಕೊಂಡು ಬಗಲಾಗೊಂದು ಫಿಲಿಪ್ಸ್‌ರೇಡಿಯೊ, ಮುಕಾಳಾಗೊಂದು ಸೈಕಲ್ಲು. ಅದು ಇಲ್ದೋನ ಅವತಾರ ನೋಡು, ಬುಡಾ ಇಲ್ದೋನ ಬಡಿವಾರನೋಡ ಅನ್ನೋಹಂಗೆ ಇದ್ದಷ್ಟದಿನ ಮಜಮಾಡಿ ಮಂದಿ ಕುಟಾಗ ಏಕ್‌ದಿನ್‌ಕೇ ಬಾದಷ ಅನ್ನೊಕೂ ಬೇಕಂದೊರೆ ಬಹಳಮಂದಿ. "ನಾನು ಹಂಗೆಲ್ಲಾ ಬಂಗಾರ ಹಾಕೋದು, ವಾಚ ಕಟ್ಟೋದ ಕಲಿಲಿಲ್ರೋ ದೇಹದಂಡಿಸಿ ದುಡಿಯೋದನ್ನ ಕಲ್ತೆ ಅಂತ ನೀವೆಲ್ಲಾ ಇವತ್ತು ನೆಳ್ಳಾಗ

ಕುಂತಿರಿ ಇಲ್ಲಿಕ್ರ ಮಂದಿ ಮಕ್ಕಳು ಓಡಾಕಹತ್ಯಾರಲ್ಲ ಕಾಫಿಸೀಮಿಗ, ಗೋವಾಕ ದುಡಿಯಾಕಂತ ಹಂಗೆ ನೀವುನೂ ಓಡಬೇಕಾಗತಿತ್ತು" ಗುಟೂರ ಹಾಕ್ತಿದ್ದ.

ಏಳನೇಯ ಪಿಣುಗ ರೇಡಿಯೊ ಕೇಳೊ ಖಯಾಲಿ ಅದೆಂಗ ಹುಟ್ಕೊಂತೊ, ರಾತ್ರಿ ಹತ್ತರಮಟಾನು ಇಡಿ ಕಾಕಾಪುರಕ್ಕ ಇದ್ದ ಒಂದೇ ರೇಡಿಯೊ. ಅದು ಚಾಲು ಮಾಡಿ ಅರ್ಧತಾಸಿಗೆ ಎರಡಗುದ್ದ ಬಡದ ನಿಲ್ಲಿಸಿದಮ್ಯಾಲ ಒಂದೇ ಒಂದು ಧಾರವಾಡ ಟೇಷನ್ ಹಿಡಿತಿತ್ತು. ಅದು ಹುಸೇನವ್ವನ ಅಂಗಡಿಯೊಳಗಿತ್ತು. ಪಿಣುನ ಓರಿಗೆಯವರೆಲ್ಲಾ ರಾತ್ರಿ ಹನ್ನೊಂದರ ಮಟಾನು ರೇಡಿಯೊ ಕೇಳಿ ಯಾರಿಗೂ ಗೊತ್ತಾಗದಂಗೆ ಬಂದು ಮಕ್ಕೊಂತಿದ್ರು. ಒಂದದಿನ ಅದೆಂಗ ಕಂಡಹಿಡದ್ನೊ ಗೊತ್ತಾನಾಯ್ಕ ಮಾತ್ರ ಕೆಂಡಮಂಡಲವಾಗಿದ್ದ. "ಇಡಿ ನನ್ನ ಜೀವನದಾಗ ಒಂದೇ ಒಂದ ಸಿನೀಮಾ 'ಭೂ ಕೈಲಾಸ' ಅನ್ನೋದನ್ನ ನೋಡಿದ್ದ ಬಿಟ್ರೆ ಇವತ್ತಿನಮಟ ಅದ್ರಕಡೀಗ ತಲೀನೆ ಹಾಕಿಲ್ಲ. ನಿನ್ನೆ ಮನ್ನೆ ಹುಡ್ರು ದಾವಣಗೇರಿ ಹರಿಹರಕ್ಕ ಹೋಗಿ ಸಿನೀಮಾನೋಡಿ ರಾತ್ರಿ ಇಡಿ ಹಾಡಕೇಳ್ತಾರ, ಅಂದ್ರ ಎಂಥಕಾಲ ಬಂತು ಅಂತೀನಿ" ಮಗನ್ನ ಕುರತೆ ಹೇಳಿದ್ದ. ಆತನೆ ಖುದ್ದಾಗಿ 'ಸಾವುಕಾರನಿಗೆ ಸವಾಲು' ಅನ್ನೋ ನಾಟಕ, ಸತ್ಯಹರಿಶ್ಚಂದ್ರ ಮತ್ತ ಹೇಮರೆಡ್ಡಿಮಲ್ಲಮ್ಮ ನಾಟಕಗಳನ್ನ ಐದಾರಸಲ ಅಭಿನಯಿಸಿದ್ದ ಆ ಹಾಡಗಳನ್ನ ಇವತ್ತಿಗೂ ಗೊತ್ತಾನಾಯ್ಕ ಹಾಡ್ತಿದ್ದ. ಅದನ್ನ ಬಿಟ್ಟ ಸಿನೀಮಾ ಅಂದ್ರೆ ಆತನಿಗೆ ಆಗ್ತಾನೆ ಇರ್ಲಿಲ್ಲಾ. ಪಿಣು, ಅದರ ಸಂಬಂಧ ಐದಾರ ಸಲ ಬೋಯ್ಸಿಕೊಂಡಿದ್ದ. "ನಾವೆ ಒಂದ ರೇಡಿಯೋನ ಯಾಕ ತರಬಾರದು? ಆ ಕಾಫಿಸೀಮಿ ಮೇಸ್ತ್ರಿ ಬಂದೂಕನಾಯ್ಕ ಏನೂ ಇಲ್ದೋನೆ ಬೇಕಾದಂಗೆ ಮಜಮಾಡ್ತಾನೆ" ಯೋಚನೆ ಮಾಡ್ದ. ಅದೇ ಗೊತ್ತನಾಯ್ಕನಿಗೂ ಬ್ಯಾರೆಯವರಿಗೂ ಇರೊ ವ್ಯತ್ಯಾಸ. ಬಡಾಯಿಕೋರ ಬಂದೂಕನಾಯ್ಕ ಅಂತಂದೆ ಸತ್ತಮುತ್ತಖ್ಯಾತಿಗೊಂಡಿದ್ದ. ಮಾತೆತ್ತಿದರೆ ಕೋಟಿ ರೂಪಾಯಿದೆ ಮಾತಾಡ್ತಿದ್ದ. "ನಿನ್ನೆ ಮನ್ನಿನ್ಯಾಗ ಕಾಪಿಸೀಮ ಸಾವುಕಾರನಿಗೆ ಒಂದುವರಿಕೊಟ್ಟನಿ. ನಮ್ಮ ಚೆಲುವಾಪುರದ ಸಿದ್ಲಿಂಗನ ಮಕ್ಕಳು ಅರ್ಧದಾರಿಗ ಬಂದು. ಬಂದೂಕಣ್ಣ ಇವತ್ತ ನಮ್ಮ ಮರ್ಯಾದಿ ಹೊಕೈತಿ ಹೆಂಗಾದ್ರು ಮಾಡು, ಐವತ್ತ ಸಾವರ ಕೊಡು ಒಂದ ತಿಂಗಳಿಗೆ ಬಡ್ಡಿಹಾಕಿ ಮುಟ್ಟಿಸಲಿಲ್ಲಾಂದ್ರ, ನಿಮ್ಮೂರ ಹಾಸಗಿಯೊಳಗಿರೊ ಹದಿನೈದು ಎಕ್ಕರೆ ಎರಿಭೂಮಿ ತಗೊಂಡ ಬಿಡವಂತೆ ಅಂತಂದು ಗಲಗಲ ಅನ್ನಾಕ ಹತ್ರು. ಏನ ಹೇಳ್ತಿಯ ಚಣ್ಣದ ಕೀಸೆಯಿಂದ ನೂರ ನೂರ ಐದ ಪೆಂಡಿ ತಗದು. ತಗೊ ತಮ್ಮ ನಿವೇನ ಅಂತಿಂಥೋರಲ್ಲಾ, ನಿಮ್ಮಪ್ಪ ಸಿದ್ಲಿಂಗಪ್ಪ ಇಡಿ ನಮ್ಮ ಹಂದೋಣಿ ತಾಲೂಕಿಗೆ ದೊಡ್ಡ ಸಾವುಕಾರ ಆದ್ರ

ಹೊತ್ತ ಅನ್ನೋದು ಯಾರನ್ನು ಕೇಳಂಗಿಲ್ಲಾ ಅಂದು ಕೊಡಾಕ ಹ್ವಾದೆ ಹುಡ್ರುದಂಗಾಗಿ ಬಿಟ್ರು. ಕೈ ಹಿಡ್ಕೊಂಡು ಕಣ್ಣಾಗನೀರ ತಂದ್ಕೊಂಡ್ರು" ರಾಮುಗನ ಅಂಗಡಿಯೊಳಗ ಸರಾಯಿ ಕುಡಿತ್ತಿದ್ದ ಸೋನ್ಯ, ಕೆಂಚೀರಯ್ಯ, ಕಾರಬಾರಿ ಕುಲುಮು ಹುಸೇನಜ್ಜರ ಮುಂದ ಹೇಳಿದ. "ನಿನಗೇನು ಬಿಡಪ್ಪ ಐವತ್ತಸಾವರ ಅಂದ್ರೆ ಐವತ್ತ ರೂಪಾಯಿ ಇದ್ದಂಗ" ತಡಾಯಿಸಬಿಟ್ಟ ಕುಲುಮು "ಹಂಗಲ್ಲ ಕೆಂಚೀರಜ್ಜ ಮಾತಿನ ಪ್ರಸಂಗ ಹೇಳಾಕಹತ್ತೀನಿ" ಅಂದವನೆ ಕಿಸೆದಾದಗಿಂಗ ಹನಿಡ್ಯೂಯ ಸಿಗರೇಟ ಪಾಕೀಟ ತಗದು ಸೋನ್ಯಾನ ಕಡೀಗ ಬಿಸಾಕಿದ. ಒಂದತಗೊಂಡ, ಕುಲುಮು ಒಂದತಗೊಂಡ, "ಹುಸೇನಜ್ಜ ನಿನಗ" ಕೇಳಿದ ಬಂದೂಕ. "ನಕ್ಕೋರೆ ಕೆಮ್ಮು ಬರತೈತಿ" ಅಂದ. "ಎ, ರಾಮುಗ ಹಾಕೊ ಎಲ್ಲರಿಗೂ ಒಂದೊಂದ ಪಾವ ಸರಾಯಿ" ಅಂದ್ಕೊಂತ ಒಂದ ಧಮ್ ಎಳದು ಮ್ಯಾಲ ಹೋಗಿ ಉಗಳಿದ. "ಬಂದೂಕಣ್ಣಾ ಎಲ್ಲರಿಗೂ ಸರಾಯಿ ಕುಡಸಾಕ ಹತ್ತಿಯ ಮಗನ ಇಳೇವ ಕಾರ್ಯಮಾಡಾಕ ಯೋಜನೆ ಹಾಕೊಂಡಿಏನ ಮತ್ತ" ಪಾಕೀಟಗಳ ಮೂಲಿಕತ್ತರಿಸುತ್ತಲೆ ಕೇಳಿದ. "ಇಳೇವೇನು ಮದ್ವಿನೆ ಮಾಡಬಿಡಾನ ಬಿಡು" ಗ್ಲಾಸು ಇಸ್ಕೊಂಡು ಒಂದೇ ಗುಟುಕಿಗೆ ಸುರ್ಕೊಂಡ. ತಾನು ಕಾಫಿಸೀಮಿಯೊಳಗೆ ಆಳಗಳಿಗೆ ಕುಡಸೋದು, ತಿನ್ನಿಸೋದು ಸಾವುಕಾರ ಹಂದಿಮಾಂಸ ಅವನ ಕೂಟಾಗ ಕುಂತ ಉಣ್ಣೋದು ಕತಿ ಮಾಡಿ ಹೇಳಿದ. ಸೋನ್ಯಾ, ಕೆಂಚೀರಯ್ಯ, ಕುಲುಮು, ಹುಸೇನಜ್ಜ ನಿರ್ವಾಯಿಲ್ಲದೆ ಪಾಕೀಟ ಸರಾಯಿ ಕುಡದಿದ್ದಕ್ಕೆ ಅವನು ಹೇಳೋದನ್ನ ಕೇಳಲೇ ಬೇಕಾತು. ಮಾತಾಡಿ ಮಾತಾಡಿ ಸಾಕಾದಿಂದ ರೇಡಿಯೊ ಚಾಲುಮಾಡಿದ. ಅವನ ದೌಲತನೋಡಿ ಬೆರಗಾದ ಗೊತ್ತಾನಾಯ್ಕನ ಮಗನ ತಲಿಯಾಗೊಂದು ವಿಚಾರ ಬಂತು. ನಾವುಯಾಕ ಒಂದ ರೇಡಿಯೊ ತಗೊ ಬಾರ್ದಂತ, ಆ ವರ್ಷ ಕೆರಿತುಂಬಿತ್ತು ಕಟುವಾಗ ಹೊಲಮಾಡಾಕ ಆಗದೆ ಬೀಳ ಬಿಟ್ಟಿದ್ದ. ಅವನಾಗೆ ಮನಿಗ ಬಂದು, "ಅಣ್ಣಾಹೊಲಮಾಡಾಕ ಆಗ್ತಿಲ್ಲ, ಗದ್ದಿಹಳಗಿಗೆ ಭತ್ತನಾರು ಹಾಕಿಸಿಬಿಡು" ಕೇಳಿಕೊಂಡಿದ್ದ. ರೇಡಿಯೊ ತರೊ ವಿಚಾರ ಮಾಡಿದ್ದ ಗೊತ್ತಾನ ಏಳನೆ ಮಗ ಪಿಣು, ತಮ್ಮಗದ್ದಿ ಹಳಗಿನೊಳಗೆ ಭತ್ತದ ನಾಟಿ ಮಾಡಾಕಂತ ಹಾಕಿದ ಸಸಿಗಳನ್ನೆ ತಗೊಂಡ ಹೋಗಿ ನಾಟಿಮಾಡ್ಸಿದ. ಆರತಿಂಗಳ ನಂತರ ಭತ್ತ ಕೋಯ್ಲಿಗೆ ಬಂತು. ಏಳು ಚೀಲ ಘನವಾದ ಭತ್ತ ಅನ್ನ ಉಣ್ಣಾಕ ಎಂಥಪಾಡಿತ್ತು ಆದ್ರ ದಿನ ಬರಿರೊಟ್ಟಿ ತಿನೋರಿಗ ಅನ್ನದ ರುಚಿ ಏನಗೊತ್ತು ಹಬ್ಬದಾಗ ಮಾತ್ರ ಅನ್ನದ ರುಚಿ ನೋಡೊದು.

ಎಷ್ಟೆ ಭತ್ತ ಬೆಳದ್ರು ಅದನ್ನ ಒಳ್ಳೆ ಧಾರಣೆಗ ಮಾರಿ ಹರಕಲ ತೀಟಿ ತೀರಿಸೋದೆ ರೈತನ ಮದ್ಲ ಆದ್ಯತೆಯಾಗಿತ್ತು. ಏಳ ಚೀಲದಾಗ ತಲಾ ಮೂರು ಮೂರು ಕೊರಿ

ಬಂದಂಗಾಗಿದ್ದು. ಪಿಣುನೆ ಹೇರ್‍ಕೊಂಡಹೋಗಿ ಮಾರ್‍ಕೊಂಡು ಹೊಸ ಪಿಲಿಪ್ಸ್ ರೇಡಿಯೊ ತಂದಿದ್ದ. ಮನಿಮಂದಿಗೆಲ್ಲಾ ಬಹಳ ಖುಷಿಯಾಗತ್ತು ಕೆಲವರಂತು ಇದೊಂದು ಪ್ರಗತಿಯ ಸಂಕೇತ ಅಂತ ಕರದರು. ಗೊತ್ತಾನಾಯ್ಕನಿಗೂ ತಾನು ಇಂತಹದೊಂದನ್ನ ಜೀವಮಾನದಾಗ ಮುಟ್ಟಿರಲೇ ಇಲ್ಲಾ ಅನಿಸಿತು. ತನ್ನ ಮಕ್ಕಳು ಹೊಸ ಜಗತ್ತಿನ ಹೊಸ ಬದುಕಿನ ಜೊತಿಗೆ ಹೊಂದಿಕೊಳ್ತಿರೋದ ಎಲ್ಲೊ ಒಂದ ಕಡೀಗ ಅಳಕ ಅನಿಸಿದ್ರು ಸಹಸಿಕೊಂಡ. ಅದಾಗಿ ವರ್ಷದಾಗ ಪಿಣು ಹಠಮಾಡಿ ಸೈಕಲ್ ಖರೀದಿಸಿದ. ಇಷ್ಟೆ ಜನರ ಹೊಟ್ಟೆಗ ಹಿಟ್ಟ ಬೀಸ್ಕೊಂಡ ಬರಾಕಾದ್ರು ಬೇಕ ಬೇಕ ಅನ್ನೋದು ಪಿಣುನವಾದ.

ಕಾಲನಲೀಲೆಯನ್ನ ಗೊತ್ತಾನಾಯ್ಕ ಮೌನವಾಗೆ ಸಮ್ಮತಿಸಿಕೊಂಡು ಹೋಗ ತೊಡಗಿದ. ಅವನ ಹಿಂದಿನ ತಲೆಮಾರಿನ ಕೊನೆಯ ಕೊಂಡಿಯಾಗಿದ್ದ ಕೆಂಚೀರಯ್ಯ, ಹುಸೇನಿ, ಕಬರಯ್ಯ, ಒಬ್ಬರಾದ ಮ್ಯಾಲ ಒಬ್ಬರಂಗೆ ಧಡ್, ಧಡ್ ಅಂತ ಹಳೆ ಹುಣಸೀಮರಗಳು ಬುಡ ಸಮೇತ ಉರಳಿ ಬೀಳೊಹಂಗೆ ಬಿದ್ದಹ್ವಾದ್ರು. ಅವನ ತಲೆಮಾರಿನವರು ಆಗಲೆ ಸತ್ತು ಹೋಗಿದ್ದರು. ಇಡಿ ಊರಾಗ ಐದಾರ ಮಂದಿ ಅಷ್ಟೆ ಉಳ್ಕೊಂಡಿದ್ದರು. ಬದುಕಿನ ರೀತಿರಿವಾಜೆ ಬೇರೆಯಾಗಿತ್ತು. ನಡರಾತ್ರಿಯೊಳಗ ಎದ್ದು ಮೂಕಪ್ರಾಣಿ ಎತ್ತಗಳಿಗ ತಂಪಾಗತೈತಿ ಹೊಲಾನು ಸಾಗತೈತಿ ಅಂತ ಕಬ್ಬಿಣ ರಂಟಿ ಹೊಡಿತಿದ್ದಿದ್ದು, ಗೊಬ್ಬರದ ಬಂಡಿ ಕಟ್ಟುತ್ತಿದಿದ್ದು, ದರ್ಲಿಹೊಡಿಯಾಕ ಹೊಕ್ಕಿದ್ದು ಮಾಯವಾಗಿ ಹೋಗಿತ್ತು. ಅವನ ಮಕ್ಕಳೆ ಗಳೆಕ ಹೊಗೋದು ಎಂಟ ಗಂಟೆನಂತರ. "ಅಲ್ಲೋ, ಈಗಿಂದ ನೀನು ಹೋದ್ರ ಬಿಸಲಾಗ ಎತ್ತಗಳ ಏನಾಗಬೇಕು ಮತ್ತ ನೀರು ಮೇವುಯಾವಾಗ ಕೊಟ್ಟೀಯಾ" ಅಲ್ಲೇ ಗೊಣಗಾಡಿಕೊಂಡು ಸುಮ್ಮನಾಗ್ತಿದ್ದ. ಮಳಿಗಾಲ ಕಮ್ಮಿ ಆತು ಬೀಳೊ ಜುಬರ ಜುಬರ ಮಳಿಯಾಗ ಒಂದಿಷ್ಟು ಜ್ವಾಳ, ರಾಗಿ ಹ್ಯಾಂಗು ಬೆಳ್ಕೊಂತಿತ್ತು, ನವಣೆ, ಸಜ್ಜಿಗೇನು ಕೊರತೆ ಇರ್ಲಿಲ್ಲಾ ಹಾಗಾಗಿ ಬದಕು ಹೆಂಗೊ ಹೊಂಟಿತ್ತು. ಸುತ್ತಮುತ್ತ ನೀರಾವರಿ, ಒಬ್ಬಜಮೀನಿನ ಕೆಲ್ಸಮಾಡಿದ್ರ ಮತ್ತೊಬ್ಬ ಕೂಲಿ ಮಾಡಿ ಮನಿನಡಸೋದು. ಸಾಲದಕ್ಕೆ ಪ್ರತಿವರ್ಷ ದಲ್ಲಾಳಿ ಅಂಗಡಿಯೊಳಗ ಬೇಕಾದಷ್ಟು ಸಾಲಸಿಗ್ತಿತ್ತು ಇಸ್ಕೊಂಡು ಅರ್ಧ ಹೊಲಕ್ಕ ಇನ್ನರ್ಧ ಹೆಂಡಕ ಹಾಕಿದ್ರ, ಆ ವರ್ಷದ ಕೃಷಿ ಮುಗದ ಹೋತು. ತುಂಡಭೂಮಿಯೊಳಗೆ ರೈತ ಏನತಾನೆ ಮಾಡಿಯಾನು. ಕಾಕಾಪುರದಾಗ ಪ್ರತಿಯೊಬ್ಬನಿಗೂ ಜಮೀನು ಇದ್ದಿದ್ದೆ ಎರಡು, ಮೂರು, ನಾಕು, ಹತ್ತು ಎಕ್ಕರೆ ಗೊತ್ತನಾಯ್ಕ ಮಾತ್ರ ದುಡದು ಮೂವತ್ತೈದು ನಲ್ವತ್ತು ಎಕ್ಕರಿ ಸಂಪಾದಿಸಿದ್ದ. ಹಾಗಾಗಿ ಭೂಮಿನಂಬಿ ಬದಕಾಕ ಆಗಂಗಿಲ್ಲಾ ಅಂದು ಚಾ-ತಿಂಡಿ ರುಚಿ ನೋಡಿದ

ಜನರು ಭೂಮಿಹಾಳ ಬಿಟ್ಟು ಕೂಲಿ ಹುಡಕಾಟ ನಡಸಿದ್ರು.

ಕಾಕಾಪುರದ ಹಾಸಗಿಯೊಳಗೆ ಗೌರ್ಮೆಂಟಿಂದ ಬೋರು ನೆಲಕೊರಿಯಾಕ ಬಂದಿತ್ತು. ಆಗಿನ ಕಾಲದಾಗ ಹದಿನೈದನೂರ ಕೊಟ್ರೆ ತಿಂಗಳಗಟ್ಟಲೆ ವಸ್ತಿಮಾಡಿ ಬೋರ ಕೊರದ ಹೊಕ್ಕಿದ್ರು. ಪಿಣು ಏನೇನೊ ಪ್ಲಾನಮಾಡಿ, ತಮಗೂ ನೀರಾವರಿ ಇದ್ದರೆ ಎರಡೆರಡ ಬೆಳಿತಗಿಬಹದು ಅಂತ ಗೊತ್ತಾನಾಯ್ಕನಿಗೆ ಪುಸಲಾಯಿಸಿ ಮದ್ಲು ಸುರುಮಾಡಿದ ಬೋರು ಮುಗದಿಂದ ತನ್ನ ಹೊಲಕ ಕರ್ಕೊಂಡ ಹೋಗಿ ಸರದ ಮೂಲ್ಯಾಗ ಹಾಕಾಕ ಪಾಯಿಂಟ್ ತೋರಸಿದ. ಪಾಂಡಾಪುರದ ಭಗನಿಯ್ಯಾ ಪೂಜಾರಿ ಒಂದ ಕಟ್ಟಿಗಿ ಹಿಡದು ಜಾಗಕ ಬಂದ ನಿಂತು. "ನೋಡಪ್ಪ ಗೊತ್ತಾನಾಯ್ಕ ಇಲ್ಲಿ ಐತಲ್ಲಾ ಒಂದ ಎಂಬತ್ತ ಅಡಿಯೊಳಗೆ ಬೇಕಾದಷ್ಟು ನೀರ ಬೀಳತೈತಿ ನೀ ಏನು ಹೆದ್ರಾಕ ಹೋಗಬ್ಯಾಡ. ಮೂವತ್ತಡಿ ಕಬ್ಬಿಣದ ಕೇಸಿಂಗಹಾಕು. ಅರವತ್ತ ಅಡಿಯಷ್ಟು ಗಟ್ಟಿ ಬಿಳಿಬೆಂಜ್ರಿಗಲ್ಲು ಸಿಗತೈತಿ ಹಿಂಗಾಗಿ ಸಾಸಾನ ಕೆಲ್ಸಾಕೈತಿ ಹಿಂದ ಮುಂದ ನೋಡಬ್ಯಾಡ ಅಂದ ಹೋಗಿದ್ದ. ಪೂಜಾರಿ ಹೇಳಿ ತಿಂಗಳಾಗಿಲ್ಲ ಬೋರು ಗುದ್ದತಿದ್ದಂಗ ನೀರ ಅನ್ನೋದು ಹಾಲನಂಗ ಉಕ್ಕತೊಡಗಿತು. ಪೂಜಾರಿ ಹೇಳಿದ್ದ ಸತ್ಯ ಆತು, ಮೋಟಾರು ಕರೆಂಟ್ ತಂದು ಅದೇ ಬ್ಯಾಸಗೀಗ ಶೇಂಗಾಹಾಕಿದ್ರ ಇನ್ನೂರೈವತ್ತ ಚೀಲ ಶೇಂಗಾ ಬೆಳೆದಿತ್ತು. ಅದೇ ಹುರುಪಿನ್ಯಾಗ ಶೆಟ್ಟಿಹೊಲದ ಪಕ್ಕದಾಗ ಕುರಬರ ಅಂದಾನಪ್ಪನ್ನ ಆರುವರಿ ಎಕ್ಕರಿ ಜಮೀನು ನಿಂತ ಹತ್ರಾನೆ ಖರೀದಿಸಿದ, ಎರಡ ಮೂರವರ್ಷದುಡಿತಿದ್ದಂಗೆ ಹೊಲಜಾಸ್ತಿ ಆತು. ರಾತ್ರಿ ಹಗಲು ನೀರ ಬಿಡೋದು ಕಮತ ಮಾಡೋದು ದುಸ್ತರ ಆಕೈತಿ ಅಂತ ಪಿಣು ಒಂದ ಟ್ರಾಕ್ಟರ್ ತಗೊಂಡ್ರ ಹ್ಯಾಂಗಂತ ಯೋಜನೆಯನ್ನ ಅವರಪ್ಪನ ಮುಂದಿಟ್ಟ.

"ಎಲ್ಲಿ ಹಚ್ಚಿಯೋ ಅತ್ಲಾಗೆ, ಏನ ಹತ್ತಿಪತ್ತರೂಪಾಯಿಗ ಬರೊ ಹಂಗೈತಿ, ತಂದ ಬಿಡಾಕ, ಕೊಂಡ್ರ ಲಕ್ಷಗಟ್ಟಲೇ ಸುರಿಬೇಕು" ನಿರಾಕರಿಸಿದ. "ಏನೂ ಇಲ್ಲಾ ಕಾಕಾಪುರದಾಗ ನಿಂದು ಒಂದ ಹೆಸರು ಉಳ್ಕೊಂತೈತಿ, ಟ್ರಾಕ್ಟರ್ ಇರೊ ಸಾವುಕಾರ್ರು ಅಂತ" ರಾಗ ಎಳದ. "ಮುಂದಿನ ಬೆಳಿಯೊಳಗ ನೋಡಾನಂತ ಬಿಡು" ಅಂದ ಸುಮ್ಮನಾದ. ಪಿಣು ಛಲದಂಕ ಮಲ್ಲನಂತೆ ಬೆನ್ನು ಬಿದ್ದ. ಕೆಲಸಮಾಡಿಸಲೇ ಬೇಕು ಅಂತ ಶತಾಯ ಗತಾಯ ಪ್ರಯತ್ನ ಮಾಡಿದ.

ಬ್ಯಾಂಕಿನೊಳಗ ಲೋನಮಾಡಿ ಹೊಸ ಟ್ರಾಕ್ಟರ ಬುಕ್‌ಮಾಡ್ಸಿದ ಗೊತ್ತನಾಯ್ಕ. ಮಕ್ಕಳು ದುಡಿತಾರಂದ್ರ ನಾಯಾಕೆ ಬ್ಯಾಡಅನ್ನಬೇಕು ನಾಳೆ ತಿರ್ರ್ಸೋರು ಅವರೆ ನಂದೇನೈತಿ ಸುಮ್ಮನಾದ. ರೊಕ್ಕಕಟ್ಟಿವಾರದಾಗ ಹೊಸ ಟಾಕ್ಟರ ಮನಿಮುಂದ ಬಂದ ನಿಲ್ತು.

ಸೋನ್ಯಾ, ಗಬಡು, ಪೂಜಾರಿಪಾಪುಗ ಸಂಕಟತಾಳಲಾರದೆ, "ಏನಪ್ಪ ಅಂತು ತಂದೆ ಬಿಟ್ನಲ್ಲಾ ಟ್ರಾಕ್ಟರನ್ನ" ನುಂಗಲಾರದ ತುತ್ತಿನ ಹಾಗೆ ಹೇಳಿದ ಪಾಪುಗ. "ಈಗೇನೊ ತಂದಾನ, ನಾಳೆ ಲಕ್ಷಗಟ್ಟಲೆ ಸಾಲ ಕಟ್ಟಬೇಕಲ್ಲ, ಅದರ ಬಡ್ಡಿ ಸರಿಯಾಗಿ ಕಟ್ಲಿಲ್ಲಾಂದ್ರೆ ವರ್ಷಕ್ಕೆ ಇಪ್ಪತ್ತ ಮೂವತ್ತಸಾವರಾನೇ ಆಕೈತಿ, ಅದು ಹರಾಜ ಆಗಿಲಿಲ್ಲಾಂದ್ರ ಕೇಳು" ತಾನೆ ನಿರ್ಧರಿಸಿದ ಹಂಗೆ ಹೇಳಿದ ಸೋನ್ಯಾ. ಯಾರ ಏನೆ ಅಂದ್ರು ಆಡಿಕೊಂಡ್ರು. ಕಾಕಾಪುರದಾಗ ದೊಡ್ಡ ಕುಳ ಅನಿಸಿಕೊಂಡೆ ಬಿಟ್ಟ ಗೊತ್ತಾನಾಯ್ಕ ಸುತ್ತ ಮುತ್ತಹಳ್ಳಿಮಂದಿಗ ಅವನ ದುಡಿಮೆ ಅರಿವಿತ್ತು ಒಬ್ಬ ಸರ್ಕಾರದ ನೌಕರಿ ಮಾಡ್ತಿದ ಇಬ್ಬರು ಇನ್ನೂವೆ ಓದತಿದ್ರು ತಾನಬಯಸಿದ್ದು ಎಲ್ಲಾ ಸಿಗ್ತು. ಅಂತ ಸಂತಸ ಪಡೊ ಸಮಯ ಹನಮನ ಹೇಣ್ತಿ ರಾಂಬಿಗೂ ನುಗ್ಲಾನ ಹೇಣ್ತಿ ಸುಕ್ಲಿಗೂ ಮಾರಾಮಾರಿ ಸುರು ಆತು. ಪೀಣುನ ಹೇಣ್ತಿ ಪಾತಿ ದೊಡ್ಡವಳಾದ ಸುಕ್ಲಿ ಕಡೀಗಿದ್ಲು. ಜಂಬನ ಹೇಣ್ತಿ ರಾಜಿಗ ಏನೇನು ತಿಳಿತಿರಲಿಲ್ಲಾ, ಯಾರೇನಂದ್ರು ಹೂಂ ಅಂದು ಕೆಲ್ಸಮಾಡಾಕ ಸುರುಮಾಡಿದ್ಲಂದ್ರ ಯಾರಾದ್ರು ಬಂದು ಸಾಕಬಿಡು ಅನ್ನಬೇಕು ಅಲ್ಲಿವರಿಗ ದುಡದೇ ದುಡಿತಿದ್ಲು. ಅದೇ ಸಮಯ ಕಾಯ್ತಿದ್ದ ಗೊಂದಾ ಮುದುಕನ ತಾವ ಪೀಣುಮಾಡಿದ ಅವ್ಯವಹಾರದ ಕುರಿತು ಸವಿಸ್ತರವಾಗಿ ಹೇಳಿದ. ಮುದಕ ಸಾರಸಗಟು ವಿಚಾರ ಮಾಡದೇನೆ "ಆ ಮಗನ ಕೈಗೆ ಹಿರೇತನ ಕೊಟ್ಟ ನಾನು ಕೆಟ್ಟಹ್ಯಾದ್ನಪ್ಪ. ದುಡದ ರೊಕ್ಕಾನೆಲ್ಲಾ ಒಯ್ದು ಹಾಳಮಾಡಿದ" ಮನಿಮುಂದ ಕುಂತ್ಕೊಂಡು ಸುರುಮಾಡಿದ. ಈಗ ಸುಮ್ಮಾನಾದಾನು, ಇನ್ನೊಂದಿಷ್ಟೊತ್ತಿಗೆ ಸುಮ್ಮನಾದಾನು ಅಂತ ಕಾದೆ ಕಾದ ಪೀಣು. ಮುದಕಗ ಕುಡದಿದ್ದು ಆಟು ವಯಸ್ಸಿನ ದೌರ್ಬಲ್ಯ. ಸೇರಿ ನಿಲ್ಲಿಸದಂಗೆ ಬೋಯ್ತಾನೆ ಇದ್ದ. ಪೀಣು ತಲಿಹಾಳಾತು, "ಏ ಮುದಿಯಾ, ನಾನು ಯಾರಿಗ ದುಡಕೊಟ್ಟ ಬಂದೀವಿ ತೋರಿಸಬಾರೊ" ಎದಿಮ್ಯಾಲ ಹೋದವನೆ ಜೋರಾಗಿ ದೂಕಿದ. ಮದ್ಲೆ ಕುಡದು ನಿಲ್ಲಾಕ ಆಗದಂಗಿದ್ದ ಗೊತ್ತಾನಾಯ್ಕ ಕಡ್ಕೊಂಡ ಬಿದಬಿಟ್ಟ. ತಲಿಹೋಗಿ ಕಲ್ಲಿಗ ದಡ್ ಅಂತ ಬಡದು ರಕ್ತ ಜೀನಗ ತೊಡಗತು. "ಯಪ್ಪಾಸತ್ನೊ, ಕೊಂದಹಾಕಿದ್ನೊ ಇವ್ವನವ್ವನ ಮಗ, ಯಾರು ಇಲ್ಲೆನ್ರೋ ನನ್ನ ಉತ್ತರಕ್ಕ ಹುಟ್ಟಿದೊರು?" ಮುದಕ ಚೀರದವನೆ ಗಪ್ಪಾದ. ಮುದುಕಿ ಬಾಣವ "ಕೊಂದ ಹಾಕಿದ್ನೊ ನನ್ನ ಗಂಡನ್ನ, ಅವನ ಓಸಡಗಲಿ, ಕದಾಕಟ್ಲಿ, ಇದಕ್ಕಾಗೆ ಸಾಕಿದ್ನೇನೊ ನಿನಗ, ನನ್ನ ಗಂಡ ಉಪಾಸವನವಾಸ ಬಿದ್ದು ದಮ್ಮಡೀಗ ದಮ್ಮಡಿ ಕೂಡ್ಸಿ ಈ ಬಾಳೇವನ ಕಟ್ಯ್ಯಾನೊ ಮಗನೆ, ನಿನಗ ಸಹಿಸಾಕ ಆಗದಿದ್ರೆ ಮನಿಬಿಟ್ಟ ಹೊರಗ ಹೋಗು" ತನ್ನ ಸಿಟ್ಟನ್ನ ಹೊರಹಾಕಿದ್ಲು. "ನಾಯಾಕ

ಹೋಗ್ಲಿ ಬೇ ಮುದಕಿ, ನಿನ್ನವ್ವನ, ನೀ ನಡಿಮನಿಬಿಟ್ಟು" ಕೈ ಹಿಡದವನೆ ದರ ದರ ದೂರ ಎಳದ ಬಿಸಾಡಿದ. ಅಲ್ಲಿವರಿಗ ಸಹಿಸಕೊಂಡು ಸುಮ್ನೆ ನಿಂತಿದ್ದ ಹನುಮ ಜಂಬಗ ಸಹಿಸಾಕ ಆಗಲಿಲ್ಲಾ. "ಎಯ್, ನಮ್ಮವ್ವ ಅಪ್ಪಗ ಹೊರಗ ಹಾಕೋನು ನೀಯಾವನೋ" ಇಬ್ರು ಹಿಡದು ಚೆನ್ನಾಗಿ ಚಚ್ಚಿದ್ರು, ಪಿಣುನ ಹೆಣ್ತಿ ಪಾತಿ. "ಕೊಂದ ಬಿಟ್ರೋ ನನ್ನ ಗಂಡನ್ನ ಎಲ್ಲಾರು ಸೇರ್ಕೊಂಡು ಯಪ್ಪಾ ಯಾರಾದ್ರು ಬದಕಸ್ರೋ" ಲಬಾ ಲಬಾ ಹೋಯ್ಕೊಂಡ್ಲು. ನುಗ್ಲ ಒಬ್ಬನೆ ಬಿಡೊಸೊ ಆಟ ಬಿಡಿಸಿದ ಹೊಡಿಯೊ ಆಟು ಹೊಡದ. ಒಂದುವರಿತಾಸಿನ ಮ್ಯಾಲ ಜಗಳ ನಿಂತು ಹೊತು.

ಕುಮಾರಿ, ಚೆನ್ನಿಂಗ, ಪಾಂಗೋಶಿಗ ಎನ ಮಾಡಬೇಕಂತ ತಿಳಿಲಿಲ್ಲಾ.ಎಲ್ಲಾರೂ ಮದ್ವಿಯಾಗಿ ಮಕ್ಕಳಾಗಿ ಅಲ್ಲಿ ಇಲ್ಲಿ ಚೂರುಪಾರು ಕದ್ದು ದುಡ್ಡಮಾಡ್ಕೊಂಡಾರ ಮದ್ವಿಯಾಗದೆ, ನೌಕರಿಸಿಗದೆ, ಅತಂತ್ರ ಸ್ಥಿತಿಯೊಳಗಿರೊ ಮೂವರ ಪರಸ್ಥಿತಿ ಅರ್ಥ ಮಾಡ್ಕೊಳ್ಳದ ಗೊಂದಾನಾಯ್ಕ, ಮದ್ವಿಯಾಗದ ಇಬ್ಬರು, ಮತ್ತ ಹನಮ ಜಂಬನ ಸೇರಿಸಿಕೊಂಡು ತಾನೇ ಉಸಾಬರಿ ನೋಡ್ತಾ ಬಂದಲಾಭದಾಗೆ ಅರ್ಥ ಗೊತ್ತಿಲ್ದಂಗೆ ಮುಚ್ಚಹಾಕ್ಕೊಬಹುದು ಅನ್ನೊ ಯೋಜನೆಯಿಂದ ಮನಿ ಹೊಡಿಯೋದನ್ನ ಖಾತ್ರಿಮಾಡಿದ. ಅವನಿಗ ಯಾರ ಭವಿಷ್ಯನೂ ಬೇಕಾಗಿರಲಿಲ್ಲಾ, ಮದ್ವಿಯಾಗ ಬೇಕಿರೊ ಒಬ್ಬ ತಂಗಿ, ಜವಾಬ್ದಾರಿ ಹೊರದಿರೊ ಇಬ್ಬರು ತಮ್ಮಂದಿರು, ಇನ್ನೂ ಅದಾರನ್ನೊ ಪರಿವೆಯೇ ಇಲ್ಲದೆ, "ಏನಾರ ಯಾಕ ಆಗವಲ್ಲ್ಯಾಕ ನಮ್ಮ ಪಾಲ ನಮಗ ಕೊಡಾಕಬೇಕು" "ನೀವು ಗಟ್ಟಿಯಾಗ ಬೇಕ್ರೋ, ಅವರಿಬ್ಬರು ಗಂಟಗಳ್ಳರು ಹೌದು. ಹ್ಯಾಂಗ ಒಂದಾಗಿ ಈ ವರ್ಷದ ಬೆಳಿದರೊಕ್ಕಾನೆಲ್ಲಾ ಗೊತ್ತಿಲ್ದಂಗೆ ಮಾಡ್ಯಾರ ನೋಡು. ಈಗ್ಲೆ ಬ್ಯಾರೆ ಆದ್ರಿ ಆದ್ರಿ, ಇಲ್ಲಾಂದ್ರ ನಿವ ಹಿಂಗ ಮುದುಕರಾಗೊ ಮಟಾನು ದುಡಿಬೇಕು ಅವರಿಬ್ಬರು ಗಂಟ ಮಾಡ್ಕೊಂಡು ಹೊರಗ ಬಿಳ್ತಾರ" ತಲಿ ತುಂಬಿದ. ಇಬ್ಬರು ಸಣ್ಣೋರಿಗು ಬ್ಯಾರೆ ಆಗಿ ಬಿಡಾಕ ಪುಸಲಾಯಿಸಿದ. ಏನು ತಿಳಿಯದ ಕುಮಾರಿ ಚೆನ್ನಿಂಗ ಮಾರಿ ಮಾರಿನೋಡ್ತಿದ್ರು.

ಕುಮಾರಿ ಬ್ಯಾರೆ ಆಗೋದನ್ನ ತಡಿಯಾಕ ಒಂದಿಷ್ಟು ಪ್ರಯತ್ನ ಏನೊ ಮಾಡಿದ. ಆದ್ರ ಗೊಂದಾನ ಹಿಡಿತ ಮುದಕ ಗೊತ್ತಾನಾಯ್ಕನ ಮ್ಯಾಲ, ಹನಮ, ಜೆಂಬನ ಮ್ಯಾಲ ಬಿಗಿಯಾಗಿದ್ರಿಂದ ಅವನ ಆಟ ನಡಿದಂಗಾಗಿತ್ತು. "ಯಾವಾಗ್ಲಾದ್ರು ಒಂದ ದಿನ ಹೊರಗ ಹಾಕ್ಲೆ ಬೇಕಲ್ಲ ಇವತ್ತೆ ಎತ್ತಿ ಬಿಸಾಕಬಿಡು, ನನಗ ನೀನ ಮುಖ್ಯ, ಅವರನಡಕ ಸಿಕ್ಕೊಂಡು ಇರೋದೊಂದ ಮುದಿಜೀವ ಸೆಟ್ಕೊಂಡ ಹೊದೀಯ. ಆಮ್ಯಾಲ ನಾನು ಎಲ್ಲಿಂತ

ಹುಡಕ್ಲಿ ಹುಡಕಿದ್ರು ಸಿಕ್ಕಿಯಾ" ಬೆಲ್ಲದಂತ ಮಾತಾಡಿ ಕೃತಕ ಕಣ್ಣೀರು ಸುರಿಸಿ ಪೂರ್ತಿ ನಂಬಿಸಿಬಿಟ್ಟಿದ್ದ. ಮುದಕ ಗೊಂದಾ ಒಬ್ಬನೆ ತನ್ನ ನಿಜವಾದ ಮಗ, ಅವನೊಬ್ಬನೇ ತನ್ನ ಹಚ್ಕೊಂಡಿರೋದು, ಬೇರೆಯವರೆಲ್ಲಾ ಖಾಲಿಪುಕ್ಕಟೆ ಕಾಳಜಿಮಾಡ್ತಾರ ಅಂತ ತಿಳ್ಕೊಂಡಿದ್ದ. ಅದಕ್ಕ ಒಂದು ಬಲವಾದ ಕಾರಣಾನು ಇತ್ತು. ಮುದಕನಿಗೆ ಹರ್ನಿಯಾ ಆಪರೇಷನ್ ಆಗಬೇಕಾದ ಸಂದರ್ಭದಾಗ ಗೊಂದಾನೆ ಮುಂದ ನಿಂತು ಮನಿದುಡ್ಡನೆ ತಾನು ಕೈಯಿಂದ ಖರ್ಚ ಮಾಡಾಕ ಹತ್ತೀನಿ ಅನ್ನೊ ಭಾವನೆ ಬರೊಂಗೆ ಖರ್ಚಮಾಡಿ ನಂಬಿಸಿಬಿಟ್ಟಿದ್ದ. ಮುದಿಯಾಗ ಅವನೇನಂತಾನೊ ಅದೇ ವೇದವಾಕ್ಯ ಆಗಿಹೋಯ್ತು. ಬೇರೆಯಾರನ್ನು ನಂಬುವ ಪರಿಸ್ಥಿಯೊಳಗಿರಲಿಲ್ಲಾ. ಅದಕ್ಕೆ ಪಂಚಾಯ್ತಿ ಯೊಳಗ ನಿರ್ಣಯ ಹೋಯ್ತು. ಒಂದೇ ಒಂದ ಮನಿ ಇದಿದ್ದ ಗೊತ್ತಾ ನಾಯ್ಕನ ಮನಿ ಹತ್ತಮನಿಗಳಾಗಿ ಒಡೆದು ಹೋದವು.

ಬಾಣವ್ವಗ ಯಾರೊ ತನ್ನ ಇಡಿ ದೇಹಾನ ತುಂಡತುಂಡಮಾಡಿ ಬಿಸಾಕಿದಂಗಾಗಿತ್ತು. ಮಕ್ಕಳು ಮೊಮ್ಮಕ್ಕಂಳಿಂದ ತುಂಬಿ ತುಳಕಾಡ್ತಿದ್ದ ದೊಡ್ಡಮನಿಯಾಗ ಐದಾರಗ್ವಾಡಿಗಳ ಎದ್ದು ಒಂದೇ ಮನಿಯಾನ ಒಂದಾಗಿದ್ದ ಮನಸ್ಸುಗಳು ಗ್ವಾಡಿಕಟ್ಕೊಂಡಿಂದ ಕತ್ತರಿಸಿಕೊಂಡ ದೇಹದ ಭಾಗಗಳಂತೆ ಬೇರೆನೆ ಆದವು. ಒಬ್ಬರಿಗೊಬ್ಬರು ಸಂಬಂಧವೆ ಇಲ್ದಂಗಾತು. ಅವನ ಮನೆ ಹಬ್ಬ ಅವನಿಗೆ, ದುಡದದ್ದು ಅವನ ಪಾಲಿಗೆ, ಉಪಾಸಬಿದ್ರು ಅವನಿಗೆ ಗೊಂದಾಮಾತ್ರ ಖುಷಿಯಿಂದ ಹನಮಾಪುರಕ್ಕೂ ಕಾಕಾಪುರಕ್ಕೂ ವಾರಕೊಂದದಪ ಬಂದ ಹೋಗ್ತಿದ್ದ ಕೈಯಾಗ ಕೊಡಿ ಬಂತು. ಕಣ್ಣಿಗ ಚಾಳಿಸು, ಹೋಸ ಅರವಿ ರೀತಿ ನಡಿ ಬದಲಾದ್ವು. ಐದಜನ ಒಟ್ಟಿಗೆ ಇರೋದಾಗಿ ಒಪ್ಪಂದಮಾಡಕೊಂಡ್ರು. ಬಾಕಿ ಉಳಿದ ಐದಮಂದಿ ಹೊರಗ ಹೋಗಿ ಐದಮನಿ ಕಟ್ಕೊಂಡ್ರು. ಗೊತ್ತಾನಾಯ್ಕ ಸಣ್ಣೋನಾದ ಚೆನ್ನಿಂಗ-ಕುಮಾರಿ ಹತ್ರ ಇರೋದಾಗಿ ಒಪ್ಪಂದ ಆಯ್ತು. ಒಳ್ಳೆ ದುಡಿಮೆ ಕಾಲದಾಗೆ ಮನಿ ಮುರದ ಹೊತು ಗೊತ್ತಾನಾಯ್ಕನ ಹಿತೈಷಿಗಳಿಗೆ ಬಹಳ ನಿರಾಶೆಯಾಗಿತ್ತು. ಅವನ ಹಿರೆಮಗಳು ಗಮಣು, ಎರಡನೇಯವಳು ಪುತಳಿ, ಮೂರನೆ ಸೋನಿಗ ಒಂದ ಕಡೀಗ ಸಂಕಟ ಒಂದಕಡೀಗ ಒಳಗೊಳಗೆ ಖುಷಿಯಾಗಿತ್ತು. ತಮ್ಮನ್ನೆಲ್ಲಾ ಮೀರಿ ಬೆಳಿತ್ತಿದ್ದ ಅಣ್ಣ ತಮಂದಿರ ಮ್ಯಾಲ ಮದ್ಲಿಂದ್ಲೆ ಹೊಟ್ಟಿಕಚ್ಚಿತ್ತು. ಮೆಲ್ನೊಟಕ್ಕ ಗೊಳೊ ಅಂತ ಅತ್ತಿದ್ರು. ಮುದಕಿ ಮೊಮ್ಮಕ್ಕಳಿಲ್ದೆ ಸೊರಗಿ ಹೋಗಿದ್ಲು ಏನೋ ಅವ್ಯಕ್ತಪಡಿಸಾಕ ಆಗದ ಸಂಕಟದಾಗ ಸಿಕ್ಕೊಂಡು ತೊಳಲಾಡ್ತಿದ್ಲು ಕೊನಿಮಗಳ ಪಾಂಗೋಶಿ ಮದ್ವಿಚಿಂತಿ ಒಂದ ಕಡೀಗ ಕಾಡಾಕ ಹತಿತ್ತು.

ಹನುಮನ ಹೇಣ್ತಿ ಚೀಲಕ್ಕ ಚೀಲರಾಗಿ ಹೊರಾಕ ಸುರುಮಾಡಿದ್ಲು. ಮುದುಕೀಗ ಹೇಳಾಕ ಆಗದೆ ಬಿಡಾಕು ಆಗದೆ ಸಹಿಸಿಕೊಂಡಿದ್ಲು. ಗೊಂದಾಗ ಸುದ್ದಿ ಮುಟ್ಟದೆ ಇರ್ಲಿಲ್ಲಾ. ಕಳ್ಳತನದ ಸುದ್ದಿ ತಲುಪಾನ ಪರ್ಯಾಯ ಆಲೋಚನೆ ಮಾಡ್ದ. ಹನಮನ್ನ ಕಿತ್ತೊಗೆದು ಜಂಬನ ಕುಟಾಗ ಹೊಲಮನಿ ಮಾಡ್ಸಾನ ಅವನ ಹೆಂಡ್ತಿನು ಸೆಂಭಾಯಿತ್ತಿ ಕಳ್ಳತನ ಮಾಡಂಗಿಲ್ಲಾ ಅಂತ ಹನಮನ್ನ ಕೈ ಬಿಡೊ ಯೋಜನೆ ರೂಪಿಸಿದ. ಆದ್ರ ಹನಮ ಹೊಗೋದಿರಲಿ ಜೆಂಬ ಮತ್ತಗೊಂದಾನ ಬುಡಕ್ಕ ನೀರ ಬಿಟ್ಟು "ನೀವ್ಯಾರು ಬ್ಯಾಡ, ನಿಮ್ಮ ಹೊಲಾನ ತಗೊಂಡ ಹೊರಗ ಹೋಗ್ರಿ, ಇಬ್ಬರ ಹೊಲಾನು ನಾನಲ ಮಾಡಿಸ್ತಿನಿ" ಗೊತ್ತಾನಾಯ್ಕ ಎಲ್ಲರನ್ನೂ ಹೊರಗ ದಬ್ಬಿದ. ಕೈಲಾದಷ್ಟು ಹೊಲಗಳನ್ನ ಕೊರಿಪಾಲಿಗೆ ಕೊಟ್ಟು ಕೆಲ್ಸ ಮಾಡಿಸುತ್ತಿದ್ದ. ಹ್ಯಾಂಗಿದ್ದ ಮನಿ ಹೆಂಗಾತಲ್ಲ ಅನ್ನೊ ಕೊರಗಿನಿಂದ ಮುದುಕಿ ಧಡ್ಡ್‌ಅಂತ ನೆಲಕ ಬಿದ್ದಾಕಿ ಮ್ಯಾಲ ಎಳಲೇ ಇಲ್ಲಾ.

ಕುಮಾರಿ, ಚೆನ್ನಿಂಗ ಊರಾಗಿರಲಿಲ್ಲಾ ಅವರನ್ನ ಕರೆಸಿ ಮುದಕಿನ ಹೊಲ್ದಾಗ ಸುಟ್ರು. ಕುಮಾರಿಗ ತಿಳುವಳಿಕೆ ಬಂದಾಗಿಂದ ತನ್ನ ಮನಿಯಾಗ ಮದ್ಲು ಸಾವನ್ನ ಕಂಡಿದ್ದ. ಅಂವ ಬಹಳ ವಿಚಲಿತಗೊಂಡಿದ್ದ ಹತ್ತ ಮಂದಿಯೊಳಗ ಕುಮಾರಿ ಅಂದ್ರ ಬಹಳ ಪ್ರೀತಿ ಬಾಣವ್ವಗೆ, ಅದೇನ ವಿಶೇಷಾನೊ ಏನೋ ಅವನು ಓದಾಕ ಹೋಗಿದ್ರ, "ನನ್ನ ಮಗ ಬಂದಿಲ್ಲವ್ವ ನಿಮ್ದೇನು ಒಂದು ಬಿಳಿ ಅರವಿಕೊಡ್ರಿ" ಅಂತ ಇಸ್ಕೊಂಡು ಎಮ್ಮಿ ಇಳದ ಮದಲನೇ ದಿನದ ಗೀಬಿನ ಹಾಲಿನೊಳಗ ಅರವಿಯನ್ನ ಅದ್ದಿ ನಾಕ ತಿಂಗಳ ಕಾಲ ಜಂತಿಗ ಕಟ್ಟಿಸುತ್ತಿದ್ಲು. ಮನಿಯಾಗ ಏನಾರು ವಿಶೇಷ ಅಡಗಿ ಆದ್ರ ಅವನ್ನ ನೆನೆಯದೆ ಉಣ್ತಿರಲಿಲ್ಲ. ಅಂವ ಚಿಕ್ಕೋನ ಇರುವಾಗ ಹಂಪಾಪುರದಿಂದ ಊರಿಗ ಬರಾಕ ಬಸ್‌ಚಾರ್ಜಿಗ ರೊಕ್ಕ ಇಲ್ದೆ ಅವನೂರಿನವನೇ ಆದ ಗಜಗನ ಕುಟಾಗ ಹತ್ತಮೈಲಿದೂರ ನಡ್ಕೊಂಡ ಬಂದಿದ್ದ. ರಾತ್ರಿಯೇಲ್ಲಾ ಎಚ್ಚರಾಗಿ, "ಮಗ, ನಡದು ನಡದು ದಣ್ಕೊಂಡಿಯಲ್ಲಾ, ಏನ್ಮಾಡೋದ ಹೇಳು ನಾಕದಿನ ಕಷ್ಟ ಬಂದೈತೆ, ಹಿಂಗೆ ಇರಂಗಿಲ್ಲಾ ನಮಗೂನುವೆ ಒಳ್ಳೆದಿನ ಬರತೈತಿ, ನೀ ಮಾತ್ರ ಪಸಂದಾಗಿ ಓದಿ ಮುಂದ ಬರೋದಕಲಿ" ಕಣ್ಣಂಚಿನ ನೀರ ಒರಸಿಕೊಮಡಿದ್ಲು.

ಕುಮಾರಿಗ ಹೊಟ್ಟಿಬ್ಯಾನಿ ಬಂದು ಸಾಯಿತ್ತಿರೊ ಹಂಗೆ ಸಂಕಟ ಪಡ್ತಿದ್ದ ಅವನಪ್ಪ ಗೊತ್ತಾನಾಯ್ಕ ಕ್ಯಾರೆ ಅನ್ನಲಿಲ್ಲಾ. ಬಾಣವ್ವ " ಸಾಯಾಕ ಹತ್ನವ್ವ ನನ್ನ ಮಗ" ಅಂದಾಕೀನೆ ಮನಿಯಾಗಿದ್ದ ಕೊರಿಚೀಲರಾಗಿ ಹಾಕಿಸಿ ಕೊಂಡು ಬಂಡಿ ಕಟ್ಟಿಸಿ ದವಾಖಾನಿಗ ಕರ್ಕೊಂಡ ಹೋದ್ಲು. ಡಾಕ್ಟರ್ ಬಾಯಿಗ ಬಂದಂಗ ಅಂದು ಎರಡ ಇಂಜೆಕ್ಷನ್ ಇಪ್ಪತ್ತರೂಪಾಯಿ

ಗೂಳಗಿ ಕೊಟ್ಟಿಂದ ಹೊಟ್ಟಿಬ್ಯಾನಿ ಒಂದ ಹಂತಕ್ಕ ಬಂದಿತ್ತು. ಅವೆಲ್ಲಾ ಕಷ್ಟದಾಗ ಬದುಕಿಸಿದ ಅವನವ್ವ ಬಾಣವ್ವ ಸತ್ತಾಗ ದುಃಖ ಆಗಿದ್ದು ಕುಮಾರಿಗ ಮತ್ತ ಅವನ ತಮ್ಮ ಚೆನ್ನಿಂಗ ತಂಗಿ ಪಾಂಗೋಶಿಗ ಮಾತ್ರ. ಉಳದೊರೆಲ್ಲಾ ಅಳಬೇಕಂತ "ನಮ್ಮೆಲ್ಲ ರನ್ನು ಬಿಟ್ಟಹ್ವಾದಲ್ಲವ್ವಾ" "ಈಗ ನಾವು ಯಾರಿಗ ಅತ್ತೆ ಅಂತ ಕರಿಯಾನ" ಅಂತ ಸೊಸೆಯಿಂದಿರೆಲ್ಲಾ ಸುಳ್ಳೆ ಸೆರಗಿಂದ ಮಾರಿ ಹಚ್ಕೊಂಡು ಅಳ್ತಿದ್ರು. ಕುಮಾರಿಗ ವಿಚಿತ್ರ ಅನಿಸಿತು, ಯಾವಾಗ ಸತ್ತಾರು ಈ ಮುದಕ, ಮುದಕಿ ಯಾವಾಗ ನಾವು ಬ್ಯಾರೆ ಆದೇವು ಸ್ವಂತ ಮಾಂಸದ ಪಾಲ ತಗೊಂಡು ತಿಂದೇವು ಅಂತ ಆಲೋಚನೆ ಮಾಡಿ ಅವರ ಮ್ಯಾಲ ಕೈಮಾಡಿ ಮನಸ್ಸಿಗ ಘಾತಮಾಡಿದ್ಕೆ ಮುದಕಿ ಸತ್ತಹೋಗಿದ್ದು ಆದ್ರು ಈ ದುಃಖ ಹ್ಯಾಂಗ ಬಂತ ಅವರಿಗೆ ಅನೋದನ್ನಾ ಅಲೋಚಿಸ ತೊಡಗಿದ. "ಬಾಯಿ ಮುಚ್ಚ್ರಿ ನೀಚರೆ, ನೀವೆ ನಮ್ಮವ್ವನ ಕೊಂದ ರಾಕ್ಷಸರು ಬದುಕಿದ್ವಾಗ ಬದಕಾಕ ಬಿಡದ ಪಾಪಸಕಳ್ಳಿಗಳ ನೀವು" ಅಂತ ಕೂಗಿ ಹೇಳಬೇಕು ಅನಿಸಿತು. ಆದ್ರ ಮಾತಗಳು ಹೊಟ್ಯಾಗಿಂದ ಎದಿಮಟ ಬಂದ್ರು ಎದಿಸೀಳಿ ಹೊರಗ ಬರದೆ "ಅಯ್ಯೊ ಅವ್ವಾ" ಅಂತ ಹೊರಗ ಬಂತು. ಸಂಬಂಧದ ಕೊಂಡಿ ಕಳಚಿ ಬಿಟ್ಟಿತು. ಒಂದೇ ಕರಳು ಬಳ್ಳಿಯ ಸುತ್ತ ಸುತ್ತಿಕೊಂಡಿದ್ದ ನಂಟು ಸೊಪ್ಪಿಯನ್ನ ಕತ್ತರಿಸೊ ಕತ್ತರಿಯೊಳಗೆ ಹಾಕಿ ತುಂಡಾಗಿಸಿದಂತೆ ತುಂಡರಿಸಿಕೊಂಡವು. ಮದವಿಗ ಮುಂಚೆ ಒಬ್ಬನಿಗ್ಯಾವನಿಗಾರು ಒಂದ ಚೂರ ಗಾಯವಾದ್ರೆ ತನಗೆ ಆದಂಗೆ ಆತಂಕ ಪಡ್ತಿದ್ದ ಅಣ್ಣ ತಮ್ಮಂದಿರು ಇವರೇನಾ ಅನಿಸಿಬಿಡ್ತು. ಒಂದ ಒಳ್ಳೆ ಕಲ್ಲು ಬಿದ್ದಿದ್ರೆ ತನ್ನ ಮನಿಗಾದೀತಂತ ತಂದು ಕೂಡಿಸಿಕಟ್ಟಿದ ಬದಕು ತೊಟ್ಟುಕಳಚಿಕೊಂಡು ಛಿದ್ರವಾಗ್ತಿರೋದನ್ನ ಮೌನವಾಗೆ ನೋಡ್ತಾ ಕುಂತಿದ್ದ ಅಪ್ಪ, ಮೂಕ ಪ್ರೇಕ್ಷಕನಾಗಿದ್ದ. ಆ ಹೊಲ ನನಗೆ, ಆ ಸಾಮಾನು ನನಗೆ ಎಂದು ವಾಗ್ವಾದಗಳು ಆರಂಭವಾಗಿದ್ದವು. ಅವ್ವಸತ್ತಮ್ಯಾಲ ಅಕಿನೆನಪಿಗಾಗಿ ಅಕಿ ಮುಕ್ರ ನನಗ ಕೊಡ್ರಿ ಆದ್ರ ಬಾಬ್ತು ಹಣ ಎಟಾಗುತ್ತೊ ಕೊಡ್ತೀನಿ ಅಂದಿದ್ದ ಕುಮಾರಿ "ನೀ ಒಬ್ಬನೇನಾ ದುಡ್ಡನೋಡಿರೋದು ನನಗ ಬೇಕು" ಎಲ್ಲರಿಗಿಂತ ದೊಡ್ಡವನಾದ ನುಗ್ಗಾ ಒರಟಾಗೆ ಹೇಳಿದ. ಹಿರಿಮಾವ ಛತ್ತನಾಯ್ಕ "ಯಾರಿಗೂ ಬ್ಯಾಡ ಪಾಂಗೋಶಿಗ ಹಾಕಬಿಡ್ರೋ" ಸಲಹೆಕೊಟ್ಟ. "ನಮ್ಮ ಮನಿ ಬಂಗಾರ ಮತ್ತೊಂದ ಮನೀಗ ಹೋಗಬಾರದು, ಯಾರಿಗೂ ಬ್ಯಾಡ ಸಣ್ಣೋನ ಹತ್ರ ಇರ್ಲಿಬಿಡ್ರಿ" ಗೊಂದನಡಕ್ಕ ಬಾಯಿಹಾಕಿದ. ಪಿಣುನ ಮೈಯಿ ಉರಿಕೀಳ್ತು. "ಸಣ್ಣೋನ ಹತ್ರಯಾಕೆ? ನನ್ನ ಹತ್ರ ಇರ್ಲಪ್ಪ, ಅದರ ಖರ್ಚು ಎಷ್ಟಾಗತೈತಿ ನಾನಕೊಡ್ತೀನಿ" ಹಠ ಹಿಡ್ಕೊಂಡ ಕುಂತ. ಕುಮಾರಿ ಯಾವ ಸುದ್ದಿಗೂ ಹೋಗದಂಗೆ

ಎದ್ದು ಅವನಿಗ ಇಷ್ಟವಾದ ಕೆರಿಏರಿಕಡೀಗ ನಡದ.

ಒಂದಕಾಲದಾಗ ಹಚ್ಚ ಹಸರಾಗಿ ಬತ್ತದ ತೆನೆಗಳು ಬಂಗಾರದಂಗೆ ಹೊಳಿತ್ತಿದ್ದ ಗದ್ದೆಗಳೆಲ್ಲವು ಬಂಜರ ಭೂಮಿಯಾಗಿ ಕಾಂಗ್ರೆಸ್‌ಕಸ ತುಂಬಿಕೊಂಡು ಎಲ್ಲಿವರಿಗ ನೋಡಿದ್ರು ಖಾಲಿತನ. ಕೇರಮಾನ ಮರ, ಹಾದಿಮ್ಯಾಲಿನ ನೆರಲೆ ಹಣ್ಣಿನ ಮರ ಪಟರೆ ಹುಣಸಿಗಿಡ ಎರಿಮ್ಯಾಲಿಂದ ಮಾಯವಾಗಿ ಬಣಬಣ ಅನಿಸುತ್ತಿತ್ತು. ಅವನ ಎದಿಯೊಳಗ ಒಂದ ರೀತಿಯ ನೋವ ಕಾಣಿಸಿಕೊಂಡಿತ್ತು. ಹುದಲಹಳ್ಳದಾಗ ಏಡಿ ಹಿಡಿದು ಸಾರ ಮಾಡಿದ್ದು. ದನದ ಹುಡ್ರು ಅವನನ್ನ ಬುತ್ತಿ ತರಾಕ ಕಳಸಿ ಮೀನ ಹಿಡದು ಸುಟ್ಟು ಅವನ ಬಂದಿಂದ ಹಿಂಡಿಯೊಳಗ ಕಿವುಚಿ ರುಚಿಯಾಗಿ "ಯಾರು ಗಡಾನೆ ಉಣ್ಣೋದಿಲ್ಲೊ ಅವರ ಹತ್ರದ ರೊಟ್ಟಿಯನ್ನ ಕಸ್ಕೊಂಡ ತಿನ್ನೋದ್ರಪ" ಅಂತೇಳಿ ಕರಾರ ಮಾಡಿದ್ಕ ಗಪಗಪ ತಿಂದು ಕಡಕಲುರೊಟ್ಟಿ ಒರಟೊರಟಾಗೆ ಅಗದು ನುಂಗಿ ಗಂಟಿಲಾಗ ಸಿಕ್ಕೊಂಡಿದ್ಕ. "ಎಪ್ಪ ಸತ್ನೊ" ಕೂಗಕೊಂಡಿದ್ದ. ಅವನ ಕೂಡ ದನಕಾಯ್ತಿದ್ದ ಪೀರಿ ಕುತಗಿಗ ಹೊಡದು ಮುಂದ ಕಕ್ಕೊಳ್ಳೊ ಹಂಗ ಮಾಡಿದ್ದು ನೆನಪಿಸಿಕೊಂಡು ನಕ್ಕ. ಮನಸ್ಸಿಗ ಸಮಾಧಾನ ಆಗಲಿಲ್ಲಾ ಎದ್ದು ತುಸುದೂರ ನಡದ ಅವನವ್ವನ ನೆನಪು ಗಾಢವಾಗಿ ಕಾಡಹತ್ತಿತ್ತು. "ಏನಮಾಡ್ಲಿ, ಎಲ್ಲಿಗ ಹೋಗ್ಲಿ, ಮಾಡಾಕ ಕೆಲ್ಸ ಇಲ್ಲಾ, ಇರಾಕ ಮನಿಇಲ್ಲಾ ಎಟದಿನಾಂತ ಹಿಂಗೆ ಇರಾಕ ಆದೀತು, ಕೆಲ್ಸ ಮಾಡ್ದಿದ್ರ ಉಣ್ಣಾಕ ಸಿಂಗಗಿಲ್ಲಾ" ಯೋಚನೆಯೊಳಗೆ ಸಂಪೂರ್ಣವಾಗಿ ಮುಳಗಿಕೊಂಡ. ಸುತ್ತಲು ಕತ್ತಲು ಆವರಿಸಿತ್ತು ಜಿರುಂಡಿಸದ್ದು ಜೀರ್, ಜೀರ್ ಅಂತ ಕೇಳಿಸುತ್ತಿತ್ತು. ಮನಿ ಅನಿವಾರ್ಯವಾಗಿತ್ತು. ಅಪ್ಪನ ಸಮಾಧಾನಕಾದ್ರು ನಾಕದಿನ ಮನಿಯಾಗ ಇರೊ ನಾಟಕ ಮಾಡಬೇಕು ಅನಿಸಿತು.

ಗೊತ್ತಾನಾಯ್ಕನ ಮಾತಗಳು ಕಮ್ಮಿಯಾದವು. ಕುಮಾರಿ, ಚೆನ್ನಿಂಗ ಪಾಂಗೋಶಿ ಯನ್ನ ನೋಡಿದ ತಕ್ಷಣ ಎದಿಯಾಳದಿಂದ ಉಸರನ್ನ ಹೊರಗ ಹಾಕ್ತಿದ್ದ. ನುಗ್ಗಾ ಸುಕ್ಲಿ ಉಣ್ಣಾಕ ಕರದ್ರು ಹೋಗ್ತಿರಲಿಲ್ಲಾ. "ಈಗ್ಯಾಕ ಮರಕ ಪಡೊನಾಟಕ ಮಾಡ್ತಿರಿ ಹೋಗ್ರವ್ವ. ಈ ಮನಿಕಟ್ಟಿದ ಪುಣ್ಯಾತಗಿತ್ತಿ ಯಾವತ್ತ ಹ್ಯಾದ್ಲೋ ಅವತ್ತೆ ನನ್ನ ಸುಖ ಸಂಪುತ್ತೆಲ್ಲಾ ಹೋಗಬಿಡ್ತು" ಕಣ್ಣಾಗ ವಿಷಾದ ಇತ್ತು. ದುಃಖಾನ ಹೊರಗಹಾಕ ಬೇಕಂದ್ರ ಕಣ್ಣಾಗಿನ ನೀರ ಸಹ ಬತ್ತಿ ಹೋಗಿದ್ವು. ಅವರು ಎಷ್ಟ ಒತ್ತಾಯ ಮಾಡಿದ್ರು ಹೋಗದೆ ಪಾಂಗೋಶಿ ಮಾಡಿದ ಅಡಗಿಯನ್ನ ಉಂಡು ಎಲ್ಲೂ ಹೋಗದಂಗೆ ಮುದುರಿಕೊಂಡು ಮಕ್ಕೊಂಡ ಬಿಡ್ತಿದ್ದ. ಸಂಜಿಮುಂದ ಮನಸ್ಸಿಗ ಬಂದ್ರು ಶೆಟ್ಟಿಹೊಲದ ಕಡೀಗ ಹೋಗಿ ಕತ್ತಲಾಗೊಮಟ ಒಟ್ಟಾಗಿದ್ದ ಜಮೀನು ತುಂಡತುಂಡಾಗಿ ಹಂಚಿರೋದನ್ನ ಕಂಡು

ಮತ್ತೊಮ್ಮೆ ವ್ಯಥೆ ಪಟ್ಟು ತನ್ನ ದುಃಖ ಕಮ್ಮಿ ಮಾಡಿಕೊಳ್ಳೊ ಸಲುವಾಗಿ ಒಂದಪಾಕೀಟು ತಗೊಂಡು ಕುಡದು ಹಳೆನೆನಪುಗಳ ಗಾಯದ ಮೇಲಿನ ಹಿಕ್ಕಿ ಕಿತ್ಕೊಳೊ ಹಂಗೆ ತಕ್ಕೊಂಡು ಬೀಡಿ ಎಳಿತಾ ಬಹಳಷ್ಟೊತ್ತು ಕುಂತ ಬಿಡ್ತಿದ್ದ. ಅವನ ಶತ್ರುಗಳಿಗ ಹಾಲಕುಡದಷ್ಟು ಸಂತೋಷವಾಗಿತ್ತು. "ಏನಮೆರದ್ನಪ್ಪ ನಾಕದಿನ, ಟ್ರಾಕ್ಟರ್ ತಗೊಂಡ, ನೀರಾವರಿಮಾಡ್ದ ಈಗ ವಿಷದ ಹಲ್ಲು ಕಿತ್ತ ಹಾವಿನಂಗೆ ಆಗಿ ಕುಂತ ಬಿಟ್ಟ" ಸೋನ್ಯಾ ಅವನ್ನ ನೋಡೆ ಮತಾಡ್ತಿದ್ದ "ಹೇಳ ಹೇಳಮಗನೆ ಇವತ್ತ ನಿಂದು ದಿನ ಅಂತಿಯಾ, ಯಾವತ್ತು ಎದ್ರಿಗ ಬಂದು ಮಾಡಿತೋರಿಸಲಿಲ್ಲಾ ಹಿಂದಿಂದ ಇಷ್ಟ ಮಾತಾಡಿಕೊಳ್ಳ ದಿದ್ರಹ್ಯಾಂಗ" ಕೇಳಿದ್ರು ಕೇಳದಂಗೆ ಸುಮ್ಮನಾಗಿ ಬಿಡ್ತಿದ್ದ. ಯಾವಾಗ್ಲಾದ್ರು ಒಂದ ಸಲ ಚೆಂಪಿಮನಿ ಕಡೀಗ ಹೋಗಿ ತನ್ನ ಹಳೆನೆನಪನ್ನ ಹುಡಕೊ ಪ್ರಯತ್ನ ಮಾಡ್ತಿದ್ದ.

ಕುಮಾರಿ ವಾಪಾಸಾ ಹೊಂಟ ನಿಂತ, ಗೊತ್ತನಾಯ್ಕ ದುಃಖ ತಡಿಯಾಕ ಆಗಲಿಲ್ಲಾ ಅವನನ್ನ ತಬ್ಕೊಂಡು ಸಣ್ಣಹುಡ್ರಂಗ ಅತ್ತಬಿಟ್ಟ. "ಎಲ್ಲಿಗಂತ ಹೋಗ್ತಿ, ಏನಮಾಡ್ತಿಯಪ್ಪ ನನ್ನಿಂದ ಈಗ ಜಗತ ನೋಡಾಕ ಆಗೋದಿಲ್ಲಾ" ಸುಮ್ಮನಾದ. ಕುಮಾರಿಗ ಮಾತಾಡಬೇಕು ಅನಿಸಲಿಲ್ಲಾ, ಹಳೆ ಸೂಟ್ಕೇಸನ್ನ ಹಿಡ್ಕೊಂಡು ಚೆಲುವಾಪುರದ ಹಾದಿಹಿಡದ. ಹಿಂದಿಂದ ಊರಮಂದಿ ಏನೇನೊ ಮಾತಾಡ್ತಿದ್ರು ಮಾತಗಳು ಕಿವಿಮ್ಯಾಲ ಬಿದ್ರು ಮನಸ್ಸಿನೊಳಗ ಹೊಂಟಿರಲಿಲ್ಲಾ. ಆವೇಷದಿಂದ ಭರಾಭರಾ ನಡದ, ತೆಗ್ಗಿನೊಳಗ ಕಾಕಾಪುರ ತಾಂಡ ಮರಿಯಾತು. ಹೊಳ್ಳಿ ನೋಡಿದ ಕೋಡಿಸರದಾಗಿನ ಹುಣಸಿಮರದ ತುದಿ ಕಾಣ್ತಿತ್ತು. "ಎಲ್ಲಿಗಹ್ವಾದ್ರು ಬಿಟ್ಟಿತು ಈ ಊರಿನ ಮೋಹ" ಅಂದವನೆ ಬಸ್ ನಿಲ್ದಾಣಕ ಹೊರಟ.

ಯಾರದೋಸ್ನೇಹಿತರ ಖೋಲಿಯೊಳಗೆ ಉಳ್ಕೊಂಡ. ಅಲ್ಲಿ ಇಲ್ಲಿ ತಿರಗಾಡಿ ಯಾರದೊ ಮರ್ಜಿಕಾದು ಒಂದ ಕೆಲ್ಸ ಗಿಟ್ಟಿಸಿಕೊಳ್ಳೊ ಪ್ರಯತ್ನ ಮಾಡಿದ. ಎಲ್ಲೋ ಒಂದ ಕಡೀಗ ಟೆಂಪರರಿ ನೌಕರಿಸಿಗ್ತು. ಹೊತ್ತಕಳಿಯಾಕ ಒಂದ ದಾರಿ ಯಾತು. ಬದುಕನ್ನ ತುಂಬಿಕೊಳ್ಳಬೇಕೆನ್ನೊ ಆತುರ, ಬಡತನ, ಶೋಷಣೆ, ಅನ್ಯಾಯದ ಸರಮಾಲೆಯನ್ನೆ ಕಂಡಿದ್ದ. ನೆಮ್ಮದಿಯ ನಾಳೆ ಸಿಗಬಹುದಂತ ಕಾತರದಿಂದ ಕಾಯತೊಡಗಿದ. ತಾನು ನೌಕರಿಮಾಡಬೇಕಾದರೆ ಲಕ್ಷಗಟ್ಲಲೆ ಕೊಡಬೇಕಾದ ಲಂಚದ ಕುರಿತು ಯೋಚನೆ ಮಾಡಿದ. ಯಾವುದಾದರೂ ಒಂದು ಸಣ್ಣ ನೌಕರಿ ಸಿಕ್ಕರು ಸಾಕಂತ ಕಂಡ ಕಂಡವರನ್ನೆಲ್ಲಾ ಭೆಟ್ಟಿಯಾಗಿ ತನ್ನ ಪದವಿಪತ್ರಗಳನ್ನ ಬಹುಮಾನಗಳನ್ನ ತೋರಿಸಿ ನಿರಾಶನಾದ. ಅವನು ಉಳ್ಕೊಂಡಿದ್ದ ಖೋಲಿಯೊಳಗಿದ್ದಗೆಳೆಯ ಧರಣೆಪ್ಪ, "ಯಾಕ ಮನಸ್ಸ ಸಣ್ಣದ ಮಾಡ್ಕೊಂತಿಯ,

ಇವತ್ತಲ್ಲಾ ನಾಳೆ ನಿನಗೂ ಒಂದ ಒಳ್ಳೆದಿನ ಬರುತ್ತೆ ಕಣಯ್ಯ" ಸಮಾಧಾನ ಪಡಿಸ್ತಿದ್ದ. "ಯಾವತ್ತ ಬರುತ್ತೆ ಬಿಡ್ರಿ ಆ ಕಾಲದಬಗ್ಗೆ ನಾವು ಹಿಂಗೆ ಕನಸಕಾಣ್ತಾನೆ ಮುದುಕರಾಗೋದೆ ವಿನಃ ನನಸಾದ ಬದುಕನ್ನ ಬದಕಾಕ ಆಗೋದಿಲ್ಲ, ಈ ದೇಶದಾಗ ನನ್ನ ಹಂಗೆ ಕನಸಕಾಣ್ತಾ ಕುಂತಿರೊ ಕೋಟಿಮಂದಿ ಅದಾರ ಅವರೆಲ್ಲರೂ ನನಂತೊರೆ" ಅಸಮಾಧಾನವನ್ನ ತೊಡಿಕೊಂಡ. "ನೀನು ದಿನ ಪೇಪರನೋಡ್ತಿಲ್ಲಾ, ಹೂಂ, ಇಗೋ ಇಲ್ಲಿ ನೋಡು ಬಿ.ಎ. ದ ಮ್ಯಾಲ ಒಂದು ಪೊಸ್ಟನ್ನ ಕೃಷಿ ಇಲಾಖೆಯೊಳಗ ಕರದಾರ, ಪ್ರವೇಶ ಪರೀಕ್ಷೆ ಐತಿ ಮದ್ಲು ಹಾಕು ಆಮ್ಯಾಲಿಂದ, ನೀನ ಕನಸಕಂಡ ನೌಕರಿಗ ಹೋಗಾಕಿ" ಅವನ ಕೈಗ ಪೇಪರಕೊಟ್ಟ. ಅಪ್ಲಿಕೇಷನ್ ಖರಿದಿಸಿ ಅದಕ್ಕ ಬೇಕಾದ ಲಗತ್ತುಗಳನ್ನ ಹಚ್ಚಿ ಹಾಕಿದ. ಕಾಲೇಜಿನ ಪೋಷನ್ ಗಡಿಬಿಡಿಯೊಳಗೆ ಕೃಷಿ ಇಲಾಖೆಗೆ ಅರ್ಜಿಹಾಕಿದ್ದೆ ಮರತಬಿಟ್ಟ. ಪರೀಕ್ಷೆ ಮುಗಿಸಿ, ರಾಮಕೃಷ್ಣನಗರದ ಹುಡ್ರಿಗೆ ಮನಿಪಾಠಹೇಳಿಕೊಡಾಕಂತ ಮನಿಮನಿಗ ಹೋಗಿ ಒಂದ ಇಪ್ಪತ್ತ ಹುಡುಗರನ್ನ ಸಜ್ಜಮಾಡಿದ. ರಜೆಯ ಪಾಠಗಳು ಆರಂಭ ಆಗಿದ್ದು ಪೂರ್ವಭಾವಿ ಪರೀಕ್ಷೆಯ ಪತ್ರಬಂತು, ಲೈಬ್ರರಿ ಅಲ್ಲಿ ಇಲ್ಲಿ ಸುತ್ತಾಡಿ ಒಂದ ನಿಮಿಷ ಕಾಲ ವ್ಯರ್ಥಕಳಿದಂಗ ಪರೀಕ್ಷೆ ತಯಾರಿ ಮಾಡಿ, ಪರೀಕ್ಷೆ ಬರದು, ಎಲ್ಲರಿಗಿಂತಲೂ ಹೆಚ್ಚು ಮಾರ್ಕ್ಸ ತಗೊಂಡ. ೧:೫ ಜನಕ್ಕೆ ಸಂದರ್ಶನ ಕರದಿದ್ರು. ಕುಮಾರಿ ಮತ್ತ ಧರಿಣೆಪ್ಪನ ತಾವ ಕಂಪ್ಲೆಂಟ ಮಾಡ್ದಾ. "ಇವೆಲ್ಲಾ ಮದ್ಲೆ ಬುಕ್ ಆಗಿರ್ತಾವ್ರಿ, ಮಿನಿಷ್ಟ್ರ ಸಂಬಂಧಕರಿಗೊ, ಅಧಿಕಾರಿಗಳ ಅಣ್ಣತಮ್ಮಂದಿರ ಮಕ್ಕಳಿಗ ನಮ್ಮಂತೋರಿಗ ಎಲ್ಲಿ ಸಿಗಬೇಕು ಈ ನೌಕರಿಗಳು" ಅಂತ ಅಸಹಾಯಕತೆ ತೋಡಿಕೊಂಡಿದ್ದ. "ಯಾಕಿಂಗೆ ನಿರಾಶೆಯಿಂದ ಮಾತಾಡ್ತಿಯಾ, ನೀನು ಸಂದರ್ಶನಕ್ಕೆ ಹೊಗೋದ್ರಿಂದ ಕಳ್ಕೊಳ್ಳೊದಾರು ಏನು ? ಬೆಂಗಳೂರು ಮಟ ಹೋಗಾಕ ನಾನು ಬಸ್ ಚಾರ್ಜ್ ಕೊಡ್ತಿನಿ ಹೋಗು" ಭರವಸೆ ಮೂಡಿಸಿದ. ಪಾಪ ಧರಣೆಪ್ಪ ಅದ್ಯಾವದೊ ಸರ್ಕಾರದಿಂದ ಅನುದಾನ ಪಡೆಯದ ಸ್ಕೂಲ ಹೆಡ್‌ಮೇಷ್ಟ್ರಾಗಿ ಹತ್ತವರ್ಷಗಳಾಗಿದ್ದು ಯಾವತ್ತಾರು ಒಂದ ದಿನ ಅನುದಾನ ಆದೇ ಆಗತೈತಿ ಅನ್ನೊ ಭರವಸೆಯೊಳಗೆ ಕಾಲ ತಳ್ತಾ ಇದ್ದ. ಕುಮಾರಿ ಆತನ ಮಾತಿನಂಗೆ ಬೆಂಗಳೂರಿಗೆ ಸಂದರ್ಶನಕ್ಕ ಹ್ವಾದ. ಮುಂಜಾನೆ ಹನ್ನೊಂದ ಗಂಟೆಗ ಆರಂಭವಾದ ಸಂದರ್ಶನದಾಗ ನಾಕಮಂದಿ ಕುಂತಿದ್ರು. "ಹೂಂ, ಏನಪ್ಪ ಕುಮಾರಿ, ಓದಿರೋದು ಎಂ.ಎ., ಮುಂದ ಬ್ಯಾರೆ ನೌಕರಿಸಿಕ್ಕರ್ರೆ ಬಿಟ್ಟಹೋಗಂಗಿಲ್ಲಾ" ನೇರಪ್ರಶ್ನೆ. "ಇವತ್ತು ನೌಕರಿಸಿಗೋದೆ ಅಪರೂಪ ಸಾರ್ ಅಂತದ್ರಾಗ ಬಿಟ್ಹೊಗೋದ ಎಲ್ಲಿಂದ ಬಂತು" ಕುಮಾರಿ ಹೇಳಿದ.

ಇಂತಹವೆ ಐದಾರ ಪ್ರಶ್ನೆಗಳಿಗ ಸರಿಯಾಗಿ ಉತ್ತರ ಹೇಳಿದ. ಸಂಜಿ ನಾಕ ಗಂಟಿಗ ಆಯ್ಕೆ ಪಟ್ಟಿ ಹಚ್ಚತಾರಂತ ಅಂದಿದ್ಕ ಕಾದ್ಕೊಂಡ ನಿಂತ. ಕಿಸೇದಾಗ ಇದ್ದಿದ್ದೆ ರೈಲಿಗೆ ವಾಪಾಸ ಹೋಗುಷ್ಟ ರೊಕ್ಕ. ಸಿಂಗಲ್ ಚಾ ಕುಡಿಬೇಕ ಅನಿಸಿದ್ರು ಕುಡಿಯಾಕ ತಾಕತ್ತಿಲ್ಲಂಗಾಗಿತ್ತು. ಅವನಪ್ಪನ ನೆನಪಾತು, ಅವನು ಹಂಪಾಪುರ ಹಾಸ್ಟಲನೊಳಗ ಓದ್ತಿರಬೇಕಾದ್ರ ಹೊಲದ ಮ್ಯಾರಿಮ್ಯಾಲ ಸಿಕ್ಕ ಅಣಬೆಗಳನ್ನ ಕಿತ್ಕೊಂಡು ಚೀಲದಾಗ ತುಂಬಿ ಹಂಪಾಪುರದ ದುಗ್ಗಮ್ಮನ ಗುಡಿಮುಂದಿನ ಆರ್‍ಯರ ಓಣಿ ತಿರಗಾಡಿ "ಅಣಬಿ ಬೇಕೇನ್ರವ್ವ" ಅಂತ ಕೂಗಿ ಅಣಬಿ ಮಾರಿ ಅವನಹತ್ರ ಬಂದಾಗ ಒಂದ ರೊಟ್ಟಿತಿನ್ನಾಕಂತ ಮಡಚಿಕೊಂಡ ಬಂದಿದ್ದನ ಕೊಟ್ಟು ತಲಿಮ್ಯಾಲಕೈಯಾಡಿಸಿ ಐದಪೈಸಾ ಕೈಯಾಗ ಕೊಟ್ಟು "ಸರಿಗ ಓದಮಗಾ" ಅಂತಾ ಹೇಳಿಬರ್‍ತಿದ್ದ. ಅಂವ ಎಸ್ಸಲ್ಸಿಗ ಬಂದಾಗ ಒಂದ ಜೋಡಿ ಹವಾಯಿ ಚಪ್ಪಲಿಕೊಳ್ಳಾಕ ಒಂದ ತಿಂಗಳ ಕಾಲ ಗೋಗರದಿದ್ದ. ಅವನವ್ವ ಸಿಫಾರಸ್ಸು ಮಾಡಿ ತಗರಿಮಾರಾಕ ಬಂಡಿಕಟ್ಕೊಂಡ ಬಂದಿದ್ದಾಗ ಮತ್ತಗೊಗರದು ತಗೊಂಡಿದ್ದ. ಡಾಕ್ಟರ ಆಗ ಬೇಕನ್ನೊ ಕನಸಕಂಡು ಓದಾಕಹತ್ತಿದ್ದ. ಗೊತ್ತಾನಾಯ್ಕ ಸಂತಿಗಂತ ಬಂದಾಗ ಮಾರ್ಕೆಟ್ ಮುಂದಿನ ಶೆಟ್ಟಿ ಚಾದಂಗಡಿಯೊಳಗ ನಾಕಾಣಿ ಮಂಡಕ್ಕಿ, ಹತ್ತ ಪೈಸದ ಮಿರ್ಚಿ, ಸಿಂಗಲಚಾ ಕುಡಿಸಿದ್ದು ನೆನಪಮಾಡಿಕೊಂಡ. ಹೊತ್ತ ಹೋದದ್ದೆ ಗೊತ್ತಾಗಲಿಲ್ಲಾ, ಅಂಜ್ಕೊಂತ್ಲೆ ಪಟ್ಟಿನೋಡಾಕ ಹೋದ. ಆವಾಗ್ಲೆನಾಕಮಂದಿ ಬೋರ್ಡಿನಸುತ್ತ ನೇರದಿದ್ರು. ಯಾರಮುಂದ ಹೇಳದಂಗ ಮಾರಿ ಸಪ್ಪಗ ಮಾಡ್ಕೊಂಡ ವಾಪಾಸ ಬರ್‍ತಿದ್ರು. ಅವನಿಗ ಆಶ್ಚರ್ಯ ಆತು. ಎಲ್ಲೊ ಒಂದು ಭರವಸೆ ಕಿರಣ ಜಾಗೃತವಾಯ್ತು. ಕಣ್ಣು ಮುಚ್ಚಿದ, ಅವನಣ್ಣ ಗೊಂದಾನಾಯ್ಕ ಹಿಂದೊಂದ ಸಲ ಆಡಿದ ಮಾತಗಳು ಕಿವಯಾಗ ಗುಂಯ್ ಗುಡತೊಡಗಿದ್ದು. "ಅಣ್ಣಾ, ನಮ್ಮ ಪಾರ್ಟಟೈಂ ಮಾಡ್ತೀರೋರಿಗೆ ಲಚ್ಚರ ನೌಕರಿ ಖಾಯಂ ಮಾಡ್ಕೊಂತಾರಂತ ಹೋಗಿ ಬರ್‍ತಿನಿ ಒಂದ ನೂರ ರೂಪಾಯಿ ಕೊಡ್ತಿಯಾ" ಮಾರಿ ಸಣ್ಣದ ಮಾಡ್ಕೊಂಡು ಗೊಗರದ. "ಎಲ್ಲಿ ರೊಕ್ಕಾನೋ ನನ್ನ ತಾವ ಎಲ್ಲದಾವ, ನನ್ನ ಮಕ್ಕಳಿಗ ಸ್ಕೂಲು ಕಾಲೇಜ ಫೀಸ ತುಂಬಾಕೆ ಇಲ್ಲಾ ಎಲ್ಲಿಂದ ಕೊಡ್ಲಿ" ಎಂದು ನಾಯಿಗ ಗದರಿಸಿದಂಗೆ ಗದರಿಸಿ ಒಂದ ಲೋಟ ನೀರ ಕೊಡ್ದಂಗೆ ಗದುಮಿದ. ಮನಿ ಒಡಿಯೋ ಮುಂದ, "ನೋಡತಮ್ಮಾ, ಅವರಿಗ ಏನೂ ತಿಳಿಯೋ ದಿಲ್ಲಾ, ನಾಳೆ ನಿನಗ ನೌಕರಿ ಕೊಡ್ಸಿವಪ್ಪ ಆಸ್ತಿಯೊಳಗ ಏನೇನು ಕೊಡೊದಿಲ್ಲಾ ಅಂತ ಕುಂತ್ಕೊಂಡ್ರ ಏನಮಾಡ್ತೀಯಾ ಅದಕ್ಕೆ ಹೇಳಾಕಹತ್ತೀವಿ ನಮ್ದನಮಗ ಕೊಟ್ಟ ಬಿಡ್ರಿ ಅಂತ ಹೇಳು ನಾನೇ ಹೋರಾಡಿ ನಿನಗೊಂದು ನೌಕರಿ

ಕೊಡಿಸ್ತೀನಿ" ಎಂಥ ನೀಚ ಮನುಷ್ಯ ತನ್ನ ಸ್ವಾರ್ಥಕ್ಕೆ ಇಡೀಮನಿತನ ಒಡದು ಹಾಳ ಮಾಡಿದ. ಇನ್ನೂ ಇಪ್ಪತ್ತ-ಮೂವತ್ತ ವರ್ಷಗಟ್ಟೆಮುಟ್ಟಾಗಿರ್ತಿದ್ದ ನಮ್ಮವ್ವ ಅಪ್ಪಗೆ ತಲಿತುಂಬಿ ಅವರನ್ನ ಆಲೋಚನೆ ಕೂಪಕ್ಕೆ ದೂಕಿದ, ಅವನು ಏನಂತ ತಿಳ್ಕೊಂಡಾನೊ. ಅವಸರದಿಂದ ಪಟ್ಟಿನೋಡಿದ. ನಂಬಾಕಾಗಲಿಲ್ಲಾ, ಪಕ್ಕದಲ್ಲಿ ನಿಂತೋರಿಗ ಕೇಳಿದ. "ಸಾರ್ ಈ ಪಟ್ಟಿಯೊಳಗ ಯಾರ ಹೆಸರೈತಿ ಆಟು ಓದಿ ಹೇಳ್ತಿರ" ಅಂದ, ನಿಂತಿದ್ದವ್ಯಕ್ತಿ ಕೇಳಗಿಂದ ಮ್ಯಾಲಿನ ಮಟ ಒಂದ ಸರ್ತಿನೋಡ್ತಾ. "ಯಾಕಯ್ಯ ನಿನಗೆ ಕಣ್ಣಿಲ್ಲಾ" ಮಾರಿ ಸಿಂಡರಿಸಿದ. "ಇಲ್ಲಾ ಸಾರ್, ಅಲ್ಲಿರೋದು ನಂದೇ ಹೆಸರ ಅಂತ ನೀವೊಮ್ಮೆ ನೋಡಿ ಹೇಳ್ರಿ" ವಿನಯದಿಂದಲೇ ಹೇಳಿದ. "ಹಂಗ, ಏನ ನಿನ್ನ ಹೆಸರು" ಕೇಳಿದ. ಕುಮಾರಿ ಉತ್ತರಿಸಿದ. "ನಿಮ್ಮದೆ ಹೆಸರ ಕಣ್ರಿ ಏಟಕೊಟ್ರಿ" ಕುತೂಹಲದಿಂದ ಕೇಳಿದ. "ನಾನೆ ತಿರುಪೆ ಎತ್ತಾಕ ಹತ್ತೀನಿ ರೈಲಿಗ ಹೋಗಾಕ ದುಡ್ಡಿಲ್ಲಾ ನಾನ ಎಲ್ಲಿಂದ ಕೊಡ್ಲಿ" ತಿರುಗಿಮಾತಾಡ್ದಂಗೆ ಆಫೀಸಿಗ ಹೋಗಿ ಆರ್ಡರ ತಗೊಂಡವನೆ ಅವನನ್ನ ಹಾಕಿದ್ದ ಹೊನ್ನಾಪುರಕ್ಕೆ ಹೊಂಟೆ ಬಿಟ್ಟ.

ಅವನವ್ವನ ನೆನಪು ಕಾಡತೊಡಗಿತು. "ಜೀವನ ಪೂರ್ತಿ ಕಷ್ಟಪಟ್ಟೆ ಒಳ್ಳೆ ದಿನ ಬಂದಾಗ್ಲೆ ಈ ಜಗತ್ತನ ಬಿಟ್ಟು ಹೋಗಿ ಬಿಟ್ಟೆ" ನೋವಿಂದ ಕನಲಿದ. ಹೊಸವಾತಾವರಣ ಹೊಸಬದುಕಿಗೆ ಹೊಂದಿಕೊಳ್ಳಾಕ ಹವಣಿಸಿದ. "ಅಪ್ಪ, ಅವನ ಎಲ್ಲಿ ನೌಕರಿ ಹಿಡಿತಾನ ಹಾಳಾಗಿ ಹೊಕ್ಕಾನ, ಈ ಜನ್ಮದಾಗ ಅವನಿಗೆ ಸರ್ಕಾರದ ಕೆಲ್ಸ ಸಿಂಗಗಿಲ್ಲಾ" ಅಂತಾ ಗೊಂದಾನಾಯ್ಕ ಹಿಯಾಳಿಸಿದ ಅವಾಗ ಅವನಪ್ಪನೂ ಅವನ ಮಾತಿಗೆ ಸಜಾ ಹಾಕಿದ್ದ. "ಅಲ್ಲಾ ಅಷ್ಟ ಓದೀನಿ-ಇಷ್ಟ ಓದೀನಿ ಅಂತ ಹೇಳ್ತಾನಲ್ಲಾ, ನಮ್ಮೂರ ಕುರಬರ ಬಸಣ್ಣಿಮಗ ಬಸ್ಯಯಾನ ನೀನೆ ಅಲ್ವಾ ಮಾಟಳ್ಳಿಗ ಹೋಗಿ ಸೇರಿಸದೋನು. ಎಸ್ಸೆಲ್ಸಿ ಮುಗಿಸಿ ನಾಕದಿನ ಮನಿಯಾಗ ಇರ್ಲಿಲ್ಲಾ ನೌಕರಿಸಿಕ್ಕ ಬಿಡ್ತು" ಅವನ ಓದಿನ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದ. ಕುಮಾರಿಗ ಅವಮಾನ ನೊವು ಒಟ್ಟಾರೆಯಾಗಿದ್ದು. ಯಾರಹತ್ರ ಹೇಳಾಕಂತ ತಿಳಿಯದೆ ಅಳತೊಡಗಿದ. ಅವೆಲ್ಲವೂ ಒಂದೊಂದಾಗೆ ನೆನಪಾದವು. ತಿಂಗಳ ಸಂಬಳ ತಗೊಂಡು ಮನಿಗ ಹೋಗಾಕಂತ ಅಂದ್ಕೊಂಡಿದ್ದ. ಏನೊ ಅನಿವಾರ್ಯದಿಂದ ಊರಿಗ ಹೋಗಾಕೆ ಆಗಲಿಲ್ಲಾ. ಎರಡವರ್ಷಗಳೆ ಕಳದ ಹೋದವು. ಕುಮಾರಿ ಊರಿಗ ಪತ್ರ ಬರಿಲಿಲ್ಲಾ ಇಂತ ಹತ್ರ ಅದೀನಿ ಅನ್ನೋ ಸುಳಿವನ್ನು ಮನಿಯೋರಿಗೆ ಕೊಡಲಿಲ್ಲಾ. ಸ್ವಾರ್ಥಿಗಳು ತಮ್ಮ ಅಸ್ಥಿತ್ವಕ್ಕೆ ಬೆಲೆ ಕೊಡೊ ಮಂದಿ ತುಂಬಿರೊ ಮನಿಗ ಹೋಗಲೇ ಬಾರದಂತ ಅಂದ್ಕೊಂಡಿದ್ದ. ಉಸಿರುಗಟ್ಟಿಸೊ

ವಾತಾವರಣದಿಂದ ಈಗ ದೂರ ಅದೀನಿ ಅದೇ ಒಳ್ಳೆಯದೇನೊ ಅನಿಸಿತು. ದೊಡ್ಡಣ್ಣ ಎಂಥಸಮಯಸಾಧಕ. ಅವನ ಹಿರೇಮಗನ ಮದ್ವಿಯಾಗಿ ಒಂದ ಕೂಸಾಯ್ತು. ಹಿರೆಮಗಳನ್ನ ಒಂದ ಒಳ್ಳೆ ಮನೀಗ ಕೊಟ್ಟು ಮದ್ವಿಮಾಡಿ ಮುಗದಿಂದ ಒಬ್ಬತಂಗಿ ಇಬ್ಬರು ತಮ್ಮಂದಿರು ಅದಾರನ್ನೋ ಖಬರಿಲ್ಲದೆ ಸದ್ದಿಲ್ದಂಗೆ ಪಿಣುನ ಮಾತಿಗ ಕುಣದ ಅರಗಹಚ್ಚಿದ್ದ. ಇದೆಲ್ಲಾ ನೆನಪಾದೊಡನೆ ಹಾಳಾದ ಊರಿಗ ಹೊಗೋದೆ ಬ್ಯಾಡ ಅನಿಸಿಬಿಡ್ತು. ಆದ್ರ ಅವನು ಆಡಿದ ಮಾಳಿ, ಹಿರೇಹಳ್ಳ, ಗುಡ್‌ಗುಡ್ ಚೆನ್ನಕ್ಕಿ, ಅವನಕುಟಾಗ ಕಬ್ಬಡಿ ಆಡ್ತಿದ್ದ ಹಂದಿಗೂರ, ಕುಮಾರಿನ ಬಿಟ್ಟ ಇರ್ತಾನೆ ಇರ್ಲಿಲ್ಲಾ, ಕೆರಿಯೊಳಗ ಈಜಾಕಹೋಗ್ಲಿ, ಮೆಟ್ಟಲ ಹತ್ರ, ಕರಿಕಲ್ಲ ಹತ್ರ ಇಬ್ಬರು ಒಟ್ಟಿಗೆ ಹೋಗ್ತಿದ್ರು. ತಾಳಿಮರದ ದುರ್ಗವ್ವನ ಗುಡಿಹತ್ರದ ದೇವೂರಜ್ಜನ ಹಲಸಿನಹಣ್ಣಿನ ಗಿಡದಾಗ ಕೋಲಕುಂಟಕಿ ಆಡಿದ್ದು, ಮರಕೋತಿ ಆಟ ಆಡೊ ಮುಂದ ಒಂದ ತಾಸಿನವರಿಗ ಹಂದಿಗೊರಗ ಸೋಲಿಸಿ ಒಡಿಸಿಸ್ಯಾಡದ್ದ. "ಏಯ್ ನಿಮ್ಮಪ್ಪ, ನೀವ ಯಾರಾರು ಔಟಾಗಲಿಲ್ಲಾಂದ್ರ ನಾಬರಂಗಿಲ್ಲ ಅಂದು ಮನಿ ಬೀಳೊ ಮಟ ಓಡಾಕ ಹೋಗಿ ಕಾಲ ಉಳಕಿಸಿಕೊಂಡದ್ದು. ಓಕಳಿ ಉಚ್ಛಾಯದಾಗ ತೂರಾಮುಚ್ಚಿಆಡಿ ಮೂವತ್ತರೂಪಾಯಿ ಗೆದಿದ್ದು. ಸ್ಕೂಲಿಗ ರಜೆ ಬಿಟ್ಟದಿನ ಹಂದಿಗೂರ-ಕುಮಾರಿ ದೀಪಾವಳಿ ಹಬ್ಬದಾಗ ತಮ್ಮ ಸ್ನೇಹಿತೆಯರ ದೀಪಕ್ಕೆ ರೊಕ್ಕಾಹಾಕಾಕ, ರಾಗಿ ಬಣವಿ ಒಟ್ಟಿರೋದ್ರಾಗ ರಾಗಿಸಿವುಡುಗಳನ್ನ ಹಿರ್‍ಕೊಂಡಹೋಗಿ ರಾಗಿ ತಿಕ್ಕಿ ದುಡ್ಡ ಮಾಡೋದನ್ನ ನೆನಪಮಾಡಿಕೊಂಡ. ಹಂದಿಗೂರ ಊರಾಗೆ ಅವನಕ್ಕನ ಮಗಳ ಕುಟಾಗ ಮದವಿಯಾಗಿದ್ದ. ನಾಕ ಹೆಣ್ಣ ಹುಡ್ರು ಆದ್ವಂತ ಅಂಗಡಿ ಇಟ್ಕೊಂಡದುಡದ. ಅಂಗಡಿಯೊಳಗ ಹತ್ರುಪಾಯಿ ಲಾಭ ಬಂದಿದ್ದನ್ನ ಕೂಡ್ಸಿ ಇರೊ ಮೂರೆ ಎಕ್ಕರಿ ಜಮೀನ್ನಾಗ ಬೋರಕೊರಿಸಿ ದುಡಿಬೇಕಂತ ಹತ್ತಸಾವರ ಸಾಲತಂದು ಬೋರ ಕೊರಿಸಿದ. ನೂರೈವತ್ತ ಅಡಿ ತಗದ್ರು ಒಳಗಿಂದ ಒಣಮಣ್ಣು ಬೂರ್‍ರಂತ ಹೊರಗ ಬಂದಿತ್ತು. ಅವನು ಕುಡದದ್ದು ಬೋರ ಕೊರಿಯೋರಿಗ ರೊಕ್ಕ ಕೊಟ್ಟಿದ್ದೆ ಆಗಹೋಯ್ತು.

ದುಡ್ಡ ಕೊಟ್ಟೋರು ದಿನ ಬೆಳಕಹರದ್ರ ಶನಿಗಂಟ ಬಿದ್ದಂಗೆ ಗಂಟ ಬಿಳತೊಡಗಿದ್ರು. ಕಾಟ ತಾಳಲಾರ್ದೆ. ಯಾರಿಗೂ ಹೇಳದೆ ಕೇಳದೆ ಕಾಫಿಸೀಮಿಗ ರೈಟ್ ಅಂದ ಬಿಟ್ಟ. ಕಾಫಿತ್ವಾಟದಾಗ ಯಾರ್‍ಯಾರದೋ ಹತ್ರ ತಿಂದುಂಡು ಕೆಲ್ಸಮಾಡಿದ. ಅವನಹಂಗೆ ಮಗನ್ನ ಕರ್‍ಕೊಂಡ ಬಂದಿದ್ದ ಗಂಡನ್ನ ಬಿಟ್ಟ ಗಂಗವ್ವ ಅನ್ನಾಕಿ ಇತಿಹಾಸ ತಿಳ್ಕೊಂಡು ಅಕಿ ಹತ್ರಾನೆ ಉಣ್ಣಾಕ ಹೋಗೋದು ಬರೋದ ಮಾಡ್ತಾ ಸಲಿಗೆ ಬೆಳೆಸಿಕೊಂಡ. ಇಬ್ಬರು

ಒಂದಾದ್ರು ಮೂರತಿಂಗಳಕಾಲ ಮೈ ಮನಸ್ಸಗಳು ಒಂದಾದಿಂದ ಅಕೀನೆ ಎರಡನೇ ಹೇಣ್ತಿ ಆದ್ಲು, ಹಂದಿಗೂರ ಊರಕಡೀಗ ಯೋಚನೇನೆ ಮಾಡಲಿಲ್ಲಾ. ಅಕಿ ಮಗ ತನ್ನ ಸ್ವಂತ ಮಗನಂತ ತಿಳ್ಕೊಂಡ. ಕಾಫಿ ಬೀಜ ಹರಿಯೋದು ಒಟ್ಟಿಗೆ, ಕಣಕ್ಕ ಹೋದ್ರೂನೂ ಒಟ್ಟಿಗೆ, ಸಂತಿಗ ಇಬ್ಬರೂ ಹೊಕ್ಕಿದ್ರು ಬೂತಾಯಿ, ಬಾಂಗಡ ಮೀನಗಳನ್ನ ತಂದು ಸಾರಮಾಡಿ ಉಣ್ಣೋರು. ಮದ್ವಿಯಾದ ಹೆಂಡತಿ ಆರೈಕೆ ಮಾಡ್ತಿರಲಿಲ್ಲಾ ಹಂಗ ಆರೈಕೆ ಮಾಡ್ತಿದ್ಲು ಆ ಹೆಂಗಸು. ಕಾಕಾಪುರದ ಮಂದಿ ಗುಸುಗುಸು ಮಾತಾಡಕ ಸುರುಮಾಡಿದ್ರು. "ಇವನೇನು ತಾಂಡದಾಗ ಹೇಣ್ತಿ ಮಕ್ಕಳನ್ನ ಬಿಟ್ಟು ಇಲ್ಲಿ ಅದ್ಯಾವಾಕೀನೊ, ಮೂರನ್ನು ಬಿಟ್ಟಾಕಿಕೂಡ ಗಂಟ ಬಿದ್ದಾನ" ತಮ್ಮ ತಮ್ಮೊಳಗೆ ಗಂಭೀರವಾಗಿ ಆಲೋಚನೆ ಮಾಡಿದ್ರು.

ಗಂಗಿ ಮತ್ತ ಹಂದಿಗೂರ ಮಾತ್ರ ಯಾರ ಖಬರಿಲ್ಲದೆ ಗಂಡ ಹೆಂಡತಿಹಂಗೆ ತಮ್ಮ ಪಾಡಿಗ ತಾವು ಕೆಲ್ಸಮಾಡಕೊಂಡ ಇರತೊಡಿದ್ರು. "ಜನ ಎನಾರ ಮಾತಾಡಿಕೊಳ್ಳಲಿ, ನಾನಂತು ಹೆಂಡತಿ ಅಂತ ತಿಳ್ಕೊಂಡಿನಿ ಆತು ಮಂದಿಗ ಹೆದರೋದೇನೈತಿ" ಅವನ ಅಭಿಪ್ರಾಯ ತಿಳಿಸಿದ. "ಹಿಂಗಂದ್ರ ಹ್ಯಾಂಗ್ರಿ, ಅವರು ಬಾಯಿಗಬಂದಂಗೆ ಆಡ್ಕೊಳ್ಳಾಕ ಹತ್ಯಾರ ನನಗ ಬದಕಾಕ ಬಿಡದಂಗ" ಗಂಡನ ಮುಂದ ಹೇಳೊಹಂಗ ಹೇಳಿದ್ಲು. "ನೋಡೆ, ಈ ಮಂದಿಗೆ ಹಿಂಗೆ ಯಾರಿಗ ನೆಮ್ಮದಿಯಿಂದ ಇರಾಕ ಬಿಟ್ಟಾರ ಹೇಳು? ಯಾವಾನಾರು ಒಬ್ಬ ಒಳ್ಳೆ ರೀತಿಯಿಂದ ಬಾಳೇವು ಮಾಡ್ಕೊಂಡಹೊಂಟಿದ್ರ ಹೊಟ್ಟಿಕಿಚ್ಚಪಡ್ತಾರ, ಮತ್ತೊಬ್ಬನ್ಯಾವಾನಾದ್ರು ಹಾಳಾದ್ನ; ನೋಡ್ರಲೆ ತಿನ್ನಾಕ ಕೂಳಿಲ್ದಂಗೆ ತಿರಗಾಡಾಕ ಹತ್ಯಾನಂತ ಮಾತಾಡ್ತಾರ. ನಾಕದಿನ, ಸುಮ್ಮನಿದ್ರು ಕಷ್ಟ, ಮಾತಾಡಿದ್ರು ಕಷ್ಟ. ನಾಕದಿನಮಾತಾಡ್ತಾರ ಆಮೇಲಿಂದ ಸುಮ್ಮನಾಗ್ತಾರೆ ಅಷ್ಟೆ ಅದಕ್ಕೆಲ್ಲಾ ತಲಿಹಾಳ ಮಾಡ್ಕೊಬಾರದು" ದೊಡ್ಡ ತತ್ವಜ್ಞಾನಿಹಂಗೆ ಭಾಷಣ ಬಿಗದಿದ್ದ ಹಂದಿಗೂರ.

ಹಂದಿಗೂರನ ಮದಲನೆ ಹೆಣ್ತಿ ಸಿಂಪಿಗೂ-ಗಂಗಿಗೂ ಝುಟಾಪಟಹತ್ಕೊಂತ್ತು. "ಎಲ್ಲಿಂದ ಬಂದಿಯೇ ನನಸೌತಿ" ಸಿಂಪಿ ಹೋದಾಕಿನೆ ತೊಂಡಲ ಹಿಡದು ನೆಲಕ್ಕ ಕೆಡವಿದ್ಲು. "ಸತ್ನೆಯವ್ವ, ಬಿಡೆ ನಾನೇನ ಬಂದಿಲ್ಲಾ ನಿನ್ನ ಗಂಡನೇ ನನ್ನ ಕರ್ಕೊಂಡಬಂದಾನ ಅವನ್ನೆ ಕೇಳು" ಗಂಗಿ ಸಿಂಪಿಕೂದ್ಲಿಗ ಕೈಹಾಕಿದ್ಲು. ಒಬ್ಬಾಕಿ ಕೆಳಾಗ, ಇನ್ನೊಬ್ಬಾಕಿ ಮ್ಯಾಲ ರೋಣಗಲ್ಲಿನ ಹಂಗೆ ಉಲ್ಡಾಡಿದ್ದೆ ಉಲ್ಡಾಡಿದು. ತಂಬಗಿ ತಗೊಂಡ ಹೊಗಿದ್ದ ಹಂದಿಗೂರ ಮನಿಗ ಬಂದ ನೋಡ್ತಾನ ಮನಿಯಾನ ಸಾಮಾನೆಲ್ಲಾ ಚೆಲ್ಲಾಪಿಲ್ಲಿಯಾಗಿ ಕೂದಲಕೆದರಿ ಕೊಳ್ಳಿದೆವ್ವದಂಗೆ ಗಂಗಿ-ಸಿಂಪಿ ಏದುಸಿರುಬಿಡ್ತಾ ನಿಂತ್ಕೊಂಡಿದ್ರು. "ನಾನ ಈ ಮನಿಯಾಗ ಇರೋದಿಲ್ಲಾ ಈ ನನ ಸೌತಿ ನನ್ನ ಕೊಂದ

10

ಹಾಕ್ತಾಳ" ಗಂಗಿ ತನ್ನ ಬಟ್ಟೆಬರಿಗಳನ್ನ ಹಳೆ ಪೆಟಗಿಯೊಳಗ ತುರಕಿದ್ಲು. "ಏಯ್, ನಾಮರ್ದ ಒಬ್ಬಾಕೀನ ಸರಿಯಾಗಿ ಉಣ್ಣಾಕ ಹಾಕಿ ಇಟ್ಕೊಳ್ಳೋ ಭಾರಿದೊಡ್ಡ ಮೀಸಿ ಇರೋನು ನೀನು ಎಲ್ಡೆಲ್ಡ ಹೆಂಗಸರನ್ನ ಇಟ್ಕೊಳ್ಳೊನು, ಈ ಮನಿಯಾಗ ನಾನಾರು ಇರಬೇಕು ಇಲ್ಲಾ ಅಕಿನಾರ ಇರಬೇಕು. ಇವತ್ತು ಎಲ್ಡುರಾಗ ಒಂದು ಆಗಾಕಬೇಕು" ನೆಲದಮ್ಯಾಲ ಕುತ್ಕೊಂಡು ದೇವರ ಬಂದೊರಂಗೆ ನೆಲಕುಟ್ಟಿ ಮಾತಾಡಕ ಸುರುಮಾಡಿದ್ಲು.

ಹಂದಿಗೂರ ನೀರ ತಗೊಂಡು ಮಾರಿ ತೊಕ್ಕೊಂಡೋನೆ ಹುಸೇನವ್ವನ ಅಂಗಡಿಯೊಳಗ ಚಾ ಕುಡಮು ತನ್ನ ಬಟ್ಟಿಬರಿ ಗಂಗಿ ಪೆಟಾರಿಯೊಳಗ ಹಾಕ್ಕೊಂಡು ಮಳಿಗಾಲದಾಗ ದುಡಿಯಾಕಂತ ಕಾಫಿಸೀಮಿಗ ನಡದ. ಗಂಡ ಹಂದಿಗೂರ ಹಿಂಗಮಾಡ್ಯಾನಂತ ನಿರೀಕ್ಷೆಮಾಡದ ಸಿಂಪಿ ಅವನು ಹೆಂಡದ ದ್ಯಾವನ ಹೊಲದ ಮಟ ಹೋಗಿರಬೇಕು ಕರ್ಕೊಂಡ ಬರಾಕ ಓಡಿದ್ಲು. "ತಪ್ಪಾತಪ್ಪ ಬಂದ ಬಿಡು, ನೀನೆ ಇರು ನಾನೆ ಹೊಕ್ಕೀನಿ" ಅಂಗಲಾಚಿದ್ಲು. ಹಂದಿಗೂರ ಕಿವಿಮ್ಯಾಲ ಹಕ್ಕೊಳ್ಳಲಿಲ್ಲಾ. ದಮ್ಮ ಹತ್ತಿ ಓಡಿಹೋಗಿ ಅವನ ಕಾಲಮ್ಯಾಲ ಬಿದ್ದ ಕಳ್ಳಕಿತ್ತ ಬರೊಹಂಗೆ ಅಳತೊಡಗಿದ್ಲು. "ತಾಂಡದಾಗ ಮಂದಿಮುಂದ ಮರ್ಯಾದಿ ತಗದು ಮಾನಕಾಸಿಗ ಪೆಂಚೇರ ಮಾಡಿದ್ದ ಸಾಕಾಗಿಲ್ಲೇನು, ಎದ್ದ ನಡಿಯೇ ಸೋಗಲಾಡಿ; ಬಂದಬಿಟ್ಲು ಮಳ್ಳ ಮಾಡ್ಕೊಂತ ನಿನ್ನ ನಾಟಕ ನನ್ನ ತಾವ ನಡಿಯೋದಿಲ್ಲಾ" ಅಂತಾ ಜಾಡಿಸಿ ಒದ್ದೊನೆ ಹಿಂದಕ್ಕೆ ತಿರುಗಿಯೂ ನೋಡದಂಗೆ ಹೊಂಟೆಬಿಟ್ಟ.

ಹಂದಿಗೂರ ಹೋದ ಒಂದತಿಂಗಳಾಗ ಮೇಸ್ತ್ರಿ ಬಂದೂಕ ಒಂದ ಕೆಟ್ಟಸುದ್ದಿ ತಂದಿದ್ದ. ಹಂದಿಗೂರನ್ನ ಕಾಫಿಸೀಮಿಯೊಳಗ ಯಾರೊ ಕೊಂದ ಬಿಸಾಕಿದ್ರಂತ, ಬಂದೂಕನೆ ಅವನ ರುಂಡ, ಮುಂಡ ಹುಡಕಾಡಿ ತಂದು ಕಟ್ಟಿಗಿ ಆರಿಸಿ ಹೆಣಸುಟ್ಟು ಕೋಳಿ ತಂದು ದಿನಕರ್ಮ ಮಾಡಿದ್ನಂತೆ. ಒಂದು ವರ್ಷದ ಮ್ಯಾಲ ಸುದ್ದಿ ಕೇಳಿದ ಕುಮಾರಿಗ ಹಂದಿಗೂರನ ದುರಂತಕೇಳಿ ಕೆಟ್ ಅನಿಸಿತ್ತು. ಬಡವರಿಗ ಬದುಕು ಅನ್ನೋದಾದ್ರು ಎಲ್ಲೈತಿ. ಹುಟ್ಟೋದೊಂದೆ ಗೊತ್ತು. ಹೆಗಲಮ್ಯಾಲ ನಗಹೊತ್ತ ಸಾಗೊ ಎತ್ತಗಳಹಂಗೆ ಕೆಳಗ ಚೆಂಡಹಾಕ್ಕೊಂಡು ಎಷ್ಟಭಾರ ಹೇರಿದ್ರು ಪ್ರತಿಭಟಿಸದಂಗೆ ಎಳಿತಾ ಹೋಗಬೇಕು. ಹತ್ತರೂಪಾಯಿಗ ಹತ್ತಗಂಟಿಕಾಲ ಮಾಲೀಕನಿಗೆ ದೇಹಕೊಡಬೇಕು. ಆಶೆಗಳು, ಕನಸುಗಳು, ಬಯಕೆಗಳು ಅವರಿಗೆ ಗೊತ್ತಿರದ ಶಬ್ದಗಳು. ಇಷ್ಟ ಇಲ್ಲದಿದ್ದರೂ ಮೈಯನ್ನೊಪ್ಪಿಸೊ ಹರೆಯದ ಹುಡುಗಿಯರಿಗೆ ಇನ್ಯಾವ ಕನಸು ಇದ್ದೀತು. ಹೊನ್ನಾಪುರದಾಗೆ ಇದ್ದ ಕುಮಾರಿಗೆ ಕಾಕಾಪುರ ಕಾಡುತ್ತಿತ್ತು. ಎಷ್ಟೆಲ್ಲಾ ಸಂಘರ್ಷದ

ನಡುವೆಯೂ ಅಂದಭಟ್ಟರ ಸಹಾಯದಿಂದ ಒಂದೂರೊಳಗೆ ಸ್ಥಾಪಿತ ಗೊಳ್ಳೋದಂದ್ರೆ ಅಷ್ಟೊಂದು ಸುಲಭವೆ. ಇಡಿ ಈ ಜಗತ್ತಿನ್ಯಾಗಿಲ್ಲದಷ್ಟು ಹೊಟ್ಟೆಕಿಚ್ಚು ಹಳ್ಳಿಗಳೊಳಗಿದೆ. ಅದು ಕಾಕಾಪುರದಾಗೆ ಹೆಚ್ಚು ತುಂಬಿಕೊಂಡಿದೆ. ಕಾಕಾಪುರದ ಒಬ್ಬೊಬ್ಬ ವ್ಯಕ್ತಿನೂ ಒಂದೊಂದು ಪಾತ್ರಗಳಂತೆ ಕಾಣತೊಡಗಿದರು. ಬೂಸಿ ಗಂಜ್ಯಾ ನೀರೈತಿ ಅಂದ ಜಾಗದಾಗ ಕೆಸರು ಸಹ ಇರ್ತಿರಲಿಲ್ಲಾ ಅಂತೋನು. ಯಾವಾಗ ನೋಡಿದ್ರು ಅವರಿವರ ಸುದ್ದಿಯನ್ನೆ ಮಾತಾಡ್ತಿದ್ದ. ದಿಲ್ಲಿಯಿಂದ ಹಿಡದು ಕಾಕಾಪುರದವರಿಗೂ ಅವನ ಮಾತಿನ ಪ್ರದೇಶವಾಗಿತ್ತು. ಇಂದ್ರಾಗಾಂಧಿ, ಮಹಾತ್ಮಗಾಂಧಿ ಮಗಳಂತೆ ಅದಕ್ಕೆ ಅವರಪ್ಪ ಗಾಂಧಿ, ನೆಹರೂ ಆದಮ್ಯಾಲ ನನ್ನ ಮಗಳೆ ಪ್ರಧಾನಮಂತ್ರಿ ಆಗಬೇಕಂತ ಪತ್ರ ಬರದು ಇಟ್ಟುಹೋಗಿದ್ನಂತ ಅದಕ್ಕೆ ಪ್ರಧಾನಮಂತ್ರಿಯಾಗಿದ್ದು ಹಿಂಗ ಸುರುವಾಗ್ತಿತ್ತು ಅವನಕತಿ. "ಹಂಗಲ್ಲ ಮಾರಾಯ ಇಂದಿರಾಗಾಂಧಿ ನೆಹರು ಮಗಳು" ಅಂತ ತಿಳಿಸಿಹೇಳಿದ್ರ. ಬಾಯಿ ಮುಚ್ಚಲೇ ಬಂದುಬಿಟ್ಟ ನೆಹರೂನ ಕಟ್ಕೊಂಡು. ನೆಹರೂ ಚಾಚಅಲ್ಲಾ" ಅಂತೇಳಿ ತಾನು ಪ್ರತಿಪಾದಿಸಿರೊ ಐತಿಹಾಸಿಕ ವಾದವನ್ನು ಬಿಚ್ಚಿಡುತ್ತಿದ್ದ. "ಹೌದು ಚಾಚಾ ನೆಹರು" ಅವನ ಜೊತಿಗ ವಾದಮಾಡ್ತಿರೋನ ಮಾತು. "ಹಂಗಾರ ಇಂದಿರಾಚಾಚ ಅಂತ ಬರಬೇಕಿತ್ತು, ಇಂದಿರಾ ಗಾಂಧಿ ಅಂತ ಯಾಕ ಬಂತಪ್ಪ" ಅಂತೇಳಿ ತಾನೆ ಸರಿ ಅನ್ನೋರ ಹಂಗ ಹೇಳ್ತಿದ್ದ. ಇಂಥ ನೂರಾಎಂಟು ವಿಷಯಗಳನ್ನ ತಲೆಬುಡ ಇಲ್ಲದೆ ಉಲ್ಟಾಪಲ್ಟಿ ಮಾಡಿದ್ದ ಗಂಜ್ಯಾ ಐದಾರು ಹುಡ್ರಕೂಡ್ಕೊಂಡು ಚೆಲುವಾಪುರಕ್ಕ ಸಾಲಿಗ ಹೋಗೊಮುಂದ ಮೇಷ್ಟ್ರು ಹೊಡಿತಾರಂತ ಓದಾಕ ಆಗದೆ ಚೆಲುವಾಪುರದ ಹಳ್ಳದಾಗ ಏಡಿ, ಮೀನುಹಿಡದು ಬುತ್ತಿಜೊತಿಗ ಹಿಂಡಿ ಕಲಸಿ ತಿಂದು ಫೇಲಾಗಿ ಮನಿಸೇರಿದ್ದ. ಇಂತಹ ಎಲ್ಲಾ ಜನರ ನಡುವೆ ಗೊತ್ತಾನಾಯ್ಕ ಬೆಳದಿದ್ದನ್ನ ನೆನಪು ಮಾಡಿಕೊಳ್ಳತೊಡಗಿದ ಕುಮಾರಿ.

ನಿಮ್ಮ ತಂದೆಯವರು ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದಾರೆ. ಅಂತ ನಿನ್ನ ತಮ್ಮ ಟೆಲಿಗ್ರಾಂ ಕೊಟ್ಟಿದ್ದ ಅಂತ ಧರಣೆಪ್ಪ ಪತ್ರಬರೆದಿದ್ದ. ಕುಮಾರಿಗ ಆಶ್ಚರ್ಯವಾಯ್ತು ಅವನ ತಮ್ಮಗ ಧರಣೆಪ್ಪನ ವಿಳಾಸ ಹ್ಯಾಂಗ ತಿಳಿತು ಅಂತ. ಸ್ವಲ್ಪ ಯೋಚನೆಮಾಡಿದ ಅವನ ಯಾವಾಗಲೊ ಬೇಸರವಾದಾಗೊಮ್ಮೆ ಅವನ ತಮ್ಮನಿಗೆ ಪತ್ರ ಬರದಿದ್ದು ನೆನಪಾತು. ಪತ್ರಬಂದು ವಾರವಾಗಿತ್ತು ಟೆಲಿಗ್ರಾಂ ಹತ್ತುದಿನದ ಹಿಂದೆ ಮಾಡಿರಬೇಕು. ತಿಳದು ತಿಳದು ಹೋಗದಿದ್ದರೆ ಹ್ಯಾಂಗೆ, ಯೋಚನೆ ಮಾಡ್ತಾಕುಂತ. "ಕಾಕಾಪುರ ಬಿಟ್ಟು ಮೂರುವರೆ ವರ್ಷಗಳೆ ಆದ್ವು, ನಾನು ಎಲ್ಲದೀನಿ ಅಂತ ಯಾರಿಗೂ

ಹೇಳಲಿಲ್ಲಾ, ಅವರು ನನ್ನ ಬಗ್ಗೆ ಯೋಚನೆನೆ ಮಾಡಲಿಲ್ಲ "ಪಾಡಾತು ಬಿಡ್ರಲೇ, ಎಲ್ಲಾದ್ರೂ ಹಾಳಾಗಿ ಹೋದ್ನಲ್ಲಾ ಹೋಗಲಿ ಅತ್ಲಾಗ, ಇನ್ನೊಂದು ಎಲ್ಡು ವರ್ಷ ಬಿಟ್ಟು ಅವನ ಹೊಲನೆಲ್ಲಾ ಹಂಚ್ಕೊಳ್ಳಾನಂತ" ಅವರವರೊಳಗೆ ಚರ್ಚೆಯಾಗಿತ್ತು. ಚೆನ್ನಿಂಗ ಮಾತ್ರ "ಅವನೆಲ್ಲಿಗ ಹೊಗ್ತಾನ, ಅವ್ನೇನ ನಿಮ್ಮಗಳಹಂಗೆ ಅಜ್ಞಾನಿನ ಎಲ್ಲಾದ್ರು ಹಾಳಾಗಿ ಹೋಗಾಕ, ಅವನು ಓದಿದೋನು, ಇಡೀಜಗತ್ತಿನ ನೀರಕುಡದಾನ ಇವತ್ತಲ್ಲಾ ನಾಳೆ ಬಂದೇಬರ್ತಾನ, ಹೊಲಕೇಳಾಕ ಬಂದಬಿಟ್ರು, ಹೊಲ ಅಲ್ಲ ಅದ್ರಾಗಿನ ಒಂದುಕಲ್ಲನ್ನೂ ಕೊಡಂಗಿಲ್ಲಾ ಎನಂತ ತಿಳ್ಕೊಂಡಿರಿ" ಗುಡುಗಿದ್ಕ ಎಲ್ಲರೂ ಬಾಯಿ ಮುಚ್ಕೊಂಡಿದ್ರು. ಅಂತದ್ರಾಗೆ ಕುಮಾರಿ ಅದೆಂಗ ನೆನಪಾದಾನು. ಅವನ ಅಪ್ಪ ಗೊತ್ತಾನಾಯ್ಕನಿಗೆ ಎಂಬತ್ತೈದು ತೊಂಬತ್ತರ ಗಡಿಯಾಗ ಇದ್ಕೊಂಡು ಜಗತ್ತನ್ನ ನೋಡೋದು ದುಸ್ತರ ಅನಿಸಿತು. ಬ್ರಿಟಿಷರ ಕಾಲ ಕಂಡೋನು ದೇಶಕ ಬಿಡಗಡೆ ಸಿಕ್ಕ ಐವತ್ತೆಂಟುವರ್ಷ ಬದುಕಿ, ದೇಶದಾಗ ಆದ ಬದಲಾವಣೆಯನ್ನ ಕಾಕಾಪುರದಾಗ ಕುತ್ಕೊಂಡೆ ನೋಡ್ತಿದ್ದ. ಕುಂಬಾರ ಮಲ್ಲಪ್ಪ ಸತ್ತಹೋದಿಂದ ಅವನ ಕುಂಬಾರಿಕೀನೆ ಸತ್ತಹೋಗಿತ್ತು. ವರ್ಷಕ್ಕೊಂದು ಸಲ ಐದುಗಿದ್ನಕಾಳು ನಾಕು ತಬ್ಬುಹುಲ್ಲು, ಮೂರುತಬ್ಬು ತಗರಿಪುಳ್ಳಿ ಎರಡೂ ಮೂರು ಸೇರು ಅಕ್ಕಡಿ ಕಾಳಿಗೆ ಆಯಾ ಮಾಡಕೊಂಡಿದ್ದ. ಒಮ್ಮೆ ಕಾಕಾಪುರಕ್ಕ ಬಂದ್ನಂದ್ರ ಮಲ್ಲಪ್ಪ ಎರಡುಬಂಡಿ ಹುಲ್ಲು, ಒಂದುಬಂಡಿ ಕಟಗಿ ಐದಾರು ಚೀಲ ಕಾಳು ತಗೊಂಡು ಹೊಕ್ಕಿದ್ದ. ಬಾಣವ್ವ ತಿಂಗಳಿಗ ಎಲ್ಡುಸರ್ತಿ ಹಾಲಿನ ಚಟಗಿ, ಮಜ್ಜಿಗಿ ಸ್ವಾರಿ ಕಾಕಂಬಿಗಂತ ಕುಂಬ, ಮಗಳ ಬಾಣಂತನಕ್ಕೆ ನೀರುಕಾಸಕಂತ ದೊಡ್ಡದಾದ ಎಂಟು ಕುಂಬದಾಟು ನೀರು ಹಿಡಿಯೋ ಗಡಗಿ ತಗೊಂಡು ಬರ್ತಿದ್ಲು.

ದಿನಕಳದಂಗೆ ಅಲ್ಯೂಮೀನಿಯಂ ಬಂತು. ಸ್ವಾರಿ ಬಳಸೋದು ಕಡಿಮಿಯಾತು. ಕುಂಬಾರ ಮಲ್ಲಣ್ಣನ ಕುಂಬಾರಕಿಗ ಅರ್ಧ ಪೆಟ್ಟುಬಿತ್ತು. ಇನ್ನೂ ಸ್ವಲ್ಪಕಾಲಕ ಬಂದು ಪ್ಲಾಸ್ಟಿಕ್ ಯುಗದಾಗ ತಿಗರಿನೆ ನಿಂತುಹೋಗಿ ಮಲ್ಲಣ್ಣ ಕುಂಬಾರಕಿ ಬಿಟ್ಟು ಹೊಲ ಊಳಾಕ ಹತ್ತಿದ. ಹಂಗೇನೇ ಕಾಯಕದ ಕಬರಯ್ಯನ ಮಗ ಕಾಂತೇಶಿ ದುಡಿಯಾಕ ಆಗದೆ ಕೂಲಿಮಾಡಾಕು ಆಗದೆ ಕೊನಿಗೊಂದುದಿನ ಕ್ಯಾನ್ಸರ್‌ರೋಗಕ್ಕ ಬಲಿಯಾಗೆ ಸತ್ತುಹ್ವಾದ. ಊರಾಗ ಬರ್ತಿದ್ದ ಈರಭದ್ರಾಚಾರಿ, ಹೊನ್ನಾಚಾರಿ, ಮಾನಾಚಾರಿ ಕೆತ್ತೊಕೆಲಸ ನಿಂತುಹೊತು. ದೊಡ್ಡದೊಡ್ಡ ಕಾರ್ಖಾನಿಗಳು ಕಬ್ಬಿಣದ ರಂಟಿ ತಯಾರು ಮಾಡಾಕ ಹತ್ತಿಂದ ಟ್ರಾಕ್ಟರ್ ಅನ್ನೊ ಯಂತ್ರ ಹತ್ತು ಜೋಡಿ ಎತ್ತು ದುಡಿಯೋದನ್ನ ಒಂದೇ ದಿನಕ್ಕ ದುಡಿಯೋ ತಾಕತ್ತು ಪಡ್ಕೊಂಡಿತ್ತು. ಅದಕ್ಕೆ ಹಳ್ಳಿಮಂದಿ ಹೆಗಲಮೇಲಿನ

ಟವೆಲುಹೋಗಿ ಕಾಲರಸುತ್ತು ಸಣ್ಣದೊಂದು ಚೌಕಬಂದಿತ್ತು. ಗೊತ್ತಾನಾಯ್ಕ ಇತಿಹಾಸದ ಪ್ರತೀಕದಂತೆ ಮೂರು ಯುಗಕ್ಕೂ ಕೊನೆಯ ಕೊಂಡಿಯಾಗಿದ್ದ. ಮೀಸೆ ಒತ್ತೆಇಟ್ಟು ಸಾಲ ತಗೊಂಡ ಜನರನ್ನ ನೋಡಿದ್ದ. ಆಗ ಒಂದು ನಂಬಿಕೆ ಇತ್ತು ಜನಕ್ಕೆ ಸಾಲ ಅಂದ್ರೆ ಒಂದು ಒಳ್ಳೆಯ ಭಾವನೆ ಇತ್ತು. ಗೊತ್ತಾನಾಯ್ಕನ ಅಪ್ಪ ಬುದ್ಧನಾಯ್ಕನೆ ಚೆಲುವಾಪುರದ ಸಾವುಕಾರನ ಹತ್ರ ಐದುರೂಪಾಯಿ ಸಾಲ ತರಬೇಕಾರ ಹತ್ತುಸಲ ಹಲ್ಲಗಿಂಜಿದ್ದ. "ಬುದ್ಧನಾಯ್ಕ ಐದುರೂಪಾಯಿಗ ಏನು ಒತ್ತೆ ಇಡ್ತಿಯಾ" ಅಂತಾ ಕೇಳಿದ ಸಾವುಕಾರ, "ಇನ್ನೇನು ಸಾಮಿ ನನ್ನ ಹೇಣ್ತಿ ಬಂಗಾರದ ಮುಕ್ರೈತೆ ಅದನ್ನೆ ಇಡ್ತಿನಿ" ಬುದ್ದನಾಯ್ಕ ಹೇಳಿದ್ಕ. "ಛೇ ಛೇ ನಿನ್ನ ಬಂಗಾರ ನಿನ್ತಾವ ಇಟ್ಕೊ. ನಾ ಏನು ಲೇವಾದೇವಿ ಮಾಡೊ ಪಠಾಣ ಅಲ್ಲ. ನಿಂದು ಒಂದು ಮೀಸೆಕಿತ್ತುಕೊಡು ಆಟೇಯ"ಅಂತ ಆತನ ಕಡಿಂದ ಒಂದು ಮೀಸಿಕೂದಲು ಕೀಳಿಸಿಕೊಂಡಿದ್ದ. ಒಂದುವರ್ಷದ ಮ್ಯಾಲ ಬುದ್ಧಜ್ಜಹೋಗಿ ಐದುವರಿರೂಪಾಯಿ ಕಟ್ಟಿ ತನ್ನ ಮೀಸಿಕೂದ್ಲ ತಂದು ಬಿಸಾಕಿದ. ಚೆಲುವಾಪುರದ ಪಕ್ಕದ ಸಾತೂರಿನ ಬೂಟಾನಾಯ್ಕ ಮೂರು ರೂಪಾಯಿಗ ಮೀಸೆ ಒತ್ತೆ ಇಟ್ಟೋನು ಮೂರುವರ್ಷ ಅದ್ರು ತಿರಗಿಸಲೇ ಇಲ್ಲಾ. ಚೆಲುವಾಪುರದ ಸಾವುಕಾರ ಆಳುಬಿಟ್ಟು ಅವನ ಕರೆ ಕಳಿಸಿ, "ಏನ್ಲೆ ಬೂಟಾ, ಮೂರರೂಪಾಯಿ ಸಾಲ ತಿರಿಸಾಕ ಆಗ್ಲಿಲ್ಲಾಂದ್ರ ಯಾಕಲೆ ಮಕದಮ್ಯಾಲ ಮೀಸೆ ಬಿಟ್ಕೊಂಡಿಯಾ ಬೋಳಸಿಬಿಡಲೆ ನಾನು ನನ್ನ ಸಾಲತೀರಿಸಿಬಿಟ್ಟೆ ನೀನು ಅಂತ ಬರ್ಕೊಂತೀನಿ" ಗುಡಗಿದ್ರು. "ಇಲ್ಲಾ ಸಾವುಕಾರ ಮುಂದಿನ ವರ್ಷ ದುಡದು ಕಟ್ತೇನಿ" ಗೊಗರದ. ಸಾವುಕಾರಮಾತ ಕೇಳದೆ ಹಜಾಮರ ಚೌಡನ ಕರೆಸಿ ಮೀಸೆ ಬೋಳಿಸಿ ಬಿಟ್ಟ. ಅವಮಾನ ತಾಳದೆ ಬೂಟ ಸಾತೂರ ಬಿಟ್ಟೆ ಓಡಿಹೋಗಿಬಿಟ್ಟ. ಮೀಸೆಗೆ ಬಂಗಾರಕ್ಕಿಂತ ಬೆಲಿಜಾಸ್ತಿ ಇತ್ತು. ಈಗ ಅದಕ್ಕೆ ಕಾಸಿನ ಕಿಮ್ಮತ್ತಿಲ್ಲಾ.

ಗೊತ್ತಾನಾಯ್ಕಗ ಪ್ರಾಂಸಾರಿನೋಟ ಬರದಕೊಟ್ಟು ನೂರು ನೂರೈವತ್ತು ಸಾಲತಗೊಂಡಿದ್ದ ಹಟ್ಟಿನಾಯ್ಕ, ಗೋಪಾಲಿ, ಬಸೆಣ್ಣ ತೀರಸಾಕ ಆಗದೆ ಇವತ್ತಕೊಡ್ತಿನಿ, ನಾಳೆಕೊಡ್ತಿನಿ ಅಂತ ತಳ್ಳಿತಳ್ಳಿ, ಕೊಡಲೇ ಇಲ್ಲಾ ಬೇಸರಾಗಿ ಗೊತ್ತನಾಯ್ಕನಮಗ ಗೊಂದಾನೆ ಮಧ್ಯಸ್ತಿಕೆ ವಹಿಸಿ, "ಆಯ್ತಪ್ಪ ಆದದ್ದು ಆಯ್ತು. ಬಡಮಂದಿನಿನ್ನ ಹೆಸರಹೇಳಿ ಬದಕವಲ್ರಾಕೆ ಹೋಗ್ಲಿಬಿಡು" ಪ್ರಾಮ್ಸಾರಿ ನೋಟಗಳನ್ನ ಇಸ್ಕೊಂಡು ಹರದಹಾಕಿದ ಎಷ್ಟೋಮಂದಿ "ಏಯ್, ನಿ ಯಾವಾಗ ಕೊಟ್ಟಿಯಾ, ಅದೇನಮಾಡ್ತಿಯೋ ಮಡ್ಕೊಂಡ ಬಾ ಹೋಗು ತಿರಗಿಬಿದ್ದು ಕೋರ್ಟಿಗ ಕೇಸಹೋಗಿ ಫಜೀತ ಪಟ್ಟೋರೂ ಆದಾರ ಕುಮಾರಿ ಗೆಳೆಯ ನಾಯಕರ ನಂಜುಂಡಿ ಅಣ್ಣ ತಿಪೇಶಪ್ಪಾ ಗ್ರಾಮಲೆಕ್ಕಾಧಿಕಾರಿ, ಬೆಂಗಳೂರಿಗ

ವಾರಕ್ಕೆರಡ ಸಲ ಉಣ್ಣಾಕ ಹೊಕ್ಕಿದ್ನಂತೆ ಅದನ್ನ ಕೇಳಿ ಕುಮಾರಿ ಹೌಹಾರಿ, "ಕೂದ್ಲಿದ್ದಾಕಿ ಹ್ಯಾಂಗ ಜಡಿಬಾಚಿದ್ರು ಚೆಂದಾಗೆ ಕಾಣ್ತಾಳ. ಕೂದಲಿಲ್ಲದ ಮೊಟಜಡಿಯಾಕಿ ಅದೇನೆನ ಕಸರತ್ತಮಾಡಿದ್ರು ಅಷ್ಟಕಷ್ಟೆ" ಅಂತೇಳಿ ನಕ್ಕ ಸುಮ್ಮನಾಗಿದ್ದ. ಕಾಕಾಪುರದ ಸುತ್ತೆಲ್ಲಾ ತುಂಗಾನಾಲೆಯಿಂದ ಬಂಜರ ಭೂಮಿಗ ನೀರಹಾಯಾಕಹತ್ತು ಒಣಗಿದ ದೊಡ್ಡಕೆರಿಗ ಚಾನಲಿನಿಂದ ವರ್ಷಕನಾಕಸಲ ನೀರಬಿಟ್ಟರು. ಮಂದಿ ದಿಮಾಕು ಹೆಚ್ಚತು. ನೆಲಾನೋಡ್ತಿದ್ದೋರೆಲ್ಲಾ, ನೆಲಾಬಿಟ್ಟು ಮುಗಿಲ ನೋಡಹತ್ತಿದರು. ಕಾಲ ಏರುಪೇರಾಗಾಣ ಊರಗಳೆಲ್ಲಾ ಹಾಳಾಗಿಹೋದವು. ಭತ್ತದನಾಟಿ ಮಾಡಾಕ ಮಂದಿಬೇಕಾತು. ಹಿಂದಿನಂಗೆ ಎಂಟಕಿಲೋಮಿಟರ ನೆಲನಡದು ಹೋಗಿ ನಾಟಿಮಾಡಿ ಗುಡ್ಡದಮೂಲಿಯೊಳಗಿಂದ ಗೌವನ್ನೊ ಕತ್ಲಾಗ ಒಂದ ಅಂದಾಜಿನ ಮ್ಯಾಲನಡದ ಬಂದು ಊರಸೇರ್ತಿದ್ದೋರು ಈಗ ಹತ್ತಗಂಟಿಯಾದ್ರು ಹುಸೇನಜ್ಜಿಸತ್ತಿಂದ ಅಕಿ ಮೊಮ್ಮಗ ಅಬ್ದುಲನಡಸೊ ಪಾನ್‌ಶಾಪ್, ಚಾದುಖಾನ್, ಕಂ ಸ್ಟೇಷನರಿ ಅಂಗಡಿಯೊಳಗೆ ಒಂದ ಅರ್ಧತಾಸಾದ್ರು. "ನಿನ್ನೆಯಾವುದಕ್ಕೆ ಹೋಗಿದ್ರಪ್ಪ" ಅಂತ ಒಬ್ಬ ಆರಂಭಮಾಡೋನು. "ಶಿವರಾಜಕುಮಾರಂದು ಅದ್ಯಾವದೋ ಐತಲ್ಲಪ್ಪ" ನೆನಪಮಾಡ್ಕೊಂತ ಆರವರ್ಷದ ಹಿಂದ ಕೊಟ್ಟಡ್ವಾನ್ಸ್ ಹಣ ಕೇಳದೆ ಕೇಳಕೇಳಿದಂಗೆ ಕೊಟ್ಕೊಂತ ಕೊಟ್ಟವನೆ "ಅಣ್ಣ ಹೊತ್ತಾತು ಟ್ರಾಕ್ಟರ್ ಹತ್ತಿರಾ" ಅವನ ಮುಲಾಜಕಾದು ಹೊಂಡೊಸೊವರಿಗೂ ನಮ್ಮಮನಿಕೆಲ್ಸೈತಿ ದುಡ್ಡ ಕೊಟ್ಟಿಯಾ, ಇಲ್ಲಾ ಅನ್ನಂಗಿಲ್ಲಾ ತೀರಿಸ್ತಿನಿ" ಗಿಲೀಟಿನಮಾತಾಡೊ ಜನರಮುಂದ ಕೊಟ್ಕೋನು ತಾಳ್ಮೆಯಿಂದಲೆ ನಡಿಬೇಕು. ಕೆಲ್ಸಪೂರ ಮುಗಿಸಿದ ಮ್ಯಾಲ ಟ್ರಾಕ್ಟರ್‌ನಲ್ಲಿ ಹಂಪಾಪುರಕ್ಕೆ ಕರ್ಕೊಂಡ ಹೋಗಿ ಒಂದ ಸಿನೀಮಾ ತೋರ್ಸಿ ಕೈಬಿಟ್ರ ಭತ್ತಕೊಯ್ಯಾಕ ಬರೋದು ಇಲ್ಲಿದ್ರ ಅವನಕುಟಾಗಏನು, ಅಷ್ಟೇಲ್ಲಾ ಮುಕ್ಕಾರೆ ಕೆಲ್ಸಮಾಡಿದ್ರು ಒಂದ ಸಿನೀಮಾ ತೋರಿಸಲಿಲ್ಲಾ, "ನಾ ಬರಂಗಿಲ್ಲಪ್ಪ ಆತನಕೆಲ್ಸಕ್ಕೆ" ಮೆಲ್ಲಗೆ ಜಾರಿಕೊಳ್ತಿದ್ರು. ಕಾಲನಾಜೂಕಾಗಿತ್ತು. ಆಗ ಬರಿ ಒಂದಮಾತ ಹೇಳಿದ್ರ ನೀಯತ್ತಿಂದ ಬಂದಕೆಲ್ಸಮಾಡಿ ದುಡ್ಡಿಸ್ಕೊಂಡ ಹೊಗೋರು. ಈಗ ಗಳೆಕೆಲ್ಸಕಬರ್‍ತಾನಂದ್ರ ವಾರಕಮುಂಚೆಹೇಳಿ, "ಇವತ್ತಿಂದ ಎಂಟುದಿನಕ್ಕೆ ತಪ್ಪಸಬ್ಯಾಡನಮ್ಮಪ್ಪ ಹುಲ್ಲ ಬಹಳ ಆಗೈತಿ, ಎಡೆಕುಂಟೆ ಹೊಡಿಯೋದ ಐತಿ ಒಂದೀಟು. ನೋಡಮತ್ತೆ. ಬಾ ಆ ಕಡೀಗ ರಾಮುಗನ ಮನಿಮಟ" ಕರ್ಕೊಂಡಹೋಗಿ ಸರಾಯಿಕುಡಿಸಿ ಒಂದಕಟ್ಟು ಅವನು ಕೇಳಿದ ಬೀಡಿಕೊಡಿಸಿ ಬುಕ್ಕಮಾಡಬೇಕು. ಚಿಕ್ಕಪುಟ್ಟರೈತರ ಪರಿಸ್ಥಿತಿ ಏನಾಗಬ್ಯಾಡ. ದುಬಾರಿಬೀಜ, ದುಬಾರಿ ರಾಸಾಯನಿಕಗೊಬ್ಬರ, ಹೊತ್ತಿಗಸರಿಯಾಗಿ ಬಾರದಮಳಿ ಸಣ್ಣಪುಟ್ಟರೈತರನ್ನ ಸಂಕಟಕ

ಬೀಳಿಸಿದ್ರು. ದೊಡ್ಡಹಿಡವಳಿದಾರ ಟ್ರಾಕ್ಟರಿಟ್ಟು ಹೆಂಗೊ ನಿಭಾಯಿಸಿಕೊಳ್ತಿದ್ದ, ಈ ಸಣ್ಣಪುಟ್ಟೋರಗತಿ? ಗೊತ್ತಾನಾಯ್ಕ ಅದನೆಲ್ಲಾ ಕಂಡು "ಅಯ್ಯೋ ಶಿವನೆ ಇನ್ಯಾವ ಪಾಪ ತೀರಿಸಾಕಂತ ಉಳಿಸಿಯಪ್ಪ" ದೇವರತಾವ ಕೇಳ್ತಿದ್ದ. ತೊಂಬತ್ತಮನಿಗ್ರಾಮ ಕಾಕಾಪುರ ಈಗ ಇನ್ನೂರೈವತ್ತಮನಿದೊಡ್ಡಗ್ರಾಮ ಆಗ್ಯೆತಿ. ತೊಂಬತ್ತ ಮನಿಇದ್ದಾಗ ತೊಂಬತ್ತಜೋಡಿ ಎತ್ತಗಳು, ಕೆಂಪು, ಕಂದು, ಬಿಳಿ, ಕರಿ, ಹಂಡಬಂಡ, ದೀಪಾವಳಿಹಬ್ಬದ ದಿನ, ಕೊಂಬಗಳನ್ನ ಸವರಿ ಸಿಗಡಿಹಾಕಿ, ಕೊಂಬಿಗ ಬಣ್ಣಬಳದು ಬಣ್ಣಬಣ್ಣದ ರಿಬ್ಬನ್‌ಗಳನ್ನ ಸುತ್ತಿ, ಕೊಳ್ಳಾಗ ಮೆಣಸಿನ ಮಡಿಯಾಗಿಂದ ಚೆಂಡಹೂ ಹರ್‍ಕೊಂಡಬಂದು ಹುರಿಯೊಳಗ ಪೋಣಿಸಿ ಬಾಲದ ಹಿಂದಿಂದ ಕೊಂಬಿನವರಿಗ ಬರೋಮಟ ಸುತ್ತಿ ಕಟ್ಟಿದ್ರ ದೃಷ್ಟಿತಾಗಬೇಕು. ಒಬ್ಬರಿಗಿಂತ ಒಬ್ಬರು ಸಿಂಗರಿಸಿ ಹಗ್ಗ ಇಲ್ದಂಗೆ ತೊಗರಿಹಕ್ಲು, ಕೂಳಿಜ್ವಾಳದ ಹೊಲಗಳು, ಹುಳ್ಳಿಹೊಲ್ದಾಗ ಇಡೆಬಿಟ್ಟು ಮಧ್ಯಾಹ್ನದ ಮಟ ಮೇಯಿಸಿಕೊಂಡು, ಮಧ್ಯಾಹ್ನದ ಮ್ಯಾಲ ಇಡಿ ಕಾಕಾಪುರದ ತೊಂಬತ್ತಜೋಡಿಗಳನ್ನು ಮಾಳಿಹತ್ರದ ಈಚಲೊಳಗೆ ಸಾಲಾಗಿ ನಿಲ್ಲಿಸಿ, ದೊಡ್ಡ ದೊಡ್ಡ ಲಕ್ಷ್ಮಿಪಟಾಕಿ, ಆಟಂಬಾಂಬಗಳನ್ನ ಸಿಡಸಿ, ಊರಕಡಿಮಕಮಾಡಿ ಗದಮ್ತಿದ್ರು. ಎತ್ತಗಳು ನಾಕಕಾಲೆತ್ತಿ ಬಾಲನಿಗರಿಸಿಕೊಂಡು ಚಿನ್ನಾಟಕಿತ್ರ ನಿತ್ಕೊಂಡ ನೊಡೋರಿಗ ಖುಷಿಯೊಖುಷಿ. ಹರೆದಹುಡ್ರು ಅವುಗಳ ಕುಟಾಗ ಅವುಗಳಷ್ಟೇ ವೇಗದಿಂದ ಓಡಿ ಊರಮುಂದಿನ ಚೌಡವ್ವನ ಗುಡಿತಾವ ಎತ್ತುಗಳನ್ನ ಹಿಡ್ಕೊಂಡು ಮುಗದಾರದಾಗ ಹಗ್ಗಪೋಣಿಸಿ ಉಕ್ಕಡದಾಗ ತಗೊಂಡು ಮನಿಗ ಒಯ್ದು ಕಟ್ಟತಿದ್ರು. ಈಗ ಇಡಿ ಇನ್ನೂರೈವತ್ತಮನಿ ಕಾಕಾಪುರದಾಗ ಮೂವತ್ತ ಜೋಡಿ ಎತ್ತಗಳು ಉಳ್ಕೊಂಡಿಲ್ಲಾ, ಮೇವಿಲ್ಲಾ, ನೀರಿಲ್ಲಾ, ಒಂದಂದಟೈಂನಾಗ ಹಳ್ಳಿಯೊಳಗ ಮನುಷ್ಯ ಬದಕೊದೇ ದುಸ್ತರ ಆಗಿಹೊಗ್ಯೆತಿ. ಊರದನಗಳು ಒಟ್ಟಿಗಬಂದ್ರ ಕೆರಿಏರಿಮ್ಯಾಲ ಒಂದರ್ಧಗಂಟೆಕಾಲ ಹೋಗಾಕ ಆಗ್ತರಲಿಲ್ಲಾ, ಕುಮಾರಿನೆ ತಮ್ಮ ಕಾಕನಮನಿ ಎಮ್ಮಿ, ಗೊಡ್ಡೆಮ್ಮಿ, ಕಲ್ಯಾಣಿ, ಡಿಂಗ್ರಾಳಿ, ಕಾಲಮುರಕಿ, ಕಳ್ಳೆಮ್ಮಿ, ಮಣಕ, ಭಟ್ಟರೆಮ್ಮಿ ಅನ್ನೋ ಹದಿನೈದ ಎಮ್ಮಿ. ಬಸವಿ, ನಿಗರಿ, ಮಂದ್ರಿ, ನಾಗಿ, ಚೋಳಿ, ಸೀತಿ, ಬೊಡಕಿ ಮುಂತಾದ ಹಸುಗಳನ್ನ ಹೊಡ್ಕೊಂಡು ಗುಂಡಜ್ಜನಕುಟಾಗ ದನಮೇಯಿಸ್ತಿದ್ದ. ಊರಾಗ ಒಂದ ದನಸಾಯ್ತಂದ್ರ ಊರಮಾರಮ್ಮನ್ನ, ಕಾರಹುಣಿಮಿ ಹಿಂದಮುಂದ ಇಡಿಊರಿಗ ಊರೆ ಹೊಳಗಿ ಮಾಡ್ಕೊಂಡು ಹೊಸ ಕಾಳಹಸಮಾಡೊ ಮರ ಎಲಿಅಡಕಿ ನಾಕಾಣೆರೊಕ್ಕ ಸತ್ತದನಗಳಹಗ್ಗ ತಗೊಂಡು ಒಬ್ಬ ಓಡ್ತಿದ್ದ. ಓಡಿ ಓಡಿ ತಮ್ಮೂರ ಗಡಿದಾಟಿಸಿ ಇಟ್ಟು ವಾಪಾಸ

ಬಂದಬಿಟ್ರೆ. ನಮ್ಮೂರದನಗಳಿಗ ಯಾವಕಾಯಿಲೆ ಬರೋದಿಲ್ಲಾ ಅಂತ ಕಾಕಾಪುರದ ಹಿರಿಯರಭಾವನೆ. ಕಾಲಬಾಯಿಜ್ವರ, ಚಪ್ಪಿರೋಗ ಬಂದು ದನಗಳ ಸಂಕಿ ಕಡಮಿಯಾತು. ಎಮ್ಮಿ ಸಂಕಿಜಾಸ್ತಿಯಾಗಾನ ಹಸುಗಳು ಕಮ್ಮಿಯಾದ್ವು. ಹೋರಿಕರಗಳಂತು ಇಲ್ಲೆ ಇಲ್ದಂಗಾದ್ವು. ಒಂದ ಏನಾರ ಹುಟ್ಟಿಂದ್ರ ಆರತಿಂಗಳು ಕೈಯಾಗ ಹಿಡದು ಮೇಯಿಸಿ ಹಂಪಾಪುರದ ಕಟಕ ಬಂದಾಸಾಬಿಗೆ ಮಾರಬಿಡ್ತಿದ್ರು. ಕುರಿಮಾರ್ದಂಗೆ ಹಾಗಾಗಿ ಕಾಕಾಪುರದ ಸಣ್ಣರೈತಾಪಿಜನ ಗಳೆತಗದು ಬಾಡಗಿ ಕಲ್ಟಿವೇಟರ್ ಹೊಡಸಿ ಬಿತ್ತೋಟೈಂನಾಗೆ "ಅಣ್ಣಾ ನಿಂದಗಳೆ ಕಳಸೊ, ಇನ್ನೂರ ಕೊಡ್ತಿನಿ, ಒಂದೇ ಪಾಕೀಟುಜ್ವಾಳ ಬಿತ್ತಿಸ್ತೀನಿ" ಅಂತಸ್ವಾಟಿಮಟ ಹಲ್ಲಗಿಂಜಿ ಕೆಲ್ಸಮಾಡ್ಕೊಳ್ತಿದ್ರು. ಕಾಕಾಪುರದಿಂದ ನಲ್ವತ್ತ ಮೈಲಿದೂರದಾಗ ಗಡಿಮಾಪುರದಾಗೆ ಕೊಂಗರ ಸಾವುಕಾರನೊಬ್ಬ ಚಂಡೂವಿನ ಪ್ಯಾಕ್ಟರಿ ಹಾಕಿದ್ದ. ಭಾರಿಲಾಭ ಬರತೈತಿ ಅಂತೇಳಿ ಪ್ರಚಾರ ಮಾಡ್ತಾ ಕಾಕಾಪುರಕ ಬಂದ. ಕಾಕಾಪುರದ ಚೆನ್ನನಾಯ್ಕ ಬಹಳ ಹುರುಪಿಂದ ತನ್ನ ಐದೆಕ್ಕರಿ ಬೋರಿನ ಹೊಲ್ದಾಗ ಬೆಳಸೊದಂತ ನಿರ್ಧಾರಮಾಡಿದ. "ಇವ್ನವ್ವನ, ಐದೆಕ್ಕರಿಗ ಐದೆಕ್ಕರಿನೂ ಹಾಕಬಿಡ್ತಿನಿ, ಎಕ್ಕರಿಗ ಐವತ್ತಸಾವಿರದಂಗೆ ಬಂದ್ರೂ ಅಲ್ಲಿಗೆ ಒಂದ ಎರಡೂವರಿ ಲಕ್ಷದ್ದಾಗತೈತಿ. ಒಂದೇ ಸಲಕ್ಕೆ ಬೋರಿನ ಎಲ್ಲಾ ಸಾಲತೀರಿಸಿ ಪಕ್ಕದಾಗಿನ ಬುಡೇನಸಾಬಿದ ಹತ್ತ ಎಕ್ಕರಿ ಜಮೀನು ಕೊಂಡ್ಕೊಬೇಕಂತ ಮಾಡ್ಕೊಂಡೀನಿ" ಚೆನ್ನಾನಾಯ್ಕ ಬಹಳ ಹುರುಪಿನಿಂದ ಫ್ಯಾಕ್ಟರಿ ಯವರು ಕೊಟ್ಟಮಾಹಿತಿಯನ್ನ ತಗೊಂಡು ಹೊಲಾನೆಲ್ಲಾ ಹಸನಮಾಡಿ ಸಸಿನೆಟ್ಟ.ಕಳದ ಬ್ಯಾಸಗಿಯೊಳಗ ಅದ್ಯಾವನೊ ಅಮೇರಿಕದ ಕಂಪನಿಯವನು ಸಣ್ಣಸೌವತಿಕಾಯಿಬೆಳದು ರೊಕ್ಕ ಬಾಚ್ಕೊಳ್ರಿ ಅಂತಂದು ಐದೆಕ್ಕರೆ ಸೌವತಿಕಾಯಿಹಾಕ್ಸಿದ. ಗೊಬ್ಬರಕೊಟ್ಟ, ಬೀಜಕೊಟ್ಟ, ಕೆಡದಂಗೆ ಹೊಡಿಯಾಕ ಔಷಧಿನೂ ಕೊಟ್ಟ. ಬೆಳಿಎಲ್ಲಾನು ಕಟಾವಾದ ಮ್ಯಾಲ ಲೆಕ್ಕ ಚುಕ್ತಾಮಾಡಬೇಕಾರ, ಎಲ್ಲಾನ ಸೇರ್ಸಿ ಮೂರನಾಮಹಾಕಿದ. ಮತ್ತೊಂದ ಬ್ಯಾಸಗಿಯೊಳಗ ಹಾಕಬೇಕಂತ ಚೆನ್ನಾನಾಯ್ಕನ ತಲಿಮ್ಯಾಲ ಸಾಲಹೋರಿಸಿಕಳಿಸಿದ. ಮಳಿಗಾಲದಾಗ ಚೆಂಡಹೂ ಬೆಳ್ಕೊಂಡು ಬ್ಯಾಸಗಿಯೊಳಗ ಸೌತಿಬೆಳೆಯೋ ಯೋಜನೆ ಹಾಕ್ಕೊಂಡು, ಹೂವಿನ ದುಡ್ಡಿನ ಆಶಿಗ ಮಾಡಬಾರದ್ದನೆಲ್ಲಾಮಾಡಿದ. ಹೂವಹರಿಯಾಕ ಅಡ್ವಾನ್ಸ್‌ದುಡ್ಡಕೊಟ್ಟು, ಆಳಹಿಡದ, ಚೀಲ, ಬಂಡಿ ಏನೇನಬೇಕೊ ಅದನ್ನೆಲ್ಲಾ ಜೋಡಿಸಿಕೊಂಡ.

ದುಡದು ಸಾಲತೀರಿಸಬೇಕಂತ ಅದ್ಕೊಂಡಿದ್ದ ಚೆನ್ನಾನಾಯ್ಕನ ಹೊಲಹರಾಜಿಗೆ ಬ್ಯಾಂಕಿಂದ ನೋಟೀಸಬಂದಿತ್ತು. ಇರೊ ಐದೆಕ್ಕರಿ ಜಮೀನು ಹರಾಜಾದ್ರೆ

ಮಕ್ಕಳಮರಿಗತಿಏನು ಯೋಚನೆಮಾಡ್ದ. ಬಹಳಹೊತ್ತು ಯೋಚನೆ ಮಾಡ್ತಾನೆ ಕೂತ ಯಾವದಾರಿನೂ ಸರಿಗ ಕಾಣದೆ ಹೂವಿನವನು ಗಿಡಕ್ಕ ಹೊಡಿಯಾಕ ಕೊಟ್ಟಿದ ಔಷಧದಬಾಟಲನ್ನ ಕುಡದಖಾಲಿಮಾಡಿ ನಿಶ್ಚಿಂತಿಯಿಂದ ಮಕ್ಕೊಂಡಬಿಟ್ಟ. ಸುತ್ತರೈತರ ಸಾವಿನ ಸುದ್ದಿಕೇಳಿದ್ದ ಕಾಕಾಪುರದ ಜನ ತಮ್ಮೂರಿನವನೆ ಆದ ಚೆನ್ನನಾಯ್ಕ ಸತ್ತಿದ್ದನ್ನ ಕೇಳಿ ದಂಗಾದ್ರು. "ಏನಾಡ್ತಾರ ಅಣ್ಣಾ, ನಾವು ದುಡಿದಿದ್ದೆಲ್ಲಾ ತಗೊಂಡಹೋಗಿ, ದಲ್ಲಾಳಿ ಅಂಗಡಿ ಸಾವುಕಾರನ ಬಡ್ಡಿಗ ಕಟ್ತೇವಿ. ತಿರಗಿ ಮತ್ತೆ ಸಾಲ ತರ್ತಿವಿ, ಹಿಂದುಳದಿದ್ದು, ಹೊಸದಾಗಿ ಮಾಡಿದ್ದು ಬೆಳಿತಾ ಬೆಳಿತಾ ತಿರಸಾಕ ಆಗದೆ ಸತ್ತ ಹೊಗೋದು" ಕಂಗಾಲಮಂದಿ ಎದಿಯಾಗಿನ ಮಾತು. ಕುಡಿಯಾಕಂತ ಸಾಲಮಾಡೋದು, ಸಾಲಾತಂತ ಕುಡಿಯೋದು ಆಗಿ ಭೂಮಿಯನ್ನ ನಂಬಿಕೊಂಡಿರೋನು ಭೂಮಿಬಿಟ್ಟ ಮ್ಯಾಲಕ್ಕ ಕೊಡವಿಕೊಂಡ ಏಳಾಕಸಾಧ್ಯನೆ ಆಗಲಿಲ್ಲಾ. ವ್ಯವಸಾಯದ ಜೊತಿಗ ಪರ್ಯಾಯ ಆಲೋಚನೆ ಮಾಡದೆ, ಜೂಜು ಮೋಜು ಮಾಡಿದೋನು ಉದ್ಧಾರ ಆದಾನೆ? ಗೊತ್ತಾನಾಯ್ಕ ಎದಿಬಿಗಿಹಿಡದು ಬರ್ತಾಇರೊ ವಿಚಿತ್ರದಿನಗಳನ್ನ ನೋಡ್ತಾಇದ್ದ. ಏನೆಲ್ಲಾ ನಡಿತಾ ಇದೆ. ತನ್ನ ಸುತ್ತ ಅನ್ನೋದನ್ನ ತಿಳಿಯಾಕಗದಷ್ಟು ವೇಗವಾಗಿ ಬದಕು ಬೆಳಿತಾ ಇತ್ತು.

ಕಾಕಾಪುರದಿಂದ ಐದಕಿಲೋಮೀಟರ್ ದೂರ ಒಂದ ಕಾರ್ಖಾನೆ ಸುರುಮಾಡಿದ್ರು ದುಡ್ಡಿದ್ದೊರು. ಸರ್ಕಾರಕ್ಕ ಧೋಕಾಕೊಟ್ಟು ರೈತನಭೂಮಿಯನ್ನ ಬಾಯಿಗಬಂದ ಧಾರಣಿಗ ತಗೊಂಡು ಒಂದ ಎರಡಸಾವಿರ ಎಕ್ಕರೆಯಷ್ಟು ಭೂಮಿಯನ್ನ ಚೆಲುವಾಪುರದ ಗ್ರಾಮಲೆಕ್ಕಿಗ ಕುದ್ರಿಮಣಿಯನ್ನ ಶಾಮೀಲು ಮಾಡ್ಕೊಂಡು ಲಪಟಾಯಿಸಿಬಿಟ್ಟ ಸಾವುಕಾರ ಯಜಮಾನ್ ಕರಂದಕಪ್ಪ. ವಿ.ಎ. ಆರಂಭಕ್ಕೆ "ಅದ್ಯಾವಾನರ ಸಾವುಕಾರ ಇರ್ಲಲ್ಲನ್ಯಾಕೆ ನನಗೇನು ನಾನು ಸರ್ಕಾರದ ಜಮೀನಿನಕಡ್ತತಯಾರ ಮಾಡಾಕೆ ಹೋಗಂಗಿಲ್ಲಾ" ಟರ್‌ಪರ್ ಅಂದಿದ್ದ. ಯಾವಾಗ ಒಂದಸಾಯಂಕಾಲ ಕರಂದಕಪ್ಪನ ಗೂಂಡಾಮಗ ಗೋಪಾಲಸಾಮಿ ಅನ್ನೋನು ಆಫೀಸಿನ್ಯಾಗಿಂದ ಅಜಾಮತ್ತ ಎತ್ಕೊಂಡಬಂದು ಜೀಪಿಗ ತುರಕಿ ಅವರ ದೆವ್ವದಂತ ಬಂಗಲೆಯೊಳಗ ಒಂದನಾಕಗಂಟಿ ಕೂಡಿಹಾಕಿ ಒಂದ ದೊಡ್ಡಖಾಲಿಸೂಟಕೇಸ್ ಅದ್ರಾಗ ಒಬ್ಬಮನುಷ್ಯನನ್ನ ಹೇಗಾದರು ಪಾರ್ಸಲ್ ಮಾಡಬಹುದು. ಮತ್ತೊಂದು ಅದಕ್ಕಿಂತ ಸಣ್ಣದು. ಎರಡನ್ನು ತಂದು ಕುದ್ರಿಮಣಿಮುಂದ ಇಟ್ಟು. "ನೋಡಲೇ ವಿ.ಎ, ಇಲ್ಲಿ ಎರಡಸೂಟಕೇಸ್‌ಗಳು ಅದಾವ. ಒಂದು ನೀನು ಎರಡ ಸಾವರ ಎಕ್ಕರಿ ನಮ್ಮ ಹೆಸರಿಗೆ ಮಾಡಿದ್ರೆ ಹತ್ತಲಕ್ಷ ಇರೋ ಈ ಸೂಟ್‌ಕೇಸ್

ತಗೊಂಡು ಉಸಿರಾಡ್ತಾ ಹೊರಗಹೊಕ್ಕಿಯಾ. ಇಲಕ್ಕ ಇದ್ಯೆತ್ತಲ್ಲಾ ನಿನ್ನ ಉಸರಬಂದಮಾಡಿ ಎರಡತುಂಡಾಗಿಸಿ ಪ್ಯಾಕಮಾಡಾಕ ಇಟ್ಟಿರೋದು. ಈ ಕರಂದಕಪ್ಪನ ಇತಿಹಾಸನಿನಗ ತಿಳಿದಿರಾಕಬೇಕು. ಯಾಕಹೇಳು, ನಮ್ಮ ಹಂಪಾಪುರ ಜಿಲ್ಲಾದಾಗೆ ನನ್ನಂತ ಮನುಷ್ಯಯಾರು ಇಲ್ಲಾ. ನನಗೆ ಆಗದವರನ್ನ ಬಹಳ ಸುಲಭವಾಗೆ ನಾನು ಸರಸಿಬಿಡ್ತಿನಿ. ಮನ್ನೆಬ್ಯಾಂಕ ಒಂದನ್ನ ಬಂದಮಾಡ್ಸಿದೆ. ಅದರಿಂದ ಎಷ್ಟಲಾಭನನಗಾತು ಗೊತ್ತಾ ಒಂಬೈನೂರಕೋಟಿ ಜನಕಳ್ಕೊಂಡಿದ್ದು ಒಂಬೈನೂರ ಕೋಟಿ. ಮೂರ್ನಾಕ ಜನ ಕೇಸಹಾಕ್ತಿವಿ ಅಂತ ಧಮಕಿಕೊಟ್ಟೋರ ಹೆಂಡ್ರುಮಕ್ಕಳು ಅವರನ್ನ ಹುಡಾಕಾಡಕತ್ತ್ಯಾರ"

ಕರಂದಕಪ್ಪ ಮನುಷ್ಯನ ಆಕೃತಿಯಲ್ಲಿರೊ ವಿಷದಜಂತು ಅಂತ ವಿ.ಎ. ಅರ್ಥಮಾಡಿಕೊಂಡ. ನನ್ನ ಕೆಲಸದಿಂದ ತಗದ್ರುನಾನು ಎರಡಲಕ್ಷ ನೋಡಂಗಿಲ್ಲಾ, ನಾಕದಿನ ನೆಮ್ಮದಿಯಿಂದ ಬದಕಬೇಕಾದ್ರ ನಾನು ಈ ಕೆಲ್ಸಮಾಡ್ಲೆಬೇಕು ಅಂತ ಯೋಚನೆಮಾಡಿದ. "ಧಣಿ ನನ್ನ ಕೆಲ್ಸಹೊಕ್ಕೈತಲ್ಲಾ" ಅಂಗಲಾಚಿದ. "ನನ್ನ ಮಗನ್ನಮಿನಿಷ್ಟರು ಯಾಕಮಾಡೀನಿಗೊತ್ತ" ಇನ್ನೂ ಅರ್ಥಗಂಟೆಕೊರಿಯಬೇಕು ಅನ್ನೊ ಇರಾದೆಯಿಂದ ಮಾತ ಆರಂಭಮಾಡ್ಯಾನ ಕರಂದಕಪ್ಪ ಅಂತ ಗೊತ್ತಾಗಿದೆ. ವಿ. ಎ. "ಹೂಂ ಗೊತ್ತಾಯ್ತು ಬಿಡಿ, ನಾ ಇನ್ನೂ ಬರ್ತೀನಿ"ಹಿಂದಕ್ಕ ತಿರಗಿನೋಡ್ದಂಗೆ ಮನಿಂದ ಹೊರಗಬಿದ್ದ. ಯಾಕೊ ಅಂತದೊಡ್ಡಬಂಗಲೆ ನರಕದಂಗೆ ಅನಿಸಿತ್ತು. ಗೋಡೆಗಳ ನಡುವಿನಿಂದ ಬಡವರು, ಕರಂದಕಪ್ಪ ಶೋಷಣೆಮಾಡಿದ ಹೆಣ್ಣು ಗಂಡುಗಳ ಧನಿಕೇಳ್ತಿತ್ತು. ನೀನು ನಮ್ಮಜೊತೆಗೆ ಬರ್ತಿಯಾ...... ಬರ್ತಿಯಾ..... ವಿ. ಎ. ಬೆವರು ಒರಸಿಕೊಂಡ.

ಪ್ಯಾಕ್ಟರಿ ಕೆಲ್ಸಾರಂಬಿಸ್ತು ಕೆಲರೈತರು ಬಹಳಪಾಡಾತು ಮಳೆಮಾರಿಲ್ಲದ ದಿನ ಮಂದಿಗ ಆಟಕೆಲ್ಸನಾರು ಸಿಕ್ಕಿತು ಅನ್ನೋ ಆಶಾಭಾವನೆಯಿಂದ ತಮ್ಮ ಜಮೀನಕೊಡಾಕ ಮುಂದಾದ್ರು. ಇನ್ನೂ ಕೆಲವರು ನಮ್ಮ ಬದುಕಿಗೆ ವಿರುದ್ಧವಾದದ್ದು ಇದೊಂದು ದೆವ್ವ ಇದ್ದಹಾಗೆ ನಮ್ಮ ಅಸ್ತಿತ್ವವನ್ನ ಬೇರಸಮೇತ ಕಿತ್ತಬಿಸಾಕಿಬಿಡುತ್ತೆ. ಅಂತ ಆತಂಕ ಪಟ್ಕೊಂಡಿದ್ರು. ಪಾಕ್ಟರಿ ಆಜುಬಾಜು ಹೊಲ ಇದ್ದೋರಿಗ ಖುಷಿಯೊ ಖುಷಿ ಬೇಕಂತ್ಲೆ ರಂಟೆ-ಕುಂಟಿಹೊಡದು ಹಸನವಾಡಿ ರೇಟ ಒಂದೀಟು ಜಾಸ್ತಿ ಕೇಳಾನಂತ ಯೋಚನೆಮಾಡಿದ್ರು. ಏಳೆಂಟುರೂಪಾಯಿ, ನೆಲನಂಬಿ ಬದುಕಾಕದ್ರು ಆದಿತೇನು, ಹೊಲಮಾರಿದ್ರೆ ದುಡ್ಡ ಬರತೈತಿ, ಅದನ್ನ ಬ್ಯಾಂಕಿನೊಳಗ ಇಟ್ಟು ಬಡ್ಡಿದುಡಸಿ ಬರಿ ಬಡ್ಡಿತಿನ್ನೊ ಭ್ರಮೆಯೊಳಗೆ ನಾಮುಂದೆ ನೀಮುಂದೆ ಅಂತ ಭೂಮಿಯನ್ನ ಮಾರಿದ್ರು. ರೈತರು ಭೂಮಿಮಾರಿ ಕಂಪನಿ ಸುರುಆಗಾಕ ಮುಂಚೆ ಯಾರ್‍ಯಾರ ಭೂಮಿ ಕಳ್ಕೊಂಡು

ದುಡ್ಡಮಾಡಿದ್ರೂ ಎಲ್ಲರೂ ದಿವಾಳಿ ಎದ್ದಹೋಗಿದ್ರು.

ದೊಡ್ಡಕಂಪನಿ ದೊಡ್ಡ ಶ್ರೀಮಂತರು ಕುಡಿಯೊ ರಸಾಯನ ತಯಾರಮಾಡೋದು. ಕೆಲ್ಸಮಾಡಾಕೆ ಸಾವಿರಾರು ಜನಬೇಕಾದ್ರು. ಸುತ್ತಮುತ್ತಲ ಹಳ್ಳಿಜನ ಪಾಕ್ಟರಿಯೊಳಗ ನಮಗೂ ಒಂದ ನೌಕರಿಸಿಕ್ಕಿತಂತ ಬಹಳ ಖುಷಿಯಿಂದಿದ್ದರು. ಆದ್ರಲ್ಲಿ ಯಾರಿಗೂ ಖಾಯಂಕೆಲ್ಸ ಕೊಡೊಮನಸ್ಸಿಲ್ಲ. ಎಲ್ಲಾ ಅಸಂಘಟಿತಕೆಲಸಗಾರರೆ. ಗಂಟಿಗ ಮೂರರೂಪಾಯಿ ಎಷ್ಟಗಂಟಿಬೇಕಾರದುಡಿಬಹುದು. ಮೊಟ್ಟಮೊದಲು ಕಾಕಾಪುರದ ಮಂದಿ ಪಾಕ್ಟರಿ ಕೆಲ್ಸಕ್ಕೆ ಹೋಗಾಕ ಸುರುಮಾಡಿದ್ರು. ದಿನಕ್ಕ ಮೂರಟ್ರಿಪ್ ಟ್ರಾಕ್ಟರ್‌ಗಳು ಅಡ್ಡಾಡ್ತಿದ್ವು. ಒಳ್ಳೆಸಿಟಿಬಸ್ಸುಗಳು ಟ್ರಿಪ್‌ಹೊಡಿಯೊಹಂಗೆ. ಮುಂಜಾನೆ ಟ್ರಿಪಿಗೆ ಒಂದಿಷ್ಟಜನ ಹುಡ್ರು, ವಯಸ್ಸಾದವರು. ಮಧ್ಯಾಹ್ನ ಹಾಗೆಯೇ ಸಂಜಿಮುಂದ ಹದಿನೆಂಟರ ಹರೆಯದ ಹುಡುಗಿಯರದ್ದೆ ಒಂದು ಟ್ರಿಪ್. ಅವರು ಪಾಕ್ಟರಿಯೊಳಗ ಅದೇನಮಾಡ್ತಾರೆ? ಎಲ್ಲಿಗಹೋಗ್ತಾರೆ? ಅನ್ನೊಸತ್ಯನಾ ಕಾಕಾಪುರದ ಗಂಡಸರಿಗೆ ಗೊತ್ತಿಲ್ಲ. ದಿನಾ ಸಂಜಿಮುಂದ ಕಾಕಾಪುರದ ಬಡಹುಡುಗಿಯರು ಪೌಡರ ಹಚ್ಕೊಳಾಕಿ ಯಾವಾಕಿನೊ, ತಲಿಗೆಣ್ಣಿ ಹಚ್ಕೊಂಡು ಬಾಚ್ಕೊಳಾಕಿ, ವಾಸನಿಬರೊ ಗಂಧದೆಣ್ಣಿ ಹಾಕ್ಕೊಂಡು ಮದವಿಗ ಹೊಗೋರಂಗ ಸಿಂಗಾರಾಗಿ ಹೊರಡತ್ತಿದ್ವು. ಆ ಇಡಿಗುಂಪಿನ ಚಟುವಟಿಕೆ ಒಬ್ನೆಒಬ್ಬ ಕಾಕಾಪುರದ ಶಂಕನಮುಗ ಸೇತುಗ ಮಾತ್ರಗೊತ್ತಿತ್ತು. ಚೆಲುವಾಪುರದ ಸುಂದ್ರೇಶಿ ಅನ್ನೊ ಕರಂದಕಪ್ಪನ್ನ ಚೇಲಾ ಮತ್ತು ಅವನ ಗೆಳೆಯ ಪರಸ್ಯಾ ಪಾಕ್ಟರಿಯೊಳಗೆ ಕೆಲ್ಸಮಾಡೊ ದೊಡ್ಡ ದೊಡ್ಡ ಆಫೀಸರಗಳ ಜೊತಿಗ ದೋಸ್ತಿಮಾಡ್ಕೊಂಡು ಈ ಹುಡುಗಿಯರಿಗೆ ಅವರಸೇವೆ ಮಾಡ್ಸಾಕ ಕಳಸ್ತಿದ್ರು. ಒಂದಸಲ ಗಂಡನಬಿಟ್ಟ ಬಂದು ಕಾಕಾಪುರದಾಗೆ ಠಿಕಾಣಿಹೂಡಿರೊ ಸೇವಂತಿ ಆ ಟ್ರಿಪಿಗೆ ಹೋಗಿಬಿಟ್ಲು. ವಯಸ್ಸಾಗಿ ಗಲ್ಲ ಸುಕ್ಕಗಟ್ಟಿತ್ತು ಸುಂದ್ರೇಶಿಗ ಸಿಟ್ಟಬಂದು. "ಬೇ ನಿಮ್ಮಮ್ಮನ ನಿಂಗಯಾವನ ಹೇಳಿದ್ದು ಕೆಲ್ಸಕ ಬಾ ಅಂತಾ, ನಡಿಹೊರಗಂತ" ಗೇಟಿನ ಹೊರಗ ಇಡಿರಾತ್ರಿ ಕುಂದ್ರಿಸಿ ಕೂಲಿಜೊತಿಗ ಐದರೂಪಾಯಿ ಇನಾಮಕೊಟ್ಟ ಕಳಿಸಿದ್ದ. ಕಾಕಾಪುರದ ಬದುಕಿಗ ಒಂದ ಹೊಸ ಆಯಾಮ ಬಂದಿತ್ತು. ಹುಡ್ರೆಲ್ಲಾ ಲಪಾಟಿಬಿಟ್ಟು ಪ್ಯಾಂಟು, ಹೊಸದಾಗಿ ಸಿನೀಮದಲ್ಲಿ ಜೋಕರ್‌ಗಳು, ಜೋಕರಂತ ಹೀರೊಗಳು ಹಾಕೊ ಬರ್ವೊಡಾಗಳೂ ಟೀ ಷರ್ಟಗಳು. ಹುಡುಗಿಯರು ಲಂಗಾದಾವಣಿ ಬಿಟ್ಟಹಾಕಿ ಚುಡಿದಾರ, ಮಿಡಿ, ಮಿನಿ ತೊಟ್ಕೊಳ್ಳಾಕ ಆರಂಭಿಸಿದ್ರು. ಕಾಕಾಪುರದಾಗೂ ಅಮೇರಿಕಾದ ವ್ಯವಸ್ಥೆ ಸುರುಆಗಿತ್ತು ರಾತ್ರಿ ದುಡಿಯೋದು ಹಗಲು ನಿದ್ದೆಮಾಡೋದು. ಹೆಣ್ಣುಗಂಡನ್ನೊ

ಬೇಧಾನೆ ಇಲ್ಲಾ. ಒಬ್ಬಳೆ ಹೆಂಗಸು ನಡುರಾತ್ರಿ ಬೀದಿಯಲ್ಲಿ ಅಡ್ಡಾಡಿದ್ರೆ ಸ್ವಾತಂತ್ರ್ಯ ಸಾರ್ಥಕವಾಗುತ್ತೆ ಅಂದಿದ್ರಲ್ಲಾ ಒಬ್ಬಾಕಿಯಾಕೆ ಕಾಕಾಪುರದ ಹಿಂಡಗಟ್ಟಲೆ ಹುಡುಗಿಯರು ಪ್ಯಾಕ್ಟರಿಯೊಳಗ ರಾತ್ರಿ ಇಡಿ ನಿಶಾಚರಜೀವಿಗಳಂಗೆ ಅಡ್ಡಾಡ್ತಾ ಸಾಹೇಬರುಗಳ ಸೇವೆಮಾಡ್ತಾವೆ. ಚೆಲುವಾಪುರದ ಸುಂದ್ರೇಶಿ, ಅವನಗೆಳೆಯ ಪರಸ್ಯಾಮಾತ್ರ ಬಿಲ್ಡಿಂಗ್‌ಮ್ಯಾಲ ಬಿಲ್ಡಿಂಗ್, ಹತ್ತ ಇಪ್ಪತ್ತೆಕ್ಕರಿ ತ್ವಾಟ,ಜೀಪು ಕಾರು, ಮಾಡ್ಕೊಂಡು ಪ್ಯಾಕ್ಟರಿಯೊಳಗಿನ ಮುದಿಯ ಅಧಿಕಾರಿಗಳು ಮಜಾಮಾಡಿ ಬಿಟ್ಟಿಂದ ಅಳಿದುಳಿದ ರುಚಿನೋಡ್ತಾ, ತಲೆಹಿಡದ ರೊಕ್ಕದಾಗ ಸುತ್ತಹಳ್ಳಿಗಳ ಜನರಿಗೆ ಹೆದರಿಸ್ತಾ ಚೆಲುವಾಪುರ ಅನ್ನೊ ಊರಾಗ ದೊಡ್ಡಜನ ಅನಿಸ್ಕೊಂಡಾರ.

ಗೊತ್ತನಾಯ್ಕ ಇದೆಲ್ಲಾ ನೋಡಿ ನೋಡಿ ಸಾಕಾಗಿ ಕಣ್ಣಿನ ಪರಿಬಂದಾಗ ತಗಸೋದೆ ಬ್ಯಾಡಂತ ಕುಂತ್ಕೊಂಡಿದ್ದ. ಪೂಸಿಹೊಡಿಯೊ ಗೊಂದಾ ಮತ್ತೆಗಂಟ ಬಿದ್ದು ಕಣ್ಣಿನ ಪೊರಿತಗಸಿದ. ಈಗ ಕಿವಿನೂ ಆಟಕಾಟೆ ಸರಿಯಾಗಿ ಕೇಳಿಸ್ತಾಇಲ್ಲಾ. ಈ ಭೂಮಿಮ್ಯಾಲಿಂದ ತನ್ನ ಅಸ್ತಿತ್ವವನ್ನುಕಳ್ಕೊಬೇಕು ಅಂದ್ಕೊಂಡಿದ್ದ "ಇಲ್ರೋ ಮುದಕ ಆತನಮಗ ಕುಮಾರಿ ಬರೋಮಟ ಸಾಯಲ್ಲ" ಅಂತಾರ ಕೆಲ ಮಂದಿ. "ಇಲ್ಲಾ ಅವನ ಮಗಳು ಪಾಂಗೋಶಿ ಮದ್ವಿಆಗಲಿ ಮಾರನೇ ದಿನಾನೆ ಸಾಯಿತಾನ" ಅಂತ ಮತ್ತಕೆಲವರು ಹೇಳ್ತಾರ. ಅವನ ಜೊತಿಗ ಸ್ಪರ್ಧಿಗಳಾಗಿದ್ದ ಸೊನ್ಯಾ, ಗಬಡು, ಚೊಕ್ಕ ಸತ್ತಸುಮಾರ ವರ್ಷಗಳಾದ್ವು. ಅವರ ಸಂತತಿ ಗೊತ್ತಾನ ಮನಿತನದ ಮ್ಯಾಲ ಸೇಡತೀರಿಸಕೊಳ್ಳಾಕ ಇನ್ನೂ ಹೊಂಚಹಾಕ್ತಾನೆ ಐತಿ. ಸೋನ್ಯಾನ ಮಗ ಜೇಕ್ಕನಾಯ್ಕ. ಚೊಕ್ಕನ ಮಗ ಭದ್ರೇಶಿ ತಮ್ಮ ಕುಲದ ಬಗ್ಗೆ ಮಂದಿಮುಂದ "ಎಯ್ ನಮ್ಮಕುಲಂದ್ರ ಏನಂದ್ಕೊಂಡಿರ್ರೋ, ಇಡಿ ಊರಾಗ ನಮ್ಮದೇ ದೊಡ್ಡ ಕುಲ, ನಾವೆಲ್ಲ ಒಂದಾಗಬೇಕು ತಮ್ಮ ಮಂದಿಮುಂದ ಹೇಳಿ, ಓಟಕೇಳಾಕ ಬರೊ ಎಮ್ಮೆಲ್ಲೇನ ಹತ್ತರ. ಜಿಲ್ಲಾಪಂಚಾಯ್ತಿ ಮೆಂಬರ್‌ಹತ್ರ. ಸರಾಯಿ ಕಾಂಟ್ರಕ್ಟರ್‌ನ ಹತ್ರ ಮಂದಿತಲಿತೋರ್ಸಿ ಹಪ್ತಾವಸೂಲಿಮಾಡ್ಕೊಂಡು ಮಂದಿಗೆಲ್ಲಾ ಗಿಲೀಟಹೊಡ್ದು ವಾರೊಪ್ಪೊತ್ತು ಕುಡದು ತಿಂದು ಮಜಮಾಡಿ. ಮತ್ತೆ ಊರಿಗ ಬರೊ ಎಮ್ಮಿಕರ ತಗೊಳೋರು, ಮರಗಳನ್ನ ತಗೊಳೋರು, ಹುಲ್ಲು, ಪಾಸ್ಟೀಕ ತಗೋಳೊರನ್ನು ಬಿಡದಂಗೆ ಎಲ್ಲಾರಿಗೂ ಟೋಪಿಹಾಕ್ತಾ ಬದಕೋದನ್ನ ಅವರ ಅಪ್ಪಂದಿರ ಪಡ್ಕೊಂಡಿದ್ದನ್ನ ಹಂಗೇ ಉಳಸಿ ಬೆಳಸಿಕೊಂಡು ಬಂದಾರ. ಚೊಕ್ಕನ ಮಗ ಭದ್ರೇಶಿ ಅವರಪ್ಪ ಮಂಡಲ್‌ಪಂಚಾಯ್ತಿಯೊಳಗ ಯಾಕಗೆಲಿಲ್ಲಾ ಅನ್ನೋದನ್ನ ಪುನರ್ ವಿಮರ್ಶೆಮಾಡಿ ಅವನ ದೊಡ್ಡಪ್ಪನ ಮಗ ಚೆಕ್ಕನ ತಲಿತಿಕ್ಕಿ, "ಅಣ್ಣ ನಮ್ಮಪ್ಪನ್ನ

ಗೆಲ್ಲಾಸಾಕ ದೊಡ್ಡಪ್ಪ ಏನೆಲ್ಲಾಮಾಡಿದ. ಆದರ ನಮ್ಮಪ್ಪಗೆಲ್ಲಲಿಲ್ಲಾ ಈಗ ಗೊತ್ತಾನಾಯ್ಕ ಮಕ್ಕಳಿಗೆ ಸೊಲ್ಲಾಸಕ ನಾವು ಏನಾರ ಹುನ್ನಾರ ಮಾಡಾಕಬೇಕು" ಚುನಾವಣೆ ವರ್ಷಾಇರುವಾಗಲೆ ಯೋಚನೆ ಮಾಡಿದ್ದ. ಅಂವ ಪ್ರಯತ್ನ ಮಾಡ್ತಾನೇ ಇದ್ದ ಆದ್ರು ಗೆಲ್ಲಾಕ ಆಗದೆ. ಒಳಪಿತೂರಿಮಾಡಿ ಇಡಿಊರಿಗೆ ಜಗಳಹಚ್ಚಿ, ಲಮಾಣಿಗರು, ಊರಮನಿಯೋರು ಸಾಬರು ಒಬ್ಬರಿಗೊಬ್ಬರು ಆಗದಂಗೆ ಮಾಡಿಬಿಟ್ಟ. ಡಿಸೆಂಬರ ೬ನೇ ತಾರೀಖು ಉತ್ತರಪ್ರದೇಶದಾಗ ಬಾಬ್ರಿಮಸೀದಿ ಬಿದ್ದಿದ್ದ ಕಾಕಾಪುರದಾಗ ಸಾಬರ ಮನಿಮ್ಯಾಲ ಕಲ್ಲಬಿದ್ದಂಗ ಮಾಡಿತ್ತು. ಹುಸೇನಿ, ಬಬರುಸಾಬಿನ ಮಂದಿ ಚೆನ್ನಾಗಿ ಚೆಚ್ಚಹಾಕಿದ್ರು. ರಾಜಿಸಾಬಿ ಸೊಸಿಯನ್ನ ಸೊನ್ಯನಮಗ ಜೇಕ್ಯಾನಾಯ್ಕ ಮತ್ತ ಅವನ ಹಿಂದಿರೊರೆಲ್ಲಾ ಸೇರಿ ಮಾನಭಂಗಮಾಡಿದ್ರು. ಸಾಬರಿಗೆ ಆಸರೆಯಾಗಿ ನಿಂತ ಗೊತ್ತನಾಯ್ಕನ ಮನಿಯವರಿಗೆ ಇಡಿ ಊರಿಗ ಊರೆ ಸೇರ್ಕೊಂಡು ಭಹಿಸ್ಕಾರ ಹಾಕಿದ್ರು. "ಹೊಗ್ರಲೇ ಮಕ್ಕಳ್ರ್ಯಾ ನೀವೇನ ಹೊರಗಹಾಕ್ತಿರ ನಾವು ನಿಮ್ಮನಹೊರಗಹಾಕ್ತೀವಿ ನೀವು ಗಂಡಸರೇನ್ರಲೇ ನನ್ನ ಹಿರಿಮಗ ನುಗ್ಲ ಒಬ್ಬನೆ ಸಾಕು ನಿಮ್ಮನೆಲ್ಲಾ ಗದಮ್ಯಾಡಿಹೊಡಿತಾನ" ಊರನಡಕ್ಕ ನಿಂತು ಸೊಂಟದ ಮ್ಯಾಲ ಕೈ ಇಟ್ಕೊಂಡ ಬೊಯ್ದಿದ್ದ ನೂರರ ಮುದ್ಕನ ಬಂದ ಹಿಡ್ಕೊಂಡ ಕುಮಾರಿ "ಯಾರೋ ಮಗನೀನು, ಎಲ್ಲಿಂದ ಬಂದಿಯಾ " ಮಂಜಾಗಿದ್ದ ಕಣ್ಣಗಳನ್ನ ಜುಕ್ಕಜುಲ್ಮಿಯಿಂದ ತೆರೆದು ನೋಡೊ ಪ್ರಯತ್ನ ಮಾಡಿದ ಮುದಕ.

ಪಾಂಗೋಶಿ, ಚೆನ್ನಿಂಗ ಓಡಿಬಂದು ಕುಮಾರಿಯನ್ನ ಕರ್ಕೊಂಡು ಮುದುಕನ್ನ ಕೈಹಿಡದು ನಡೆಸಿಕೊಂಡು ಮನಿಮುಂದಿನ ಗುದ್ದಮ್ಮನ ಕಟ್ಟಿಗ ಕರ್ಕೊಂಡಹ್ವಾದ್ರು. ಅವನ ದೊಡ್ಡಣ್ಣ ನುಗ್ಲಾ, 'ಥೂ' ಅಂತ ಕ್ಯಾಕರಿಸಿಉಗಳಿದ. ಹನುಮ, ಜಂಬ ಎಲ್ಲೊ ಹೊಲಕ ಹೋಗಿದ್ರು. ಗಾರಿಕಟ್ಟಿಹೊಡದ ಚೂರಚೂರಾಗಿತ್ತು ಕಟ್ಟಿನಡಕಿನ ಬೇನಮರ ಒಂದೇ ನಿಂತಿತ್ತು. ಬಹಳ ಆತ್ಮೀಯತೆಯಿಂದ ಹೊಡದ ಹೋಗಿರೊಕಟ್ಟಿನ ಮುಟ್ಟಿದ. ಗುದ್ದಮ್ಮನ ಗುಡಿಯ ಕಲ್ಲು ಕೆಳಗ ಬಿದ್ದು ಒಳಗಿನ ದೀಪ ಒಡದಿತ್ತು. ಬಸವ ಜಯಂತಿಗೆ ಎತ್ತಿನ ಕೊಂಬಿಗ ಹಾಳಿಹಚ್ಚಾಕಂತ ಬೇನಮರದ ಅಂಟತಗಿಯಾಕ ಎಲ್ಲಾರಿಗಿಂತ ಮದ್ಲಬರ್ತಿದ್ದು ನೆನಪಮಾಡಿಕೊಂಡು ಒಂದಸಲ ಸವರಿದ. ಮನಸ್ಸಿನಾಳದೊಳಗೆ ಎಲ್ಲೋ ಹೆಪ್ಪುಗಟ್ಟಿದ ದುಃಖ ಉಕ್ಕಿಬಂದಂಗಾತು, ಒತ್ತಾಯದಿಂದ ತಡ್ಕೊಂಡ. ಮುದಕ ಬಾಯಿಬಿಟ್ಕೊಂಡೆ ನೋಡ್ತಿದ್ದ. ಕುಮಾರಿಮಾತ್ರ ಒಡದಹೋಗಿರೊ ಕಟ್ಟಿನೊಮ್ಮೆ-ಭಾಗವಾಗಿರೊ ತನ್ನಮನಿಯನ್ನ ನೋಡ್ತಾನಿಂತ. ಯಾರೊ ಒಂದಿಷ್ಟುಮಂದಿ ಹುಡುಗರು

ಕೆಳಗ ಒಂದೊಂದು ಹರಕ ಚಣ್ಣ ಸಿಗಸಿಕೊಂಡು ಉಸುಕಿನೊಳಗೆ ಆಡ್ತಿದ್ದೋರೊ - "ಅವನು ನಮ್ಮ ಕುಮಾರಿಕಾಕ ಹೌದಂತೆ " ಅಂತಮಾತಾಡಿಕೊಳ್ತಿರೋದು ಕಿವಿಗಬಿತ್ತು. ಮುದುಕನ ಮಕದಾಗ ಯಾರು? ಅನ್ನೊ ಆತಂಕ ಹಾಗೇ ಇತ್ತು. ಹನ್ಮಂತ ದೇವರಗುಡಿ, ಒಂ॰ಗಿದಕೆರಿ, ಸೇವಾಬಾಯನಗುಡಿ, ನೀರೆಬತ್ತಿಹೋಗಿ ಅದರ ಕಟ್ಟಿಮ್ಯಾಲೆ ಮನಿಕಟ್ಕೊಂಡಿರೊ ಬಾವಿ ವಿಕಾರವಾಗಿ ಕಂಡವು. "ಓ ಕಾಕಾಪುರ" ಒಂದಸಲ ಕನಲಿದ. ಯಾಕೋ ಉತ್ಸಾಹವೆಲ್ಲಾ ಬತ್ತಿಹೋದಂಗಾತು. ಹೊನ್ನಾಪುರದ ತನ್ನ ಖೋಲಿಯೊಳಗೆ ಕುಂತ್ಕೊಂಡು ಕಲ್ಪನೆ ಮಾಡ್ಕೊಂಡಿದ್ದ ಕಾಕಾಪುರ ಎಂಥ ಅದ್ಭುತವಾದದ್ದು. ಭೂಮಿಯ ಮೇಲಿನಸ್ವರ್ಗ ಹಸಿರುಮರಗಳ ಸಾಲು ತುಂಬಿತುಳಕಾಡುವಕೆರಿ -ಬೆಳ್ಳಕಿ-ಬಾತುಕೋಳಿ, ಎಲ್ಲೆಲ್ಲೊಸುಖ ಸಮೃದ್ಧಿ-ಯಾಕೊಎದಿಯಾಗ ನೋವಾತು. ಅವನಕಣ್ಣುಗಳು ಇನ್ನೇನನ್ನೊ ಹುಡಕಾಡುತ್ತಿದ್ದವು. "ಕುಮಾರಿ ಅಣ್ಣ ಕೈಕಾಲಯಮಾರಿತೊಳ್ಕೊ" ಅವನ ತಂಗಿ ಪಾಂಗೋಶಿ ನೀರತಂದಕೊಟ್ಲು. ಮಾರಿಬಾಡಿತ್ತು. ಕೆನ್ನಿ ಸುಖಿಗಟ್ಟಿದ್ವು ಬದುಕಿನ ದುರಾವಸ್ಥೆಗೆ ಮರಗಿಮರಗಿ ಬಾಡಿಹೋಗಿರೊ ಹೂವಿನಂಗಾಗಿದ್ಲು "ಹಾಂ, ಏನತಂಗಿ" ಅಂತ ಮುಂದಹೋದ. "ಮಾರಿತೊಳ್ಕೋ " ಕಣ್ಣಾಗ ನೀರಬಂದಿದ್ವು ಕುಮಾರಿಗ ತಡಿಯಾಕ ಆಗಲಲ್ಲಾ ಕೆಳಗ ಚೆಂಡಹಾಕ್ಕೊಂಡು ಇಳಿದಬಂದ. "ನೀಯಾರು? ಎಲ್ಲಿಂದ ಬಂದಿ" ಮುದಕ ಮತ್ತೆಕೇಳಿದ. "ನಾನುನಿನ್ನ ಮಗಹೌದು, ನಿನಗೆ, ನಿನ್ನಮಕ್ಕಳಿಗೆ ಇಡಿ ಊರಿಗೆ ಬ್ಯಾಡಾಗಿದ್ದೋನು" ಅಂತ ಚೀರಿಹೇಳಬೇಕು ಅನಿಸಿತು. ಮುದಕನ ಉಸಿರು ನಿಂತಹೋದಿತಂತ ಅವನ ಮಾರಿ ನೋಡಿದವನೆ ಮನಿ ಒಳಗಹೋದ.

ಕುಮಾರಿನೊಂದಕೊಂಡಿದ್ದ, ಊರ ಪರಿಸ್ಥಿತಿ, ಮನಿಸ್ಥಿತಿಕೇಳಿ, ಅವನ ತಂಗಿ ಪಾಂಗೋಶಿ ತನ್ನ ಅಣ್ಣಬಂದೇ ಬರ್ತಾನ ನನ್ನ ಮದ್ವಿಮಾಡಿಸ್ತಾನ ಅಂತ ಕಾದ್ಕೊಂಡ ಕುಂತಿದ್ವನ ಹೇಳಿ ಅಳತೊಡಗಿದಳು. ಅವಳ ಅತ್ತಿಗೆಯರು ಅವಳಿಗೂ ಆಕಿತಮ್ಮ ಚೆನ್ನಿಂಗಗಕೊಟ್ಟ ಕಷ್ಟ, ಅವನಪ್ಪ ಗೊತ್ತಾನಾಯ್ಕ ಮೌನವಾಗೆ ಸಹಸಿಕೊಂಡ ಹಿಂಸೆಯ ಎಳಿಎಳಿಯನ್ನ ಹಿಂಜಿಹಿಂಜಿ ಹೊರಗತಗದ್ಲು. ಕಾಕಾಪುರದಾಗ ನಡೆದಪ್ರತಿಯೊಂದು ಘಟನೆಗಳ ವರದಿಒಪ್ಪಸಿದಳು. ಕುಮಾರಿ ಮಾತಾಡದಂಗೆ ತಂಗಿ ಉತ್ಸಾಹದ ಮಾತು ತಮ್ಮನಲ್ಲಿಹೆಚ್ಚಿದ ಮನೋಬಲ ಗಮನಿಸಿದ. 'ಓ ಸಂಬಂಧಗಳೆ ನೀವೆಕೆ ಮನುಷ್ಯನನ್ನ ಇಷ್ಟೊಂದು ದುರ್ಬಲಗೊಳಿಸಿ ಬಿಡ್ತೀರಿ', ಒಂದ ಘಳಿಗೆ ಯೋಚನೆ ಮಾಡಿದ. ಎಲ್ಲಾವನ್ನು ಕಿತ್ತುಬಿಸಾಡಿ ದೂರ ಓಡಿಹೋಗಿದ್ದೆ, ತಂದೆ-ಅಣ್ಣಂದಿರು ಮಾಡಿದ ಅನ್ಯಾಯ ಎದೆಯೊಳಗೆ ಗಂಟಕಟ್ಟಿಕೊಂಡಿತ್ತು. "ತಂಗಿ, ಅಪ್ಪ ಟ್ರಾಕ್ಟರಿತಗೊಂಡಿದ್ದು ಏನಾತು"

ತಂಗಿಯನ್ನ ಕೇಳಿದ. "ಅದರ ಸಲುವಾಗಿ ದೊಡ್ಡಜಗಳಾನೆ ಆತು" ಸುಮ್ಮನಾದ್ನು. "ಅವರು -ಇವರು ಮಚ್ಚು, ಕೊಡ್ಲಿ ತಗೊಂಡು ಕಡಿತೀವಿ ಬಡಿತೀವಿ ಅಂತ ರಾತ್ರಿ ಇಡಿ ಒಬ್ಬರಿಗೊಬ್ಬರು ಕಾದ್ರು" ಅವನು ಮಾತಾಡಲಿಲ್ಲಾ. "ಅಪ್ಪನೆ ಹೋಗಿ, ಯಾರು ಕಡಿಯೋದು ಸಾಯೋದು ಬ್ಯಾಡ ಬ್ಯಾಂಕಸಾಲದಬಾಬ್ತು ತೀರಿಸಾಕೆ ಅದನ್ನ ಮಾರಿಬಿಡಾನ" ಕುಮಾರಿ ಅಕಿಕಡೀಗ ನೋಡಿದ. "ಆದ್ರೂ, ಹನುಮಾಪುರದಿಂದ ಗೊಂದಾಲಿಣ್ಣ ಬಂದು ಗಲಾಟಿಮಾಡಿದ. ಆ ಟ್ರಾಕ್ಟರಿಯೊಳಗೆ ಯಾರದು ಏನು ಇಲ್ಲಾ ನಾನು ಕೈಯಿಂದ ರೊಕ್ಕಹಾಕೀನಿ ಅಂತ ಬೋಯ್ದಿದ್ಕ ನುಗ್ಲಣ್ಣನೇ ಜಗಳ ಆಡಿದ್ನಂತೆ ಆಮ್ಯಾಲ ಬ್ಯಾಂಕಿನವರೆ ಬಂದು ಹರಾಜಮಾಡಿ ದುಡ್ಡತಗೊಂಡಹ್ವಾದ್ರು" ಒಂದಸಲ ಉಸರಹಾಕಿದ. ಕುಮಾರಿ ಯಾರಮನಿಗ ಹೋಗಲಿಲ್ಲಾ. ಕುತ್ಕೊಂಡೆ ಅವನ ಚಿಕ್ಕಪ್ಪ ಕಟುವಾ, ನುಗ್ಲ, ಹನಮು, ಪೀಣು, ಜಂಬ ಮತ್ತ ಉಳಿದವರೆಲ್ಲರ ಇತಿಹಾಸತಕ್ಕೊಂಡ ಪೀಣು ಮಾತ್ರ ತನಗ ಬಂದಹಿಸೆಗೆ ಮತ್ತೊಂದ ಹತ್ತ ಎಕ್ಕರಿಹೊಲ ತಗೊಂಡು ಬೋರಹಾಕ್ಸಿ ದುಡಿತ್ತಿದ್ದ. ಉಳದೋರು, "ಹಿರೆತನಮಾಡ್ತಿದ್ದ ದುಡ್ಡ ತಗೊಂಡಹೋಗಿ ಮಾವನಕೈಗ ಕೊಟ್ಟಿದ್ದ ಆಮೇಲೆತಂದು ಹೊಲತಗೊಂಡ, ಬೋರವೆಲ್ ಹಾಕ್ಸಿದ" ಆಡ್ಕೊಂಡ್ರು. ಹನುಮನ ಹೆಣ್ತಿ ಬರಿಕುಡಿತಾಳ, ಜಂಬಗ ದರಿದ್ರ ಹತ್ಕೊಂಡೈತಿ, ನುಗ್ಲನ ಮಕ್ಕಳು ದೊಡ್ಡೋರು ಅದು-ಇದುಕೆಲ್ಸ ಮಾಡ್ಕಾಂಡ ಅದಾರ. ಅವನಪ್ಪ ಒಂದ ಬದ್ದತೆಗೆ ತೊಡಗಿಕೊಂಡು ದುಡದೋನು ಅವನ ಅಸ್ಥಿತ್ವವನ್ನ ನಿರ್ಮಿಸಿಕೊಂಡಿದ್ದ. ಕುಮಾರಿ ಕಟ್ಟಿಮ್ಯಾಲ ಕುತ್ಕೊಂಡು ಬದುಕಿಗಾಗಿ ಬಡಿದಾಡ್ತಿರೊ ಅವನಪ್ಪನನ್ನ ನೋಡಿ ಸಂಕಟಪಟ್ಟ. ಅವನ ಹತ್ರಹೋಗಿ, "ಅಪ್ಪ, ನೀನು ಎರಡದಿನದಿಂದ ಕೇಳ್ತಾನೆ ಇದ್ದೆ ನಾನು ಯಾರು ಅಂತ, ನಾನು ನಿನ್ನಮಗ ಕುಮಾರಿ" ಬಾಯಾನಮಾತು ಬಾಯಾಗಿತ್ತು. ಮುದಕ ಕನಲಿದ "ಯಾರು" ಕು ... ಮಾರಿ. ಚೆಂಡು ನೆಲಕ್ಕ ಉರಳಿತ್ತು. ಬಿಟ್ಟಕಣ್ಣುಗಳು ಕುಮಾರಿಯನ್ನೆ ನೋಡ್ತಾಇದ್ವು ಆದರೆ ದೃಷ್ಟಿಮಾತ್ರ ಇರಲಿಲ್ಲಾ. ಇತಿಹಾಸದ ಪ್ರತೀಕದಂತೆ ಭೂತ-ವರ್ತಮಾನ-ಭವಿಷತ್ತಿನ ಕೊಂಡಿಯಾಗಿದ್ದ ಮುದುಕ ಅಳಿದುಳಿದ ಸಂಬಂಧಗಳಿಗೆ ಕತ್ತರಿಹಾಕಿದ್ದ. ಸಂಬಂಧದಕೊನೇಯ ಕೊಂಡಿ ಕಳಚಿಕೊಂಡಿತ್ತು. ಕುಮಾರಿ ಕೊಂಡಿಯಸುತ್ತಣ ಸಂಬಂಧವನ್ನ ಅರ್ಥಮಾಡಿಕೊಳ್ಳಾಕ ನೂರು ಪ್ರಯತ್ನಗಳನ್ನ ಮಾಡತೊಡಗಿದ..... ಎಲ್ಲವೂ ಅಪೂರ್ಣ ... ಅಸ್ಪಷ್ಟವಾಗಿ ಕಾಣತೊಡಗಿದವು. ಬೇರುಗಳೆಲ್ಲಾ ಕೊಳೆತು ವೋಟುವುರ ನಿಂತಂತೆ ಎಲ್ಲೊ ಒಂದ ಕಡೆ ಘನಿಭೂತಗೊಂಡಿದ್ದ ನೆನಪುಗಳು ಎದೆಯಸಾಗರದೊಳಗೆ ಉಕ್ಕಿ ಹರಿದು ಖಾಲಿಯಾದಂತೆ

ಅವನಪ್ಪ, ಅವನ ಬಾಲ್ಯದ ಗೆಳೆಯ ಹಂದಿಗೂರ, ಅವನವ್ವ ಬಾಣವ್ವ, ಇದೆಲ್ಲದರ ನಡುವೆ ಜೇಡನಂತೆ ಬಲಿಹೆಣೆಯುತ್ತಾ ಹೆಣೆಯುತ್ತಾ ಸಾಗಿದ ಅಪ್ಪ-ನೆಲದಮೇಲೆ ಗಟ್ಟಿಯಾಗಿ ನಿಂತಿದ್ದ. ಅಪ್ಪನ ಸ್ಪಷ್ಟಹೆಜ್ಜೆಗಳೆ ನಾನು-ನನ್ನ ಅಣ್ಣಂದಿರು-ಅಕ್ಕಂದಿರು ಕಾಲುಬಲಿತಮೇಲೆ ಅಪ್ಪನನ್ನೆ ಬಿಟ್ಟು ಕೊಸರಿಕೊಂಡು ಹೋದ ಅಣ್ಣಂದಿರು ಪೀಚ್ಚೆನಿಸಿತು. ಅಪ್ಪ ನನ್ನಮೇಲೆ ತನ್ನಭರವಸೆಯ ಛಾಪುಮೂಡಿಸಿ ಹೋದಂತೆ ಅನಿಸಿ ಯಾಕೊ ಕಸಿವಿಸಿಯಾಯಿತು. ಅಳಬೇಕಂತ ಬಾಯಿತಗದ ಕಣ್ಣೀರು ಬತ್ತಿಹೋಗಿ ಬಹಳ ವರುಷಗಳೆ ಆದಂತೆ ಎಷ್ಟು ಪ್ರಯತ್ನಿಸಿದರು ಬರಲಿಲ್ಲಾ. ಗೋಡೆಗೆ ಒರಗಿಕೊಂಡು ಅಪ್ಪನ ಹೆಣನೋಡ್ತಾಕುಂತ ಬಿಟ್ಟ. ಅಳುವವರ ಅಳುವಂತೆ ನಾಟಕಮಾಡುವವರ ನಡುವೆ ತನ್ನಾಳಕ್ಕಿಳ್ಕೊಂಡ.



ಡಾ.ಶಾಂತನಾಯ್ಕ ಕನ್ನಡದ ತಳಸ್ತರದಿಂದ ಹೊರಹೊಮ್ಮುತ್ತಿರುವ ಮತ್ತೊಂದು ತಾಜಾಪ್ರತಿಭೆ. ಇವರ 'ಗೋರ್‌ಮಾಟಿ' ಕಾದಂಬರಿಯು ಊರೂರು ಅಲೆಯುತ್ತ ಅರೆಅಲೆಮಾರಿಗಳಂತೆ ಬದುಕುತ್ತಿದ್ದ ಲಂಬಾಣಿ ಜನಾಂಗವು ಸ್ವಾತಂತ್ರ್ಯೋತ್ತರ ಭಾರತದ ಸಂದರ್ಭದಲ್ಲಿ ಅನುಭವಿಸಿದ ಏಳುಬೀಳುಗಳನ್ನು ಒಂದು ಕುಟುಂಬದ ಕತೆಯ ನೆಪದಲ್ಲಿ ಸಶಕ್ತವಾಗಿ ಅನಾವರಣಗೊಳಿಸುತ್ತಿದೆ.

ವಿದ್ಯಾಭ್ಯಾಸದ ಹಂಬಲ, ಉದ್ಯೋಗದ ಹುಡುಕಾಟ ಹಾಗೂ ಗ್ರಾಮೀಣ ಜೀವನದಲ್ಲಿ ರೈತಾಪಿಯಾಗಿ ನೆಲೆಯೂರುವ ಪ್ರಯತ್ನಗಳ ಜೊತೆ ಸಮುದಾಯದೊಳಗೇ ಇರುವ ಬಿರುಕುಗಳು, ಅಡ್ಡಪ್ರವೃತ್ತಿಗಳು ಈ ಕಾದಂಬರಿಯ ವಸ್ತು. ಇದು ಲಂಬಾಣಿ ಸಮುದಾಯದ ಸ್ಥಿತ್ಯಂತರಗಳ ಸಾಮಾಜಿಕ ದಾಖಲೆ ಎಂಬಂತೆಯೂ ಗಮನಾರ್ಹವಾಗಿದೆ.

ಸಮಾಜದ ವಿವಿಧ ಸಮುದಾಯಗಳ ಒಳಕುದಿಯನ್ನು, ಬದಲಾವಣೆಗಳು ಆವರಿಸುತ್ತಿರುವ ಪರಿಯನ್ನು ನಮ್ಮೆದುರಿಗಿಡುವ ಇಂತಹ ಬರೆಹಗಳು ಒಟ್ಟಾರೆ ನಮ್ಮ ಸಾಹಿತ್ಯಸತ್ವಕ್ಕೆ ಮತ್ತಷ್ಟು ಜೀವ ತುಂಬುತ್ತವೆ. ಕಾದಂಬರಿಯಲ್ಲಿ ಬಳಕೆಯಾಗಿರುವ ದಾವಣಗೆರೆ ಸೀಮೆಯ ತಾಂಡಾಗಳ ಆಡುಭಾಷೆ ಹಾಗೂ ನಿರೂಪಣಾ ಶೈಲಿ ಕೃತಿಗೆ ಶಕ್ತಿ ತುಂಬುವ ಅಂಶಗಳಾಗಿವೆ. ಲಂಬಾಣಿ ಸಮುದಾಯದ ಸಾಂಸ್ಕೃತಿಕ ಬದುಕನ್ನು ಚಿತ್ರಿಸುವ ಮತ್ತಷ್ಟು ಕೃತಿಗಳನ್ನು ಸೋದರ ಶಾಂತನಾಯಕ್ ಬರೆಯಲೆಂದು ಹಾರೈಸುವೆ.

ಡಾ.ಬಂಜಗೆರೆ ಜಯಪ್ರಕಾಶ

ಜ್ಯೋತಿ ಪ್ರಕಾಶನ